prajavani.net prajavani | ಗುರುವಾರ, ಜನವರಿ 8, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 8 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ತೆನೆಯಲ್ಲಿ ರಥ
ಕೊಪ್ಪಳದ ಗವಿಸಿದ್ಧೇಶ್ವರ ಮಠದ ಜಾತ್ರೆಯಲ್ಲಿ ಕೃಷಿ ಇಲಾಖೆ ವತಿಯಿಂದ ನಡೆದ ಕೃಷಿಮೇಳದಲ್ಲಿ ಮೆಕ್ಕೆಜೋಳದ ತೆನೆಯಲ್ಲಿ ರಥ ನಿರ್ಮಿಸಲಾಗಿತ್ತು

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 84,961 | ನಿಫ್ಟಿ 26,140 | $/₹ 89.87 | ಚಿನ್ನ (Std. 10g) ₹1,43,650 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,58,500 (ಬೆಂಗಳೂರು)

ಕಳಪೆ ಕಾಮಗಾರಿ: 6 ಮಂದಿ ಹೊಣೆ

ವಿಕಾಸಸೌಧ ಕಾಮಗಾರಿ: ಆರ್ಥಿಕ ಬಡ್ತಿ, ಪಿಂಚಣಿ ಮೊತ್ತದಿಂದ ನಷ್ಟ ಭರ್ತಿಗೆ ಕ್ರಮ

• ರಾಜೇಶ್ ರೈ ಚಟ್ಲ

ಬೆಂಗಳೂರು: ವಿಕಾಸಸೌಧ ಕಟ್ಟಡದ ಕಳಪೆ ಕಾಮಗಾರಿಯಿಂದ ಬೊಕ್ಕಸಕ್ಕೆ ಆಗಿರುವ ಕೋಟ್ಯಂತರ ರೂಪಾಯಿ ನಷ್ಟವನ್ನು ಗುತ್ತಿಗೆದಾರರಿಂದ ವಸೂಲು ಮಾಡಲು ಸಾಧ್ಯವಾಗದಿದ್ದರೆ ಸಣ್ಣ ನೀರಾವರಿ ಇಲಾಖೆಯ ಕಾರ್ಯದರ್ಶಿ ಬಿ.ಕೆ. ಪವಿತ್ರ ಸೇರಿ ಒಟ್ಟು ಆರು ಎಂಜಿನಿಯರ್‌ಗಳಿಂದ ವಸೂಲಿ ಮಾಡಲು ಸರ್ಕಾರ ಮುಂದಾಗಿದೆ.

ಕಾಮಗಾರಿಗಳ ನಿರ್ವಹಣೆಯಲ್ಲಿ ಕರ್ತವ್ಯ ಲೋಪ ಎಸಗಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿ ವಿಚಾರಣೆ ನಡೆಸುವಂತೆ ಸರ್ಕಾರವು ಲೋಕಾಯುಕ್ತಕ್ಕೆ ಸೂಚಿಸಿತ್ತು. ಲೋಕಾಯುಕ್ತದ ವರದಿ ಹಾಗೂ ಶಿಫಾರಸಿನಂತೆ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರ ಆದೇಶ ಹೊರಡಿಸಿದೆ.

ಕಟ್ಟಡದ ಕಾಮಗಾರಿ 2001ರಿಂದ 2005ರ ನಡುವೆ ನಡೆದಿತ್ತು. ಆ ಅವಧಿಯಲ್ಲಿ ಕಟ್ಟಡಗಳ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ಎನ್.ಜಿ. ಗೌಡಯ್ಯ ಮತ್ತು ಕಾರ್ಯಪಾಲಕ ಎಂಜಿನಿಯರ್ ಆಗಿದ್ದ ಬಿ.ಕೆ. ಪವಿತ್ರ ಸೇರಿ ಆರು ಎಂಜಿನಿಯರ್‌ಗಳಿಗೆ ದಂಡ ವಿಧಿಸಲಾಗಿದೆ. ಗೌಡಯ್ಯ 2022ರ ಫೆ. 28ರಂದು ನಿವೃತ್ತರಾಗಿದ್ದು, ಪವಿತ್ರ 2028ರ ಜುಲೈ 31ರಂದು ನಿವೃತ್ತರಾಗಲಿದ್ದಾರೆ. ಇಬ್ಬರಿಗೂ ದಂಡ ವಿಧಿಸಿ ಡಿ. 15ರಂದು ಡಿಪಿಎಆರ್ ಆದೇಶ ಹೊರಡಿಸಿದೆ. ಈ ಹಿಂದೆಯೇ ನಿವೃತ್ತರಾಗಿರುವ ಹಿಂದಿನ ಸಹಾಯಕ ಎಂಜಿನಿಯರ್‌ಗಳಾದ ಕೆ. ಶಿವಕುಮಾರ್, ಎನ್.ಎಸ್. ಸತೀಶ, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಆರ್.ವಿ. ನರಸೇಗೌಡ, ಕಾರ್ಯಪಾಲಕ ಎಂಜಿನಿಯರ್ ಸಿ. ವಿರೂಪಾಕ್ಷಪ್ಪ ಅವರಿಗೆ 2021ರ ಜ. 1ರಂದೇ ದಂಡ ವಿಧಿಸಿ ಆದೇಶ ಹೊರಡಿಸಲಾಗಿತ್ತು. 'ವಿಕಾಸಸೌಧದ ಕಟ್ಟಡ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದೆ' ಎಂದು ಆರೋಪಿಸಿ ಎಸ್.ಬಿ. ವಿನೋದಕುಮಾರ್, 2006ರ ಅ. 16ರಂದು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ದೂರಿನಲ್ಲಿ ವಾಸ್ತವಾಂಶ ಇರುವುದನ್ನು ತಾಂತ್ರಿಕ ತಂಡ ಪತ್ತೆ ಮಾಡಿದ್ದು, 14 ಎಂಜಿನಿಯರ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ತಮಗೆ ವಹಿಸಬೇಕೆಂದು ಸರ್ಕಾರಕ್ಕೆ 2008ರ ನ. 7ರಂದು ಲೋಕಾಯುಕ್ತರು ವರದಿ ನೀಡಿದ್ದರು.

ಕೆ. ಶಿವಕುಮಾರ್, ಎನ್.ಎಸ್. ಸತೀಶ, ಆರ್.ವಿ. ನರಸೇಗೌಡ, ನರಸಿಂಹಮೂರ್ತಿ, ಬಿ.ವಿ. ರಮೇಶ, ಸಿ. ವಿರೂಪಾಕ್ಷಪ್ಪ, ಎನ್.ಜೆ. ಗೌಡಯ್ಯ, ಬಿ.ಕೆ. ಪವಿತ್ರ, ಎಂ. ನಾಗರಾಜ, ಜಿ. ಮುನಿನಾರಾಯಣಸ್ವಾಮಿ, ಸಿ. ಜಯರಾಂ, ಟಿ.ಡಿ. ಮನಮೋಹನ್, ವಿಜಯ ರಾಘವನ್, ಪಿ. ಸಿದ್ದಪ್ಪ ವಿರುದ್ಧ ಇಲಾಖಾ ವಿಚಾರಣೆ ನಡೆಸುವಂತೆ ಲೋಕಾಯುಕ್ತರಿಗೆ 2009ರ ಜ.15ರಂದು ಸರ್ಕಾರ ಸೂಚಿಸಿತ್ತು.

▶13



ಲೆಕ್ಕಕ್ಕೆ ಸಿಗದ ನಷ್ಟ

ಎಂಜಿನಿಯರ್‌ಗಳಿಂದ ಆಗಿರುವ ಲೋಪದಿಂದ ಕೋಟ್ಯಂತರ ರೂಪಾಯಿ ನಷ್ಟ ಉಂಟಾಗಿದೆ ಎಂದು ಲೋಕಾಯುಕ್ತ ವರದಿಯಲ್ಲಿದೆ. ಆದರೆ, ಗುತ್ತಿಗೆದಾರರಿಗೆ ಹೆಚ್ಚುವರಿಯಾಗಿ ಎಷ್ಟು ಕೋಟಿ ರೂಪಾಯಿ ಪಾವತಿಸಲಾಗಿದೆ ಅಥವಾ ನಿಖರವಾಗಿ ಇಂತಿಷ್ಟು ಮೊತ್ತ ನಷ್ಟವಾಗಿದೆ ಎಂದು ವಿಚಾರಣಾಧಿಕಾರಿಗಳು ಸ್ಪಷ್ಟವಾಗಿ ತಿಳಿಸಿಲ್ಲ. ಹೀಗಾಗಿ, ಲೋಕೋಪಯೋಗಿ ಇಲಾಖೆಯು ಆರ್ಥಿಕ ನಷ್ಟವನ್ನು ನಿಖರವಾಗಿ ಲೆಕ್ಕ ಮಾಡಬೇಕು ಎಂದು ಆದೇಶದಲ್ಲಿದೆ.

ಕಾಮಗಾರಿಯಲ್ಲಿ ಲೋಪವೇನು?: ಕಟ್ಟಡ ಕಾಮಗಾರಿಯ ಟೆಂಡರ್‌ನಲ್ಲಿ ನಿಗದಿಪಡಿಸಿದ್ದ ಪ್ರಕಾರ ಕಟ್ಟಡಕ್ಕೆ ಏಕರೂಪ, ಗಾತ್ರ ಮತ್ತು ಮೇಲ್ಮೈ ಹೊಂದಿದ್ದ (ಆಶ್ಲರ್) ಕಲ್ಲುಗಳನ್ನು ಬಳಸಬೇಕಿತ್ತು. ಆದರೆ, ಕಳಪೆ ಗುಣಮಟ್ಟದ ಕಲ್ಲುಗಳನ್ನು ಬಳಸಲಾಗಿದೆ. ಕಲ್ಲುಗಳ ಮುಖಗಳನ್ನು ಕೆತ್ತಿ ಸಮತಟ್ಟು ಮಾಡದೆ, ಒಂದು ಬದಿಯನ್ನು (ಕಟ್ಟಡ ಮುಂಭಾಗ) ಮಾತ್ರ ಸಮ ಮಾಡಲಾಗಿದೆ. ಕಲ್ಲುಗಳ ಹಿಂಭಾಗಗಳಲ್ಲಿ ಉಬ್ಬುತಗ್ಗುಗಳಿದ್ದು, ಅವುಗಳನ್ನು ಸರಿಪಡಿಸಲು ಸಿಮೆಂಟ್ ಉಪಯೋಗಿಸಲಾಗಿತ್ತು ಎಂದು ಲೋಕಾಯುಕ್ತ ವರದಿಯಲ್ಲಿದೆ.

ಯಾರಿಗೆ ಯಾವ ರೀತಿಯ, ಎಷ್ಟು ದಂಡ?

ಕೆ. ಶಿವಕುಮಾರ್, ಎನ್.ಎಸ್. ಸತೀಶ್, ಆರ್.ವಿ. ನರಸೇಗೌಡ ಮತ್ತು ಸಿ. ವಿರೂಪಾಕ್ಷಪ್ಪ ಅವರ ಪಿಂಚಣಿ ಮೊತ್ತದಲ್ಲಿ ಶೇ 25ರಷ್ಟನ್ನು 5 ವರ್ಷ ತಡೆಹಿಡಿಯಲು ಸರ್ಕಾರ 2021ರಲ್ಲಿಯೇ ಆದೇಶ ಹೊರಡಿಸಿದೆ.

ಗೌಡಯ್ಯ ಅವರಿಗೆ ಒಂದು ವಾರ್ಷಿಕ ವೇತನ ಬಡ್ತಿ ತಡೆ ಹಿಡಿಯುವ ಜೊತೆಗೆ 4 ವರ್ಷ ಪಿಂಚಣಿಯಲ್ಲಿ ಶೇ 25ರಷ್ಟು ತಡೆಹಿಡಿಯಬೇಕು. ಬಿ.ಕೆ. ಪವಿತ್ರ ಅವರ 5 ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯಬೇಕು ಎಂದು ಲೋಕಾಯುಕ್ತ 2020ರ ಡಿ. 15ರಂದು ಶಿಫಾರಸು ಮಾಡಿತ್ತು. ಅದನ್ನು ಪರಿಷ್ಕರಿಸಿ, ಗೌಡಯ್ಯ ಅವರಿಗೆ ಪಿಂಚಣಿಯ ಶೇ 25ರಷ್ಟನ್ನು 5 ವರ್ಷ, ಪವಿತ್ರ ಅವರ ಮೂರು ವಾರ್ಷಿಕ ವೇತನ ಬಡ್ತಿ ತಡೆಹಿಡಿಯುವ ಜೊತೆಗೆ 2 ವರ್ಷ ಪಿಂಚಣಿಯ ಶೇ 25ರಷ್ಟು ತಡೆಹಿಡಿಯಬೇಕು ಎಂದು ಆದೇಶ ಹೊರಡಿಸಲಾಗಿದೆ.

ಪಿ.ಎಸ್.ಹರ್ಷ ಹೊಸ ಐಜಿಪಿ, ಸುಮನ್ ಪನ್ನೇಕರ್ ಎಸ್‌ಪಿ

ಬಳ್ಳಾರಿ: ಡಿಐಜಿ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಬಳ್ಳಾರಿಯಲ್ಲಿ ಹೊಸ ವರ್ಷದ ಮೊದಲ ದಿನವೇ ಜರುಗಿದ ಘರ್ಷಣೆ ಬೆನ್ನಲ್ಲೇ ಜಿಲ್ಲೆಯ ಪೊಲೀಸ್ ಇಲಾಖೆಯಲ್ಲಿ ಮಹತ್ವದ ಬದಲಾವಣೆ ಮಾಡಲಾಗಿದೆ.

ಬಳ್ಳಾರಿ ವಲಯದ ಡಿಐಜಿ ವರ್ತಿಕಾ ಕಟಿಯಾರ್ ಅವರನ್ನು ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಡಿಐಜಿಯಾಗಿ ವರ್ಗಾವಣೆ ಮಾಡಲಾಗಿದೆ. ಅವರ ಸ್ಥಾನಕ್ಕೆ 2004ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಪಿ.ಎಸ್.ಹರ್ಷ ಅವರನ್ನು ನಿಯೋಜಿಸಲಾಗಿದೆ. ಗುಪ್ತವಾರ್ತೆ ವಿಭಾಗದ ಡಿಸಿಪಿಯಾಗಿದ್ದ 2013ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಸುಮನ್ ಪನ್ನೇಕರ್ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ (ಎಸ್‌ಪಿ) ವರ್ಗಾಯಿಸಲಾಗಿದೆ.

▶6

ಸತೀಶ್ ರೆಡ್ಡಿ ಗನ್‌ಮ್ಯಾನ್ ಗುಂಡಿಗೆ ರಾಜಶೇಖರ ಬಲಿ: ಜಮೀರ್



ದಾವಣಗೆರೆ: 'ಬಳ್ಳಾರಿಯಲ್ಲಿ ನಡೆದ ಗಲಾಟೆಯಲ್ಲಿ ಶಾಸಕ ಭರತ್ ರೆಡ್ಡಿ ಆಪ್ತ ಸತೀಶ್ ರೆಡ್ಡಿ ಅವರ ಖಾಸಗಿ ಗನ್‌ಮ್ಯಾನ್ ಹಾರಿಸಿದ ಗುಂಡಿಗೆ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಬಲಿಯಾಗಿದ್ದಾರೆ ಎಂದು ಪೊಲೀಸರು ಖಚಿತಪಡಿಸಿದ್ದಾರೆ' ಎಂದು ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹಮದ್ ಇಲ್ಲಿ ತಿಳಿಸಿದರು.

▶6

ಮಹಿಳೆ ವಿವಸ್ತ್ರ ಆರೋಪ, ಬಿಜೆಪಿ ಪ್ರತಿಭಟನೆ

ಹುಬ್ಬಳ್ಳಿ: ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಮುನ್ನ ನಡೆಯುವ ಕುಟುಂಬ ಸದಸ್ಯರ ಮ್ಯಾಪಿಂಗ್ ವೇಳೆ ಇಲ್ಲಿನ ಚಾಲುಕ್ಯನಗರದಲ್ಲಿ ಕೆಲ ದಿನಗಳ ಹಿಂದೆ ನಡೆದಿದ್ದ ಗಲಾಟೆ, ಬುಧವಾರ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ರಾಜಕೀಯ ಗುದ್ದಾಟಕ್ಕೆ ಕಾರಣವಾಯಿತು.

ಜನವರಿ 2ರಂದು ಬ್ಲಾಕ್ ಮಟ್ಟದ ಅಧಿಕಾರಿ (ಬಿಎಲ್‌ಒ) ನಂದಿನಿ ಕುಲಕರ್ಣಿ ಅವರ ಜೊತೆ ಸಂಬಂಧವಿಲ್ಲದ ವ್ಯಕ್ತಿಗಳು ಕುಟುಂಬದ ಮ್ಯಾಪಿಂಗ್ ಸಮೀಕ್ಷೆಗೆ ಬಂದಿದ್ದರು ಎಂದು ಚಾಲುಕ್ಯನಗರದ ಪ್ರಶಾಂತ ಬೊಮ್ಮಾಜಿ ಅವರು ಆಕ್ಷೇಪಿಸಿದ್ದರು. ಆಗ ಕುಟುಂಬದ ಮೇಲೆ ಹಲ್ಲೆ ನಡೆದಿತ್ತು ಎಂದು ಆರೋಪಿಸಲಾಗಿತ್ತು.

> **ಮಹಿಳೆಯೇ ವಿವಸ್ತ್ರಗೊಂಡು, ಮಹಿಳಾ ಪೊಲೀಸರಿಗೆ ಕಚ್ಚಿದ್ದಾರೆ. ಇದು ಕೆಟ್ಟ ವರ್ತನೆ. 10ಕ್ಕೂ ಹೆಚ್ಚು ಮಹಿಳಾ ಪೊಲೀಸರು ಇದ್ದರು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಆಗ ಸ್ಥಳಕ್ಕೆ ತೆರಳಿದ್ದ ಪಾಲಿಕೆಯ ಕಾಂಗ್ರೆಸ್ ಸದಸ್ಯೆ ಸುವರ್ಣ ಕಲಕುಂಟ್ಲ ಮೇಲೂ ಹಲ್ಲೆ ನಡೆಸಲಾಗಿದೆ ಎಂದು ಸುಜಾತಾ ಹಂಡಿ, ಅವರ ಕುಟುಂಬದ ಸದಸ್ಯರ ವಿರುದ್ಧ ಕೇಶ್ವಾಪುರ ಠಾಣೆಯಲ್ಲಿ ಎರಡು ಪ್ರಕರಣ ದಾಖಲಾಗಿದ್ದವು.

▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಜಿಡಿಪಿ: ಈ ವರ್ಷದಲ್ಲಿ ಶೇ 7.4ರಷ್ಟು ಬೆಳವಣಿಗೆ



ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಆರ್ಥಿಕತೆಯ ಬೆಳವಣಿಗೆ ಕುರಿತಾದ ಮೊದಲ ಅಂದಾಜನ್ನು ಕೇಂದ್ರ ಸರ್ಕಾರ ಬುಧವಾರ ಬಿಡುಗಡೆ ಮಾಡಿದೆ. ಈ ವರ್ಷದಲ್ಲಿ ಅರ್ಥ ವ್ಯವಸ್ಥೆಯು ಶೇ 7.4ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಅಂದಾಜಿನಲ್ಲಿ ಹೇಳಲಾಗಿದೆ.

ಈ ಪ್ರಮಾಣದ ಬೆಳವಣಿಗೆ ಸಾಧ್ಯವಾದಲ್ಲಿ, ಪ್ರವರ್ಧಮಾನಕ್ಕೆ ಬರುತ್ತಿರುವ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆಯನ್ನು ಭಾರತ ಸಾಧಿಸಿದಂತಾಗುತ್ತದೆ. ಆದರೆ ಬ್ರೋಕರೇಜ್ ಕಂಪನಿ ಗೋಲ್ಡ್‌ಮನ್ ಸಾಕ್ಸ್ ಸಿದ್ಧಪಡಿಸಿರುವ ವರದಿಯೊಂದರ ಪ್ರಕಾರ ಈ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆಯು ಶೇ 7.3ರಷ್ಟು ಆಗಲಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಅಂದಾಜಿನ ಪ್ರಕಾರ ಕೂಡ ಭಾರತದ ಜಿಡಿಪಿ 2025–26ರಲ್ಲಿ ಶೇ 7.3ರಷ್ಟು ಬೆಳೆಯಲಿದೆ. ಜಿಎಸ್‌ಟಿ ದರ ಇಳಿಕೆ, ಆದಾಯ ತೆರಿಗೆ ಮಿತಿ ಹೆಚ್ಚಳದಂತಹ ಕ್ರಮಗಳು ಆರ್ಥಿಕ ಚಟುವಟಿಕೆ ಚೆನ್ನಾಗಿ ಇರುವುದಕ್ಕೆ ಕಾರಣವಾಗಿವೆ ಎಂದು ತಜ್ಞರು ಹೇಳಿದ್ದಾರೆ.


ಚೀನಾದ ಬೆಳವಣಿಗೆ ದರವು 2025ರಲ್ಲಿ ಶೇ 4.9ರಷ್ಟು ಇರಲಿದೆ ಎಂದು ವಿಶ್ವ ಬ್ಯಾಂಕ್ ಅಂದಾಜು ಮಾಡಿದೆ.

'ಕಚ್ಚುತ್ತದೆಯೋ ಸುಮ್ಮನಿರುತ್ತದೆಯೋ: ನಾಯಿಗಳ ಮನಸ್ಸು ಅರಿಯಲು ಸಾಧ್ಯವಿಲ್ಲ'

ಬೀದಿಗಳನ್ನು ನಾಯಿಗಳಿಂದ ಮುಕ್ತವಾಗಿಸಿ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಾಯಿಯ ಮನಸ್ಸನ್ನು ಅರಿಯಲು ಯಾರಿಂದಲೂ ಸಾಧ್ಯವಿಲ್ಲ. ಅದು ಕಚ್ಚುತ್ತದೆಯೋ ಅಥವಾ ಕಚ್ಚದೆ ಸುಮ್ಮನಿರುತ್ತದೆಯೋ ಎನ್ನುವುದರ ಕುರಿತು ಭವಿಷ್ಯ ನುಡಿಯಲು ಆಗುವುದಿಲ್ಲ. ನಾಯಿಯ ಮನಃಸ್ಥಿತಿ ಅಧ್ಯಯನ ಮಾಡುವುದಕ್ಕಿಂತ ಮುಖ್ಯವಾಗಿ, ರಸ್ತೆಗಳನ್ನು, ಬೀದಿಗಳನ್ನು ನಾಯಿಗಳಿಂದ ಮುಕ್ತವಾಗಿರಿಸಬೇಕು. ಬೀದಿ ನಾಯಿಗಳ ವಿಷಯದಲ್ಲಿ ಚಿಕಿತ್ಸೆಗಿಂತ ಮುನ್ನೆಚ್ಚರಿಕೆಯೇ ಮದ್ದು' ಎಂದು ಸುಪ್ರೀಂ ಕೋರ್ಟ್ ಪುನರುಚ್ಚರಿಸಿದೆ.



ಬೀದಿ ನಾಯಿಗಳಿಗೆ ಸಂಬಂಧಿಸಿದಂತೆ ಸ್ವಯಂಪ್ರೇರಿತವಾಗಿ ದಾಖಲಿಸಿಕೊಂಡಿರುವ ಪ್ರಕರಣದ ವಿಚಾರಣೆಯನ್ನು ಬುಧವಾರ ನಡೆಸಿದ ನ್ಯಾಯಮೂರ್ತಿಗಳಾದ ವಿಕ್ರಂನಾಥ್, ಸಂದೀಪ್ ಮೆಹ್ತಾ, ಎನ್.ವಿ ಅಂಜಾರಿಯಾ ಅವರ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಯಾವ ನಾಯಿ, ಬೆಳಿಗ್ಗೆ ಯಾವ ಮೂಡ್‌ನಲ್ಲಿ ಇರುತ್ತದೆ ಎನ್ನುವುದನ್ನು ನೀವು ಹೇಗೆ ನಿರ್ಧರಿಸುತ್ತೀರಿ' ಎಂದು ನ್ಯಾಯಪೀಠವು ಪ್ರಾಣಿಗಳ ಹಕ್ಕುಗಳ ಸಂಘಟನೆ ಪರವಾಗಿ ಹಾಜರಾದ ವಕೀಲ ಕಪಿಲ್ ಸಿಬಲ್ ಅವರನ್ನು ಪ್ರಶ್ನಿಸಿತು.

'ದ್ವಿಚಕ್ರ ವಾಹನ ಅಥವಾ ಬೈಸಿಕಲ್‌ನಲ್ಲಿ ಹೋಗುವಾಗ ಬೀದಿ ನಾಯಿ ವ್ಯಕ್ತಿಯನ್ನು ಕಚ್ಚಬಹುದು ಅಥವಾ ಬೆನ್ನಟ್ಟಬಹುದು. ಇದರಿಂದ ಆ ವ್ಯಕ್ತಿ ವಾಹನದಿಂದ ಕೆಳಗೆ ಬೀಳುವ ಅಥವಾ ಅಪಘಾತ ಸಂಭವಿಸುವ ಅಪಾಯ ಇರುತ್ತದೆ' ಎಂದಿತು.

▶11

ಎನ್‌ಎಚ್‌ಎಐ ವಿರುದ್ಧ ಅಸಮಾಧಾನ



ಹೆದ್ದಾರಿಯಿಂದ ನಾಯಿಗಳನ್ನು ತೆರವುಗೊಳಿಸುವ ಹೊಣೆಗಾರಿಕೆಯನ್ನು ರಾಜ್ಯಗಳ ಮೇಲೆ ಹೊರಿಸಿದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ (ಎನ್‌ಎಚ್‌ಎಐ) ಕ್ರಮಕ್ಕೆ ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತು.

'ದೇಶದಲ್ಲಿ ಜನರು ಸಾಯುತ್ತಿರುವುದು ನಾಯಿ ಕಡಿತದಿಂದ ಮಾತ್ರ ಅಲ್ಲ. ರಸ್ತೆಗಳಲ್ಲಿ ಇತರೆ ಪ್ರಾಣಿಗಳಿಂದ ಉಂಟಾಗುವ ಅಪಘಾತಗಳಿಂದಲೂ ಜೀವ ಹಾನಿ ಸಂಭವಿಸುತ್ತಿದೆ. ಕಳೆದ 20 ದಿನಗಳಲ್ಲಿ ಇಬ್ಬರು ನ್ಯಾಯಮೂರ್ತಿಗಳು ಪ್ರಾಣಿಗಳಿಂದಾಗಿ ಹೆದ್ದಾರಿಗಳಲ್ಲಿ ಅಪಘಾತಕ್ಕೆ ಒಳಗಾಗಿದ್ದಾರೆ' ಎಂದು ಹೇಳಿತು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಕವಿದ ವಾತಾವರಣ.

ಕಾರ್ಮಿಕ ಇಲಾಖೆಗೆ ಸಲ್ಮಾ ಕಾರ್ಯದರ್ಶಿ

ಬೆಂಗಳೂರು: ಹುದ್ದೆ ನಿರೀಕ್ಷಣೆಯಲ್ಲಿದ್ದ ಐಎಎಸ್ ಅಧಿಕಾರಿ ಸಲ್ಮಾ ಕೆ. ಫಾಹಿಮ್ ಅವರನ್ನು ಕಾರ್ಮಿಕ ಇಲಾಖೆಯ ಕಾರ್ಯದರ್ಶಿ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಜೊತೆಗೆ, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಎಂ. ಕನಗ ವಲ್ಲಿ ಅವರನ್ನು ಆಹಾರ ಇಲಾಖೆಯ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಅವರಿಗೆ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ (ಕೆಎಸ್ಎಂಎಸ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕಿ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

16ಕ್ಕೆ ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆ

ಬೆಂಗಳೂರು: ಕಲಾ ದರ್ಪಣ ಆರ್ಟ್ ರಿಫ್ಲೆಕ್ಟ್ಸ್ ಸಂಸ್ಥೆಯು ಸಂಕ್ರಾಂತಿ ಹಬ್ಬದ ಪ್ರಯುಕ್ತ ಮಕ್ಕಳಿಗೆ ಇದೇ 16ರಂದು ರಾಜ್ಯಮಟ್ಟದ ಚಿತ್ರಕಲಾ ಸ್ಪರ್ಧೆಯನ್ನು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿದೆ.

ಸ್ಪರ್ಧೆಯ ಬಗೆಗಿನ ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 93806 71947 ಸಂಪರ್ಕಿಸುವಂತೆ ಸಂಸ್ಥೆಯ ಕಾರ್ಯದರ್ಶಿ ವಿನಾಯಕ ಪಾಟೀಲ ತಿಳಿಸಿದ್ದಾರೆ.

ಪಾರ್ಕಿಂಗ್ ನಿಯಮ: ಸಚಿವ ತರಾಟೆ

ಟ್ಯಾಕ್ಸಿ ಚಾಲಕರ ಜತೆ ಚರ್ಚೆ: 'ಓಲಾ, ಉಬರ್ ಟ್ಯಾಕ್ಸಿಗೆ ಅನುಕೂಲ ಇತರರಿಗೆ ಏಕಿಲ್ಲ'

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವಿಮಾನ ನಿಲ್ದಾಣಕ್ಕೆ ಸಚಿವ ರಾಮಲಿಂಗಾರೆಡ್ಡಿ ಭೇಟಿ
- 'ಪ್ರಾಧಿಕಾರವೇ ಸೂಕ್ತ ಪರಿಹಾರ ನೀಡಬೇಕು'

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಟ್ಯಾಕ್ಸಿ ನಿಲುಗಡೆಗೆ ರೂಪಿಸಿರುವ ಹೊಸ ಪಾರ್ಕಿಂಗ್ ನಿಯಮ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವಿಮಾನ ನಿಲ್ದಾಣಕ್ಕೆ ಬುಧವಾರ ಭೇಟಿ ನೀಡಿದ ಸಚಿವರು ಚಾಲಕರೊಂದಿಗೆ ಮಾತುಕತೆ ನಡೆಸಿದರು. ನೂತನ ವಾಹನ ನಿಲುಗಡೆ ವ್ಯವಸ್ಥೆಯಿಂದ ಸ್ಥಳೀಯ ಟ್ಯಾಕ್ಸಿ ಚಾಲಕರಿಗೆ ಉಂಟಾಗಿರುವ ಸಮಸ್ಯೆ ಆಲಿಸಿದರು.

ಕೆಐಎ ಪಾರ್ಕಿಂಗ್

ಬಳಿಕ ವಿಮಾನ ನಿಲ್ದಾಣದ ಅಧಿಕಾರಿಗಳ ಕ್ರಮಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಅವರು, ಓಲಾ, ಉಬರ್ ಸೇರಿದಂತೆ ಅಗ್ರಿಗೇಟರ್ ಟ್ಯಾಕ್ಸಿಗಳಿಗೆ ಟರ್ಮಿನಲ್ ಸಮೀಪದಲ್ಲೇ ನಿಲುಗಡೆಗೆ ಅವಕಾಶ ನೀಡಿ, ಸ್ಥಳೀಯ ಹಾಗೂ ಇತರ ಖಾಸಗಿ ಟ್ಯಾಕ್ಸಿಗಳಿಗೆ ಒಂದು ಕಿಲೋ ಮೀಟರ್ ದೂರದಲ್ಲಿ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಿರುವುದು ಯಾವ ನ್ಯಾಯ ಎಂದು ತರಾಟೆಗೆ ತೆಗೆದುಕೊಂಡರು.

ವಯಸ್ಸಾದವರು, ಸಣ್ಣ ಮಕ್ಕಳಿರುವ ಕುಟುಂಬಗಳು ಹಾಗೂ ಆರೋಗ್ಯ ಸಮಸ್ಯೆಗಳಿಂದ ಬಳಲುವ ಪ್ರಯಾಣಿಕರು ದೂರದ ಪಾರ್ಕಿಂಗ್ ಪ್ರದೇಶದಿಂದ ಲಗೇಜ್ ಹೊತ್ತು ಟ್ಯಾಕ್ಸಿ ಹುಡುಕಿಕೊಂಡು ಬರಬೇಕಾದ ಸ್ಥಿತಿ ನಿರ್ಮಾಣವಾಗಿದೆ. ನೂತನ ಪಾರ್ಕಿಂಗ್ ವ್ಯವಸ್ಥೆ ಮೇಲ್ನೋಟಕ್ಕೆ ಖಾಸಗಿ ಅಗ್ರಿಗೇಟರ್‌ಗಳಿಗೆ ಪರೋಕ್ಷ ಸಹಕಾರ ನೀಡುವಂತೆ ಕಾಣುತ್ತಿದೆ ಎಂದು ಸಚಿವರು ಟೀಕಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ರಾಮಲಿಂಗಾರೆಡ್ಡಿ, ಸ್ಥಳೀಯ ಚಾಲಕರು ಹಲವು ವರ್ಷಗಳಿಂದ ಕಡಿಮೆ ದರದಲ್ಲಿ ಸೇವೆ ನೀಡುತ್ತಿದ್ದಾರೆ. ಆದರೆ, ಹೊಸ ಪಾರ್ಕಿಂಗ್ ವ್ಯವಸ್ಥೆಯಿಂದ ಟ್ಯಾಕ್ಸಿ ಚಾಲಕರಿಗೂ ಸಾರ್ವಜನಿಕರಿಗೂ ತೊಂದರೆಯಾಗುತ್ತಿದೆ ಎಂದರು.

ಈ ಸಮಸ್ಯೆಗೆ ವಿಮಾನ ನಿಲ್ದಾಣ ಪ್ರಾಧಿಕಾರವೇ ಸೂಕ್ತ ಪರಿಹಾರ ನೀಡಬೇಕು. ಈ ಕುರಿತು ಸಂಸದ ಡಾ. ಕೆ. ಸುಧಾಕರ್ ಅವರೊಂದಿಗೆ ದೂರವಾಣಿ ಮೂಲಕ ಚರ್ಚೆ ನಡೆಸಲಾಗಿದೆ. ಕೇಂದ್ರ ವಿಮಾನಯಾನ ಸಚಿವಾಲಯದೊಂದಿಗೆ ಮಾತುಕತೆ ನಡೆಸಿ ಪರಿಹಾರ ಒದಗಿಸುವ ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಬಿಎಂಟಿಸಿ, ವಾಯುವಜ್ರಕ್ಕೂ ಕುತ್ತು: ಸಚಿವ ರಾಮಲಿಂಗಾರೆಡ್ಡಿ

ಬಿಎಂಟಿಸಿ ಬಸ್ ನಿಲುಗಡೆ ವ್ಯವಸ್ಥೆಯಲ್ಲೂ ಕಡಿತ ಮಾಡಿರುವುದನ್ನು ಉಲ್ಲೇಖಿಸಿದ ಸಚಿವ ರಾಮಲಿಂಗಾರೆಡ್ಡಿ, ಈ ಹಿಂದೆ 14 ಬಸ್ ಬೇಗಳನ್ನು ನೀಡಲಾಗಿದೆ. ಇದೀಗ ಅದನ್ನು 7ಕ್ಕೆ ಇಳಿಸಲಾಗಿದೆ. ಇದರಿಂದ ದೂರದ ಟ್ಯಾಕ್ಸಿ ನಿಲುಗಡೆಗೆ ತೆರಳಲು ಸಾಧ್ಯವಾಗದ ಪ್ರಯಾಣಿಕರು ದುಬಾರಿ ಅಗ್ರಿಗೇಟರ್ ಟ್ಯಾಕ್ಸಿಗಳನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು. ಈ ಅಸಮಾನತೆಯನ್ನು ನಿವಾರಿಸಲು ಸರ್ಕಾರದ ಮುಖ್ಯ ಕಾರ್ಯದರ್ಶಿಯೊಂದಿಗೆ ಚರ್ಚಿಸಿ, ಸಂಬಂಧಿಸಿದ ಪ್ರಾಧಿಕಾರಗಳೊಂದಿಗೆ ಪತ್ರ ವ್ಯವಹಾರ ನಡೆಸಿ ಸೂಕ್ತ ಪರಿಹಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.



ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಚಿವ ರಾಮಲಿಂಗಾರೆಡ್ಡಿ ಭೇಟಿ ನೀಡಿ ವಾಹನ ಚಾಲಕರೊಂದಿಗೆ ಚರ್ಚಿಸಿದರು

ಸಂಕ್ಷಿಪ್ತ ಸುದ್ದಿ

ನಾಳೆಯಿಂದ ಕರ್ಮಣಿ ಉತ್ಸವ

ಬೆಂಗಳೂರು: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಜ.9 ರಿಂದ ರಾಜಾಜಿನಗರದ 4ನೇ ಬ್ಲಾಕ್ 53ನೇ ಕ್ರಾಸ್‌ನಲ್ಲಿರುವ ಶ್ರೀರಾಮಮಂದಿರ ಕ್ರೀಡಾಂಗಣದಲ್ಲಿ ಮೂರು ದಿನಗಳ ಕರ್ಮಣಿ ಉತ್ಸವ ಆಯೋಜಿಸಲಾಗಿದೆ.

ಜ.9ರ ಸಂಜೆ 6.30ಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉತ್ಸವ ಉದ್ಘಾಟಿಸುವರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅಧ್ಯಕ್ಷತೆ ವಹಿಸುವರು. ಕರ್ಮಣಿ ಉತ್ಸವದಲ್ಲಿ ರಾಜ್ಯದ ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳು ಉತ್ಪಾದಿಸಿದ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ನೀಡಲಾಗಿದೆ ಎಂದು ಮಹಿಳಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

ಮಕರ ಸಂಕ್ರಾಂತಿ ಉತ್ಸವ 14ರಂದು

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಬೆಜ್ಜವಳ್ಳಿ ಶಬರಿಮಲೆ ಅಯ್ಯಪ್ಪಸ್ವಾಮಿ ದೇವಸ್ಥಾನದಲ್ಲಿ ಜ.14ರಂದು ಮಕರ ಸಂಕ್ರಾಂತಿ ಉತ್ಸವ ನಡೆಯಲಿದೆ ಎಂದು ದೇವಸ್ಥಾನ ಸಂಘಟನಾ ಕಾರ್ಯದರ್ಶಿ ಬೆಳುವಾಯಿ ನವೀನ್ ಹೆಗ್ಡೆ ತಿಳಿಸಿದರು.

'ಈ ಬಾರಿ ಸುಮಾರು 50 ಸಾವಿರಕ್ಕೂ ಅಧಿಕ ಜನ ಸೇರುವ ಸಾಧ್ಯತೆ ಇದೆ. ಚಲನಚಿತ್ರ ನಟ ಶಿವರಾಜ್ ಕುಮಾರ್, ಜಾನಪದ ಗಾಯಕ ಕೆ. ಯುವರಾಜ್ ಮತ್ತು ಹುಬ್ಬಳ್ಳಿಯ ಅಯ್ಯಪ್ಪ ಗುರುಸ್ವಾಮಿಗಳಾದ ಶಿವಾನಂದ ಬಾರ್ಕಿ ಅವರಿಗೆ ಹರಿಹರಾತ್ಮಜ ಪೀಠ ಪ್ರಶಸ್ತಿ ನೀಡಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಸಚಿವರಾದ ಜಿ. ಪರಮೇಶ್ವರ, ಮಧು ಬಂಗಾರಪ್ಪ, ಸಂಸದ ಬಿ.ವೈ. ರಾಘವೇಂದ್ರ, ಶಾಸಕ ಆರಗ ಜ್ಞಾನೇಂದ್ರ ಭಾಗವಹಿಸಲಿದ್ದಾರೆ ಎಂದರು.

ನಾಳೆ ಜಲಮಂಡಳಿ ಫೋನ್ ಇನ್

ಬೆಂಗಳೂರು: ಬೆಂಗಳೂರು ಜಲ ಮಂಡಳಿ ಅಧ್ಯಕ್ಷ ಡಾ.ವಿ.ರಾಮ್‌ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಜ.9ರಂದು ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ.

ಸಾರ್ವಜನಿಕರು ತಮ್ಮ ಪ್ರದೇಶಗಳಲ್ಲಿರುವ ನೀರಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ 080–22945119 ಮತ್ತು 080–22229639. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರು ನೀಡಲು ಕೋರಲಾಗಿದೆ.

'ಜಗತ್ತನ್ನು ಆಳುತ್ತಿರುವ ಮಾಧ್ಯಮ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಗತ್ತನ್ನು ಮಾಧ್ಯಮ ಮತ್ತು ಆಯುಧಗಳು ಆಳುತ್ತಿವೆ. ಯುದ್ಧ ಸಾಮಗ್ರಿ ಉತ್ಪಾದಕರ ಹಿತಕ್ಕಾಗಿಯೇ ಯುದ್ಧಗಳು ನಡೆಯುತ್ತಿವೆ. ಹಾನಿ ಉಂಟು ಮಾಡುವವರನ್ನೇ ವಿಶ್ವದ ನಾಯಕರು ಎಂದು ಮಾಧ್ಯಮಗಳು ಬಿಂಬಿಸುತ್ತಿವೆ ಎಂದು ರಂಗಕರ್ಮಿ ರಾಮೇಶ್ವರಿ ವರ್ಮ ಹೇಳಿದರು.

ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯು (ಎಐಎಂಎಸ್‌ಎಸ್) 'ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳ ವಿರುದ್ಧ ಸಮರ ಹೂಡಲು' ಎಂಬ ಘೋಷವಾಕ್ಯದೊಂದಿಗೆ ಬುಧವಾರ ಹಮ್ಮಿಕೊಂಡಿದ್ದ ಮಹಿಳೆಯರ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ಮಾಧ್ಯಮಗಳು ಆಳುತ್ತಿವೆ ಎಂದರೆ ಯಾರೂ ನಂಬುವುದಿಲ್ಲ. ಕೆದಕಿ ನೋಡಿದರೆ ಟ್ರಂಪ್, ಮೋದಿ ಮಾಧ್ಯಮಗಳ ಮೂಲಕವೇ ನಾಯಕರಾದವರು ಎಂದು ತಿಳಿಸಿದರು.

ದೃಶ್ಯ ಮಾಧ್ಯಮಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳ ವಿರುದ್ಧ ಅಭಿಯಾನ ಆರಂಭಿಸಬೇಕಾದ ಅಗತ್ಯವಿದೆ. ಮೊದಲು ಸಾಮಾಜಿಕ ಸಮಸ್ಯೆಗಳನ್ನು ಧಾರಾವಾಹಿಗಳ ಮೂಲಕ ನೀಡುತ್ತಿದ್ದರು. ಆ ನಂತರ ಮನೆಯೊಳಗಿನ ಸಮಸ್ಯೆ ಧಾರಾವಾಹಿಗಳಾಗತೊಡಗಿದವು. ಅದರಲ್ಲಿ ಅತ್ತೆ ಸೊಸೆ ಜಗಳಗಳನ್ನೆಲ್ಲ ತೋರಿಸುತ್ತಿದ್ದರು. ಈಗ ಅದು ಅತಿರೇಕಕ್ಕೆ ಹೋಗಿದ್ದು, ಒಬ್ಬಳು ಇನ್ನೊಬ್ಬಳನ್ನು ಕೊಲೆ ಮಾಡಲು ಸಂಚು ರೂಪಿಸುವುದು, ಸುಪಾರಿ ಕೊಡುವುದು, ವಿಷ ಹಾಕುವುದು ಎಲ್ಲ ಧಾರಾವಾಹಿಗಳಲ್ಲಿ ಸಾಮಾನ್ಯವಾಗಿಬಿಟ್ಟಿದೆ. ಮಹಿಳೆಯರನ್ನು ಕಳ್ಳರನ್ನಾಗಿ ತೋರಿಸುವ ಧಾರಾವಾಹಿಗಳನ್ನು ವಿರೋಧಿಸಬೇಕು ಎಂದು ವಿವರಿಸಿದರು.

ಯುದ್ಧ ಸಾಮಗ್ರಿಗಳನ್ನು ಉತ್ಪಾದನೆ ಮಾಡುವ ದೇಶವು ಅವುಗಳು ಮಾರಾಟವಾಗುವಂತೆ ನೋಡಿಕೊಳ್ಳಲು ಯುದ್ಧ ಸೃಷ್ಟಿಸುತ್ತಿವೆ. ಇದರಿಂದ ಮಹಿಳೆಯರು ಮತ್ತು ಮಕ್ಕಳು ತೊಂದರೆಗೆ ಸಿಲುಕುತ್ತಿದ್ದಾರೆ ಎಂದರು.

ಎಸ್‌ಯುಸಿಐ(ಸಿ) ರಾಜ್ಯ ಕಾರ್ಯದರ್ಶಿ ಕೆ. ಉಮಾ ಮಾತನಾಡಿ, 'ಸಮಾಜದಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳನ್ನು ಸಮಾನವಾಗಿ ನೋಡುತ್ತಿಲ್ಲ. ಹೆಣ್ಣನ್ನು ಎರಡನೇ ದರ್ಜೆಯಾಗಿ, ಭೋಗದ ವಸ್ತುವಾಗಿ ಪರಿಗಣಿಸಲಾಗುತ್ತಿದೆ. ಹಾಸನ, ಧರ್ಮಸ್ಥಳ, ಹಾತ್ರಾಸ್, ಉನ್ನಾವೊ ಸೇರಿದಂತೆ ಮಹಿಳೆಯರ ಮೇಲಿನ ದೌರ್ಜನ್ಯಗಳು ಅನೇಕ ಕಡೆ ನಡೆಯುತ್ತಿವೆ. ಬಹುತೇಕ ಸಂದರ್ಭದಲ್ಲಿ ಹೆಣ್ಣಿಗೆ ನ್ಯಾಯ ಸಿಗುತ್ತಿಲ್ಲ' ಎಂದು ದೂರಿದರು.

ಎಐಎಂಎಸ್‌ಎಸ್ ರಾಜ್ಯ ಘಟಕದ ಅಧ್ಯಕ್ಷೆ ಮಂಜುಳಾ ಎಂ.ಎನ್. ಅಧ್ಯಕ್ಷತೆ ವಹಿಸಿದ್ದರು. ರಾಷ್ಟ್ರೀಯ ಉಪಾಧ್ಯಕ್ಷೆ ಡಾ. ಸುಧಾ ಕಾಮತ್, ರಾಜ್ಯ ಕಾರ್ಯದರ್ಶಿ ಶೋಭಾ ಎಸ್., ರಾಜ್ಯ ಉಪಾಧ್ಯಕ್ಷೆ ಹರಿಣಿ ಆಚಾರ್ಯ ಭಾಗವಹಿಸಿದ್ದರು. ಗೋಷ್ಠಿಗಳಲ್ಲಿ ಮನೋವೈದ್ಯೆ ಡಾ. ಶ್ರೀದೇವಿ ಕುಮಾರ್, ನಿವೃತ್ತ ಕುಲಪತಿ ಸಬಿಹಾ ಭೂಮಿ ಗೌಡ, ಗೀತೆ ರಚನಕಾರ ಕವಿರಾಜ್ ಮಾತನಾಡಿದರು.



ರಾಜ್ಯಮಟ್ಟದ ಮಹಿಳೆಯರ ಸಮಾವೇಶದಲ್ಲಿ ಸುಧಾ ಕಾಮತ್, ಕೆ.ಉಮಾ, ರಾಮೇಶ್ವರಿ ವರ್ಮ, ಶೋಭಾ ಎಸ್. ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ



ಹೊರಮಾವು– ಅಗರ ಗ್ರಾಮದಲ್ಲಿ ಒತ್ತುವರಿ ಮಾಡಿಕೊಂಡಿರುವ ಮನೆಗಳಿಗೆ ನಗರ ಪಾಲಿಕೆ ಸಿಬ್ಬಂದಿ ನೋಟಿಸ್ ಜಾರಿ ಮಾಡಿದರು

39 ಅನಧಿಕೃತ ಕಟ್ಟಡಗಳ ತೆರವಿಗೆ ಆದೇಶ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಪೂರ್ವ ನಗರ ಪಾಲಿಕೆ ಕೆ.ಆರ್. ಪುರ ವಲಯದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಕಟ್ಟಡಗಳ ತೆರವಿಗೆ ಕ್ರಮ ಕೈಗೊಳ್ಳುವಂತೆ ಜಂಟಿ ಆಯುಕ್ತೆ ಸುಧಾ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಹೊರಮಾವು– ಅಗರ ಗ್ರಾಮದ ಸರ್ವೆ ನಂ. 11/1, 11/2, 11/3, 11/4, 11/5ರ ಸೈಟ್ ನಂ 2ರಲ್ಲಿ ಮಂಜೂರಾತಿ ನಕ್ಷೆ ಉಲ್ಲಂಘಿಸಿ, ರಾಜಕಾಲುವೆ ಒತ್ತುವರಿ ಮಾಡಿಕೊಂಡು ನಿರ್ಮಿಸುತ್ತಿರುವ ಹಾಗೂ ನಿರ್ಮಿಸಿರುವ 39 ಅನಧಿಕೃತ ಕಟ್ಟಡಗಳ ತೆರವಿಗೆ ಆದೇಶಿಸಿದರು.

ರಾಜಕಾಲುವೆ ಬಫರ್ ವಲಯದ ನಿಯಮಾವಳಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಹಾಗೂ ಜಿಬಿಎ ಬೈಲಾಗಳನ್ನು ಉಲ್ಲಂಘಿಸಿ ಸೆಟ್ ಬ್ಯಾಕ್ ಬಿಡದೆ ಕಟ್ಟಡ ನಿರ್ಮಿಸಿರುವುದು ದೃಢಪಟ್ಟಿದೆ. ಈ ಹಿನ್ನೆಲೆಯಲ್ಲಿ ಅನಧಿಕೃತ ಕಟ್ಟಡ ಮತ್ತು ಕಟ್ಟಡದ ಹೆಚ್ಚುವರಿ ಅಂತಸ್ತುಗಳು ಕಟ್ಟಡದ ಉಲ್ಲಂಘನೆ ಭಾಗವನ್ನು ಕಟ್ಟಡದ ಮಾಲೀಕರು ತೆರವುಗೊಳಿಸಬೇಕು. ಇಲ್ಲದಿದ್ದರೆ ಜಿಬಿಎ ಕಾಯ್ದೆ 2024ರ ಕಲಂ 244(2)ಅಡಿಯಲ್ಲಿ ಪಾಲಿಕೆಯಿಂದಲೇ ತೆರವುಗೊಳಿಸಿ ಈ ಸಂಬಂಧ ತಗಲುವ ವೆಚ್ಚವನ್ನು ವಸೂಲಿ ಮಾಡಲಾಗುವುದು ಎಂದು ಒತ್ತುವರಿದಾರರಿಗೆ ನೋಟಿಸ್ ಜಾರಿ ಮಾಡಿದರು.

ತೆರವು ಕಾರ್ಯಾಚರಣೆ ವೇಳೆ ಪಾಲಿಕೆ ಅಧಿಕಾರಿಗಳಿಗೆ ಅಡ್ಡಿಪಡಿಸಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಚ್ಚರಿಕೆ ನೀಡಿದರು.



ಎಸ್‌ಬಿಐ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಮತ್ತು ಅಧ್ಯಕ್ಷ ಸಿ.ಎಸ್. ಸೆಟ್ಟಿ ಅವರು ಬೆಂಗಳೂರಿನ ಮದ್ರಾಸ್ ಎಂಜಿನಿಯರ್ ಗ್ರೂಪ್ ಆ್ಯಂಡ್ ಸೆಂಟರ್‌ಗೆ ಇ–ಆಂಬುಲೆನ್ಸ್ ಹಸ್ತಾಂತರ ಮಾಡಿದರು

ಜಿಸಿಸಿ ಉದ್ಘಾಟಿಸಿದ ಎಸ್‌ಬಿಐ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸ್ಟೇಟ್ ಬ್ಯಾಂಕ್ (ಎಸ್‌ಬಿಐ) ತನ್ನ ನೂತನ ಜಾಗತಿಕ ಸಾಮರ್ಥ್ಯ ಕೇಂದ್ರವನ್ನು (ಜಿಸಿಸಿ) ಬೆಂಗಳೂರಿನಲ್ಲಿ ಬುಧವಾರ ಉದ್ಘಾಟಿಸಿದೆ.

ಇದೇ ಸಂದರ್ಭದಲ್ಲಿ ಬ್ಯಾಂಕ್‌ನ ಅಧ್ಯಕ್ಷ ಸಿ.ಎಸ್. ಸೆಟ್ಟಿ ಹಾಗೂ ಬೆಂಗಳೂರು ವೃತ್ತದ ಮುಖ್ಯ ಪ್ರಧಾನ ವ್ಯವಸ್ಥಾಪಕಿ ಜೂಹಿ ಸ್ಮಿತಾ ಸಿನ್ಹಾ ಅವರ ಸಮ್ಮುಖದಲ್ಲಿ ಬ್ಯಾಂಕ್‌ನ ಹನ್ನೊಂದು ಹೊಸ ಶಾಖೆಗಳನ್ನು ಉದ್ಘಾಟಿಸಲಾಯಿತು.

ಭಾರತದ ಬ್ಯಾಂಕಿಂಗ್ ಉದ್ಯಮದಲ್ಲಿ ಈ ಬಗೆಯ ಜಾಗತಿಕ ಸಾಮರ್ಥ್ಯ ಕೇಂದ್ರವೊಂದನ್ನು ಆರಂಭಿಸಿರುವುದು ಇದೇ ಮೊದಲು ಎಂದು ಎಸ್‌ಬಿಐ ಪ್ರಕಟಣೆ ಹೇಳಿದೆ.

ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ (ಸಿಎಸ್‌ಆರ್) ಭಾಗವಾಗಿ ಎಸ್‌ಬಿಐ ಹಲವು ಕ್ರಮಗಳನ್ನು ಘೋಷಿಸಿದೆ. ರಾಜ್ಯದ 35 ಸರ್ಕಾರಿ ಪ್ರಾಥಮಿಕ ಶಾಲೆಗಳ ಉನ್ನತೀಕರಣ, ತುಮಕೂರು ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ 50 ಸಾವಿರ ಸಸಿಗಳನ್ನು ನೆಡುವ ಅಭಿಯಾನ, ಬೆಂಗಳೂರಿನ ಮದ್ರಾಸ್ ಎಂಜಿನಿಯರ್ ಗ್ರೂಪ್ ಆ್ಯಂಡ್ ಸೆಂಟರ್‌ಗೆ ಇ–ಆಂಬುಲೆನ್ಸ್ ಕೊಡುಗೆ ಆ ಕ್ರಮಗಳಲ್ಲಿ ಸೇರಿವೆ.

ಕೌಶಲ ಕಲಿಕೆಗೆ ಎಐ, ಎಂಎಲ್ ಲ್ಯಾಬ್

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ನಿರ್ಧಾರ

● ಎ.ಎಂ.ಸುರೇಶ

ಮುಖ್ಯಾಂಶಗಳು

- ಇಂಗ್ಲಿಷ್, ವಿದೇಶಿ ಭಾಷಾ ಲ್ಯಾಬ್ ಆರಂಭಿಸಲು ನಿರ್ಧಾರ
- 2,500 ವಿದ್ಯಾರ್ಥಿಗಳಿಗೆ ಅನುಕೂಲ
- ಕೌಶಲ ವೃದ್ಧಿಗೆ ಹೆಚ್ಚಿನ ಒತ್ತು

ಬೆಂಗಳೂರು: ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ (ಎಐ ಆ್ಯಂಡ್ ಎಂಎಲ್) ಕ್ಷೇತ್ರದಲ್ಲಿನ ತಾಂತ್ರಿಕ ಕೌಶಲಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸೂಕ್ತ ತರಬೇತಿ ನೀಡುವ ಉದ್ದೇಶದಿಂದ ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯವು ಲ್ಯಾಬ್ ಆರಂಭಿಸಲಿದೆ.


'ಮುಂದಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳು ಲಭ್ಯವಾಗಲಿವೆ. ಆದರೆ, ಉದ್ಯೋಗ ಪಡೆಯಲು ಬೇಕಾದ ಕೌಶಲ ವಿದ್ಯಾರ್ಥಿಗಳಲ್ಲಿ ಇಲ್ಲ. ಇದನ್ನು ಮನಗಂಡು ಎಐ ಆ್ಯಂಡ್ ಎಂಎಲ್ ಲ್ಯಾಬ್ ಆರಂಭಿಸುತ್ತಿದ್ದು, ಮುಂದಿನ ತಿಂಗಳು ಶುರುವಾಗಲಿದೆ' ಎಂದು ಕುಲಪತಿ ಪ್ರೊ. ಬಿ.ರಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಉದ್ಯಮ ವಲಯ ಮತ್ತು ಶೈಕ್ಷಣಿಕ ವಲಯ ಒಟ್ಟಾಗಿ ಸೇರಿ ಮಾರುಕಟ್ಟೆಯಲ್ಲಿನ ಉದ್ಯೋಗ ಅವಕಾಶಗಳಿಗೆ ತಕ್ಕಂತೆ ವಿದ್ಯಾರ್ಥಿಗಳಿಗೆ ಕೌಶಲಗಳ ಬಗ್ಗೆ ತಿಳಿಸಿಕೊಡಬೇಕಾಗುತ್ತದೆ. ಆ ಕೆಲಸವನ್ನು ಮಾಡುವ ನಿಟ್ಟಿನಲ್ಲಿ ಲ್ಯಾಬ್ ಆರಂಭಿಸಲಾಗುತ್ತಿದೆ. ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ಪದವಿ ಮತ್ತು ಸ್ನಾತಕೋತ್ತರ ಪದವಿಯ ಸುಮಾರು 2,500 ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಲಿದ್ದಾರೆ.

ಇದಾದ ಬಳಿಕ ಆರ್‌ಸಿ ಕಾಲೇಜು (5 ಸಾವಿರ ವಿದ್ಯಾರ್ಥಿಗಳು) ಮತ್ತು ಸರ್ಕಾರಿ ಕಲಾ ಕಾಲೇಜಿನ (3 ಸಾವಿರ) ವಿದ್ಯಾರ್ಥಿಗಳಿಗೂ ಈ ಸೌಲಭ್ಯವನ್ನು ವಿಸ್ತರಿಸಲಾಗುತ್ತದೆ. ಅಲ್ಲದೆ ವಿಶ್ವ ವಿದ್ಯಾಲಯದ ಸಂಯೋಜನೆ ಪಡೆದಿರುವ ಕಾಲೇಜುಗಳ ವಿದ್ಯಾರ್ಥಿಗಳು ಇದರ ಉಪಯೋಗ ಪಡೆದುಕೊಳ್ಳಬಹುದು ಎಂದು ರಮೇಶ್ ವಿವರಿಸಿದರು.

ಭಾಷೆಗಳ ಲ್ಯಾಬ್: ವಿದೇಶಿ ಭಾಷೆಗಳ ಲ್ಯಾಬ್ ಮತ್ತು ಇಂಗ್ಲಿಷ್ ಭಾಷೆಯ ಲ್ಯಾಬ್‌ಅನ್ನು ಮಾರ್ಚ್‌ನಲ್ಲಿ ಆರಂಭಿಸಲು ಉದ್ದೇಶಿಸಲಾಗಿದೆ. 14 ವಿದೇಶಿ ಭಾಷೆಗಳಲ್ಲಿ ಸರ್ಟಿಫಿಕೇಟ್, ಡಿಪ್ಲೊಮಾ, ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

'ವಿದೇಶಿ ಭಾಷೆಗಳಿಗೆ ಸಂಬಂಧಪಟ್ಟ ಹಾಗೆ ಪ್ರತ್ಯೇಕ ಲ್ಯಾಬ್ ಆರಂಭಿಸುವ ಮೂಲಕ ಸಂವಹನ ಮತ್ತು ಕೌಶಲದ ಬಗ್ಗೆ ತಿಳಿಸಿಕೊಡಲಾಗುತ್ತದೆ. ಇದರಿಂದ ವಿದೇಶಗಳಲ್ಲಿ ಉದ್ಯೋಗ ಪಡೆಯಲು ಅನುಕೂಲವಾಗಲಿದೆ. ಮಲೇಷ್ಯಾದಲ್ಲಿ ಸಾಕಷ್ಟು ಉದ್ಯೋಗಾವಕಾಶಗಳು ಲಭ್ಯ ಇವೆ. ನಮ್ಮ ವಿದ್ಯಾರ್ಥಿಗಳು 'ಮಲಯ' ಭಾಷೆಯಲ್ಲಿ ಉತ್ತಮವಾದ ಸಂವಹನ ಕೌಶಲ ಬೆಳೆಸಿಕೊಂಡರೆ ಅಲ್ಲಿ ಹೋಗಿ ಕೆಲಸ ಮಾಡಲು ಅನುಕೂಲವಾಗಲಿದೆ' ಎನ್ನುತ್ತಾರೆ ರಮೇಶ್.

ಬೆಂಗಳೂರು ನಗರ ವಿಶ್ವವಿದ್ಯಾಲಯ

ಮುಂದಿನ ವರ್ಷ ಹೊಸ ಕೋರ್ಸ್

'ಬಾಗಲೂರಿನಲ್ಲಿ ಇರುವ ಬೆಂಗಳೂರು ನಗರ ವಿಶ್ವವಿದ್ಯಾಲಯದ ಸ್ನಾತಕೋತ್ತರ ಕೇಂದ್ರದಲ್ಲಿ ಮುಂದಿನ ವರ್ಷದಿಂದ ಬಿಸಿಎ, ಬಿ.ಕಾಂ, ಬಿಬಿಎ ಆರಂಭಿಸಲಾಗುತ್ತದೆ. ಅಲ್ಲದೆ ಬೇಡಿಕೆ ಬಂದರೆ ಹೊಸ ಪಿ.ಜಿ ಕೋರ್ಸ್‌ಗಳನ್ನು ಆರಂಭಿಸುತ್ತೇವೆ' ಎಂದು ರಮೇಶ್ ತಿಳಿಸಿದರು.

ಸ್ನಾತಕೋತ್ತರ ಕೇಂದ್ರಕ್ಕೆ ಅಗತ್ಯವಿರುವ ಸುಮಾರು 20 ಎಕರೆ ಜಾಗವನ್ನು ಪಡೆಯುವ ಪ್ರಯತ್ನಗಳು ನಡೆಯುತ್ತಿವೆ. ಇದನ್ನು ಸುಸಜ್ಜಿತ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸುವ ಮೂಲಕ ಇನ್ನಷ್ಟು ಹೊಸ ಕೋರ್ಸ್‌ಗಳನ್ನು ಆರಂಭಿಸಲು ವಿಶ್ವವಿದ್ಯಾಲಯ ಉದ್ದೇಶಿಸಿದೆ.

ವಿಶ್ವವಿದ್ಯಾಲಯದಲ್ಲಿ ಜಪಾನೀಸ್, ಇಟಾಲಿಯನ್, ಸ್ಪ್ಯಾನಿಷ್, ಜರ್ಮನ್ ಸೇರಿದಂತೆ ಹಲವು ವಿದೇಶಿ ಭಾಷೆಗಳ ಕೋರ್ಸ್‌ಗಳಿವೆ. ಈ ಕೋರ್ಸ್ ಮಾಡಿದವರಿಗೆ ಉದ್ಯೋಗಾವಕಾಶ ಕಲ್ಪಿಸಲು ವಿವಿಧ ದೇಶಗಳ ಕಾನ್ಸುಲೇಟ್‌ಗಳ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುತ್ತಿರುವ ಬಹುತೇಕ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಹಿನ್ನೆಲೆಯಿಂದ ಬಂದವರು. ಅವರಿಗೆ ಇಂಗ್ಲಿಷ್ ಭಾಷೆಯ ಮೇಲೆ ಸಾಕಷ್ಟು ಹಿಡಿತ ಇಲ್ಲ. ಹೀಗಾಗಿ ಉದ್ಯೋಗ ಪಡೆಯುವುದು ಕಷ್ಟವಾಗುತ್ತಿದೆ. ಇದನ್ನು ಮನಗಂಡು ಇಂಗ್ಲಿಷ್ ಭಾಷೆಯ ಲ್ಯಾಬ್ ಆರಂಭಿಸುತ್ತಿದ್ದು, ಹಂತ ಹಂತವಾಗಿ ಎಲ್ಲ ವಿದ್ಯಾರ್ಥಿಗಳಿಗೆ ಸಂವಹನ ಕೌಶಲದ ಬಗ್ಗೆ ತರಬೇತಿ ನೀಡಲಾಗುತ್ತದೆ.

'ಇಂಗ್ಲಿಷ್‌ನಲ್ಲಿ ಪದಗಳ ಬಳಕೆ, ಉಚ್ಚಾರಣೆ, ವ್ಯಾಕರಣ, ಯಾವುದು ಸರಿ, ಯಾವುದು ತಪ್ಪು, ಸಂವಹನ ನಡೆಸುವ ವಿಧಾನ ಇತ್ಯಾದಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತದೆ. ಇದಕ್ಕಾಗಿ ಪ್ರತ್ಯೇಕ ತಂತ್ರಾಂಶ ಇರುತ್ತದೆ. ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಉದ್ಯೋಗ ಅವಕಾಶ ಸಿಗಬೇಕು. ಸ್ಪರ್ಧೆ ಎದುರಿಸುವ ಸಾಮರ್ಥ್ಯ ಅವರಲ್ಲಿ ಬರಬೇಕು ಎಂಬುದು ನಮ್ಮ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಅವರನ್ನು ಸಜ್ಜುಗೊಳಿಸಲಾಗುವುದು' ಎಂದರು.

ಪರಿಸರ ಸುಸ್ಥಿರತೆ ಸಮಾವೇಶದಲ್ಲಿ ಈಶ್ವರ ಖಂಡ್ರೆ ಹೇಳಿಕೆ

'ವಸ್ತುಗಳ ಪುನರ್‌ಬಳಕೆಗೆ ಕಾಯ್ದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಸರದ ಮೇಲೆ ಆಗುತ್ತಿರುವ ದುಷ್ಪರಿಣಾಮಗಳನ್ನು ತಡೆಯುವ ನಿಟ್ಟಿನಲ್ಲಿ ವಸ್ತುಗಳ ಪುನರ್ ಬಳಕೆಗೆ ಹೆಚ್ಚು ಒತ್ತು ನೀಡಲು ಕಠಿಣ ಕಾಯ್ದೆ ರೂಪಿಸಲಾಗುವುದು' ಎಂದು ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಪರಿಸರ ಸಂರಕ್ಷಣೆ ವಲಯದಲ್ಲಿ ಕೆಲಸ ಮಾಡುತ್ತಿರುವ ಫೆವಾರ್ಡ್, ವಿಶ್ವ ಯುವಕ ಕೇಂದ್ರ, ಡಿಜಿಪ್ಲಿಕ್ ಸಂಸ್ಥೆಗಳು ನಗರದಲ್ಲಿ ಆಯೋಜಿಸಿರುವ 'ಪರಿಸರ ಸುಸ್ಥಿರತೆ' ಕುರಿತ ಎರಡು ದಿನಗಳ ದಕ್ಷಿಣ ಭಾರತ ಪ್ರತಿನಿಧಿಗಳ ಸಮಾವೇಶವನ್ನು ಬುಧವಾರ ಉದ್ಘಾಟಿಸಿ ಮಾತನಾಡಿದರು.

'ಮನುಷ್ಯನ ಜೀವನ ಶೈಲಿ ಬದಲಾದ ನಂತರವೂ ಎಲ್ಲವೂ ದುರ್ಬಳಕೆ ಹಂತಕ್ಕೆ ಬಂದಿದೆ. ನಮ್ಮ ಕ್ಷಣಿಕ ಬದುಕಿಗೆ ಏನೆಲ್ಲ ವಸ್ತುಗಳನ್ನು ಬಳಸಿ ತ್ಯಾಜ್ಯ ಸೃಷ್ಟಿಸುತ್ತಿದ್ದೇವೆ ಎಂದು ಗಮನಿಸಿದರೆ ಅದರ ಅರಿವು ಆಗಬಹುದು. ನಾವು ಬಳಸುವ ವಸ್ತುಗಳನ್ನು ಮರು ಬಳಕೆ ಮಾಡುವ ಮನೋಭಾವ ಬೆಳೆಸಲೇಬೇಕು. ಕಾಯ್ದೆ ಮೂಲಕವೂ ಇದನ್ನು ಅನುಷ್ಠಾನಗೊಳಿಸಬೇಕಿದೆ. ಐರೋಪ್ಯ ದೇಶಗಳಲ್ಲಿ ಮರುಬಳಕೆ ವಲಯ ವೃತ್ತಾಕಾರದ ಆರ್ಥಿಕ ಮಾದರಿಯಾಗಿ ಬೆಳೆದಿದೆ. ಇದನ್ನು ನಮ್ಮಲ್ಲೂ ಅಳವಡಿಸಿಕೊಂಡರೆ ಪರಿಸರದ ಹೊರೆ ಕಡಿಮೆ ಮಾಡಬಹುದು' ಎಂದು ಸಲಹೆ ನೀಡಿದರು.

'ಪರಿಸರ ಸುಸ್ಥಿರತೆಗೆ ವಿಶ್ವಸಂಸ್ಥೆ ನಾಲ್ಕು ದಶಕಗಳ ಹಿಂದೆ ಘೋಷಣೆ ಮಾಡಿ ನೀತಿಗಳನ್ನು ಜಾರಿಗೊಳಿಸಿದೆ. ಈ ನಿಟ್ಟಿನಲ್ಲಿ ಭಾರತದಲ್ಲೂ ಚಟುವಟಿಕೆಗಳು ನಡೆಯುತ್ತಿವೆ. ಹವಾಮಾನ ವೈಪರೀತ್ಯದ ಅನಾಹುತ ತಗ್ಗಿಸಲು ಪ್ರಯತ್ನಿಸಬೇಕು. ತ್ಯಾಜ್ಯಗಳು ನದಿ ಸೇರುವುದನ್ನು ತಪ್ಪಿಸಬೇಕು. ಸಂಯೋಜಿತ ಸಂಶೋಧನಾ ಚಟುವಟಿಕೆ, ಪರಿಸರಸ್ನೇಹಿ ಯೋಜನೆಗಳ ಜೊತೆಗೆ ಬೇರೆ ಕಡೆಯ ಮಾದರಿ ಅಭ್ಯಾಸಗಳನ್ನು ಬಳಸಿಕೊಳ್ಳಬೇಕು' ಎಂದು ಹೇಳಿದರು.

'ಹವಾಮಾನ ಬದಲಾವಣೆಯಿಂದ ದುಷ್ಪರಿಣಾಮ ಉಂಟಾಗುತ್ತಿದೆ. ಜಾಗತಿಕ ತಾಪಮಾನ ಏರಿಕೆಯಾಗಿದೆ. ಸುನಾಮಿ, ಮೇಘಸ್ಫೋಟಗಳೂ ಹೆಚ್ಚಿವೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ ಈ ಬಾರಿ ಮಳೆ ಮಿತಿ ಮೀರಿ ಸುರಿದಿದ್ದರಿಂದ ಸುಮಾರು ₹20 ಸಾವಿರ ಕೋಟಿ ಮೌಲ್ಯದ ಬೆಳೆ ಹಾನಿ ಉಂಟಾಯಿತು. ಸರ್ಕಾರ ₹2 ಸಾವಿರ ಕೋಟಿ ಪರಿಹಾರ ನೀಡಿದರೂ ನಷ್ಟದ ಪ್ರಮಾಣದಿಂದ ರೈತರು ತೊಂದರೆ ಅನುಭವಿಸಿದರು' ಎಂದರು.

ವಿಶ್ವ ಯುವಕ ಕೇಂದ್ರದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಉದಯ ಶಂಕರ್ ಸಿಂಗ್, ಪಶುಸಂಗೋಪನೆ ಶ್ರೇಷ್ಠತೆಯ ಕೇಂದ್ರದ ನಿರ್ದೇಶಕ ಡಾ.ಪಿ.ಎಸ್. ಮಹೇಶ್, ಎಂಎಸ್‌ಎಂಇ ಹಾಗೂ ನವೋದ್ಯಮಗಳ ಸಂಘದ ರಾಜ್ಯಾಧ್ಯಕ್ಷೆ ಛಾಯಾಗಾಂಧಿ, ಡಿಜಿಪ್ಲಿಕ್‌ನ ಪಿ.ಸುಬ್ರಮಣಿ, ಫೆವಾರ್ಡ್ ಸಂಸ್ಥೆಯ ರಾಜ್ಯಾಧ್ಯಕ್ಷ ಮಹೇಶ್‌ಚಂದ್ರ ಗುರು, ಕಲಬುರ್ಗಿ ವಿಭಾಗದ ಉಪಾಧ್ಯಕ್ಷ ಅನಿಲ್ ಕುಮಾರ್ ಬೆಲ್ದಾರ್ ಉಪಸ್ಥಿತರಿದ್ದರು.



ನಗರದಲ್ಲಿ ಆಯೋಜಿಸಿದ್ದ 'ಪರಿಸರ ಸುಸ್ಥಿರತೆ' ಕುರಿತ ಸಮಾವೇಶದಲ್ಲಿ ಪಿ. ಎಸ್. ಮಹೇಶ್, ಉದಯಶಂಕರ್ ಸಿಂಗ್, ಈಶ್ವರ ಖಂಡ್ರೆ, ಮಹೇಶ್‌ಚಂದ್ರ ಗುರು ಮತ್ತು ಅನಿಲ್ ಕುಮಾರ್ ಬೆಲ್ದಾರ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಲುಲು ಮಾಲ್‌ನಲ್ಲಿ ಶೇ 50ರಷ್ಟು ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಲುಲು ಮಾಲ್‌ನಲ್ಲಿ ಜ.8ರಿಂದ ನಾಲ್ಕು ದಿನ 'ಎಂಡ್ ಆಫ್ ಸೀಸನ್ ಸೇಲ್' ಶಾಪಿಂಗ್ ಕಾರ್ಯಕ್ರಮ ಆಯೋಜಿಸಲಾಗಿದೆ.

ನಾಲ್ಕು ದಿನಗಳ ಶಾಪಿಂಗ್ ಬೊನಾನ್ಜಾದಲ್ಲಿ ಉತ್ಪನ್ನಗಳ ಮೇಲೆ ಶೇ 50ರಷ್ಟು ರಿಯಾಯಿತಿ ಘೋಷಿಸಲಾಗಿದೆ. ಲುಲು ಹೈಪರ್ ಮಾರ್ಕೆಟ್, ಲುಲು ಫ್ಯಾಷನ್, ಲುಲು ಕನೆಕ್ಟ್, ಲುಲು ಮಾಲ್ ರಾಜಾಜಿನಗರ, ವಿಆರ್ ಮಾಲ್ ವೈಟ್‌ಫೀಲ್ಡ್‌ನಲ್ಲಿರುವ ಲುಲು ಡೈಲಿ, ಲುಲು ಕನೆಕ್ಟ್ ಮತ್ತು ಆರ್‌ಇಒ ಫ್ಯಾಶನ್ಸ್ ಸ್ಟೋರ್‌ಗಳು, ಫೋರಮ್ ಮಾಲ್ ಫಾಲ್ಕನ್ ಸಿಟಿಯಲ್ಲಿರುವ ಲುಲು ಡೈಲಿ ಮತ್ತು ಎಂ 5 ಇ-ಸಿಟಿ ಮಾಲ್, ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಲುಲು ಡೈಲಿಗಳಲ್ಲಿ ಅಸಾಧಾರಣ ರಿಯಾಯಿತಿಗಳನ್ನು ಪಡೆಯಬಹುದು ಎಂದು ಲುಲು ಮಾಲ್ ಬೆಂಗಳೂರಿನ ಪ್ರಾದೇಶಿಕ ನಿರ್ದೇಶಕ ಕೆ.ಕೆ. ಷರೀಫ್ ತಿಳಿಸಿದರು.

ಫ್ಯಾಷನ್ ಟ್ರೆಂಡ್‌ಗಳು ಮತ್ತು ಆಧುನಿಕ ಎಲೆಕ್ಟ್ರಾನಿಕ್ಸ್‌ಗಳಿಂದ ಹಿಡಿದು ದೈನಂದಿನ ಗ್ರೋಸರಿಗಳು, ಮನೆ ಸಾಮಗ್ರಿಗಳು ಸೇರಿದಂತೆ 300ಕ್ಕೂ ಹೆಚ್ಚು ಪ್ರಮುಖ ಬ್ರ್ಯಾಂಡ್‌ಗಳು ಲಭ್ಯವಿದ್ದು, ಅರ್ಧ ಬೆಲೆಗೆ ಖರೀದಿಸಬಹುದು. ಜನವರಿ 8ರಿಂದ 11ರವರೆಗೆ 'ಏಕಾಂಗಿ ಲಿಲಾ'ವನ್ನು ಸಹ ಆಯೋಜಿಸುತ್ತಿದೆ. ಪ್ರೀಮಿಯಂ ಎಲೆಕ್ಟ್ರಾನಿಕ್ಸ್, ಹೈ-ಎಂಡ್ ಉಪಕರಣಗಳು ಮತ್ತು ಬಯಸಿದ ಗ್ಯಾಜೆಟ್‌ಗಳಿಗಾಗಿ ₹1ರಿಂದ ಬಿಡ್ ಮಾಡುವ ಅವಕಾಶವಿದೆ. ಇದಲ್ಲದೆ, ಎಲ್ಲಾ ಲುಲು ಮಳಿಗೆಗಳ ಶಾಪಿಂಗ್ ಸಮಯವನ್ನು ಮಧ್ಯರಾತ್ರಿವರೆಗೆ ವಿಸ್ತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಭೂಸ್ವಾಧೀನ: ಸಾರ್ವಜನಿಕರ ಸಭೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಬೆಂಗಳೂರು ಗ್ರಾಮಾಂತರ ಜಿಲ್ಲಾಧಿಕಾರಿ ಬಸವರಾಜು ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಪ್ರಾದೇಶಿಕ ಕಚೇರಿ– ನೆಲಮಂಗಲ ವತಿಯಿಂದ ಸಾರ್ವಜನಿಕರ ಆಲಿಕೆ ಮತ್ತು ಪ್ರತಿಕ್ರಿಯೆ ಸಭೆಗೆ ಜನರು ಬಾರದಿದ್ದರಿಂದ ಸಭೆಯನ್ನು ಮೊಟಕುಗೊಳಿಸಲಾಯಿತು.

ಮುಂದಿನ ಸಭೆಯನ್ನು ಜನವರಿ 31ಕ್ಕೆ ನಿಗದಿಗೊಳಿಸಲಾಗಿದೆ. ಸೋಂಪುರ ಕೈಗಾರಿಕಾ ಪ್ರದೇಶದ ಗೆದ್ದಲಹಳ್ಳಿ, ಮಾಚನಹಳ್ಳಿ, ಗೊಟ್ಟಿಗೆರೆ ಗ್ರಾಮಗಳ 520.75 ಎಕರೆ ಭೂಮಿಯನ್ನು ಕೆಐಎಡಿಬಿ ಭೂಸ್ವಾಧೀನ ಮಾಡಿಕೊಂಡಿದ್ದು, ಅದನ್ನು ಅಭಿವೃದ್ಧಿಪಡಿಸಲು ಮುಂದಾಗಿದೆ. ಆ ವೇಳೆ ಪರಿಸರ ಮಾಲಿನ್ಯ ಉಂಟಾಗಬಹುದೇ ಎನ್ನುವ ಸಾರ್ವಜನಿಕ ಆಲಿಕೆ ಹಾಗೂ ಅದಕ್ಕೆ ಸೂಕ್ತ ಪ್ರತಿಕ್ರಿಯೆ ನೀಡುವ ಕುರಿತು ಏರ್ಪಡಿಸಿದ ಸಭೆಗೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿರಬೇಕು ಎಂದೇ ಸಭೆಯನ್ನು ಮುಂದೂಡಲಾಯಿತು.

'ಸಾರ್ವಜನಿಕ ಸಭೆಯ ಬಗ್ಗೆ ದಿನ ಪತ್ರಿಕೆಯಲ್ಲಿ ಪ್ರಚಾರ ಮಾಡಿರುವುದಾಗಿ ಮಾಲಿನ್ಯ ನಿಯಂತ್ರಣ ಅಧಿಕಾರಿ ಹೇಳುತ್ತಾರೆ. ಆದರೆ, ಬೇರೆ ಯಾವುದೇ ರೀತಿಯಲ್ಲೂ ಇಲ್ಲಿನ ಗ್ರಾಮಗಳ ಜನರಿಗೆ ಮಾಹಿತಿ ನೀಡಿಲ್ಲ. ಇದರಿಂದಲೇ ಜನ ಸೇರಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯವೇ ಸಭೆ ಮುಂದೂಡಲು ಕಾರಣ' ಎಂಬ ಆರೋಪ ಕೇಳಿ ಬಂತು.



ಸಾರ್ವಜನಿಕರ ಸಭೆಯಲ್ಲಿ ಬೆರಳೆಣಿಕೆಯ ಜನರು ಪಾಲ್ಗೊಂಡಿದ್ದರು

ಅನಧಿಕೃತ ಮನೆ: ಸಹಕರಿಸಿದ್ದವರ ಬಂಧನ

ಕಾರ್ಯಾಚರಣೆ ವೇಳೆ ಧಿಕ್ಕಾರ ಕೂಗಿದ್ದ ನಾಲ್ವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಕೋಗಿಲು ಬಡಾವಣೆ

ಬೆಂಗಳೂರು: ಹಣ ಪಡೆದು ಕೋಗಿಲು ಬಡಾವಣೆಯಲ್ಲಿ ಅನಧಿಕೃತವಾಗಿ ಮನೆ ನಿರ್ಮಾಣಕ್ಕೆ ಸಹಕರಿಸಿದ್ದ ಆರೋಪದಡಿ ಇಬ್ಬರನ್ನು ಯಲಹಂಕ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ವಿಜಯ್, ವಸೀಂ ಉಲ್ಲಾ ಬೇಗ್ ಅವರನ್ನು ಬಂಧಿಸಲಾಗಿದೆ. ಮುನಿ ಆಂಜಿನಪ್ಪ, ರಾಬಿನ್ ಅವರ ವಿರುದ್ಧವೂ ಪ್ರಕರಣ ದಾಖಲಾಗಿದ್ದು ಅವರನ್ನು ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.



ಘನ ತ್ಯಾಜ್ಯ ನಿರ್ವಹಣೆಗಾಗಿ ಕೋಗಿಲು ಗ್ರಾಮದ ಸರ್ವೆ ನಂಬರ್ 99ರಲ್ಲಿ 14 ಎಕರೆ 36 ಗುಂಟೆ ಜಮೀನನ್ನು ಜಿಲ್ಲಾಧಿಕಾರಿ ಬಿಬಿಎಂಪಿಗೆ ಹಸ್ತಾಂತರ ಮಾಡಿದ್ದರು. ಆ ಪ್ರದೇಶದಲ್ಲಿ ಮುಕ್ಕಾಲು ಭಾಗ ಕಾಂಪೌಂಡ್ ನಿರ್ಮಾಣ ಕಾರ್ಯ ಪೂರ್ಣವಾಗಿದೆ. ಸ್ಥಳದಲ್ಲಿ ಎಳನೀರು ಬುರುಡೆ ಸಂಸ್ಕರಣಾ ಘಟಕ, ಪ್ರಾಣಿ ತ್ಯಾಜ್ಯ ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿತ್ತು. ಆ ಸ್ಥಳದಲ್ಲಿ ಕಾಮಗಾರಿ ನಡೆಸಲು 2023ರಲ್ಲಿ ಕಾರ್ಯಾದೇಶ ನೀಡಲಾಗಿತ್ತು. ಈ ಜಾಗದ ಪೈಕಿ ನಾಲ್ಕು ಎಕರೆ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ಅನಧಿಕೃತವಾಗಿ ಮನೆ ನಿರ್ಮಿಸಲಾಗಿತ್ತು. ಸ್ಥಳದಲ್ಲಿದ್ದ 160 ಅನಧಿಕೃತ ಮನೆಗಳನ್ನು ತೆರವು ಮಾಡಲಾಗಿದೆ. ಅನಧಿಕೃತಮನೆ ನಿರ್ಮಾಣಕ್ಕೆ ನಾಲ್ವರು ಆರೋಪಿಗಳು ಸಹಕಾರ ನೀಡಿದ್ದಾರೆ ಎಂದು ಆರೋಪಿಸಿ ಎಂಜಿನಿಯರ್ ದೂರು ನೀಡಿದ್ದರು. ಆ ದೂರು ಆಧರಿಸಿ ಸದ್ಯ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಬಿಗುವಿನ ವಾತಾವರಣ ಸೃಷ್ಟಿ-ಎಫ್‌ಐಆರ್: ಅನಧಿಕೃತವಾಗಿ ನಿರ್ಮಿಸಿದ್ದ ಮನೆ ತೆರವು ಕಾರ್ಯಾಚರಣೆ ವೇಳೆ ಸ್ಥಳಕ್ಕೆ ಬಂದು ಬಿಗುವಿನ ವಾತಾವರಣ ಸೃಷ್ಟಿಸಿದ್ದ ಆರೋಪದಡಿ ನಾಲ್ವರ ವಿರುದ್ಧ ಇದೇ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜನಪರ ವೇದಿಕೆಯ ಮುಖಂಡರಾದ ಗೌರಮ್ಮ, ಮನೋಹರ್, ದಲಿತ ಸಂಘಟನೆಯ ಮುಖಂಡ ಮರಿಯಪ್ಪ, ದುಡಿಯುವ ಜನರ ಪರ ವೇದಿಕೆ ಮುಖಂಡ ಇಸಾಕ್ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಮೂಲಗಳು ಹೇಳಿವೆ.

ಸರ್ವೆ ನಂ. 99ರಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಮನೆಗಳು ತೆರವು ಕಾರ್ಯಾಚರಣೆ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳಲು ಸ್ಥಳದಲ್ಲಿ ಬಂದೋಬಸ್ತ್ ಕೆಲಸಕ್ಕೆ ನನ್ನನ್ನು ನೇಮಿಸಲಾಗಿತ್ತು. ಡಿ.20 ಬೆಳಿಗ್ಗೆ 11.30ರ ಸುಮಾರಿಗೆ ಏಕಾಏಕಿ ಸ್ಥಳಕ್ಕೆ ಬಂದಿದ್ದ ನಾಲ್ವರು, ಸ್ಥಳದಲ್ಲಿದ್ದವರನ್ನು ಶಾಲಾ ಆವರಣಕ್ಕೆ ಕರೆದೊಯ್ದು ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಸಿದ್ದರು. ಅಲ್ಲದೇ ಧಿಕ್ಕಾರ ಕೂಗಿದ್ದರು ಎಂದು ಹೆಡ್ ಕಾನ್‌ಸ್ಟೆಬಲ್ ಶಂಕರ್‌ನಾಯ್ಕ್ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಲಾಗಿದೆ ಎಂದು ಮೂಲಗಳು ಹೇಳಿವೆ.

‘ಕೋಗಿಲು: ನಿರಾಶ್ರಿತರಿಗೆ ಅಗತ್ಯ ಸೌಕರ್ಯ’

ಬೆಂಗಳೂರು: ‘ಯಲಹಂಕ ವ್ಯಾಪ್ತಿಯ ಕೋಗಿಲು ಲೇಔಟ್ ವ್ಯಾಪ್ತಿಯ ಫಕೀರ್ ಹಾಗೂ ವಸೀಂ ಕಾಲೋನಿಯಿಂದ ತೆರವುಗೊಳಿಸಲಾಗಿರುವ ಅನಧಿಕೃತ ನಿವಾಸಿಗಳಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಲು ಮೂರು ಜಾಗಗಳನ್ನು ಗುರುತಿಸಲಾಗಿದೆ. ಅವರಿಗೆ ಆಹಾರ, ಔಷಧಿ ಸೇರಿದಂತೆ ಅಗತ್ಯ ಮೂಲಸೌಕರ್ಯ ಒದಗಿಸಲಾಗುವುದು’ ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ಅರುಹಿದೆ.

‘ತೆರವು ಕಾರ್ಯಾಚರಣೆಯನ್ನು ಅಸಾಂವಿಧಾನಿಕ ಎಂದು ಘೋಷಿಸಬೇಕು, ಸಂತ್ರಸ್ತರಿಗೆ ಪುನರ್ವಸತಿ ಹಾಗೂ ಪರಿಹಾರ ನೀಡಲು ನಿರ್ದೇಶಿಸಬೇಕು’ ಎಂದು ಕೋರಿ ಈ ಪ್ರದೇಶದಲ್ಲಿ ವಾಸವಿದ್ದ ರೈಬಾ ತಬಸ್ಸುಮ್, ರೆಹಾನ ಮತ್ತು ಅರೀಫಾ ಬೇಗಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಒತ್ತುವರಿ ತೆರವು ಕಾರ್ಯಾಚರಣೆ ನಡೆಸುವುದಕ್ಕೂ ಮುನ್ನ ಯಾವುದೇ ರೀತಿಯ ನೋಟಿಸ್ ನೀಡಲಾಗಿಲ್ಲ. ಸಹಜ ನ್ಯಾಯ ತತ್ವ ಪಾಲನೆ ಮಾಡಲಾಗಿಲ್ಲ. ಬುಲ್ಡೋಜರ್ ಬಳಸಿ ನೆಲಸಮಗೊಳಿಸಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಆದರೆ, ಈ ತೀರ್ಪಿಗೆ ವಿರುದ್ಧವಾಗಿ ಈ ಪ್ರಕರಣದಲ್ಲಿ ನಡೆದುಕೊಳ್ಳಲಾಗಿದೆ’ ಎಂದು ಆಕ್ಷೇಪಿಸಿದರು.



‘ಈ ಪ್ರದೇಶಲ್ಲಿದ್ದ ಅರ್ಜಿದಾರ ನಿವಾಸಿಗಳಿಗೆ 2014ರಲ್ಲಿಯೇ ಈ ಹಿಂದಿನ ಬಿಬಿಎಂಪಿ ಸ್ಥಳ ಹಂಚಿಕೆ ಮಾಡಿತ್ತು. ಕಾರ್ಯಾಚರಣೆಯಲ್ಲಿ ನಿರ್ಗತಿಕರಾಗಿರುವ 300 ಕುಟುಂಬಗಳ 3,000 ಮಂದಿಗೆ ಮೂಲಸೌಕರ್ಯ ಕಲ್ಪಿಸಬೇಕು’ ಎಂದರು.

ಇದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಅಡ್ವೊಕೇಟ್ ಜನರಲ್ (ಎಜಿ) ಕೆ.ಶಶಿಕಿರಣ ಶೆಟ್ಟಿ, ‘ಒತ್ತುವರಿಯಾಗಿದ್ದ ಪ್ರದೇಶವು ಸರ್ಕಾರದ ಜಾಗ. ಇಲ್ಲಿನ ಕಟ್ಟಡಗಳ ತೆರವು ಕಾರ್ಯಾಚರಣೆಯಲ್ಲಿ ಸುಪ್ರೀಂ ಕೋರ್ಟ್ ಮಾರ್ಗಸೂಚಿ ಅನ್ವಯ ಆಗುವುದಿಲ್ಲ. ಈ ನಿರ್ದಿಷ್ಟ ಜಾಗವು ಕ್ವಾರಿ ಪ್ರದೇಶವಾಗಿದ್ದು, ನಂತರದಲ್ಲಿ ಇದನ್ನು ನೀರಿನ ಕೆರೆ ಪ್ರದೇಶವನ್ನಾಗಿ ಬಳಕೆ ಮಾಡಲಾಗಿತ್ತು. ಏತನ್ಮಧ್ಯೆ, ಸಂತ್ರಸ್ತರು ಮನೆ ನಿರ್ಮಿಸಿಕೊಂಡು ವಾಸ ಮಾಡುತ್ತಿದ್ದ ಕಾರಣ ಆ ನೀರು ಕಲುಷಿತಗೊಂಡಿತ್ತು. ಹಾಗಾಗಿ, ಇದು ಕೊಳಚೆ ಪ್ರದೇಶವಲ್ಲ’ ಎಂದು ಸ್ಪಷ್ಟಪಡಿಸಿದರು.

‘ಅರ್ಜಿದಾರರು 28 ವರ್ಷಗಳಿಂದ ಈ ಸ್ಥಳದಲ್ಲಿದ್ದೆವು ಎಂಬ ಹೇಳಿಕೆ ವಾಸ್ತವಕ್ಕೆ ದೂರ. ಇಲ್ಲಿ ಕಟ್ಟಿಕೊಳ್ಳಲಾಗಿದ್ದ ಪ್ರತಿಯೊಂದು ಅಕ್ರಮ ಮನೆಯ ಬಗ್ಗೆ ಉಪಗ್ರಹ ಫೋಟೊ ಹಾಜರು ಪಡಿಸಲಾಗುವುದು. ಈ ನಿಟ್ಟಿನಲ್ಲಿ ಆಕ್ಷೇಪಣೆ ಸಲ್ಲಿಸಲು ಒಂದು ವಾರ ಕಾಲಾವಕಾಶ ನೀಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದನ್ನು ಮಾನ್ಯ ಮಾಡಿದ ಪೀಠ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ‘ನಿರಾಶ್ರಿತರಿಗೆ ತಾತ್ಕಾಲಿಕ ಆಶ್ರಯ ಕಲ್ಪಿಸಲು ಗುರುತಿಸಲಾದ ಜಾಗದ ಬಗ್ಗೆ ಒಂದು ವಾರದಲ್ಲಿ ಸಮಗ್ರ ವರದಿ ಸಲ್ಲಿಸಿ’ ಎಂದು ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 22ಕ್ಕೆ ಮುಂದೂಡಿತು.

ಸುದ್ದಿ 2 ನಿಮಿಷ

ಶಾಸಕರ ಹೆಸರಿನಲ್ಲಿ ನಕಲಿ ಖಾತೆ ತೆರೆದು ಸಂದೇಶ

ಬೆಂಗಳೂರು: ಜಯನಗರ ಕ್ಷೇತ್ರದ ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ ಅವರ ಹೆಸರಿನಲ್ಲಿ ಕಿಡಿಗೇಡಿಗಳು ನಕಲಿ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಖಾತೆ ತೆರೆದು ಯುವತಿಗೆ ಅಶ್ಲೀಲ ಸಂದೇಶ ಕಳುಹಿಸಿದ್ದು, ಈ ಸಂಬಂಧ ಬೆಂಗಳೂರು ದಕ್ಷಿಣ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ಠಾಣೆಯ ಪೊಲೀಸರು ತಿಳಿಸಿದರು.

‘ನಕಲಿ ಖಾತೆ ತೆರೆದು ಹಣಕ್ಕೂ ಬೇಡಿಕೆ ಇಟ್ಟಿದ್ದಾರೆ. ಹಲವರಿಗೆ ಸಂದೇಶ ಕಳುಹಿಸಿದ್ದಾರೆ. ನನ್ನ ಮೊಬೈಲ್ ಹ್ಯಾಕ್ ಮಾಡಿರುವ ಸಂಶಯ ಇದೆ’ ಎಂದು ರಾಮಮೂರ್ತಿ ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ಶಾಸಕರ ಹೆಸರಿನಲ್ಲಿದ್ದ ಫೇಸ್‌ಬುಕ್ ಹಾಗೂ ಇನ್‌ಸ್ಟಾಗ್ರಾಂ ಖಾತೆಯ ಮೂಲಕ ಯುವತಿಗೆ ಹಾಯ್, ಹಲೊ ಗುಡ್ ಮಾರ್ನಿಂಗ್, ರೀಲ್ಸ್ ಸೂಪರ್... ಅಂತಾ ಸಂದೇಶ ರವಾನಿಸಲಾಗಿದೆ. ಈ ಸಂದೇಶಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿವೆ.



‘ಕ್ಷೇತ್ರದ ಯಾವ ಸ್ಥಳಕ್ಕೆ ಭೇಟಿ ನೀಡುತ್ತೇನೆ. ಎಲ್ಲೆಲ್ಲಿ ಸಾರ್ವಜನಿಕರ ಸಮಸ್ಯೆ ಆಲಿಸಲಾಯಿತು ಎಂಬುದನ್ನು ಸಾರ್ವಜನಿಕರಿಗೆ ತಿಳಿಸುವ ಉದ್ದೇಶದಿಂದ ಇನ್‌ಸ್ಟಾಗ್ರಾಂ ಹಾಗೂ ಫೇಸ್‌ಬುಕ್ ಖಾತೆ ತೆರೆದಿದ್ದೇನೆ. ಚುನಾವಣೆಯಲ್ಲಿ ಗೆದ್ದ ನಂತರ ನನ್ನ ಹೆಸರಿನಲ್ಲಿದ್ದ ಫೇಸ್‌ಬುಕ್ ಹ್ಯಾಕ್ ಆಗಿತ್ತು. ಆಗಲೂ ದೂರು ನೀಡಿದ್ದೆ. ಮತ್ತೆ ಅದೇ ರೀತಿ ಆಗಿದೆ. ನನ್ನ ತೇಜೋವಧೆಗೆ ಕ್ಷೇತ್ರದ ವಿರೋಧ ಪಕ್ಷದ ಕಾರ್ಯಕರ್ತರು ಈ ಕೃತ್ಯ ಮಾಡಿರುವ ಸಾಧ್ಯತೆಯಿದೆ’ ಎಂದು ಸಿ.ಕೆ.ರಾಮಮೂರ್ತಿ ಅವರು ಆರೋಪಿಸಿದ್ದಾರೆ.

ಖಾಸಗಿ ಶಿಕ್ಷಣ ಸಂಸ್ಥೆ ಮೇಲೆ ಐಟಿ ದಾಳಿ

ಬೆಂಗಳೂರು: ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆಯಲ್ಲಿ ವ್ಯತ್ಯಾಸದ ಸಂಬಂಧ ನಗರದ ಗ್ಲೋಬಲ್ ಸಿಟಿ ಇಂಟರ್‌ನ್ಯಾಷನಲ್ ಸಮೂಹದ ಶಾಲಾ–ಕಾಲೇಜುಗಳು ಮತ್ತು ಕಚೇರಿ ಮೇಲೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಬುಧವಾರ ದಾಳಿ ನಡೆಸಿದ್ದಾರೆ.

ನಗರದ ವಿವಿಧೆಡೆ ಇರುವ, ಗ್ಲೋಬಲ್ ಸಿಟಿ ಇಂಟರ್‌ನ್ಯಾಷನಲ್ ಸಮೂಹದ ಶಾಲೆ–ಕಾಲೇಜು, ಆಡಳಿತ ಮಂಡಳಿ ಸದಸ್ಯರ ಮನೆಗಳು ಸೇರಿ ಒಟ್ಟು ಏಳು ಕಡೆ ದಾಳಿ ನಡೆದಿದೆ. ಶಿಕ್ಷಣ ಸಂಸ್ಥೆ ಮತ್ತು ಆಡಳಿತ ಮಂಡಳಿ ಸದಸ್ಯರ ಬ್ಯಾಂಕ್ ಖಾತೆಗಳು, ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಕೆ ವಿವರಗಳನ್ನು ಪರಿಶೀಲಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳ ದಾಖಲಾತಿ, ಶುಲ್ಕ ವಿವರ, ಶಾಲಾ–ಕಾಲೇಜು ಕಾರ್ಯನಿರ್ವಹಣೆ ಮತ್ತು ನಿರ್ವಹಣಾ ವೆಚ್ಚಗಳಲ್ಲಿ ವ್ಯತ್ಯಾಸ ಕಂಡುಬಂದಿದ್ದು, ಈ ಬಗ್ಗೆ ಆಡಳಿತ ಮಂಡಳಿಯ ಸದಸ್ಯರನ್ನು ಪ್ರಶ್ನಿಸಲಾಗಿದೆ. ಬುಧವಾರ ತಡರಾತ್ರಿವರೆಗೂ ಶೋಧ ಮುಂದುವರೆದಿತ್ತು ಎಂದು ಮಾಹಿತಿ ನೀಡಿವೆ.

ಚಟಿಕೆ ಸುದ್ದಿ

‘ತಮಿಳುನಾಡು ಮಾದರಿಯಲ್ಲಿ ಕಾಯ್ದೆ ರಚಿಸಿ’

ಬೆಂಗಳೂರು: ತಮಿಳುನಾಡಿನಲ್ಲಿ ಜಾರಿಗೊಳಿಸಿರುವ ಮಹಿಳಾ ಕಿರುಕುಳ ನಿಷೇಧ ಕಾಯ್ದೆ-1998 ಕುರಿತು ಸಮಗ್ರ ಅಧ್ಯಯನ ನಡೆಸಿ, ನಮ್ಮಲ್ಲಿಯೂ ಅದೇ ಮಾದರಿಯಲ್ಲಿಯೇ ಕಾಯ್ದೆ ರಚಿಸಿ, ಜಾರಿಗೊಳಿಸಬೇಕು ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಡಾ. ನಾಗಲಕ್ಷ್ಮೀ ಚೌಧರಿ ಒತ್ತಾಯಿಸಿದ್ದಾರೆ.



ಡಾ. ನಾಗಲಕ್ಷ್ಮೀ ಚೌಧರಿ

ಈ ಬಗ್ಗೆ ಕಾನೂನು ಸಚಿವ ಎಚ್.ಕೆ. ಪಾಟೀಲ ಅವರಿಗೆ ಪತ್ರ ಬರೆದಿರುವ ಅವರು, ‘ತಮಿಳುನಾಡಿನಲ್ಲಿ ಜಾರಿಯಲ್ಲಿ ಇರುವ ಕಾಯ್ದೆಯು ಮಹಿಳೆಯರಿಗೆ ಹೆಚ್ಚಿನ ರಕ್ಷಣೆ ಹಾಗೂ ಭದ್ರತೆಯನ್ನು ನೀಡುತ್ತಿದೆ. ಮಹಿಳೆಯರಿಗೆ ಕಿರುಕುಳ ನೀಡುವವರಿಗೆ ಈ ಕಾಯ್ದೆಯಡಿ ಹೆಚ್ಚು ಶಿಕ್ಷೆ ನೀಡುವ ಅವಕಾಶ ಇದೆ. ಇದೇ ಮಾದರಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಕಾಯ್ದೆ ಜಾರಿಗೊಳಿಸಿದರೆ ಹೆಣ್ಣು ಮಕ್ಕಳಿಗೆ ಹೆಚ್ಚು ರಕ್ಷಣೆ ಸಿಗಲಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಲಿಡ್ಕರ್ ಉತ್ಪನ್ನ ಶೇ 20ರಷ್ಟು ರಿಯಾಯಿತಿ

ಬೆಂಗಳೂರು: ರಾಜಾಜಿನಗರದಲ್ಲಿನ ಲಿಡ್ಕರ್ ಮಾರಾಟ ಮಳಿಗೆಯಲ್ಲಿ ಜನವರಿ 18ರವರೆಗೆ ಚರ್ಮದ ಉತ್ಪನ್ನಗಳಿಗೆ ಶೇ 20ರಷ್ಟು ರಿಯಾಯಿತಿ ನೀಡಲಾಗುತ್ತದೆ.

‘ಶೂ, ಚಪ್ಪಲಿ, ಮಹಿಳೆಯರ ವ್ಯಾನಿಟಿ ಬ್ಯಾಗ್ ಸೇರಿದಂತೆ ಅಪ್ಪಟ ಚರ್ಮದ ವಸ್ತುಗಳಿಗೆ ರಿಯಾಯಿತಿ ದರ ಅನ್ವಯಿಸುತ್ತದೆ. ಸಾರ್ವಜನಿಕರು ಈ ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಬೇಕು’ ಎಂದು ಮಳಿಗೆಯ ವ್ಯವಸ್ಥಾಪಕ ಟಿ. ಲೋಕೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ವಿಳಾಸ: ಲಿಡ್ಕರ್ ಮಾರಾಟ ಮಳಿಗೆ, ಓಲ್ಡ್ ಪೊಲೀಸ್ ಸ್ಟೇಷನ್ ಬಸ್ ನಿಲ್ದಾಣ, ನ್ಯೂ ವಿಶಾಲ್ ಮಾರ್ಟ್ ಎದುರು, 3ನೇ ಬ್ಲಾಕ್, ಇಎಸ್ಐ ಹತ್ತಿರ, ರಾಜಾಜಿನಗರ, ಬೆಂಗಳೂರು -560010. ಮಾಹಿತಿಗೆ 8660412905 ಮೊಬೈಲ್ ಸಂಖ್ಯೆ ಸಂಪರ್ಕಿಸುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಪುತ್ರಿ ಪ್ರಿಯಕರ ಹಚ್ಚಿದ ಬೆಂಕಿಗೆ ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪುತ್ರಿಯ ಪ್ರಿಯಕರ ಬೆಂಕಿ ಹಚ್ಚಿದ ಪರಿಣಾಮ ತೀವ್ರ ಸುಟ್ಟ ಗಾಯದಿಂದ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಾಗಿದ್ದ ಗೀತಾ (40) ಅವರು ಮಂಗಳವಾರ ರಾತ್ರಿ ಮೃತಪಟ್ಟಿದ್ದಾರೆ.

‘ಡಿ.22ರಂದು ಘಟನೆ ನಡೆದಿತ್ತು. ಕಳೆದ 16 ದಿನಗಳಿಂದ ಗೀತಾ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಕೃತ್ಯ ಎಸಗಿದ ಬಳಿಕ ತಮಿಳುನಾಡಿಗೆ ಪರಾರಿಯಾಗಿದ್ದ ಆರೋಪಿ ಮುತ್ತು ಅಭಿಮನ್ಯು ಎಂಬಾತನನ್ನು ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

ತಮಿಳುನಾಡಿನ ಗೀತಾ ಅವರು ಮಗಳ ಜತೆ ಬಸವೇಶ್ವರನಗರದ ಸಾಣೇಗುರುವನಹಳ್ಳಿಯಲ್ಲಿ ವಾಸವಾಗಿದ್ದರು. ಅವರು ಮನೆಯ ಸಮೀಪವೇ ಅಂಗಡಿ ಇಟ್ಟುಕೊಂಡು ಜೀವನ ನಡೆಸುತ್ತಿದ್ದರು.

ಗೀತಾ ಅವರ ಪುತ್ರಿ ಹಾಗೂ ಮುತ್ತು ಅಭಿಮನ್ಯು ಪರಸ್ಪರ ಪ್ರೀತಿಸುತ್ತಿದ್ದರು. ಈ ವಿಚಾರ ತಿಳಿದಿದ್ದ ಗೀತಾ ಅವರು ಮಗಳನ್ನು ಮುತ್ತುಗೆ ಕೊಟ್ಟು ಮದುವೆ ಮಾಡುವುದಾಗಿ ಹಿಂದೆಯೇ ಮಾತುಕತೆ ನಡೆಸಿದ್ದರು. ಆದರೆ, ಆರೋಪಿಯ ಇತ್ತೀಚಿನ ವರ್ತನೆಯಿಂದ ಬೇಸತ್ತು, ಮದುವೆಗೆ ನಿರಾಕರಿಸಿದ್ದರು ಎಂದು ಪೊಲೀಸರು ಹೇಳಿದರು.



ಮುತ್ತು ಅಭಿಮನ್ಯು

ಆರು ತಿಂಗಳಿಂದ ಗೀತಾ ಅವರ ಮನೆಯಲ್ಲೇ ಆರೋಪಿ ವಾಸವಾಗಿದ್ದ. ಮದ್ಯವ್ಯಸನಿಯಾದ ಆತ ಪ್ರತಿನಿತ್ಯ ಮದ್ಯಪಾನ ಮಾಡುತ್ತಿದ್ದ. ಇದರಿಂದ ಗೀತಾ ಅವರು ಅಸಮಾಧಾನಗೊಂಡಿದ್ದರು. ಮದುವೆ ಮಾಡಿಕೊಡುವಂತೆ ಆರೋಪಿ ಒತ್ತಡ ಹೇರುತ್ತಿದ್ದ. ಗೀತಾ ಅವರೊಂದಿಗೆ ಆಗಾಗ್ಗೆ ಜಗಳವಾಡುತ್ತಿದ್ದ. ಡಿ.22ರಂದು ರಾತ್ರಿ ಜಗಳವಾಡಿದ್ದ. ಬಳಿಕ ಗೀತಾ ಅವರು ನಿದ್ದೆಗೆ ಜಾರಿದಾಗ ಆರೋಪಿ ಅವರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಪರಾರಿಯಾಗಿದ್ದ ಎಂದು ಪೊಲೀಸರು ಹೇಳಿದರು.

ಘಟನೆ ವೇಳೆ ಮನೆಯಲ್ಲೇ ಇದ್ದ ಗೀತಾ ಅವರ ಮಗಳು ನೆರೆಹೊರೆಯವರ ಸಹಾಯದಿಂದ ಬೆಂಕಿ ನಂದಿಸಿ, ತಾಯಿಯನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿದ್ದರು. ಗೀತಾ ಅವರಿಗೆ ಶೇ 50ರಷ್ಟು ಸುಟ್ಟ ಗಾಯಗಳಾಗಿದ್ದ ಪರಿಣಾಮ ಅವರ ಸ್ಥಿತಿ ಗಂಭೀರವಾಗಿತ್ತು. ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಪೊಲೀಸರು ಹೇಳಿದರು.

ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಪುತ್ರಿ ಕೊಂದು ತಾಯಿ ಆತ್ಮಹತ್ಯೆಗೆ ಯತ್ನ

ಬೆಂಗಳೂರು: ಕೌಟುಂಬಿಕ ಕಲಹದಿಂದ ಬೇಸತ್ತು ಪುತ್ರಿಯನ್ನು ಕೊಲೆ ಮಾಡಿ ತಾಯಿಯೂ ಆತ್ಮಹತ್ಯೆಗೆ ಯತ್ನಿಸಿದ್ದು, ಈ ಸಂಬಂಧ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೃತಿಕಾ (6) ಮೃತಪಟ್ಟಿದ್ದು, ತಾಯಿ ನಿರುತಾ (30) ಅವರ ಸ್ಥಿತಿ ಗಂಭೀರವಾಗಿದೆ. ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ಹೇಳಿದರು.

ನೇಪಾಳದ ನಿರುತಾ ಹಾಗೂ ಕಿಶನ್ ದಂಪತಿ ಕೆಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಕಿಶನ್ ಅವರು ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದರು.



ನಿರುತಾ



ಕೃತಿಕಾ

ನಿರುತಾ ಅವರು ಸದಾ ಮೊಬೈಲ್‌ನಲ್ಲಿ ಮಾತನಾಡುತ್ತಿದ್ದಾರೆ ಎಂದು ಆರೋಪಿಸಿ ಕಿಶನ್ ಅವರು ಗಲಾಟೆ ಮಾಡುತ್ತಿದ್ದರು. ಬೇರೆಯವರ ಜತೆಗೆ ಸ್ನೇಹವಿದೆ ಎಂದೂ ಹೇಳುತ್ತಿದ್ದರು. ಜ.5ರಂದು ಪತಿ ಕೆಲಸಕ್ಕೆ ತೆರಳಿದ್ದ ವೇಳೆ ನಿರುತಾ ಅವರು ಪುತ್ರಿಗೆ ನೇಣುಹಾಕಿ ಕೊಲೆ ಮಾಡಿದ್ದರು. ನಂತರ ಅವರೂ ಆತ್ಮಹತ್ಯೆಗೆ ಯತ್ನಿಸಿದ್ದರು. ಕಿಶನ್ ಅವರು ಕೆಲಸದಿಂದ ವಾಪಸ್ ಬಂದು ನೋಡಿದಾಗ ಮಗಳು ಮೃತಪಟ್ಟಿದ್ದಳು. ಪತ್ನಿಯನ್ನು ಆಸ್ಪತ್ರೆಗೆ ದಾಖಲಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಪ್ರಕರಣ ದಾಖಲಿಸಿಕೊಂಡಿರುವ ಹೆಣ್ಣೂರು ಠಾಣೆಯ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಟ ಧನುಷ್ ರಾಜ್, ಪತ್ನಿ ವಿರುದ್ಧ ಪ್ರತ್ಯೇಕ ಪ್ರಕರಣ ದಾಖಲು

ಬೆಂಗಳೂರು: ಕೌಟುಂಬಿಕ ಕಲಹ ಹಾಗೂ ವರದಕ್ಷಿಣೆ ವಿಚಾರವಾಗಿ ನಟ ಧನುಷ್ ರಾಜ್ ಹಾಗೂ ಅವರ ಪತ್ನಿ ಆಶ್ರಿತಾ ಅವರು ಪೊಲೀಸ್ ಠಾಣೆಯ ಮೆಟ್ಟಿಲೇರಿದ್ದು, ಈ ಸಂಬಂಧ ಗಿರಿನಗರ ಹಾಗೂ ಬೆಂಗಳೂರು ದಕ್ಷಿಣ ವಿಭಾಗದ ಮಹಿಳಾ ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿವೆ. ಒಂಬತ್ತು ತಿಂಗಳ ಹಿಂದೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದರು.

‘ಕೆಲಸದ ನಿಮಿತ್ತ ವಿದೇಶಕ್ಕೆ ಹೋಗಿದ್ದೆ. ಅದನ್ನೇ ತಪ್ಪಾಗಿ ಅರ್ಥೈಸಿಕೊಂಡಿರುವ ಆಶ್ರಿತಾ ಅವರು ಅನುಮಾನ ಪಡುತ್ತಿದ್ದಾರೆ. ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ. ಹೊರಗಿನಿಂದ ಗೂಂಡಾಗಳನ್ನು ಕರೆಸಿ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾರೆ. ಆಶ್ರಿತಾ ಅವರೇ ಶೌಚಾಲಯದ ಕೊಠಡಿಗೆ ತೆರಳಿ ಗಾಜು ಒಡೆದುಕೊಂಡು ಕೈಗೆ ಚುಚ್ಚಿಕೊಂಡಿದ್ದರು. ಅದನ್ನು ನನ್ನ ಮೇಲೆ ಹೊರಿಸಲು ಪ್ರಯತ್ನಿಸಿದ್ದಾರೆ’ ಎಂದು ಆರೋಪಿಸಿ ಧನುಷ್ ಅವರು ಗಿರಿನಗರ ಠಾಣೆಗೆ ದೂರು ನೀಡಿದ್ದಾರೆ.

‘ಧನುಷ್ ಅವರಿಗೆ ಬೇರೆ ಹುಡುಗಿಯ ಜತೆಗೆ ಸ್ನೇಹವಿದೆ. ಅವರ ಮೊಬೈಲ್ ಫೋನ್ ಪರಿಶೀಲಿಸಿದಾಗ ಫೋಟೋಗಳು ಸಿಕ್ಕಿದ್ದವು. ಸುಳ್ಳು ಹೇಳಿ ವಿದೇಶಕ್ಕೆ ಹೋಗಿದ್ದರು. ಪ್ರಶ್ನಿಸಿದಾಗ ಹಲ್ಲೆ ನಡೆಸಿದ್ದಾರೆ’ ಎಂದು ಆಶ್ರಿತಾ ಅವರು ದಕ್ಷಿಣ ವಿಭಾಗದ ಮಹಿಳಾ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಹಣಕ್ಕೆ ಬೇಡಿಕೆ: ‘ಮದುವೆ ಸಂದರ್ಭದಲ್ಲಿ ಪೋಷಕರು 50 ಗ್ರಾಂ ಚಿನ್ನಾಭರಣ ನೀಡಿದ್ದರು. ಈಗ ಮತ್ತೆ ₹8 ಲಕ್ಷ ಹಣ ತರುವಂತೆ ಪೀಡಿಸುತ್ತಿದ್ದಾರೆ’ ಎಂದು ಅವರು ದೂರಿದ್ದಾರೆ.

‘ಶಿವಾಜಿ ಸುರತ್ಕಲ್’ ಸೇರಿದಂತೆ ಕೆಲವು ಸಿನಿಮಾ ಹಾಗೂ ಕಿರುತೆರೆಯಲ್ಲಿ ಧನುಷ್ ರಾಜ್ ಅವರು ನಟಿಸಿದ್ದಾರೆ.

‘ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಆಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಕಾರ್ಯಕರ್ತೆ ಸುಜಾತ ಅವರನ್ನು ವಿವಸ್ತ್ರಗೊಳಿಸಿ ಪೊಲೀಸರು ಹಲ್ಲೆ ನಡೆಸಿರುವ ಪ್ರಕರಣಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಅಮಾನತುಗೊಳಿಸಬೇಕು ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿ, ಹಲ್ಲೆಗೊಳಗಾದ ಮಹಿಳೆ ದಲಿತ ಸಮುದಾಯಕ್ಕೆ ಸೇರಿದವರು. ಕಾಂಗ್ರೆಸ್ ಪುಢಾರಿಗಳ ಮಾತುಗಳನ್ನು ಕೇಳಿಕೊಂಡು ಪೊಲೀಸರು ಹಲ್ಲೆ ನಡೆಸಿ, ವಿವಸ್ತ್ರಗೊಳಿಸಿದ್ದಾರೆ ಎಂದು ದೂರಿದರು.

‘ಇಡೀ ರಾಜ್ಯವೇ ತಲೆ ತಗ್ಗಿಸುವ ಘಟನೆ ಇದಾಗಿದೆ. ಎಸ್‌ಐಆರ್ ಮ್ಯಾಪಿಂಗ್ ಮಾಡುವಾಗ ಅಧಿಕಾರಿಗಳ ಜತೆ ಸುಜಾತ ಅವರು ಹೋಗುತ್ತಿದ್ದರು. ಆಗ, ಕಾಂಗ್ರೆಸ್‌ನ ಕಾರ್ಪೊರೇಟರ್ ಸುನಂದಾ ಅವರೇ ಸುಜಾತ ಮೇಲೆ ಹಲ್ಲೆ ನಡೆಸಿ ಪೊಲೀಸರಿಗೆ ದೂರು ನೀಡಿದರು. ಪೊಲೀಸರು ಸುಜಾತ ವಿರುದ್ಧ ಎಫ್‌ಐಆರ್ ದಾಖಲಿಸಿದ್ದಲ್ಲದೇ, ಮನೆಗೆ ನುಗ್ಗಿ ಅವರನ್ನು ಮತ್ತು ಅವರ ಕುಟುಂಬದವರನ್ನು ಬಂಧಿಸಿ ಕರೆದೊಯ್ದಿದ್ದಾರೆ’ ಎಂದರು.

‘ಕರ್ನಾಟಕ ಪೊಲೀಸ್ ಅಧಿಕಾರಿಗಳು ಅಪ್ಪಟ ಕಾಂಗ್ರೆಸ್ ಏಜೆಂಟ್‌ಗಳಂತೆ ವರ್ತಿಸುತ್ತಿದ್ದಾರೆ. ಕಾಂಗ್ರೆಸ್‌ನ ಅಹಂಕಾರ ಮೇರೆ ಮೀರಿದೆ. ಬಳ್ಳಾರಿ, ಹುಬ್ಬಳ್ಳಿ, ಬೀದರ್ ಘಟನೆಗಳನ್ನು ಗಮನಿಸಿದರೆ ಕಾಂಗ್ರೆಸ್ ಪಾಪದ ಕೊಡ ತುಂಬಿದೆ ಎಂದರು.

‘ಯಾರೊಬ್ಬರಿಂದ ಪಕ್ಷ ಅಲ್ಲ’

ಬೆಂಗಳೂರು: ‘ಟಿಕೆಟ್, ಅಧಿಕಾರ ಬೇಕು ಎಂದಾಗ ಪಕ್ಷ ಬೇಕು. ಅಧಿಕಾರ ಅನುಭವಿಸಿದಾಗ, ಅನುಭವಿಸುತ್ತಿರುವಾಗ ಪಕ್ಷ ಬೇಡವೇ? ಯಾರೊಬ್ಬರಿಂದ ಪಕ್ಷ ಅಲ್ಲ, ಅದನ್ನು ಅರ್ಥ ಮಾಡಿಕೊಳ್ಳಬೇಕು’ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

‘ಸಿದ್ದರಾಮಯ್ಯ ಇದ್ದರೆ ಕಾಂಗ್ರೆಸ್’ ಎಂಬ ಕೆ.ಎನ್. ರಾಜಣ್ಣ ಹೇಳಿಕೆ ಬಗ್ಗೆ ಸುದ್ದಿಗಾರರು ಕೇಳಿದಾಗ ಪ್ರತಿಕ್ರಿಯಿಸಿದ ಪ್ರಿಯಾಂಕ್, ‘ಮುಂದಿನ ಪೀಳಿಗೆಗೆ ನಾಯಕತ್ವವನ್ನು ಬೆಳೆಸುತ್ತಾ ಹೋಗಬೇಕು. ನನ್ನಿಂದಲೇ ಪಕ್ಷ ಎಂದು ಅಂದುಕೊಂಡಿದ್ದರೆ, ಅದು ಭ್ರಮೆ. ನಾವೆಲ್ಲರೂ ಕಾರ್ಯಕರ್ತರಿಂದಲೇ ಇದ್ದೇವೆ. ಕಾರ್ಯಕರ್ತರು ಇಲ್ಲದಿದ್ದರೆ ನನ್ನ ನಾಯಕತ್ವವೂ ಇರುವುದಿಲ್ಲ’ ಎಂದು ಅವರು ಹೇಳಿದರು.

‘ಮುಖ್ಯಮಂತ್ರಿ ಬದಲಾವಣೆ ವಿಚಾರಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಈಗಾಗಲೇ ಸ್ಪಷ್ಟನೆ ಕೊಟ್ಟಿದ್ದಾರೆ. ಅವರೇ ಸ್ಪಷ್ಟನೆ ಕೊಟ್ಟ ಮೇಲೆ ನಮ್ಮನ್ನು ಕೇಳಿ ಏನು ಪ್ರಯೋಜನ? ಮುಂದೆ ಯಾರನ್ನು ಮುಖ್ಯಮಂತ್ರಿ ಮಾಡಬೇಕೆಂದು ಹೈಕಮಾಂಡ್ ತೀರ್ಮಾನಿಸುತ್ತದೆ’ ಎಂದರು.

‘ಎಲ್ಲ ಸಮುದಾಯಗಳನ್ನ ಒಟ್ಟಿಗೆ ಕೊಂಡೊಯ್ಯುವ ಪಕ್ಷ ಕಾಂಗ್ರೆಸ್. ನಾಯಕತ್ವ, ಪ್ರಗತಿ ಎರಡೂ ನಿಂತ ನೀರಲ್ಲ. ಹಿಂದೆ ದೇವರಾಜ ಅರಸು ಇದ್ದರು. ಈಗ ಸಿದ್ದರಾಮಯ್ಯ ಇಲ್ಲವೇ? ನೆಹರೂ, ಗಾಂಧಿ ತತ್ವವನ್ನು ರಾಹುಲ್ ಗಾಂಧಿ ಮುಂದುವರಿಸುತ್ತಿದ್ದಾರಲ್ಲವೇ?’ ಎಂದು ಅವರು ಹೇಳಿದರು.

ಚಾಂಪಿಯನ್ಸ್...



ದೆಹಲಿ ಪಬ್ಲಿಕ್ ಶಾಲಾ (ಬೆಂಗಳೂರು ಪೂರ್ವ) ತಂಡವು ಬುಧವಾರ ನಡೆದ ಫೈನಲ್‌ನಲ್ಲಿ 48 ರನ್‌ಗಳಿಂದ ಪೂರ್ಣವಿಕಾಸ ವಿದ್ಯಾಲಯ ತಂಡವನ್ನು ಮಣಿಸಿತು. ಅದರೊಂದಿಗೆ, ‘ಬಿ.ಟಿ.ರಾಮಯ್ಯ ಶೀಲ್ಡ್’ಗಾಗಿ ನಡೆದ ಕೆಎಸ್‌ಸಿಎ 14 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು

ಗಾಂಜಾ ಮತ್ತಿನಲ್ಲಿ ಹಳಿ ಪಕ್ಕ ಮಲಗಿದ ಯುವಕ: ರೈಲು ಹರಿದು ತುಂಡಾದ ಕೈ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಗಾಂಜಾ ಮತ್ತಿನಲ್ಲಿ ಮಂಗಳವಾರ ತಡರಾತ್ರಿ ರೈಲು ಹಳಿ ಬಳಿ ಮಲಗಿದ್ದ ಯುವಕನೊಬ್ಬನ ಕೈ ಮೇಲೆ ರೈಲು ಹರಿದು ಎಡಗೈ ತುಂಡಾಗಿದೆ. ಗಾಂಜಾ ಮತ್ತಿನಲ್ಲಿ ಕೈ ತುಂಡಾದ ನೋವಿನ ಅರಿವು ಇಲ್ಲದೆ ಯುವಕ ರಕ್ತ ಸೋರಿಸುತ್ತ ರಸ್ತೆಗಳಲ್ಲಿ ಓಡಾಡಿದ್ದಾನೆ.

ಉತ್ತರ ಭಾರತದ ದಿಲೀಪ್ ಕೈ ಕಳೆದುಕೊಂಡ ಯುವಕ. ತುಂಡಾದ ಕೈಯಿಂದ ಇಳಿಬಿದ್ದ ರಕ್ತನಾಳ, ನರಗಳೊಂದಿಗೆ ರಕ್ತ ಸೋರಿಸುತ್ತ ದೇವನಹಳ್ಳಿ ಹಳೆ ಬಸ್ ನಿಲ್ದಾಣದಿಂದ ಕುಂಬಾರ ಬೀದಿ ಕಡೆಗೆ ನಡೆದುಕೊಂಡು ಹೋದ. ಯುವಕನಿಗೆ ತನ್ನ ಅರ್ಧ ಕೈ ತುಂಡಾಗಿದೆ ಎಂಬ ಪ್ರಜ್ಞೆಯೇ ಇರಲಿಲ್ಲ. ಮುಖದಲ್ಲಿ ಒಂದಿಷ್ಟೂ ನೋವಿನ ಛಾಯೆ ಕಾಣಲಿಲ್ಲ.

ಆತನ ಸ್ಥಿತಿಯನ್ನು ಕಂಡ ಸಾರ್ವಜನಿಕರು ಆಂಬುಲೆನ್ಸ್ ಕರೆಸಿ ಆಸ್ಪತ್ರೆಗೆ ಕರೆದೊಯ್ಯಲು ಪ್ರಯತ್ನಿಸಿದರು. ಆದರೆ, ಚಿಕಿತ್ಸೆಗಾಗಿ ಕರೆದೊಯ್ಯುತ್ತಿದ್ದ ವೇಳೆ ಯುವಕ ಮೂರು ಬಾರಿ ಆಂಬುಲೆನ್ಸ್‌ನಿಂದ ಜಿಗಿದು ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ.

ಸಾರ್ವಜನಿಕರ ನೆರವಿನೊಂದಿಗೆ ಪೊಲೀಸರು ಹಾಗೂ ಆರೋಗ್ಯ ಸಿಬ್ಬಂದಿ ಆತನನ್ನು ಒಂದು ತಾಸು ಸಾಹಸ ಪಟ್ಟು ಹಿಡಿದು ದೇವನಹಳ್ಳಿ ಆಸ್ಪತ್ರೆಗೆ ಕರೆದೊಯ್ದರು. ಆಸ್ಪತ್ರೆಗೆ ಹೋಗಲು ನಿರಾಕರಿಸಿದ ಆತನ ಮನವೊಲಿಸಿ ಆಸ್ಪತ್ರೆಗೆ ಕರೆದೊಯ್ಯಬೇಕಾದರೆ ಪೊಲೀಸರು ಮತ್ತು ಆರೋಗ್ಯ ಸಿಬ್ಬಂದಿಗೆ ಸಾಕು ಬೇಕಾಯಿತು.

ಗಾಂಜಾ ಮತ್ತಿನಲ್ಲಿದ್ದ ಆತ ಆಸ್ಪತ್ರೆಗೆ ಹೋದ ನಂತರವೂ ಚಿಕಿತ್ಸೆ ಪಡೆಯಲು ಮೊಂಡಾಟ ಮಾಡಿದ. ‘ನನ್ನ ಬಳಿ ಹಣವಿಲ್ಲ. ಚಿಕಿತ್ಸೆ ಬೇಡ’ ಎಂದು ಪಟ್ಟು ಹಿಡಿದಿದ್ದ. ಬಳಿಕ ಪೊಲೀಸರು ಬುದ್ಧಿವಾದ ಹೇಳಿ ಮನವೊಲಿಸಿದ ನಂತರ ಗಾಯಗೊಂಡ ಕೈಗೆ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ.

ನಗರದಲ್ಲಿ ಇಂದು

ತ್ಯಾಗರಾಜರ ಆರಾಧನೆ: ‘ಪಂಚರತ್ನ ಕೃತಿ ಗೋಷ್ಠಿ’ ಗಾಯನ: ಆಯೋಜನೆ ಮತ್ತು ಸ್ಥಳ: ಶೃಂಗೇರಿ ಶಂಕರ ಮಠ, ಚಾಮರಾಜಪೇಟೆ, ಬೆಳಿಗ್ಗೆ 8.30

ದೇವಿಕ ಎಸ್. ಅವರ ‘ಕೊಳಲ ಕನವರಿಕೆ’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಜಂಬುನಾಥ ಮಳಿಮಠ, ಉದ್ಘಾಟನೆ: ಪ್ರಮೀಳಾ ನೇಸರ್ಗಿ, ಪುಸ್ತಕ ಬಿಡುಗಡೆ: ಸಿ. ಸೋಮಶೇಖರ್, ಅತಿಥಿ: ರಾಜಶೇಖರಯ್ಯ ಮಠಪತಿ, ಪುಸ್ತಕದ ಕುರಿತು: ರವೀಂದ್ರ ನಾಯಕ್ ಸಣ್ಣಕ್ಕಿಬೆಟ್ಟು, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಜ್ಞಾನಸಂಬುದ್ಧ ಪ್ರಕಾಶನ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10

ಎಂಟು ದಿನಗಳ ಸಂಕ್ರಾಂತಿ ಸವಿರುಚಿಯ ರಸದೌತಣ: ಉದ್ಘಾಟನೆ: ಸುಭಾಷ್ ಬಿ. ಅಡಿ, ತಾರಾ ಅನುರಾಧಾ, ಅತಿಥಿಗಳು: ಅಶೋಕ್ ಬಿ. ಖೇಣಿ, ವಿವೇಕ್ ಸುಬ್ಬಾರೆಡ್ಡಿ, ಸದಾಶಿವ ಶೆಣೈ, ಬಸವರಾಜ ಮಾಲಗತ್ತಿ, ಸುಕನ್ಯಾ ಸಂಪತ್, ವಿಶ್ವನಾಥ್ ಕಟ್ಟಿ, ಶಿವಾನಂದ ತಗಡೂರು, ಗುರುಪ್ರಸಾದ್, ಶಶಿಕಿರಣ್, ಬಿ.ಕೆ. ಪ್ರಸನ್ನ, ಕವಿತಾ, ಲಿಂಗಯ್ಯ ಕಾಡದೇವರಮಠ, ಆಯೋಜನೆ ಮತ್ತು ಸ್ಥಳ: ಹೋಟೆಲ್ ನಳಪಾಕ, ನವರಂಗ, ರಾಜಾಜಿನಗರ, ಬೆಳಿಗ್ಗೆ 10



ತಾರಾ ಅನುರಾಧಾ

ನಾಗರಿಕ ಸೇವಾ ಪರೀಕ್ಷಾ ತರಬೇತಿ ಕೇಂದ್ರದ ಉದ್ಘಾಟನೆ: ಪುರುಷೋತ್ತಮ ಬಿಳಿಮಲೆ, ಅತಿಥಿಗಳು: ಕೆ.ಎ. ದಯಾನಂದ, ಸಿ.ಎಸ್. ಕೇದಾರ್, ಅಧ್ಯಕ್ಷತೆ: ಬಿ. ರಮೇಶ್, ಆಯೋಜನೆ: ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಸೆಂಟ್ರಲ್ ಕಾಲೇಜಿನ ಆವರಣ, ಬೆಳಿಗ್ಗೆ 10.30

ಮಕ್ಕಳ ಆನ್‌ಲೈನ್ ಸುರಕ್ಷತೆಯ ಕುರಿತು ಪಾಲುದಾರರ ಸಾಮರ್ಥ್ಯಗಳನ್ನು ಬಲಪಡಿಸುವುದು: ಉದ್ಘಾಟನೆ: ಲಕ್ಷ್ಮಿ ಹೆಬ್ಬಾಳಕರ, ಅತಿಥಿ: ಪ್ರಿಯಾಂಕ್ ಖರ್ಗೆ, ಅಧ್ಯಕ್ಷತೆ: ಮಧು ಬಂಗಾರಪ್ಪ, ಉಪಸ್ಥಿತಿ: ಶಶಿಧರ್ ಕೋಸಂಬೆ, ರಶ್ಮಿ ಮಹೇಶ್, ವಿಕಾಸ್ ಕಿಶೋರ್ ಸುರಳ್ಕರ್, ಶೇಖರ್ ಗೌಡ ಜಿ.ಆರ್., ಕೆ.ಟಿ. ತಿಪ್ಪೇಸ್ವಾಮಿ, ವೆಂಕಟೇಶ್, ಅಪರ್ಣಾ ಎಂ. ಕೊಳ್ಳ, ಆಯೋಜನೆ: ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಸ್ಥಳ: ಕೊಠಡಿ ಸಂಖ್ಯೆ 419, ವಿಕಾಸಸೌಧ, ಬೆಳಿಗ್ಗೆ 10.30

ರಾಜಯೋಗಿ ಡಾ.ಬಿ.ಕೆ. ಮೃತ್ಯುಂಜಯ ಅಭಿನಂದನೆ–78: ಸಾನ್ನಿಧ್ಯ: ಚನ್ನಸಿದ್ಧರಾಮ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಪ್ರಭುಚೆನ್ನಬಸವ ಸ್ವಾಮೀಜಿ, ಬಿ.ಕೆ. ಜಯಂತಿ, ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಅಧ್ಯಕ್ಷತೆ: ಬಿ.ಎಸ್. ಯಡಿಯೂರಪ್ಪ, ‘ಸಮರ್ಪಣೆ’ ಅಭಿನಂದನಾ ಗ್ರಂಥ ಬಿಡುಗಡೆ: ಶೋಭಾ ಕರಂದ್ಲಾಜೆ, ಪ್ರಾಸ್ತಾವಿಕ ನುಡಿ: ಬಿ.ಎಸ್. ಪರಮಶಿವಯ್ಯ, ಉಪಸ್ಥಿತಿ: ಎಂ. ಕೃಷ್ಣಪ್ಪ, ಎಂ.ಜಿ. ನಾಗರಾಜ್, ಆಯೋಜನೆ: ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ, ಸ್ಥಳ: ಪೂರ್ಣಿಮಾ ಪ್ಯಾಲೇಸ್ ಕನ್ವೆನ್ಷನ್ ಸೆಂಟರ್, ಮೈಸೂರು ರಸ್ತೆ, ಬೆಳಿಗ್ಗೆ 10.30



ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ಭರತನಾಟ್ಯ ಪ್ರದರ್ಶನ: ನೃತ್ಯ ದಿಶಾ ಟ್ರಸ್ಟ್‌ನ ವಿದ್ಯಾರ್ಥಿಗಳು, ನಿರ್ದೇಶನ: ದರ್ಶಿನಿ ಮಂಜುನಾಥ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ ಐದನೇ ಬಡಾವಣೆ, ಸಂಜೆ 5.15

‘ಪ್ರಾಣ ಸಖಿ’ ನೃತ್ಯ ರೂಪಕ: ಆಯೋಜನೆ ಮತ್ತು ಸ್ಥಳ: ಬೆಂಗಳೂರು ಗಾಯನ ಸಮಾಜ, ಕೆ.ಆರ್. ರಸ್ತೆ, ಸಂಜೆ 6

‘ವನಪರ್ವ’ ಉಪನ್ಯಾಸ: ಚಂದ್ರಶೇಖರ ಆಚಾರ್ಯ, ಸ್ಥಳ: ಭೀಮನಕಟ್ಟೆ ಮಠ, ಬೊಮ್ಮಸಂದ್ರ, ಸಂಜೆ 6.15

‘ನೆಮ್ಮದಿಯ ಬದುಕಿಗಾಗಿ ಸರಳ ಸೂತ್ರಗಳ’ ಉಪನ್ಯಾಸ: ದೇವರಾಜು ಚನ್ನಸಂದ್ರ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಮಾರ್ಗಶೀರ್ಷೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ: ಕುನ್ನಕುಡಿ ಬಾಲಮುರಳಿ ಕೃಷ್ಣ, ಪಿಟೀಲು: ಎ.ಜ.ಎ ವೆಂಕಟಸುಬ್ರಹ್ಮಣ್ಯನ್, ಮೃದಂಗ: ಬಿ. ಸುಂದರ್ ಕುಮಾರ್, ಖಂಜೀರಾ: ಸುನಾದ್ ಆನೂರ್, ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಸುರಭಾರತೀ, ಎಚ್‌ಆರ್‌ಬಿಆರ್ ಲೇಔಟ್, ಸಂಜೆ 6.30

ದಾಸ ಮಂದಾರ ಗಾಯನ: ಅಭಿಜ್ಞಾ ಪಿ. ಕಶ್ಯಪ್, ಪಿಟೀಲು: ಎಸ್. ಶಶಿಧರ್, ಮೃದಂಗ: ನಟರಾಜ್ ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಪವಮಾನಪುರ, ಬನಶಂಕರಿ ಆರನೇ ಹಂತ, ಸಂಜೆ 7

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ.. nagaradalli_indu@prajavani.co.in

ಸ್ವದೇಶಿ ಜಾಗರಣ ಮಂಚ್ ವತಿಯಿಂದ ಸ್ವದೇಶಿ ಮೇಳ

‘ಸ್ವದೇಶಿ: ಸಂಕಲ್ಪಶಕ್ತಿಯ ಸಂಕೇತ’

ಪ್ರಜಾವಾಣಿ ವಾರ್ತೆ



ಸ್ವದೇಶಿ ಜಾಗರಣ ಮಂಚ್ ಆಯೋಜಿಸಿದ್ದ ಸ್ವದೇಶಿ ಮೇಳದ ಉದ್ಘಾಟನೆ ಸಮಾರಂಭದಲ್ಲಿ ವಿಶ್ವಸಂತೋಷ ಭಾರತಿ ಸ್ವಾಮೀಜಿ, ಎಸ್. ಮುನಿರಾಜು, ಡಿ.ವಿ. ಸದಾನಂದ ಗೌಡ, ರವೀಂದ್ರ ಪೈ ಭಾಗವಹಿಸಿದ್ದರು

ಪೀಣ್ಯ ದಾಸರಹಳ್ಳಿ: ಸ್ವದೇಶಿ, ಭಾರತದ ದೂರದರ್ಶಿತ್ವದ ಮತ್ತು ಸಂಕಲ್ಪಶಕ್ತಿಯ ಸಂಕೇತ. ಸ್ವದೇಶಿ ಮೇಳ ಸ್ವಾಭಿಮಾನದ ಶಕ್ತಿಯ ಪ್ರತೀಕ. ಇಂತಹ ಮೇಳಗಳನ್ನು ಆಯೋಜಿಸುವ ಮೂಲಕ ಭಾರತದ ಅಂತಃಸತ್ವವನ್ನು ಜಾಗೃತಗೊಳಿಸುವ ಕೆಲಸ ಸ್ವದೇಶಿ ಜಾಗರಣ ಮಂಚ್ ಮಾಡುತ್ತಿದೆ ಎಂದು ಬಾರ್ಕೂರು ಮಹಾಸಂಸ್ಥಾನದ ವಿಶ್ವಸಂತೋಷ ಭಾರತಿ ಸ್ವಾಮೀಜಿ ಹೇಳಿದರು.

ಬಾಗಲಗುಂಟೆಯ ಎಂಇಐ ಮೈದಾನದಲ್ಲಿ ಸ್ವದೇಶಿ ಜಾಗರಣ ಮಂಚ್ ವತಿಯಿಂದ ಆಯೋಜಿಸಲಾದ ಸ್ವದೇಶಿ ಮೇಳದ ಉದ್ಘಾಟನೆ ಸಮಾರಂಭದಲ್ಲಿ ಅವರು ಮಾತನಾಡಿದರು.

'ಭಾರತ ಸಂಸ್ಕಾರವನ್ನು, ಯೋಜನೆ, ಯೋಚನೆಯನ್ನು ಜಗತ್ತಿಗೆ ಕಲಿಸಿಕೊಟ್ಟಂತಹ ರಾಷ್ಟ್ರ. ಆದರೆ ವ್ಯಾಪಾರದ ಹೆಸರಲ್ಲಿ ಈ ನಾಡಿಗೆ ಬಂದ ಪಾಶ್ಚಾತ್ಯರು ಇಲ್ಲಿನ ಸಂಸ್ಕೃತಿಗೆ ಧಕ್ಕೆ ತಂದರು. ಸ್ವಾಭಿಮಾನದ ಆಧಾರವಾಗಿದ್ದ ಕರಕುಶಲ ವ್ಯಾಪಾರವನ್ನು ಧ್ವಂಸಗೊಳಿಸಿದರು. ಮುಖ್ಯವಾಗಿ ನಮ್ಮ ಯೋಚನೆಯೇ ತಪ್ಪೆಂದರು. ಅದನ್ನೇ ನಂಬಿಕೊಂಡು ಆದಂತಹ ಅವಾಂತರಗಳಿಂದ ಹೊರಗೆ ಬರಬೇಕು. ರಾಷ್ಟ್ರ ಮುಖ್ಯ ಎನ್ನುವ ಭಾವ ನಮ್ಮಲ್ಲಿ ಜಾಗೃತವಾಗಬೇಕು’ ಎಂದು ಹೇಳಿದರು.

ಶಾಸಕ ಎಸ್. ಮುನಿರಾಜು, ‘ದೊಡ್ಡ ದೊಡ್ಡ ಕಂಪನಿಗಳ ಜೊತೆಗೆ ಸ್ವದೇಶಿ ವಸ್ತುಗಳು ಸ್ಪರ್ಧಿಸಬೇಕಾದರೆ ರಾಷ್ಟ್ರದ ವ್ಯಾಪಾರ ಕ್ಷೇತ್ರದಲ್ಲಿ ಇರಬೇಕಾದ ವಾತಾವರಣವನ್ನು ನಿರ್ಮಿಸುವಲ್ಲಿ ಸ್ವದೇಶಿ ಜಾಗರಣ ಮಂಚ್‌ನ ಜವಾಬ್ದಾರಿ ಎಷ್ಟಿದೆಯೋ ಅಷ್ಟೇ ಸರ್ಕಾರದ್ದೂ ಇದೆ. ಕೋವಿಡ್ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಕೊಟ್ಟ ಆತ್ಮನಿರ್ಭರದ ಕರೆ ಸ್ವದೇಶಿತನಕ್ಕೆ ಹೊಸ ಹುರುಪನ್ನು ನೀಡಿದೆ’ ಎಂದರು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಚಿಂತಕ ಚಕ್ರವರ್ತಿ ಸೂಲಿಬೆಲೆ, ಸ್ವದೇಶಿ ಜಾಗರಣ ಮಂಚ್ ಸಂಯೋಜಕ ರವೀಂದ್ರ ಪೈ, ಸಹ ಸಂಯೋಜಕ ಅಶ್ವಿನ್ ಮಹಾಜನ್, ಜಾರ್ಖಂಡ್ ಮುಖ್ಯಸ್ಥ ಸಚೇಂದ್ರ ಬಿರಿಯಾರ್, ಸ್ವದೇಶಿ ಮೇಳದ ಸಂಯೋಜಕ ರವೀಂದ್ರ ಪೈ, ಸಹ ಸಂಯೋಜಕ ದಾನಪ್ಪ, ಸಂಘಟಕ ಭರತ್ ಸೌಂದರ್ಯ, ಸಹ ಸಂಘಟಕ ಲಕ್ಷ್ಮಿ ವೆಂಕಟೇಶ್, ಸಂಚಾಲಕ ವಸಂತಮೂರ್ತಿ ಉಪಸ್ಥಿತರಿದ್ದರು.

ಕಾಮಗಾರಿ ವಿಳಂಬ: ಸಂಚಾರ ಅಯೋಮಯ

ಮಲ್ಲೇಶ್ವರ 8ನೇ ಮುಖ್ಯರಸ್ತೆಯ 7ನೇ ಕ್ರಾಸ್‌ನಿಂದ 18ನೇ ಕ್ರಾಸ್‌ವರೆಗಿನ ರಸ್ತೆಯಲ್ಲಿ ನಡೆಯುತ್ತಿರುವ ವೈಟ್ ಟಾಪಿಂಗ್

• ಖಲೀಲಅಹ್ಮದ ಶೇಖ

ಬೆಂಗಳೂರು: ಮಲ್ಲೇಶ್ವರದ ಎಂಟನೇ ಮುಖ್ಯರಸ್ತೆಯ ಏಳನೇ ಕ್ರಾಸ್‌ನಿಂದ 18ನೇ ಕ್ರಾಸ್‌ವರೆಗೆ ಸಂಪರ್ಕಿಸುವ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಂಡಿದ್ದು, ರಸ್ತೆ ಹಾಗೂ ಪಾದಚಾರಿ ಮಾರ್ಗಗಳು ಅಧ್ವಾನಗೊಂಡಿವೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಇಡೀ ಪ್ರದೇಶ ದೂಳುಮಯವಾಗಿದ್ದು, ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ.

ಎಂಟನೇ ಮುಖ್ಯರಸ್ತೆಯ ಏಳನೇ ಕ್ರಾಸ್‌ನಿಂದ 11ನೇ ಕ್ರಾಸ್‌ವರೆಗಿನ ರಸ್ತೆಗೆ ವೈಟ್ ಟಾಪಿಂಗ್ ಕಾಮಗಾರಿ ಮಾಡಲಾಗಿದೆ. 12ನೇ ಕ್ರಾಸ್‌ನ ರಸ್ತೆಯಲ್ಲಿ ಒಂದು ಭಾಗದಲ್ಲಿ ಮಾತ್ರ ಕಾಮಗಾರಿ ನಡೆದಿದ್ದು, ಇನ್ನೊಂದು ಭಾಗ ಹಾಗೆಯೇ ಬಿಡಲಾಗಿದೆ. ರಸ್ತೆಯ ಎರಡೂ ಬದಿಯ ಪಾದಚಾರಿ ಮಾರ್ಗಗಳನ್ನು ಅಗೆಯಲಾಗಿದೆ. ಸಾರ್ವಜನಿಕರು ಮುಖ್ಯ ರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಬೆಸ್ಕಾಂನವರು ಭೂಗತ ಕೇಬಲ್ ಹಾಗೂ ಜಲಮಂಡಳಿಯವರು ಕೊಳವೆಗಳನ್ನು ಅಳವಡಿಸಲು 13ನೇ ಕ್ರಾಸ್‌ನಿಂದ 15ನೇ ಕ್ರಾಸ್‌ವರೆಗಿನ ರಸ್ತೆಯನ್ನು ಸಂಪೂರ್ಣವಾಗಿ ಅಗೆದು ಹಾಗೆಯೇ ಬಿಟ್ಟಿದ್ದಾರೆ. ಕೆಲವು ಕಡೆ ಗುಂಡಿಗಳನ್ನು ತೆಗೆಯಲಾಗಿದೆ. ಗುಂಡಿ ಹಾಗೂ ಸ್ಲ್ಯಾಬ್‌ಗಳನ್ನು ತೆಗೆದಿರುವ ಜಾಗದಲ್ಲಿ ಯಾವುದೇ ಸುರಕ್ಷತಾ ಕ್ರಮಗಳನ್ನು ಕೈಗೊಂಡಿಲ್ಲ. ರಸ್ತೆಯ ಮಧ್ಯದಲ್ಲಿಯೇ ಎಂ – ಸ್ಯಾಂಡ್ ರಾಶಿ ಹಾಕಲಾಗಿದೆ. ದ್ವಿಚಕ್ರ ವಾಹನಗಳು ಪಾದಚಾರಿ ಮಾರ್ಗದಲ್ಲಿ ಸಂಚರಿಸುತ್ತಿವೆ.

15ನೇ ಕ್ರಾಸ್‌ನಿಂದ 18ನೇ ಕ್ರಾಸ್ ವರೆಗೆ ವೈಟ್ ಟಾಪಿಂಗ್ ಕಾಮಗಾರಿ ಪೂರ್ಣಗೊಂಡಿದೆ. ಆದರೆ, ಪಾದಚಾರಿ ಮಾರ್ಗಕ್ಕೆ ಪೇವರ್ಸ್‌ಗಳನ್ನು ಅಳವಡಿಸುವ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ.

‘ಈ ರಸ್ತೆಯಲ್ಲಿ ಬೆಳಿಗ್ಗೆ ವೇಳೆ ಸಂಚರಿಸುವುದು ಒಂದು ರೀತಿಯ ದುಸ್ತರವಾದರೆ, ರಾತ್ರಿ ವೇಳೆ ಪಾದಚಾರಿಗಳು ನಡೆದಾಡುವುದೇ ಕಷ್ಟ. ಮಳೆ ಬಂದಾಗ, ಅಗೆದಿರುವ ಜಾಗ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ನಿತ್ಯ ದೂಳಿನ ಮಜ್ಜನವಾಗುತ್ತಿದ್ದು, ಆರೋಗ್ಯ ಹದಗೆಡುತ್ತಿದೆ. ಸಂಬಂಧಪಟ್ಟವರಿಗೆ ಕಾಮಗಾರಿ ಪೂರ್ಣಗೊಳಿಸುವಂತೆ ಮನವಿ ಮಾಡಿದರೂ, ಪ್ರಯೋಜನವಾಗುತ್ತಿಲ್ಲ. ಅಂಗಡಿಗಳ ಮುಂದೆ ದೊಡ್ಡ ಗುಂಡಿ ತೋಡಲಾಗಿದೆ. ಇದರಲ್ಲಿ ಗ್ರಾಹಕರು ಹಾಗೂ ವ್ಯಾಪಾರಿಗಳು ಬಿದ್ದು ಕಾಲು ಮುರಿದುಕೊಂಡಿದ್ದಾರೆ’ ಎಂದು ಸ್ಥಳೀಯ ವೃದ್ಧರೊಬ್ಬರು ದೂರಿದರು.

‘ಚೆನ್ನಾಗಿರುವ ರಸ್ತೆಯಲ್ಲಿ ವೈಟ್ ಟಾಪಿಂಗ್ ಹೆಸರಿನಲ್ಲಿ 15 ತಿಂಗಳ ಹಿಂದೆಯೇ ಪೈಪ್‌ಲೈನ್, ಮಳೆ ನೀರು ಚರಂಡಿ ಮತ್ತು ಪಾದಚಾರಿ ಮಾರ್ಗದ ಕಾಮಗಾರಿಯನ್ನು ಪ್ರಾರಂಭಿಸಲಾಗಿತ್ತು. 2025ರ ನವೆಂಬರ್ 30ರೊಳಗೆ ಕಾಮಗಾರಿ ಪೂರ್ಣಗೊಳ್ಳಬೇಕಿತ್ತು. ಇದುವರೆಗೂ ಪೂರ್ಣಗೊಂಡಿಲ್ಲ. ಕಾಮಗಾರಿ ನಿಧಾನಗತಿಯಲ್ಲಿ ಸಾಗಿದ್ದು, ಇಲ್ಲಿನ ವ್ಯಾಪಾರ–ವಹಿವಾಟಿಗೆ ಪೆಟ್ಟು ಬಿದ್ದಿದೆ. ಗ್ರಾಹಕರು ಬಾರದ ಕಾರಣ ಹಲವು ಅಂಗಡಿಗಳನ್ನು ಮುಚ್ಚಲಾಗಿದೆ’ ಎಂದು ಸ್ಥಳೀಯರಾದ ಪ್ರಸನ್ನಕುಮಾರ್ ಅಳಲು ತೋಡಿಕೊಂಡರು.

‘ಮಲ್ಲೇಶ್ವರದ ಎಂಟನೇ ಮುಖ್ಯರಸ್ತೆ ಏಳನೇ ಕ್ರಾಸ್‌ನಿಂದ 18ನೇ ಕ್ರಾಸ್‌ವರೆಗಿನ ರಸ್ತೆಯಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಕೈಗೊಳ್ಳಲಾಗಿದೆ. ಒಂದು ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗುವುದು’ ಎಂದು ಪಶ್ಚಿಮ ಪಾಲಿಕೆ ಎಂಜಿನಿಯರ್ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಮುಖ್ಯಾಂಶಗಳು

- 15 ತಿಂಗಳಾದರೂ ಮುಗಿಯದ ಕಾಮಗಾರಿ
- ಅಂಗಡಿ ಬಾಡಿಗೆ ಕಟ್ಟಲು ಪರದಾಡುತ್ತಿರುವ ವ್ಯಾಪಾರಿಗಳು
- ಪಾದಚಾರಿ ಮಾರ್ಗಕ್ಕೆ ಪೇವರ್ಸ್ ಅಳವಡಿಸುವ ಕಾಮಗಾರಿ ಶುರುವಾಗಿಲ್ಲ



ಮಲ್ಲೇಶ್ವರದ ಎಂಟನೇ ಮುಖ್ಯರಸ್ತೆಯ 13ನೇ ಕ್ರಾಸ್‌ನ ರಸ್ತೆಯಲ್ಲಿ ಎಂಸ್ಯಾಂಡ್ ರಾಶಿ ಹಾಕಲಾಗಿದೆ

ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್



ಮಲ್ಲೇಶ್ವರದ 8ನೇ ಮುಖ್ಯರಸ್ತೆಯ 13ನೇ ಕ್ರಾಸ್‌ನ ರಸ್ತೆಯನ್ನು ಅಗೆದಿರುವುದು

ಸಾರ್ವಜನಿಕರು ಏನಂತಾರೆ?



15 ತಿಂಗಳ ಹಿಂದೆಯೇ ಪ್ರಾರಂಭವಾಗಿದ್ದ ವೈಟ್ ಟಾಪಿಂಗ್ ಕಾಮಗಾರಿ ಇದುವರೆಗೂ ಪೂರ್ಣಗೊಂಡಿಲ್ಲ. ಇದರಿಂದ ಸ್ಥಳೀಯರಿಗೆ ನಿತ್ಯ ದೂಳಿನ ಮಜ್ಜನವಾಗುತ್ತಿದ್ದು, ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ

ಪ್ರಸನ್ನಕುಮಾರ್, ಟೇಬಲ್ ಟೆನಿಸ್ ತರಬೇತುದಾರ



ರಸ್ತೆ ಕಾಮಗಾರಿ ನಿಧಾನಗತಿಯಲ್ಲಿ ಸಾಗಿದೆ. ಗುತ್ತಿಗೆದಾರರು ರಸ್ತೆಯನ್ನು ಅಗೆಯುವುದು ಹಾಗೂ ಮುಚ್ಚುವ ಕೆಲಸ ಮಾಡುತ್ತಿದ್ದು, ಕಾಮಗಾರಿಗೆ ವೇಗ ನೀಡುತ್ತಿಲ್ಲ. ಇದರಿಂದ ನಮ್ಮ ವ್ಯಾಪಾರ–ವಹಿವಾಟಿಗೆ ಧಕ್ಕೆ ಆಗಿದೆ

ಚನ್ನಕೇಶವ್, ಕಿರಾಣಿ ಸ್ಟೋರ್ ಮಾಲೀಕ



13ನೇ ಕ್ರಾಸ್‌ನಿಂದ 15ನೇ ಕ್ರಾಸ್‌ವರೆಗಿನ ರಸ್ತೆಯನ್ನು 15 ತಿಂಗಳಲ್ಲಿ ನಾಲ್ಕು ಬಾರಿ ಅಗೆದಿದ್ದಾರೆ. ಕಾಮಗಾರಿ ಮಾತ್ರ ಮಾಡುತ್ತಿಲ್ಲ. ವಾಹನ ಸಂಚಾರಕ್ಕೆ ತುಂಬಾ ತೊಂದರೆ ಆಗಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ

ನಾರಾಯಣ್, ವಾಹನ ಸವಾರ

ಹೆಚ್ಚು ಅಂಕ ಪಡೆದವರಿಗೆ ₹25 ಸಾವಿರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಕೋರ್ಸ್‌ಗಳಲ್ಲಿ ಅತ್ಯುತ್ತಮ ಅಂಕ ಗಳಿಸಿ ಚಿನ್ನದ ಪದಕ ಪಡೆದ ಕೆಎಸ್‌ಆರ್‌ಟಿಸಿ ಸಿಬ್ಬಂದಿಯ ಮಕ್ಕಳಿಗೆ ನಿಗಮದಿಂದ ತಲಾ ₹ 5 ಸಾವಿರ ಹಾಗೂ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ವೈಯಕ್ತಿಕವಾಗಿ ಕೊಟ್ಟಿರುವ ತಲಾ ₹20 ಸಾವಿರವನ್ನು ಬುಧವಾರ ನೀಡಿ ಗೌರವಿಸಲಾಯಿತು.

ನಿಗಮದ ಪ್ರಾದೇಶಿಕ ಕಾರ್ಯಾಗಾರದಲ್ಲಿ ಕುಶಲಕರ್ಮಿ ಆಗಿರುವ ಮುನಿರಾಜಪ್ಪ ಕೆ.ಇ. ಅವರ ಮಗಳು ಗಗನ ಎಂ. (ಎಂಬಿಬಿಎಸ್‌ನಲ್ಲಿ ಚಿನ್ನದ ಪದಕ), ಚಾಲಕ ಕಂ ನಿರ್ವಾಹಕ ರೇಣುಕಾರ್ಯ ಟಿ.ಕೆ. ಅವರ ಮಗಳು ವಿಸ್ಮಯ ಟಿ.ಆರ್. (ಎಂ.ಟೆಕ್‌ನಲ್ಲಿ ಚಿನ್ನದ ಪದಕ), ಚಿಕ್ಕಬಳ್ಳಾಪುರ ವಿಭಾಗದ ಸಂಚಾರ ನಿಯಂತ್ರಕ ಮೆಹಬೂಬ್ ಸಾಬ್ ಎಚ್. ಅವರ ಮಗಳು ರೂಫಿಯಾ ಕೆ.ಎಂ. (ಎಂಎಸ್ಸಿಯಲ್ಲಿ ಚಿನ್ನದ ಪದಕ), ಚಾಲಕ ಕಂ ನಿರ್ವಾಹಕಿ ಪದ್ದವ್ವ ಗಣಿ ಅವರ ಮಗ ಸತೀಶ್ ಕುಮಾರ್ ದೊಡ್ಡಮನಿ (ಪ್ರದರ್ಶನ ಕಲೆ– ನಾಟಕ ವಿಭಾಗದಲ್ಲಿ ಸ್ನಾತಕೋತ್ತರದಲ್ಲಿ ಚಿನ್ನದ ಪದಕ), ಚಾಲಕ ಕಂ ನಿರ್ವಾಹಕ ಅಕ್ರಂ ಪಾಷ ಅವರ ಮಗಳು ಸಾನಿಯಾ ಬಿ. (ಬಿಡಿಎಸ್‌ನಲ್ಲಿ ಚಿನ್ನದ ಪದಕ) ಹಾಗೂ ಚಾಲಕ ಕಂ ನಿರ್ವಾಹಕ ತಾಯಬ್ ಅಹ್ಮದ್ ಅವರ ಮಗಳು ಟಿ. ಹರ್ಮಿನ್ (ಬಿಎಸ್ಸಿಯಲ್ಲಿ ಚಿನ್ನದ ಪದಕ) ಅವರನ್ನು ಗೌರವಿಸಲಾಯಿತು.

ವಿದ್ಯಾರ್ಥಿಗಳನ್ನು ಸನ್ಮಾನಿಸಿದ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, ‘ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಕಠಿಣ ಪರಿಶ್ರಮ, ಶಿಸ್ತು ಮತ್ತು ಆತ್ಮವಿಶ್ವಾಸ ಯಶಸ್ಸಿನ ಮಂತ್ರಗಳು. ಪ್ರತಿಭೆ ಮತ್ತು ಸಾಮರ್ಥ್ಯವನ್ನು ಬಳಸಿಕೊಂಡು ವಿಜ್ಞಾನ, ತಂತ್ರಜ್ಞಾನ, ಕಲೆ, ಕ್ರೀಡೆ ಅಥವಾ ನಿಮ್ಮ ಆಯ್ಕೆಯ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಬೇಕು’ ಎಂದರು.

‘ನಿಗಮದ ಸಿಬ್ಬಂದಿಯ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅನುಕೂಲ ಕಲ್ಪಿಸಲು ಸಾರಿಗೆ ವಿದ್ಯಾಚೇತನ ಯೋಜನೆಯನ್ನು ಜಾರಿಗೆ ತಂದಿದ್ದು, ಈವರೆಗೂ 5,450 ವಿದ್ಯಾರ್ಥಿಗಳಿಗೆ ₹ 2.76 ಕೋಟಿ ನೀಡಲಾಗಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.



ಸಾಧಕ ವಿದ್ಯಾರ್ಥಿಗಳನ್ನು ರಾಮಲಿಂಗಾರೆಡ್ಡಿ ಸನ್ಮಾನಿಸಿದರು. ವಿ.ಎಸ್. ಆರಾಧ್ಯ, ಮೊಹಮ್ಮದ್ ರಿಜ್ವಾನ್ ನವಾಬ್, ಅಕ್ರಂ ಪಾಷ, ನಂದಿನಿದೇವಿ ಕೆ. ಉಪಸ್ಥಿತರಿದ್ದರು

ಚಿಟಿಕೆ ಸುದ್ದಿ

10–11ಕ್ಕೆ ಸಂಕ್ರಾಂತಿ ಸಂಭ್ರಮ

ಬೆಂಗಳೂರು: ಮಕರ ಸಂಕ್ರಾಂತಿ ಹಬ್ಬದ ಪ್ರಯುಕ್ತ ಭಾರತೀಯ ಮಾಲ್ ಆಫ್ ಬೆಂಗಳೂರು ಇದೇ 10 ಮತ್ತು 11ಕ್ಕೆ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ.

10ರಂದು ಮಧ್ಯಾಹ್ನ 2 ಗಂಟೆಗೆ ಗಾಳಿಪಟ ತಯಾರಿಕೆ ಮತ್ತು ಹಾರಿಸುವ ಸ್ಪರ್ಧೆ ಮೂಲಕ ಕಾರ್ಯಕ್ರಮ ಆರಂಭವಾಗಲಿದೆ. ಮಾಲ್‌ಗೆ ಭೇಟಿ ನೀಡುವವರು ಸ್ವತಃ ತಾವೇ ಗಾಳಿಪಟಗಳನ್ನು ವಿನ್ಯಾಸಗೊಳಿಸಿ, ಹಾರಿಸುವ ಮೂಲಕ ಸುಗ್ಗಿ ಹಬ್ಬದ ಸಂಭ್ರಮದಲ್ಲಿ ಭಾಗಿಯಾಗಬಹುದು.

11ರ ಮಧ್ಯಾಹ್ನ 3 ಗಂಟೆಗೆ ರಂಗೋಲಿ ಸ್ಪರ್ಧೆ, ಸಂಜೆ ರಂಗೋಲಿ ಕಾರ್ಯಾಗಾರ ನಡೆಯಲಿದೆ. ಆಸಕ್ತರು https://in.bookmyshow.com/events/makar-sankranti-kite-workshop-kite-competition/ET00479586?webview=true ಲಿಂಕ್ ಮೂಲಕ ನೋಂದಾಯಿಸಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

‘ಕೇಂದ್ರ ಮಾತು ಉಳಿಸಿಕೊಳ್ಳಲಿ’

ಹಾವೇರಿ: ‘ರಾಜ್ಯದಲ್ಲಿರುವ ನೀರಾವರಿ ಯೋಜನೆಗೆ ಹಣ ನೀಡುವುದಾಗಿ ಹೇಳಿದ್ದ ಕೇಂದ್ರ ಸರ್ಕಾರ, ಈವರೆಗೆ ಕೊಟ್ಟಿಲ್ಲ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆರೋಪಿಸಿದರು.

ನಗರದಲ್ಲಿ ಬುಧವಾರ ನಡೆದ ಹಾವೇರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ಹಿಮ್ಸ್) ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ನಾನು ಕೆಲ ದಿನಗಳ ಹಿಂದೆಯಷ್ಟೇ ಒಂದು ಪೋಸ್ಟ್ ಹಾಕಿದ್ದೆ. ಜಗತ್ತಿನ ಅತಿ ದೊಡ್ಡ ಶಕ್ತಿ ಎಂದರೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವುದು. ಹೀಗಾಗಿ, ಕೇಂದ್ರ ಸರ್ಕಾರ ತನ್ನ ಮಾತು ಉಳಿಸಿಕೊಳ್ಳಬೇಕು’ ಎಂದರು.

9, 10ಕ್ಕೆ ತುಳು ವಿಚಾರ ಸಂಕಿರಣ

ಬೆಂಗಳೂರು: ತುಳುವರ್ಲ್ಡ್ ಫೌಂಡೇಷನ್, ಕಟೀಲು–ಮಂಗಳೂರು, ಅಲಯನ್ಸ್ ವಿಶ್ವವಿದ್ಯಾಲಯ ಮತ್ತು ತುಳುವ ಮಹಾಸಭೆ ಇಂಟರ್‌ನ್ಯಾಷನಲ್, ಬೆಂಗಳೂರು ಸಹಯೋಗದಲ್ಲಿ ಜ. 9, 10 ರಂದು ಅಲಯನ್ಸ್ ವಿ.ವಿ ಕ್ಯಾಂಪಸ್‌ನಲ್ಲಿ ರಾಷ್ಟ್ರ ಮಟ್ಟದ ತುಳು ವಿಚಾರ ಸಂಕಿರಣ ನಡೆಯಲಿದೆ.

‘ತುಳುನಾಡಿನ ಆದಿಮೂಲ ದೈವೊಲು – ಬೆಮ್ಮೆರ್ ಬೊಕ್ಕ ಲೆಕ್ಕೆಸಿರಿ: ಮೂಲ ಪರಿಕಲ್ಪನೆದ ಮಿತ್ತ್ ಒಂಜಿ ಅಧ್ಯಯನ’ ವಿಷಯವನ್ನು ಆಯ್ಕೆ ಮಾಡಲಾಗಿದೆ. ಜ.9ರಂದು ಬೆಳಿಗ್ಗೆ 11ಕ್ಕೆ ಅಲಯನ್ಸ್ ವಿ.ವಿ ಕುಲಪತಿ ಶಾನ್ ಪ್ರಿಸ್ಟ್‌ಲಿ ಬೋಆಜ್ ಉದ್ಘಾಟಿಸಲಿದ್ದಾರೆ. ಉಪ ನೋಂದಣಾಧಿಕಾರಿ ಸುರೇಖಾ ಶೆಟ್ಟಿ ಅಧ್ಯಕ್ಷತೆ ವಹಿಸುವರು. ತುಳು ಜನಪದ ತಜ್ಞ ಗಣೇಶ್ ಅಮೀನ್ ಸಂಕಮಾರ್, ಕುಪ್ಪಂ ದ್ರಾವಿಡಿಯನ್ ವಿ.ವಿಯ ತುಳು ಭಾಷೆ ಮತ್ತು ಅನುವಾದ ಅಧ್ಯಯನ ವಿಭಾಗದ ಮುಖ್ಯಸ್ಥ ಬಿ.ಎಸ್ ಶಿವಕುಮಾರ್, ತುಳುವರ್ಲ್ಡ್ ಫೌಂಡೇಷನ್‌ನ ಮುಂಬೈ ವಕ್ತಾರ ಧರ್ಮಪಾಲ್ ಯು. ದೇವಾಡಿಗ ಭಾಗವಹಿಸಲಿದ್ದಾರೆ. ಜ.10ರಂದು ಸಮಾರೋಪ ಸಮಾರಂಭ ನಡೆಯ ಲಿದೆ. ತುಳುವರ್ಲ್ಡ್ ಫೌಂಡೇಷನ್ ಅಧ್ಯಕ್ಷ ಸರ್ವೋತ್ತಮ ಶೆಟ್ಟಿ ಅಬುಧಾಬಿ ಅಧ್ಯಕ್ಷತೆ ವಹಿಸುವರು. ಲೇಖಕ ಶ್ರೀಕಾಂತ್ ಶೆಟ್ಟಿ ಭಾಷಣ ಮಾಡುವರು ಎಂದು ಫೌಂಡೇಷನ್ ನಿರ್ದೇಶಕ ರಾಜೇಶ್ ಆಳ್ವ, ಅಲಯನ್ಸ್ ವಿ.ವಿ ವಕ್ತಾರರಾದ ಎ.ಎಂ. ಶ್ರೀಧರನ್, ಶ್ರುತಿ ಚಂದ್ರಶೇಖರ್, ದೇವೇಂದ್ರ ಹೆಗಡೆ ಕೋಕ್ರಾಡಿ ತಿಳಿಸಿದ್ದಾರೆ.

ತಿಂಗಳ ಕೊನೆಯೊಳಗೆ ಇತ್ಯರ್ಥಕ್ಕೆ ಸಚಿವ ಕೃಷ್ಣ ಬೈರೇಗೌಡ ಸೂಚನೆ


4 ಜಿಲ್ಲೆಗಳಲ್ಲಿ 13 ಸಾವಿರ ಪ್ರಕರಣ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ತುಮಕೂರು ಹಾಗೂ ರಾಮನಗರ ಜಿಲ್ಲೆಗಳಲ್ಲಿನ ಉಪ ವಿಭಾಗಾಧಿಕಾರಿಗಳ ವ್ಯಾಪ್ತಿಯಲ್ಲಿ ಸುಮಾರು 13,000 ಪ್ರಕರಣಗಳು ಬಾಕಿ ಇವೆ. ಇದು ರಾಜ್ಯದಲ್ಲೇ ಅತಿ ಹೆಚ್ಚಾಗಿದ್ದು, ತ್ವರಿತಗತಿಯಲ್ಲಿ ಈ ಪ್ರಕರಣಗಳನ್ನು ವಿಲೇವಾರಿ ಮಾಡಬೇಕು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ಸೂಚನೆ ನೀಡಿದರು.

ಈ ನಾಲ್ಕು ಜಿಲ್ಲೆಗಳ ಉಪವಿಭಾಗಾಧಿಕಾರಿಗಳ ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿದರು.

‘ಬೆಂಗಳೂರು ಸುತ್ತಮುತ್ತಲಿನ ಜಿಲ್ಲೆಗಳಲ್ಲೇ ಅತಿ ಹೆಚ್ಚು ಪ್ರಕರಣಗಳು ಉಳಿದಿವೆ. ರಾಜ್ಯದ ಇತರ ಭಾಗಗಳ ಅಧಿಕಾರಿಗಳೊಂದಿಗೆ ಸಭೆ ನಡೆಸಿದಾಗ ಅವರಿಗೆ ಏನೆಂದು ಉತ್ತರ ನೀಡಲಿ. ಉಳಿದ ಜಿಲ್ಲೆಗಳಲ್ಲಿ ಕೇವಲ 6,000 ಪ್ರಕರಣಗಳು ಮಾತ್ರ ಬಾಕಿ ಇವೆ. ನಾಲ್ಕು ಜಿಲ್ಲೆಗಳ ಅಧಿಕಾರಿಗಳು ತಮ್ಮ ಕೆಲಸಕ್ಕೆ ವೇಗ ನೀಡಿದರೆ ಮಾತ್ರ ಇತರ ಜಿಲ್ಲೆಗಳ ಅಧಿಕಾರಿಗಳನ್ನು ಪ್ರಶ್ನಿಸಲು ಸಾಧ್ಯವಾಗುತ್ತದೆ’ ಎಂದರು.



ಕೃಷ್ಣ ಬೈರೇಗೌಡ

‘ಕಳೆದ ಅಕ್ಟೋಬರ್‌ನಲ್ಲಿ ಈ ನಾಲ್ಕು ಜಿಲ್ಲೆಗಳಲ್ಲಿ 15,364 ಪ್ರಕರಣಗಳು ಬಾಕಿ ಇದ್ದವು. ಈಗ 13,610ಕ್ಕೆ ಇಳಿದಿರುವುದು ಉತ್ತಮ ಬೆಳವಣಿಗೆ. ಕಳೆದು ಹೋದ ಕಡತಗಳು, ಆರ್‌ಸಿಎಂಎಸ್‌ನಲ್ಲಿ ವಿಲೇವಾರಿ ಆಗದ ಪ್ರಕರಣಗಳು, ಅನರ್ಹ ಪ್ರಕರಣಗಳು ಹಾಗೂ ಆದೇಶಕ್ಕಾಗಿ ಕಾಯ್ದಿರಿಸಿದ ಪ್ರಕರಣಗಳನ್ನು ಈ ತಿಂಗಳ ಕೊನೆಯೊಳಗೆ ಇತ್ಯರ್ಥಗೊಳಿಸಿದರೆ ಈ ಸಂಖ್ಯೆ ಮತ್ತಷ್ಟು ಸುಧಾರಿಸುತ್ತದೆ’ ಎಂದು ಅವರು ಹೇಳಿದರು.

‘ಉಪ ವಿಭಾಗಾಧಿಕಾರಿಗಳಿಗೆ ತಮ್ಮ ಮುಂದಿರುವ ಸವಾಲುಗಳು ಹಾಗೂ ಪರಿಹಾರಗಳ ಬಗ್ಗೆ ಅರಿವಿದೆ. ಆದ್ದರಿಂದ ಸುಲಭವಾಗಿ ಇತ್ಯರ್ಥಗೊಳ್ಳಬಹುದಾದ ಪ್ರಕರಣಗಳನ್ನು ಮೊದಲು ಕೈಗೆತ್ತಿಕೊಳ್ಳಬೇಕು. ಮಾರ್ಚ್ ಕೊನೆಯೊಳಗೆ ಆರು ತಿಂಗಳು ಮೀರಿದ ಎಲ್ಲಾ ಪ್ರಕರಣಗಳನ್ನು ಕಡ್ಡಾಯವಾಗಿ ಇತ್ಯರ್ಥಗೊಳಿಸಬೇಕು’ ಎಂದು ಸೂಚಿಸಿದರು.

ಫೆಬ್ರುವರಿ ಮೊದಲ ವಾರದಲ್ಲಿ ಈ ನಾಲ್ಕೂ ಜಿಲ್ಲೆಗಳ ಮತ್ತೊಂದು ಸಭೆ ನಡೆಸಿ, ಅದರ ಆಧಾರದಲ್ಲಿ ರಾಜ್ಯಾದ್ಯಂತ ಇರುವ ಎಲ್ಲಾ ಉಪ ವಿಭಾಗಾಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಗೆ ದಿನಾಂಕ ನಿಗದಿಪಡಿಸಲಾಗುವುದು ಎಂದು ಕೃಷ್ಣಬೈರೇಗೌಡ ಹೇಳಿದರು.

ಈ ನಾಲ್ಕೂ ಜಿಲ್ಲೆಗಳಲ್ಲಿ ಸುಧಾರಣೆ ಕಾಣದಿದ್ದರೆ, ಇಡೀ ರಾಜ್ಯದ ಎಲ್ಲ ಉಪವಿಭಾಗಾಧಿಕಾರಿಗಳ ಸಭೆಯೂ ವ್ಯರ್ಥವಾಗುತ್ತದೆ. ಆದ್ದರಿಂದ ಪ್ರತಿ ಶನಿವಾರ ಎಸಿ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಕುರಿತು ಮೇಲ್ವಿಚಾರಣೆ ಸಭೆ ನಡೆಸುವಂತೆ ನೂತನ ಕಂದಾಯ ಆಯುಕ್ತೆ ಮೀನಾ ನಾಗರಾಜ್ ಅವರಿಗೆ ಸೂಚಿಸಿದರು.

ಸಭೆಯಲ್ಲಿ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ರಾಜ್ಯಾದ್ಯಂತ 19,000 ಪ್ರಕರಣಗಳು ಬಾಕಿ
- ಆಯುಕ್ತರಿಂದ ಪ್ರತಿ ಶನಿವಾರ ಮೇಲ್ವಿಚಾರಣಾ ಸಭೆ
- ಎಲ್ಲ ಎಸಿಗಳ ಜೊತೆ ಶೀಘ್ರ ಪ್ರಗತಿ ಪರಿಶೀಲನೆ

ರೇವಾ: ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಯಲಹಂಕ: ರೇವಾ ವಿಶ್ವವಿದ್ಯಾಲಯದ ಸಂಸ್ಥಾಪನಾ ದಿನಾಚರಣೆಯ ಅಂಗವಾಗಿ ಭಾರತೀಯ ವಾಯುಪಡೆಯ ಮಾಜಿ ಏರ್ ಚೀಫ್ ಮಾರ್ಷಲ್ ಫಾಲಿ ಎಚ್.ಮೇಜರ್, ಭಾರತೀಯ ಮಾಜಿ ವಿದೇಶಾಂಗ ಕಾರ್ಯದರ್ಶಿ ನಿರುಪಮಾ ಮೆನನ್ ರಾವ್ ಹಾಗೂ ನಟಿ ಜಯಸುಧಾ ಅವರಿಗೆ ‘ರೇವಾ ಜೀವಮಾನ ಸಾಧನೆ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಫಾಲಿ ಎಚ್. ಮೇಜರ್ ಮಾತನಾಡಿ, ‘ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ವಿವಿಧ ವಿದ್ಯಮಾನಗಳಿಂದ ಭಾರತ ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಕಾಯ್ದುಕೊಳ್ಳಬೇಕು. ಅದಕ್ಕೆ ನಮ್ಮ ಮುಂದಿನ ಆಶೋತ್ತರಗಳು, ಜ್ಞಾನ ಆಧಾರಿತ ಆರ್ಥಿಕತೆ, ತಾಂತ್ರಿಕ ಹಾಗೂ ಸೇನಾ ಬಲಿಷ್ಠಕ್ಕೆ ಹೆಚ್ಚಿನ ಒತ್ತು ನೀಡಬೇಕು’ ಎಂದರು.

‘ಈ ಆಶೋತ್ತರಗಳು ನಿಜವಾಗಬೇಕಾದರೆ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳನ್ನು ಹೊಸ ಆವಿಷ್ಕಾರ ಗಳಲ್ಲಿ ತೊಡಗಿಸುವಂತೆ ಪ್ರೇರೇಪಿಸಬೇಕು. ವೈಜ್ಞಾನಿಕ ರಂಗದಲ್ಲಿ ಹೆಚ್ಚಿನ ಸಾಧನೆ ಮಾಡುವುದರ ಜೊತೆಗೆ ನೈತಿಕ ಮೌಲ್ಯಗಳನ್ನು ಅಳವಡಿಸಿಕೊಂಡು ಜಾಗತಿಕ ಮಟ್ಟದ ಸ್ಪರ್ಧೆಗಳಲ್ಲಿ ನಾಗಾಲೋಟದಿಂದ ಮುನ್ನಗ್ಗಬೇಕಾದ ಅಗತ್ಯವಿದೆ. ಈ ದಿಸೆಯಲ್ಲಿ ಈ ಶಿಕ್ಷಣ ಸಂಸ್ಥೆಯಲ್ಲಿ ಶ್ಯಾಮರಾಜು ಅವರ ದೂರದೃಷ್ಟಿ, ಧ್ಯೇಯಗಳು ಹಾಗೂ ಉದ್ದೇಶಗಳು ಪೂರಕವಾಗಿವೆ’ ಎಂದರು.

ನಿರುಪಮಾ ಮೆನನ್ ರಾವ್ ಮಾತನಾಡಿ, ‘ಭಾರತೀಯ ಪುರಾತನ ನಳಂದ ಮತ್ತು ತಕ್ಷಶಿಲಾ ವಿಶ್ವವಿದ್ಯಾಲಯಗಳು ಕೇವಲ ಶಿಕ್ಷಣ ಮಾತ್ರವಲ್ಲದೆ ವಿದ್ಯಾರ್ಥಿಗಳಲ್ಲಿ ಸಂಸ್ಕೃತಿ, ಜೀವನದ ತತ್ವ ಹಾಗೂ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ನೆರವಾಗಿದ್ದವು. ಇಂದಿನ ಆಧುನಿಕ ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಲ್ಲಿ ತಾಂತ್ರಿಕ ಸಾಮರ್ಥ್ಯದ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ಅಳವಡಿಸಿಕೊಳ್ಳಲು ಸಹಕಾರಿಯಾಗಬೇಕು’ ಎಂದು ತಿಳಿಸಿದರು.

ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ. ಶ್ಯಾಮರಾಜು ಮಾತನಾಡಿ, ‘ರೇವಾ ಶಿಕ್ಷಣ ಸಂಸ್ಥೆಯಲ್ಲಿ ಅಧ್ಯಯನ ಮಾಡಿ ಹೊರನಡೆದ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಜಗತ್ತಿನ ಪ್ರಸ್ತುತ ಸವಾಲುಗಳನ್ನು ಎದುರಿಸುವಂತೆ ಅವರನ್ನು ಸಿದ್ಧಪಡಿಸುವುದು ನಮ್ಮ ಧ್ಯೇಯವಾಗಿದೆ. ಈ ನಿಟ್ಟಿನಲ್ಲಿ ಅವರು ಕೇವಲ ಉದ್ಯೋಗಿಗಳಾಗದೆ ಉದ್ಯೋಗದಾತರಾಗಬೇಕೆಂಬುದನ್ನು ಸದಾ ಬಯಸುತ್ತೇನೆ’ ಎಂದು ಹೇಳಿದರು.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರಿಂದ ಅಭಿವೃದ್ಧಿಪಡಿಸಲಾದ ಎಐ ಆಧಾರಿತ ಮಾನವಾಕೃತಿ ಬುದ್ಧಿವಂತ ಸಹಾಯಕ ‘ಆರ್‌ಐಎ’ ಅನಾವರಣಗೊಳಿಸಲಾಯಿತು. ಕುಲಪತಿ ಡಾ. ಸಂಜಯ್ ಆರ್. ಚಿಟ್ನಿಸ್, ಸಹ ಕುಲಪತಿ ಉಮೇಶ್ ಎಸ್.ರಾಜು, ಕುಲಸಚಿವ ಡಾ.ಎಂ.ಧನಂಜಯ ಉಪಸ್ಥಿತರಿದ್ದರು.



ಫಾಲಿ ಎಚ್. ಮೇಜರ್ ಅವರಿಗೆ ರೇವಾ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ನಿರುಪಮಾ ಮೆನನ್ ರಾವ್, ಜಯಸುಧಾ, ಡಾ.ಪಿ.ಶ್ಯಾಮರಾಜು, ಡಾ.ಸಂಜಯ್ ಆರ್. ಚಿಟ್ನಿಸ್, ಉಮೇಶ್ ಎಸ್. ರಾಜು, ಡಾ.ಎಂ.ಧನಂಜಯ ಉಪಸ್ಥಿತರಿದ್ದರು

ಸಾಂಸ್ಕೃತಿಕ ಮುನ್ನೋಟ

ನೃತ್ಯ ಸಂಭ್ರಮ 9ರಂದು

ಬೆಂಗಳೂರು: ನಿರಂತರ ಕಲ್ಚರಲ್ ಆ್ಯಂಡ್ ಚಾರಿಟಬಲ್ ಟ್ರಸ್ಟ್‌ನಿಂದ ಜ. 9ರಂದು ಸಂಜೆ 6ಕ್ಕೆ ಮಲ್ಲೇಶ್ವರದ ಸೇವಾ ಸದನದಲ್ಲಿ ನೃತ್ಯ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ನಿರಂತರ ಸ್ಕೂಲ್ ಆಫ್ ಡಾನ್ಸ್ ತಂಡವು ಭರತನಾಟ್ಯ ಹಾಗೂ ಕಥಕ್ ನೃತ್ಯ ಪ್ರದರ್ಶನ ನೀಡಲಿದೆ. ಕಲಾ ಕದಂಬ ಆರ್ಟ್ ಸೆಂಟರ್ ತಂಡವು ಯಕ್ಷಗಾನ, ನಾಟ್ಯ ಸಂಪದ ತಂಡವು ಭರತನಾಟ್ಯ ಹಾಗೂ ಜತಿನ್ ಅಕಾಡೆಮಿ ಆಫ್ ಡಾನ್ಸ್ ತಂಡವು ಕುಚಿಪುಡಿ ನೃತ್ಯ ಪ್ರದರ್ಶಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.



ಜತಿನ್ ಅಕಾಡೆಮಿ ಆಫ್ ಡಾನ್ಸ್ ತಂಡ


ಸಂಗೀತ ಸಮ್ಮೇಳನ 9ರಿಂದ

ಬೆಂಗಳೂರು: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್‌ನಿಂದ ಜ. 9ರಿಂದ 11ರವರೆಗೆ ಮಲ್ಲೇಶ್ವರದ ಶ್ರೀರಾಮ ಮಂದಿರದಲ್ಲಿ ಸಂಗೀತ ಸಮ್ಮೇಳನ ಆಯೋಜಿಸಲಾಗಿದೆ.

9ರಂದು ಸಂಜೆ 6.30ಕ್ಕೆ ಗಾಯಕಿ ಎಂ.ಎಸ್. ಶೀಲಾ ಅವರಿಗೆ ಎಚ್.ಎಂ. ಸ್ಮಿತಾ (ಪಿಟೀಲು), ಆನೂರು ಅನಂತಕೃಷ್ಣ ಶರ್ಮಾ (ಮೃದಂಗ), ಎ.ಎಸ್.ಎನ್. ಸ್ವಾಮಿ (ಖಂಜೀರಾ) ಸಾಥ್ ನೀಡಲಿದ್ದಾರೆ. 10ರಂದು ಸಂಜೆ 6.30ಕ್ಕೆ ಅಮಿತ್ ಎ. ನಾಡಿಗ್ ಅವರು ಕೊಳಲು ನುಡಿಸಲಿದ್ದು, ವೈಭವ್ ರಮಣಿ (ಪಿಟೀಲು), ಬಿ.ಆರ್. ಶ್ರೀನಿವಾಸ್ (ಮೃದಂಗ), ಉತ್ತಮ್ ಎಸ್. (ಘಟ್ಟ) ಸಾಥ್ ನೀಡಲಿದ್ದಾರೆ. 11ರಂದು ಸಂಜೆ 4.30ಕ್ಕೆ ಗಾಯಕರಾದ ಕುನ್ನಕುಡಿ ಬಾಲಮುರಳಿ ಕೃಷ್ಣ ಅವರಿಗೆ ಮೈಸೂರು ಎಂ. ಕೇಶವ್ (ಪಿಟೀಲು), ತುಮಕೂರು ಬಿ. ರವಿಶಂಕರ್ (ಮೃದಂಗ), ಶಮಿತ್ ಎಸ್. ಗೌಡ (ಘಟ್ಟ) ಅವರು ಸಾಥ್ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಯೇಸುದಾಸ್ ಗೀತೆಗಳ ಗಾಯನ 10ಕ್ಕೆ

ಬೆಂಗಳೂರು: ಕೆ.ಜೆ. ಯೇಸುದಾಸ್ ಜನ್ಮದಿನದ ಅಂಗವಾಗಿ ಕಲಾಭೂಮಿ ಹಾಗೂ ಆಲ್ ಟೈಮ್ ಮ್ಯೂಸಿಕ್‌ನಿಂದ ಜ. 10ರಂದು ಸಂಜೆ 5.30ಕ್ಕೆ ರಾಜರಾಜೇಶ್ವರಿ ನಗರದ ಸ್ಕೈ ಸ್ಪೋರ್ಟ್ಸ್ ಅರೇನಾದಲ್ಲಿ ಕೆ.ಜೆ. ಯೇಸುದಾಸ್ ಅವರು ಹಾಡಿರುವ ಚಲನಚಿತ್ರ ಗೀತೆಗಳ ಗಾಯನ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶ ಇದೆ ಎಂದು ಪ್ರಕಟಣೆ ತಿಳಿಸಿದೆ.



ಯೇಸುದಾಸ್

ಮ್ಯೂಸಿಕ್ ಫಾರ್ ಮೀಲ್ಸ್ 10ಕ್ಕೆ



ಇಳಯರಾಜ

ಬೆಂಗಳೂರು: ಅಕ್ಷಯ ಪಾತ್ರೆ ವತಿಯಿಂದ ಜ. 10ರಂದು ಸಂಜೆ 7ಕ್ಕೆ ಮಾದಾವರದ ಹತ್ತಿರ ಇರುವ ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಮ್ಯೂಸಿಕ್ ಫಾರ್ ಮೀಲ್ಸ್ ಕಾರ್ಯಕ್ರಮದಲ್ಲಿ ಇಳಯ ರಾಜ ಅವರ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರತಿ ಗುರುವಾರ ಪ್ರಕಟವಾಗುವ ‘ಸಾಂಸ್ಕೃತಿಕ ಮುನ್ನೋಟ’ ಅಂಕಣದಲ್ಲಿ ಪ್ರಕಟಿಸಲು ಸಾಹಿತ್ಯ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಂಬಂಧಿಸಿದ ವಿವರಗಳನ್ನು ಈ ಕೆಳಗಿನ ಇ-ಮೇಲ್‌ಗೆ nagaradalli_indu@prajavani.co.in (ಬುಧವಾರ ಸಂಜೆ 6 ಗಂಟೆ ಒಳಗೆ) ಕಳುಹಿಸಿ

‘ಕಾರ್ಖಾನೆ ಹೊಣೆ’

ಬೆಂಗಳೂರು: ‘ಬೆಳಗಾವಿ ಜಿಲ್ಲೆಯ ಸಕ್ಕರೆ ಕಾರ್ಖಾನೆ ಬಾಯ್ಲರ್ ದುರಂತದ ಸಮಗ್ರ ತನಿಖೆ ನಡೆಸಿ, ಮೃತರ ಕುಟುಂಬಗಳಿಗೆ ತಲಾ ₹50 ಲಕ್ಷ ಪರಿಹಾರ ನೀಡಬೇಕು’ ಎಂದು ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ರಾಜ್ಯ ಕಾರ್ಯದರ್ಶಿ ಕೆ. ಸೋಮಶೇಖರ್ ಯಾದಗಿರಿ ಆಗ್ರಹಿಸಿದ್ದಾರೆ.

ಕಬಿನಿ, ನಾಗರಹೊಳೆ, ಬಂಡಿಪುರ ಸಫಾರಿ ಸ್ಥಗಿತ; ಜೈವಿಕ ಉದ್ಯಾನದತ್ತ ಮುಖಮಾಡಿದ ಜನರು

ಬನ್ನೇರುಘಟ್ಟ ಉದ್ಯಾನಕ್ಕೆ ಪ್ರವಾಸಿಗರ ದಂಡು

ಪ್ರಜಾವಾಣಿ ವಾರ್ತೆ

ಆನೇಕಲ್: ಕ್ರಿಸ್‌ಮಸ್ ರಜೆ ಮತ್ತು ಹೊಸ ವರ್ಷದ ಸಂದರ್ಭದಲ್ಲಿ ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ದಾಖಲೆ ಸಂಖ್ಯೆಯಲ್ಲಿ ಪ್ರವಾಸಿಗರು ಭೇಟಿ ನೀಡಿದ್ದಾರೆ.

ಕಬಿನಿ, ನಾಗರಹೊಳೆ, ಬಂಡಿಪುರ ಸಫಾರಿ ಸ್ಥಗಿತಗೊಂಡ ಕಾರಣ ಪ್ರವಾಸಿಗರು ಬನ್ನೇರುಘಟ್ಟ ಜೈವಿಕ ಉದ್ಯಾನದತ್ತ ಮುಖ ಮಾಡಿದ್ದಾರೆ.

ಡಿ.20ರಿಂದ ಜ.5ರವರೆಗೆ ಒಟ್ಟು 1,95,763 ಪ್ರವಾಸಿಗರು ಉದ್ಯಾನಕ್ಕೆ ಭೇಟಿ ನೀಡಿದ್ದು, ಆ ಪೈಕಿ 1,06,215 ಮಂದಿ ಸಫಾರಿಯ ಆನಂದವನ್ನು ಅನುಭವಿಸಿದ್ದಾರೆ.

ಹೊಸ ವರ್ಷದ ಮೊದಲ ದಿನವೇ 25 ಸಾವಿರಕ್ಕೂ ಹೆಚ್ಚು ಪ್ರವಾಸಿಗರು ಉದ್ಯಾನಕ್ಕೆ ಭೇಟಿ ನೀಡಿದ್ದಾರೆ. ಹೊಸ ವರ್ಷದ ಪ್ರಯುಕ್ತ ಡಿ.30ರ ಮಂಗಳವಾರ ರಜೆ ಇದ್ದರೂ ಉದ್ಯಾನ ಮತ್ತು ಸಫಾರಿ ಪ್ರವಾಸಿಗರಿಗೆ ತೆರೆದಿತ್ತು.

ಸಫಾರಿಗೆ ತೆರಳುವ ಪ್ರವಾಸಿಗರಿಗೆ ಅನುಕೂಲವಾಗುವಂತೆ ಬಸ್ ಮಾರ್ಗ ಸಂಖ್ಯೆ ಹೆಚ್ಚಿಸಲಾಗಿದೆ. ನ.13ರಂದು ಸಫಾರಿ ವಾಹನದ ಮೇಲೆ ಚಿರತೆಯೊಂದು ದಾಳಿ ನಡೆಸಿ ಮಹಿಳೆಯೊಬ್ಬರ ಕೈ ಪರಚಿ ಗಾಯಗೊಳಿಸಿತ್ತು. ಘಟನೆಯ ನಂತರ ಉದ್ಯಾನದ ಆಡಳಿತ ಮಂಡಳಿ ಹವಾನಿಯಂತ್ರಿತ ಬಸ್‌ಗಳ ಸಫಾರಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿತ್ತು.

ಬಸ್ ಕಿಟಕಿಗಳಿಗೆ ಜಾಲರಿ ಅಳವಡಿಸಿ ಸುರಕ್ಷಿತ ಕ್ರಮ ಕೈಗೊಂಡ ನಂತರ ಪುನಾರಂಭಿಸಲಾಗಿದೆ.

ತೊಂದರೆ ಮಾಡಿದ ಚಿರತೆಯನ್ನು ಸಫಾರಿ ಸಮಯದಲ್ಲಿ ಮುಕ್ತವಾಗಿ ತೆರೆದ ಸ್ಥಳದಲ್ಲಿ ಬಿಡದೆ ದೂರವಿಟ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ.ಸೂರ್ಯಸೇನ್ ಅವರು ತಿಳಿಸಿದ್ದಾರೆ.



ಹೊಸ ವರ್ಷದ ದಿನದಂದು ಬನ್ನೇರುಘಟ್ಟ ಜೈವಿಕ ಉದ್ಯಾನಕ್ಕೆ ಭೇಟಿ ನೀಡಿದ್ದ ಪ್ರವಾಸಿಗರು

ಹುಣಸೂರು ಹುಲಿಗೆ ಚಿಕಿತ್ಸೆ

ಮೈಸೂರು ಜಿಲ್ಲೆ ಹುಣಸೂರು ಅರಣ್ಯದಲ್ಲಿ ಜ.6ರಂದು ಸೆರೆಹಿಡಿಯಲಾದ ಗಂಡು ಹುಲಿಯನ್ನು ಬನ್ನೇರುಘಟ್ಟ ಉದ್ಯಾನಕ್ಕೆ ಸ್ಥಳಾಂತರಿಸಲಾಗಿದೆ. ಉದ್ಯಾನದ ವೈದ್ಯರು ಸೂಕ್ತ ಚಿಕಿತ್ಸೆ ನೀಡಿ ಆರೈಕೆ ಮಾಡುತ್ತಿದ್ದಾರೆ.

12 ವರ್ಷ ವಯಸ್ಸಿನ ಹುಲಿಯ 3 ಹಲ್ಲು ಮುರಿದಿವೆ. ಹುಲಿಗೆ ವಯಸ್ಸಾದ ಕಾರಣ ಕಾಳಜಿಯಿಂದ ಆರೈಕೆ ಮಾಡಲಾಗುತ್ತಿದೆ ಎಂದು ಉದ್ಯಾನದ ವೈದ್ಯ ಡಾ.ಆನಂದ್ ‘ಪ್ರಜಾವಾಣಿ’ಗೆ ತಿಳಿಸಿದರು.

ನೀವು ಗೆಲ್ಲುತ್ತ ಇಲ್ಲದಿದ್ದಾಗಲೂ, ನಾನು ಗೆಲ್ಲುತ್ತಿದ್ದೇನೆ ಎಂದು ಅನ್ನಿಸುವಂತೆ ಮಾಡುವ ಸಾಮರ್ಥ್ಯವನ್ನು ಸಾಲ ಹೊಂದಿದೆ
ಡೇವ್ ರಾಮ್ಸೆ, ಹಣಕಾಸು ಸಲಹೆಗಾರ

ದುಡ್ಡಿನಂಥಾ ಮಾತು

ಪಿಂಚಣಿ ಆದಾಯ ಸೃಷ್ಟಿಗೆ ಮ್ಯೂಚುವಲ್ ಫಂಡ್ ನೆರವು?

• ಅಪರ್ಣಾ ಶಂಕರ್

ಒಂದು ಸರಳವಾದ ಪ್ರಶ್ನೆಯೊಂದಿಗೆ ಈ ಬರಹವನ್ನು ಆರಂಭಿಸೋಣ. 'ನನ್ನ ಈಗಿನ ಆದಾಯ ನಿಂತ ನಂತರದಲ್ಲಿ ನನ್ನ ಜೀವನಕ್ಕೆ ಹಣ ಯಾರು ಕೊಡುತ್ತಾರೆ?'

ನಮ್ಮ ಅಪ್ಪ–ಅಮ್ಮನ ತಲೆಮಾರಿನವರು, ಅವರ ಹಿಂದಿನ ತಲೆಮಾರಿನವರು ಪಿಂಚಣಿ ಸೌಲಭ್ಯದೊಂದಿಗೆ ನಿವೃತ್ತಿ ಹೊಂದಿದರು. ಆದರೆ ನಾವು ಪ್ರಜ್ಞಾಪೂರ್ವಕವಾಗಿ ಏನನ್ನು ಉಳಿತಾಯ ಮಾಡುತ್ತೇವೆಯೋ ಅಷ್ಟು ಮೊತ್ತದೊಂದಿಗೆ ನಿವೃತ್ತರಾಗುತ್ತೇವೆ. ಇಂದು ನಿವೃತ್ತಿಯ ನಂತರದ ಬದುಕಿಗಾಗಿ ಆಲೋಚಿಸುವುದು ಅಂದರೆ, ತೊಡಗಿಸಿದ ಬಂಡವಾಳವನ್ನು ಉಳಿಸಿಕೊಳ್ಳುವುದಷ್ಟೇ ಅಲ್ಲ. ಬಂಡವಾಳವು ಬೆಳೆಯುವಂತೆ ನೋಡಿಕೊಳ್ಳುವುದು, ಅದು ಹಣದುಬ್ಬರದ ಪ್ರಮಾಣಕ್ಕೆ ಅನುಗುಣವಾಗಿ ಹೆಚ್ಚಾಗುವ ಆದಾಯವನ್ನು ಎರಡು ಅಥವಾ ಮೂರು ದಶಕಗಳವರೆಗೆ ತಂದುಕೊಡುವಂತೆ ಮಾಡುವುದು ಕೂಡ ಸೇರಿದೆ.

ಸರಾಸರಿ ಜೀವಿತಾವಧಿ ಹೆಚ್ಚಳ, ಸಾಮಾಜಿಕ ಭದ್ರತಾ ಯೋಜನೆಗಳು ಬಹಳ ಕಡಿಮೆ ಇರುವುದು, ಆರೋಗ್ಯ ವೆಚ್ಚಗಳು ಹೆಚ್ಚುತ್ತಿರುವುದು... ಈ ಎಲ್ಲವುಗಳ ಹಿನ್ನೆಲೆಯಲ್ಲಿ ಪ್ರತಿಯೊಬ್ಬರೂ ತಮ್ಮ ನಿವೃತ್ತಿ ನಂತರದ ಬದುಕಿಗಾಗಿ ಆಲೋಚಿಸಬೇಕು.

ಮ್ಯೂಚುವಲ್ ಫಂಡ್‌ಗಳನ್ನು ಶಿಸ್ತಿನಿಂದ ಬಳಕೆ ಮಾಡಿಕೊಂಡರೆ, ಅವು ನಿವೃತ್ತಿ ನಿಧಿಯನ್ನು ಹೊಂದಲು ಹಾಗೂ ಪಿಂಚಣಿ ಮಾದರಿಯಲ್ಲಿ ಆದಾಯ ಸಿಗುವಂತೆ ಮಾಡಿಕೊಳ್ಳಲು ಉತ್ತಮ ಸಾಧನಗಳಾಗಿ ನೆರವಿಗೆ ಬರಬಲ್ಲವು.

ನಮ್ಮ ನಿವೃತ್ತಿಯ ನಂತರದ ಬದುಕಿಗೆ ನಾವೇ ಹಣ ಹೊಂದಿಸಿಕೊಳ್ಳಬೇಕು ಎಂಬುದು ಅರ್ಥವಾದಾಗ ಬಂಡವಾಳವನ್ನು ಒಗ್ಗೂಡಿಸಿಕೊಳ್ಳುವ ಕೆಲಸವೂ ಶುರುವಾಗುತ್ತದೆ. ಹೀಗೆ ಬಂಡವಾಳ ಒಟ್ಟುಮಾಡುವ ಪ್ರಕ್ರಿಯೆಯನ್ನು ಮೂರು ಹಂತಗಳಲ್ಲಿ ವಿಂಗಡಿಸಬಹುದು.

1 ಶಿಸ್ತು, ಸಮಯದ ಬಳಕೆ ಮೂಲಕ ಒಗ್ಗೂಡಿಸುವಿಕೆ: ಇದು ವ್ಯಕ್ತಿಯ ದುಡಿಯುವ ವರ್ಷಗಳನ್ನು ಆವರಿಸಿಕೊಂಡಿರುತ್ತದೆ (23 ವರ್ಷ ವಯಸ್ಸಿನಿಂದ 53ರವರೆಗೆ). ವ್ಯವಸ್ಥಿತ ಹೂಡಿಕೆಯ ಮೂಲಕ ಇದನ್ನು ಹೆಚ್ಚು ಚೆನ್ನಾಗಿ ಮಾಡಬಹುದು. ದೀರ್ಘಾವಧಿಯಲ್ಲಿ ಹೆಚ್ಚು ಸಂಪತ್ತನ್ನು ಸೃಷ್ಟಿಸಿಕೊಡುವ ಸಾಮರ್ಥ್ಯವಿರುವ ಕಾರಣದಿಂದಾಗಿ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳು ಇದರಲ್ಲಿ ಮುಖ್ಯ ಪಾತ್ರ ವಹಿಸುತ್ತವೆ.

ವ್ಯವಸ್ಥಿತ ಹೂಡಿಕೆ ಯೋಜನೆಗಳು (ಎಸ್‌ಐಪಿ) ಹೂಡಿಕೆದಾರರಿಗೆ ಈಕ್ವಿಟಿ ಮಾರುಕಟ್ಟೆಯಲ್ಲಿ ಹಂತ ಹಂತವಾಗಿ ಪ್ರವೇಶಿಸಿ, ಅಲ್ಲಿನ ಏರಿಳಿತಗಳಲ್ಲಿ ಭಾಗಿಯಾಗುತ್ತ ಸಂಪತ್ತನ್ನು ಒಗ್ಗೂಡಿಸಲು ನೆರವಾಗುತ್ತವೆ. ಹಣಕಾಸಿನ ಶಿಸ್ತು ಮೈಗೂಡಿಸಿಕೊಳ್ಳಲು ಅವು ಸಹಾಯ ಮಾಡುತ್ತವೆ. ಮಲ್ಟಿ ಅಸೆಟ್, ಫ್ಲೆಕ್ಸಿ ಕ್ಯಾಪ್‌ಗಳಲ್ಲಿ ಹೂಡಿಕೆ, ಮಿಡ್‌ಕ್ಯಾಪ್, ಸ್ಮಾಲ್‌ಕ್ಯಾಪ್ ಮತ್ತು ವಿಷಯ (ಥೀಮ್) ಆಧಾರಿತ ಫಂಡ್‌ಗಳಲ್ಲಿ ಹೂಡಿಕೆ ಇದ್ದಾಗ ರಿಸ್ಕ್‌ನ ಪರಿಣಾಮಕಾರಿ ನಿರ್ವಹಣೆ ಹಾಗೂ ಆರ್ಥಿಕ ಬೆಳವಣಿಗೆಯಲ್ಲಿ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆ.

ಇಲ್ಲಿ ಬಹಳ ಮಹತ್ವದ ಅಂಶ 'ಸಮಯ'. ಹೂಡಿಕೆಯನ್ನು ಬಹಳ ಬೇಗ ಆರಂಭಿಸಿದರೆ, ಅರ್ಥಪೂರ್ಣವಾದ ಮೊತ್ತವನ್ನು ಒಗ್ಗೂಡಿಸಲು ಅಗತ್ಯವಿರುವ ತಿಂಗಳ ಹೂಡಿಕೆ ಮೊತ್ತವು ಬಹಳ ಕಡಿಮೆ ಆಗುತ್ತದೆ. ಉದಾಹರಣೆಗೆ, 25 ವರ್ಷ ವಯಸ್ಸಿನ ವ್ಯಕ್ತಿಯೊಬ್ಬನಿಗೆ ದೀರ್ಘಾವಧಿಗೆ ಹೂಡಿಕೆ ಮಾಡುವ ಸಾಮರ್ಥ್ಯವಿದ್ದರೆ, ಆತ ಹೆಚ್ಚಿನ ಪಾಲನ್ನು ಈಕ್ವಿಟಿಯಲ್ಲಿ ತೊಡಗಿಸಬಹುದು, ದೀರ್ಘಾವಧಿಯಲ್ಲಿ ಹಣವು ಹೆಚ್ಚು ವೃದ್ಧಿಯಾಗುವುದರ ಪ್ರಯೋಜನ ಪಡೆಯಬಹುದು. ನಿವೃತ್ತಿಯು ಹತ್ತಿರವಾದಂತೆಲ್ಲ, ಹೂಡಿಕೆಯ ಮೊತ್ತವನ್ನು ನಿಧಾನವಾಗಿ ಹೈಬ್ರಿಡ್ ಅಥವಾ ಸಾಲಪತ್ರ ಆಧಾರಿತ ಫಂಡ್‌ಗಳಿಗೆ ವರ್ಗಾವಣೆ ಮಾಡಬಹುದು. ಇದರಿಂದ ಅಲ್ಲಿಯವರೆಗೆ ಒಗ್ಗೂಡಿಸಿದ ಮೊತ್ತವನ್ನು ರಕ್ಷಿಸಿಕೊಳ್ಳಲು ಅನುಕೂಲ ಆಗುತ್ತದೆ.

ಆದಾಯದಲ್ಲಿ ಹೆಚ್ಚಳವಾದಂತೆಲ್ಲ ಹೂಡಿಕೆಯ ಮೊತ್ತವನ್ನು ಹೆಚ್ಚುಮಾಡುವುದು ಕೂಡ ಬಹಳ ಮುಖ್ಯ. ಎಸ್‌ಐಪಿ ಮೊತ್ತವನ್ನು ಪ್ರತಿವರ್ಷ ಹೆಚ್ಚಿಸುವುದರಿಂದ ಆದಾಯದಲ್ಲಿನ ಹೆಚ್ಚಳ ಹಾಗೂ ಜೀವನ ಶೈಲಿಯಲ್ಲಿನ ಬದಲಾವಣೆಗೆ ಅನುಗುಣವಾಗಿ ಉಳಿತಾಯವೂ ಹೆಚ್ಚಾಗುತ್ತದೆ. ಹೂಡಿಕೆಯನ್ನು ಬೇಗನೆ ಶುರು ಮಾಡುವುದು, ಈಕ್ವಿಟಿಯಲ್ಲಿ ಹಣ ತೊಡಗಿಸುವುದು ಮತ್ತು ಹೂಡಿಕೆ ಮೊತ್ತವನ್ನು ಶಿಸ್ತುಬದ್ಧವಾಗಿ ಹೆಚ್ಚಿಸುವುದು ಉತ್ತಮ ನಿವೃತ್ತಿ ನಿಧಿ ಹೊಂದಲು ಬಲಿಷ್ಠವಾದ ಅಡಿಪಾಯದಂತೆ ಕೆಲಸ ಮಾಡುತ್ತವೆ.

2 ಬಂಡವಾಳದ ಬೆಳವಣಿಗೆಯಿಂದ ಸಂಪತ್ತಿನ ಸ್ಥಿರತೆಯೆಡೆಗೆ... ನಿವೃತ್ತಿಗೆ ತುಸು ಮೊದಲಿನ ವರ್ಷಗಳಲ್ಲಿ ಕಾರ್ಯತಂತ್ರದಲ್ಲಿ ಒಂದಿಷ್ಟು ಬದಲಾವಣೆ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಗಮನವು ಹೂಡಿಕೆಯ ಮೇಲಿನ ಗಳಿಕೆಯನ್ನು ಹೆಚ್ಚಿಸಿಕೊಳ್ಳುವುದಕ್ಕಿಂತಲೂ ತೊಡಗಿಸಿದ ಬಂಡವಾಳವನ್ನು ಸರಿಯಾಗಿ ಕಾಪಾಡಿಕೊಳ್ಳುವುದರತ್ತ, ಹೂಡಿಕೆಯ ಮೊತ್ತವು ಬೇಕೆಂದಾಗಲೆಲ್ಲ ನಗದಾಗಿ ಲಭ್ಯವಿರುವಂತೆ ನೋಡಿಕೊಳ್ಳುವುದರತ್ತ ಇರಬೇಕಾಗುತ್ತದೆ. ಹಣದುಬ್ಬರ ಪ್ರಮಾಣಕ್ಕಿಂತ ಹೆಚ್ಚಿನ ಮಟ್ಟದ ಗಳಿಕೆಗೆ ಈಕ್ವಿಟಿ ಹೇಳಿ ಮಾಡಿಸಿದ ಹೂಡಿಕೆ. ಹೀಗಾಗಿ ಈ ಹಂತದಲ್ಲಿಯೂ ಈಕ್ವಿಟಿ ಹೂಡಿಕೆಗಳಿಂದ ಪೂರ್ತಿಯಾಗಿ ಹಿಂದೆ ಸರಿಯಬಾರದು. ಅದರ ಬದಲಿಗೆ, ವ್ಯವಸ್ಥಿತ ಹಿಂತೆಗೆತ ಯೋಜನೆಯ (ಎಸ್‌ಡಬ್ಲ್ಯುಪಿ) ಮಾದರಿಯ ಮೊರೆ ಹೋಗಬೇಕು. ನಿವೃತ್ತಿಯ ನಂತರದಲ್ಲಿಯೂ ಹಣದುಬ್ಬರವು ಕೊಳ್ಳುವ ಶಕ್ತಿಯನ್ನು ಕುಗ್ಗಿಸುತ್ತಿರುತ್ತದೆ ಎಂಬುದು ನೆನಪಿನಲ್ಲಿರಲಿ.

ಈ ಹಂತದಲ್ಲಿ ಹೈಬ್ರಿಡ್ ಫಂಡ್‌ಗಳು, ಸುರಕ್ಷತೆಗೆ ಆದ್ಯತೆ ನೀಡುವ ಫಂಡ್‌ಗಳು ಮತ್ತು ಉತ್ತಮ ಗುಣಮಟ್ಟದ ಸಾಲಪತ್ರ ಆಧಾರಿತ ಫಂಡ್‌ಗಳು ನೆರವಿಗೆ ಬರುತ್ತವೆ. ಪೋರ್ಟ್‌ಫೋಲಿಯೊ ಸಮತೋಲನದಿಂದ ಕೂಡಿದೆಯೇ ಎಂಬುದನ್ನು ಈ ಹಂತದಲ್ಲಿ ಕಾಲಕಾಲಕ್ಕೆ ಪರಿಶೀಲಿಸುವುದರಿಂದ ಮಾರುಕಟ್ಟೆಯ ಅಸ್ಥಿರತೆಯು ಪೋರ್ಟ್‌ಫೋಲಿಯೊ ಮೇಲೆ ವಿಪರೀತ ಪರಿಣಾಮ ಬೀರದಂತೆ ನೋಡಿಕೊಳ್ಳಬಹುದು. ಈ ಹಂತದಲ್ಲಿ, ಒಗ್ಗೂಡಿಸಿದ ಹಣವನ್ನು ಎರಡು ಭಾಗವನ್ನಾಗಿ ವಿಂಗಡಿಸಬೇಕು.

ಒಂದು ಭಾಗವನ್ನು ಅಲ್ಪಾವಧಿಯ ಸಾಲಪತ್ರ ಆಧಾರಿತ ಫಂಡ್ ಹಾಗೂ ಲಿಕ್ವಿಡ್ ಫಂಡ್‌ಗಳಲ್ಲಿ ತೊಡಗಿಸಬೇಕು. ಇದನ್ನು ಮುಂದಿನ ಒಂದೆರಡು ವರ್ಷಗಳ ಖರ್ಚಿಗೆ ಮೀಸಲಾಗಿ ಇರಿಸಿಕೊಳ್ಳಬಹುದು. ಇನ್ನೊಂದು ಭಾಗವನ್ನು ಈಕ್ವಿಟಿಗಳಲ್ಲಿ ಅಥವಾ ಈಕ್ವಿಟಿ ಆಧಾರಿತ ಫಂಡ್‌ಗಳಲ್ಲಿ ತುಸು ದೀರ್ಘಾವಧಿಗೆ ತೊಡಗಿಸಬೇಕು. ಹೀಗೆ ಮಾಡಿದಾಗ, ನಿವೃತ್ತರು ಮಾರುಕಟ್ಟೆ ಕುಸಿದ ಹೊತ್ತಿನಲ್ಲಿ ಷೇರುಗಳನ್ನು ಅಥವಾ ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್ ಹೂಡಿಕೆಗಳನ್ನು ಮಾರಾಟ ಮಾಡಬೇಕಾದ ಪ್ರಮೇಯ ಎದುರಾಗುವುದಿಲ್ಲ.

3 ಪಿಂಚಣಿ ಮಾದರಿಯಲ್ಲಿ ಆದಾಯ ಸೃಷ್ಟಿ: ನಿವೃತ್ತಿ ಜೀವನ ಆರಂಭವಾದ ನಂತರದಲ್ಲಿ, ಅಲ್ಲಿಯವರೆಗೆ ಒಗ್ಗೂಡಿಸಿದ ಮೊತ್ತವನ್ನು ನಿರಂತರವಾದ ಆದಾಯದ ಸೃಷ್ಟಿಗೆ ಬಳಸಿಕೊಳ್ಳಬಹುದು. ಇದಕ್ಕೆ ಎಸ್‌ಡಬ್ಲ್ಯುಪಿ ಮೊರೆ ಹೋಗುವುದು ಉತ್ತಮ. ಎಸ್‌ಡಬ್ಲ್ಯುಪಿ ಮೂಲಕ ಹೂಡಿಕೆದಾರರು ನಿಗದಿತ ಅವಧಿಗೆ ನಿಶ್ಚಿತ ಮೊತ್ತವನ್ನು ಹಿಂದಕ್ಕೆ ಪಡೆಯಬಹುದು, ಇನ್ನುಳಿದ ಮೊತ್ತವು ಹೂಡಿಕೆಯಲ್ಲಿ ಮುಂದುವರಿಯುತ್ತದೆ.

ಎಸ್‌ಡಬ್ಲ್ಯುಪಿ ವಿಧಾನವು ಸಾಂಪ್ರದಾಯಿಕ ಪಿಂಚಣಿಗಳಿಗಿಂತ ಹೆಚ್ಚಿನ ಆಯ್ಕೆಗಳನ್ನು ನೀಡುತ್ತದೆ. ಹಿಂಪಡೆಯುವ ಮೊತ್ತವನ್ನು ವ್ಯಕ್ತಿಯ ಅಗತ್ಯಗಳಿಗೆ ಅನುಗುಣವಾಗಿ ಹೊಂದಿಸಿಕೊಳ್ಳಬಹುದು. ಕಾಲಕಾಲಕ್ಕೆ ಮೊತ್ತವನ್ನು ಬದಲಾಯಿಸಿಕೊಳ್ಳಬಹುದು. ಇದಕ್ಕಿಂತ ಮುಖ್ಯವಾಗಿ, ಬಂಡವಾಳವು ಹೂಡಿಕೆ ಉತ್ಪನ್ನಗಳಲ್ಲಿ ವಿನಿಯೋಗ ಆಗಿರುತ್ತದೆ, ಅದು ಇನ್ನಷ್ಟು ದೊಡ್ಡ ಮೊತ್ತವಾಗಿ ಬೆಳೆಯುವ ಅವಕಾಶ ಇದ್ದೇ ಇರುತ್ತದೆ.

ಸುವ್ಯವಸ್ಥಿತವಾದ ಎಸ್‌ಡಬ್ಲ್ಯುಪಿ ವಿಧಾನವು ಸ್ಥಿರತೆಗಾಗಿ ಸಾಲಪತ್ರ ಆಧಾರಿತ ಫಂಡ್‌ಗಳು ಹಾಗೂ ಹೈಬ್ರಿಡ್ ಫಂಡ್‌ಗಳಿಂದ ಹಣ ಹಿಂಪಡೆಯುತ್ತಿರುತ್ತದೆ. ಈಕ್ವಿಟಿಗಳಲ್ಲಿ ತೊಡಗಿಸಿದ ಮೊತ್ತವು ಮೂಲ ಬಂಡವಾಳವು ಹೆಚ್ಚುತ್ತಿರುವಂತೆ ನೋಡಿಕೊಳ್ಳುತ್ತದೆ. ಇಲ್ಲಿ ಮುಖ್ಯವಾದ ಅಂಶ, ಹಣವನ್ನು ಹಿಂದಕ್ಕೆ ಪಡೆಯುವ ಪ್ರಮಾಣವು ಹಣದ ಬೆಳವಣಿಗೆ ಪ್ರಮಾಣಕ್ಕಿಂತ ಕಡಿಮೆ ಇರುವಂತೆ ನೋಡಿಕೊಳ್ಳುವುದು. ವೈವಿಧ್ಯಮಯವಾದ ಪೋರ್ಟ್‌ಫೋಲಿಯೊದಿಂದ ವಾರ್ಷಿಕ ಶೇ 3 ಅಥವಾ ಶೇ 4ರಷ್ಟು ಮೊತ್ತವನ್ನು ಹಿಂಪಡೆಯುವುದು ಸೂಕ್ತವಾಗುತ್ತದೆ. ಹಾಗೆ ಮಾಡಿದಾಗ ನಿವೃತ್ತಿಯ ಜೀವನದುದ್ದಕ್ಕೂ ಮೂಲ ಬಂಡವಾಳವು ಉಳಿದುಕೊಳ್ಳುತ್ತದೆ.

ಲೇಖಕಿ ದಿ ವೆಲ್ತ್ ಕಂಪನಿ ಮ್ಯೂಚುವ್‌ಲ್ ಫಂಡ್‌ನ ಈಕ್ವಿಟಿ ವಿಭಾಗದ ಮುಖ್ಯ ಹೂಡಿಕೆ ಅಧಿಕಾರಿ

ರಿಸ್ಕ್ ನಿರ್ವಹಣೆಯೂ ಮುಖ್ಯ

ಮ್ಯೂಚುವಲ್ ಫಂಡ್‌ಗಳ ಮೂಲಕ ಪಿಂಚಣಿಯಂತಹ ವರಮಾನವನ್ನು ಪಡೆಯುವಾಗ ಮಾರುಕಟ್ಟೆಯ ರಿಸ್ಕ್‌ಗಳನ್ನು ನಿರ್ವಹಿಸುವುದು ಕೂಡ ಮುಖ್ಯ. ನಿವೃತ್ತಿ ನಂತರದ ಆರಂಭಿಕ ವರ್ಷಗಳಲ್ಲಿ ಮಾರುಕಟ್ಟೆಯು ಕುಸಿದರೆ ಅದು ಹೂಡಿಕೆದಾರರ ಪೋರ್ಟ್‌ಫೋಲಿಯೊ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಲ್ಲದು. ಹೀಗಾಗಿ, ಸಾಲಪತ್ರ ಆಧಾರಿತ ಫಂಡ್‌ಗಳಲ್ಲಿ ಹಾಗೂ ಸುಲಭವಾಗಿ ನಗದೀಕರಿಸಿಕೊಳ್ಳಬಹುದಾದ ಹೂಡಿಕೆ ಉತ್ಪನ್ನಗಳಲ್ಲಿ ಹಣವನ್ನು ತೊಡಗಿಸುವುದು ಕೂಡ ಮಹತ್ವದ್ದಾಗಿರುತ್ತದೆ. ಹಾಗೆಯೇ ವ್ಯಕ್ತಿಯು ಹೆಚ್ಚಿನ ಅವಧಿಯ ನಿವೃತ್ತಿ ಜೀವನಕ್ಕೆ ಸರಿಹೊಂದುವಂತೆ ಹಣಕಾಸಿನ ಯೋಜನೆ ರೂಪಿಸಿಕೊಳ್ಳಬೇಕಾಗುತ್ತದೆ.

ಪೋರ್ಟ್‌ಫೋಲಿಯೊವನ್ನು ಕಾಲಕಾಲಕ್ಕೆ ಪರಾಮರ್ಶಿಸುವುದು, ಎಸ್‌ಡಬ್ಲ್ಯುಪಿ ಮೊತ್ತವನ್ನು ಕಾಲಕಾಲಕ್ಕೆ ಮರುಹೊಂದಾಣಿಕೆ ಮಾಡಿಕೊಳ್ಳುವುದು, ಈಕ್ವಿಟಿಯಲ್ಲಿ ಒಂದಿಷ್ಟು ಹಣವನ್ನು ತೊಡಗಿಸಿ ಇರಿಸುವುದು ಹೆಚ್ಚಿನ ಅವಧಿಗೆ ಪಿಂಚಣಿಯನ್ನು ಪಡೆಯಲು ನೆರವಾಗುತ್ತದೆ. ಆರೋಗ್ಯಕ್ಕೆ ಸಂಬಂಧಿಸಿದ ವೆಚ್ಚಗಳನ್ನು ಪರಿಗಣನೆಗೆ ತೆಗೆದುಕೊಳ್ಳುವುದು ಸೂಕ್ತವಾದ ಕ್ರಮವಾಗುತ್ತದೆ.


ನಿವೃತ್ತಿಗಾಗಿ ಯೋಜನೆ ಸಿದ್ಧಪಡಿಸುವುದು ಒಂದು ಬಾರಿಗೆ ಮಾಡಿ ಮುಗಿಸುವ ಕೆಲಸವಲ್ಲ. ಜೀವನದ ಸಂದರ್ಭಗಳು, ಮಾರುಕಟ್ಟೆ ಪರಿಸ್ಥಿತಿಗಳು ಮತ್ತು ವೈಯಕ್ತಿಕ ಗುರಿಗಳು ಬದಲಾಗುತ್ತಿರುತ್ತವೆ. ಹೀಗಾಗಿ, ಹೂಡಿಕೆಯನ್ನು ಆಗಾಗ ಪರಿಶೀಲಿಸುತ್ತ ಇರಬೇಕಾಗುತ್ತದೆ. ಹಣಕಾಸು ತಜ್ಞರಿಂದ ಸಲಹೆ ಪಡೆಯಬೇಕಾಗುತ್ತದೆ. ಹೀಗೆ ಮಾಡುವುದರಿಂದ ತೀರ್ಮಾನಗಳನ್ನು ವಸ್ತುನಿಷ್ಠವಾಗಿ ತೆಗೆದುಕೊಳ್ಳಲು ಸಾಧ್ಯವಾಗುತ್ತದೆ, ಮಾರುಕಟ್ಟೆಯ ಏರಿಳಿತಗಳ ನಡುವೆ ಭಾವುಕವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳದೆ ಇರಲು ಸಾಧ್ಯವಾಗುತ್ತದೆ.

ಮ್ಯೂಚುವಲ್ ಫಂಡ್‌ಗಳು ವ್ಯವಸ್ಥಿತ ಹೂಡಿಕೆ ಯೋಜನೆಗಳ ಮೂಲಕ ಅರ್ಥಪೂರ್ಣವಾದ ಮೊತ್ತವನ್ನು ಒಗ್ಗೂಡಿಸಲು ನೆರವಾಗುತ್ತವೆ. ನಂತರ, ಶಿಸ್ತುಬದ್ಧವಾಗಿ ಹಣ ಹಿಂಪಡೆಯುವ ಯೋಜನೆಯ ಮೂಲಕ ಸ್ಥಿರವಾದ ಪಿಂಚಣಿಯಂತಹ ಆದಾಯವನ್ನು ಪಡೆಯಲು ಕೂಡ ನೆರವಾಗುತ್ತವೆ.



ಆರೋಗ್ಯ ವಿಮೆ: ಇರಲಿ ಎಚ್ಚರ

2023–24ರ ಆರ್ಥಿಕ ವರ್ಷದಲ್ಲಿ ₹15,100 ಕೋಟಿ ಮೌಲ್ಯದ ಆರೋಗ್ಯ ವಿಮೆ ಕ್ಲೇಮ್ ಅರ್ಜಿಗಳು ತಿರಸ್ಕೃತಗೊಂಡಿವೆ. ಇದೇ ಅವಧಿಯಲ್ಲಿ ಆರೋಗ್ಯ ವಿಮಾ ಕಂಪನಿಗಳು ಕಂತುಗಳ (ಪ್ರೀಮಿಯಂ) ಮೂಲಕ ₹1,07,681 ಕೋಟಿ ಸ್ವೀಕರಿಸಿವೆ. ಆರೋಗ್ಯ ವಿಮೆ ಕ್ಲೇಮ್ ಅರ್ಜಿ ತಿರಸ್ಕೃತಗೊಳ್ಳಲು ಕಾರಣಗಳೇನು? ತಿರಸ್ಕಾರ ಆಗದಿರಲು ಏನು ಮಾಡಬೇಕು?



ಮಾಹಿತಿ ಕಣಜ

ವಿಮೆ ತಿರಸ್ಕಾರಕ್ಕೆ ಪ್ರಮುಖ ಕಾರಣ

- ಆರೋಗ್ಯ ವಿಮೆ ಪಾಲಿಸಿ ತೆಗೆದುಕೊಳ್ಳುವಾಗ ತಮಗೆ ಈಗಾಗಲೇ ಇರುವ ಆರೋಗ್ಯ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡದೇ ಇರುವುದು
- ಆಸ್ಪತ್ರೆಗೆ ದಾಖಲಾದಾಗ ಕೊಠಡಿ ಬಾಡಿಗೆ, ವೈದ್ಯರ ಶುಲ್ಕ, ಡಯಾಗ್ನಾಸ್ಟಿಕ್ಸ್ ಸೇರಿದಂತೆ ಇತರೆ ವೆಚ್ಚ ವಿಮೆಯಲ್ಲಿ ತಿಳಿಸಿದ ಮಿತಿಗಿಂತ ಹೆಚ್ಚಿರುವುದು
- ವಿಮಾ ಕಂಪನಿಗಳಿಂದ ಕಪ್ಪುಪಟ್ಟಿಗೆ ಸೇರಿದ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುವುದು
- ಕ್ಲೇಮ್ ಸಲ್ಲಿಸುವಾಗ ನೀಡಿದ ಹೆಸರು, ವಯಸ್ಸು, ದೂರವಾಣಿ ಸಂಖ್ಯೆ ಸೇರಿದಂತೆ ವಿವಿಧ ಮಾಹಿತಿಯು ಮೂಲ ದಾಖಲಾತಿಗಳಲ್ಲಿನ ಮಾಹಿತಿಗೆ ಹೊಂದಾಣಿಕೆ ಆಗದೇ ಇರುವುದು
- ವಿಮೆಗೆ ಇರುವ ಕಾಯುವಿಕೆ ಅವಧಿಯೊಳಗೆ ಕ್ಲೇಮ್ ಸಲ್ಲಿಸಿರುವುದು
- ಅವಧಿ ಮೀರಿದ್ದರೂ ಆರೋಗ್ಯ ವಿಮೆ ನವೀಕರಿಸದೇ ಇರುವುದು
- ನಿಗದಿತ ಅವಧಿಯೊಳಗೆ ಕ್ಲೇಮ್ ಸಲ್ಲಿಸದೆ ವಿಳಂಬ ಮಾಡುವುದು
- ಆಸ್ಪತ್ರೆಯ ಬಿಲ್‌ಗಳು, ಡಿಸ್ಚಾರ್ಜ್ ಪ್ರಮಾಣಪತ್ರ, ಇತರ ವರದಿಗಳು ಸೇರಿದಂತೆ ಸೂಕ್ತ ದಾಖಲೆಗಳು ಇಲ್ಲದಿರುವುದು
- ಹಲವಾರು ಬಾರಿ ಆಸ್ಪತ್ರೆಗೆ ದಾಖಲಾಗಿ ವಿಮೆ ಗರಿಷ್ಠ ಮೊತ್ತದ ಮಿತಿ ದಾಟಿರುವುದು
- ಆರೋಗ್ಯ ವಿಮಾ ಕಂಪನಿಗಳು ಪಾಲಿಸಿಯಲ್ಲಿ ಬದಲಾವಣೆ ತಂದಿರುವುದನ್ನು ಪಾಲಿಸಿದಾರರು ಗಮನಿಸದೇ ಇರುವುದು

ತಿರಸ್ಕಾರ ಆಗದೇ ಇರಲು ಮಾಡಬೇಕಾದದ್ದೇನು?

- ಆರೋಗ್ಯ ವಿಮೆಯ ನಿಯಮಗಳನ್ನು ಓದಿ, ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳುವುದು
- ಪಾಲಿಸಿ ತೆಗೆದುಕೊಳ್ಳುವಾಗ ವೈದ್ಯಕೀಯ ಹಿನ್ನೆಲೆಯ ನಿಖರ ಮಾಹಿತಿ ನೀಡುವುದು
- ಆಸ್ಪತ್ರೆಗೆ ದಾಖಲಾಗುವ ಮೊದಲು, ದಾಖಲಾದ ಬಳಿಕ ವಿಮಾ ಕಂಪನಿಗೆ ಮಾಹಿತಿ ನೀಡುವುದು
- ಆರೋಗ್ಯ ವಿಮೆಯಲ್ಲಿ ಎಷ್ಟು ಮೊತ್ತ ಕ್ಲೇಮ್‌ಗೆ ಲಭ್ಯವಾಗುವಂತೆ ಇದೆ ಎಂಬುದನ್ನು ನೋಡಿಕೊಳ್ಳುವುದು
- ಕ್ಲೇಮ್ ಸಲ್ಲಿಸುವ ಪೂರ್ವದಲ್ಲಿ ಕಾಯುವಿಕೆ ಅವಧಿಯನ್ನು ಖಚಿತಪಡಿಸಿಕೊಳ್ಳುವುದು
- ಸಕಾಲಕ್ಕೆ ವಿಮೆಯನ್ನು ನವೀಕರಣ ಮಾಡಿಕೊಳ್ಳುವುದು
- ಕ್ಲೇಮ್ ತಿರಸ್ಕಾರವನ್ನು ಪರಿಶೀಲಿಸುವಂತೆ ಕೋರಿ ವಿಮಾ ಕಂಪನಿಗೆ ಪತ್ರವನ್ನು ಬರೆಯುವುದು

ಆಧಾರ: ಕೇಂದ್ರ ಹಣಕಾಸು ಸಚಿವಾಲಯ ರಾಜ್ಯಸಭೆಗೆ ನೀಡಿದ ಮಾಹಿತಿ, ಪಾಲಿಸಿ ಬಜಾರ್, ಸ್ಟಾರ್ ಹೆಲ್ತ್ ಇನ್ಶೂರೆನ್ಸ್, ಎಸ್‌ಬಿಐ ಜನರಲ್ ಇನ್ಶೂರೆನ್ಸ್, ಎಚ್‌ಡಿಎಫ್‌ಸಿ ಇಆರ್‌ಜಿಒ ವೆಬ್‌ಸೈಟ್‌ಗಳು

ಬಿಲಿಯನ್‌ಬ್ರೈನ್ಸ್ ಗರಾಜ್ ವೆಂಚರ್ಸ್ (ಗ್ರೋವ್)

ಬ್ರೋಕರೇಜ್ ಮಾತು

ಆನ್‌ಲೈನ್ ಹೂಡಿಕೆ ವೇದಿಕೆ 'ಬಿಲಿಯನ್‌ಬ್ರೈನ್ಸ್ ಗರಾಜ್ ವೆಂಚರ್ಸ್ (ಗ್ರೋವ್)' ಷೇರಿನ ಮೌಲ್ಯ ₹185 ಆಗಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಹೇಳಿದೆ.

ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಸಕ್ರಿಯ ಬಳಕೆದಾರರಲ್ಲಿ ಇದು ಶೇ 26.8ರಷ್ಟು ಪಾಲು ಹೊಂದಿದ್ದು, ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದ ವೇಳೆಗೆ 1.48 ಕೋಟಿ ಸಕ್ರಿಯ ಬಳಕೆದಾರರನ್ನು ಹೊಂದಿದೆ.

ಶೂನ್ಯ ಕಮಿಷನ್ ಮ್ಯೂಚುವಲ್ ಫಂಡ್ ಆ್ಯಪ್ ಮೂಲಕ ಆರಂಭವಾದ ವೇದಿಕೆಯು ಪೂರ್ಣಪ್ರಮಾಣದಲ್ಲಿ ಸಂಪತ್ತು ನಿರ್ವಹಣಾ ಸೇವೆಗಳನ್ನು ಒದಗಿಸುತ್ತಿದೆ. ಬ್ರೋಕಿಂಗ್, ಮಾರ್ಜಿನ್ ಟ್ರೇಡಿಂಗ್ ಸೌಲಭ್ಯ, ಷೇರುಗಳು ಮತ್ತು ಮ್ಯೂಚುವಲ್ ಫಂಡ್‌ಗಳನ್ನು ಆಧರಿಸಿ ಸಾಲ ನೀಡುವುದು, ಹಣಕಾಸು ನಿರ್ವಹಣೆ ಸೌಲಭ್ಯಗಳನ್ನು ಇದು ಈಗ ಗ್ರಾಹಕರಿಗೆ ಒದಗಿಸುತ್ತಿದೆ.

2024–25ರಿಂದ 2027–28ರ ಆರ್ಥಿಕ ವರ್ಷದವರೆಗೆ ವಾರ್ಷಿಕ ಸರಾಸರಿ ತೆರಿಗೆ ನಂತರದ ಲಾಭವು ಶೇ 30ರಷ್ಟಿರಲಿದೆ ಎಂದು ಮೋತಿಲಾಲ್ ಓಸ್ವಾಲ್ ತಿಳಿಸಿದೆ. ಬುಧವಾರದ ವಹಿವಾಟಿನ ಅಂತ್ಯದ ವೇಳೆಗೆ ಬಿಲಿಯನ್ ಬ್ರೈನ್ಸ್ ಗರಾಜ್ ವೆಂಚರ್ಸ್ ಷೇರಿನ ಬೆಲೆ ₹161.80 ಆಗಿತ್ತು.

(ಬ್ರೋಕರೇಜ್ ಕಂಪನಿಗಳು ನೀಡುವ ವಿವರ, ಮಾಹಿತಿಗೆ ಪತ್ರಿಕೆ ಹೊಣೆಯಲ್ಲ)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಇಂಗ್ಲಿಷ್

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

1. Read the given conversation and choose the language function for the underlined sentence :
Raj : Excuse me, could you tell me where the bus station is ?
Raghav : There are two bus stations here, one for the private buses and another for government buses. Which one would you want ?
Raj : The government bus station, please.
Raghav : It's just half a kilometre from here. Go straight and take right turn after the circle.
(A) Offering help **(B) Giving direction**
(C) Suggesting **(D) Requesting**
Ans. : (B) Giving direction

(*) Do as directed:
1) Which one of the following words has two syllables ?
phone, proper, photography, photographer
Ans. : Proper
OR
Which one of the following words has two syllables?
Continent, age, people, direction.
Ans:- people
2) **Fill in the blank using the correct article :**
The earth moves round .... sun.
Ans. : the
3) Give one word answer:
A great performer, especially a musician ....
Ans:- Maestro.
4. Write the correct form of the word given in the brackets:
There is no ....(compare) between them.
Ans:- comparison
5.. Frame a question to get the underlined word as answer:
Raghu went to Mysore yesterday.
Ans:- When did Raghu go to Mysore?
6. Fill in the blank with appropriate preposition :
Vinay has been sleeping .... the last four hours.
Ans. : for
7. Read the following conversation and change the underlined sentence into passive voice:
Sharath Hello Madhu, what did you buy yesterday?
Madhu : I bought a new dress.
Ans:- A new dress was bought by Madhu. [me]
8. Change the following sentence into comparative degree:
Ravish is the most intelligent boy in the class.
Ans:- Ravish is **more intelligent** than any other boys in the class.
9) Use the word 'conduct' as verb in a sentence of your own.
Ans:- Amoghaji conducted the singing programme in his home.
10) Fill in the blank with appropriate tense form of the verb given in brackets :
They .... (be + go) to Singapore at this time last year.
Ans. : were going
11) Identify the parts of speech of the underlined word :
It was a golden opportunity.
Ans. : Adjective

Multiple Choice Questions
12) Choose the appropriate question tag and fill in the blank :
1) She never comes to school late, ...
(A) doesn't she ? (B) didn't she ?
(C) does she ? (D) did she ?
Ans. : (C) does she ?
2. Read the following and choose the infinitive :
Kalpana Chawla was a great astronaut. She was the first Indian born woman to go into space.
(A) was (B) to go
(C) go (D) born
Ans. : (B) to go
13) Read the following conversation and fill in the blank choosing the most appropriate words :
Nirmala **:** Hello Kumar, did you bring your mobile ?
Kumar : Oh no. Sorry.
Nirmala **:** It's Ok
Kumar : If I had brought my mobile we .... watched cricket match.
(A) will have (B) shall have
(C) wouldn't have (D) would have
Ans. (D) would have
III.The following paragraph has two errors. Edit the paragraph and rewrite it in the answer book, clues are given:
14. Although Dravidian in origin, Kannada has been high influenced by Sanskrit. According to some scholars, its early literature dates back with the 5th century A.D. Clues are given:
A. Adverbial mistake to be corrected.
B. Preposition to be corrected.
Ans:- Although Dravidian in origin, Kannada has been highly influenced by Sanskrit. According to some scholars, its early literature dates back from, 5th century A,D.
OR
The following paragraph has two errors. Edit the paragraph and rewrite it in the answer-book :
The old man bowed to all of us in the room. Then he removed his hat and glove, slowly and careful. Chaplin once did that in a picture in a bank — he was the janitor.
a) Plural noun to be used
b) Adverbial mistake to be corrected.
Ans. a) Gloves **b) Carefully**
Expln:- : The old man bowed to all of us in the room. Then he removed his hat and **gloves,** slowly and **carefuliy.** Chaplin once did that in a picture in a bank — he was the janitor

Biology

REVISION : MODEL QUESTIONS

1) 37.2% recombinant Drosophila progeny obtained in the T. H. Morgan's dihybrid cross experiment with the phenotypes red eye color, normal body and white eye color, miniature body is due to:
a) Loosely linked and shorter distance between genes
b) Tightly linked and shorter distance between genes
c) Loosely linked and longer distance between genes
d) Tightly linked and longer distance between genes
Ans:- (C) Loosely linked and longer distance between genes
2) "Pollen grains are well preserved as fossils" because of the presence of sporopollenin" as
Statement I : Sporopollenin is the most resistant organic material known.
Statement II : No enzyme that degrades sporopollenin is so far known.
a) Both the Statements I and II are correct
b) Statement I is correct and Statement II is incorrect
c) Both the Statements I and II are incorrect
d) Statement I is incorrect and Statement II is correct
Ans:- a) Both the Statements I and II are correct
3) Haploid conditionis not observed in which of the following cells
a) Synergids and Egg b) Zygote and PEN
c) Antipodal and Egg
d) Antipodal and Synergids
Ans:- (b) Zygote and PEN
4) **Assertion :In some species of asteraceae and poaceae, seeds are formed without fertilisation.**
Reason: Formation of fruit without fertilization is called parthenocarpy.
A) Both Assertion and Reason are correct and Reason is the correct explanation for Assertion
B) Both Assertion and Reason are correct but Reason is not the correct explanation for Assertion
C)Assertion is correct but Reason is incorrect
D)Both Assertion and Reason are incorrect
Ans:- (B) Both Assertion and Reason are correct but Reason is not the correct explanation for Assertion
5) Select the correct match:

Australian marsupials	Placental mammals
a) Spotted cuscus	Flying squirrel
b) Spotted cuscus	Bobcat
c) Spotted cuscus	Anteater
d) Spotted cuscus	Lemur

Ans:- d
6) The Function of Tapetum in microsporangium is
a) It nourishes the developing pollen grains
b) Helps in dehiscence of anther to release the pollen
c) Helps in protection
d) Helps in division
Ans: (a) It nourishes the developing pollen grains
7) During gestation the foetus develops limbs and digits by the end
a) First month b) Second month
c) Third month d) Fifth month
Ans:-(b) Second month
8). The secondary oocyte after ovulation is covered by a non-cellular layer of
a) Cumulus oophorus b) Corona radiate
c) Zona pellucida d) Cortical layer
Ans:- (c) Zona pellucida
9) An example of hormone releasing IUD among the following
a) Cu – 7 b) Lippes loop
c) LNG – 20 d) Multiload 375
Ans:-(c) LNG – 20
10) The number of nucleotide pairs present in the DNA of the primary oocyte of a new born in human
a) 3.3×10^9 b) 6.6×10^9
c) 13.2×10^9 d) 3.3×10^7
Ans:- (a) 3.3×10^9
11) Which of these ancient men protected their body with hide and buried their dead?
a) Homo habilis b) Neanderthal
c) Dryopithecus d) Homo erectus
Ans:- (b) Neanderthal
12) Which of the following is a foetal sex determination test?
a) ZIFT b) GIFT
c) MTP d) Amniocentesis
Ans:- (d) Amniocentesis
13). Which of the following Mendelian gene disorder is the representation of allosomal recessive trait?
a) Hemophilia b) Thalassemia
c) Sickle cell anemia d) Myotonic dystrophy
Ans:- (b) Thalassemia
14) The process of removal of introns and joining of exons in a defined order in a primary transcripts occurs in
a) Prokaryotes b) Eukaryotes
c) Prokaryotes and Eukaryotes
d) Prokaryotes and Protista
Ans:- (d) Prokaryotes and Protista
15). A type of Natural selection in which more individuals acquire mean character value is called
a) Stabilizing selection *(Contd…….)*




ಅನ್ನರಾಮಯ್ಯನ ಅಭೂತಪೂರ್ವ ರಾಜಕಾರಣ!

ಹಸಿವುಮುಕ್ತ ರಾಜ್ಯದ ಸಾಕಾರಮೂರ್ತಿಯಾಗಿ ಬೆಳೆದ ಸಿದ್ದರಾಮಯ್ಯರ ರಾಜಕೀಯ ಪಯಣ, ಅನ್ನಭಾಗ್ಯ ಸೇರಿದಂತೆ ನಾನಾ ಭಾಗ್ಯಗಳ ಯಶಸ್ವಿ ಅನುಷ್ಠಾನ, 'ಗ್ಯಾರಂಟಿ' ಮುಖ್ಯಮಂತ್ರಿಯಾಗಿ ದಾಖಲೆ!

• ನಾಗರಾಜು ಅಶ್ವತ್ಥ್, ಬೆಂಗಳೂರು

'ನಮ್ಮೂರಿನಲ್ಲಿ ಬಹಳ ಜನರಿಗೆ ಖುಷ್ಕಿ ಜಮೀನಿತ್ತು. ಕೆಲವೇ ಜನ ತರಿ ಜಮೀನನ್ನು ಹೊಂದಿದ್ದರು. ತರಿ ಜಮೀನಿನಲ್ಲಿ ಭತ್ತ ಬೆಳೆಯುವವರು ಮಾತ್ರ ಅನ್ನ ಮಾಡಿಕೊಂಡು ಊಟ ಮಾಡುತ್ತಿದ್ದರು. ಖುಷ್ಕಿ ಜಮೀನಿನ ಜನ ಕೇವಲ ಹಬ್ಬ, ಹರಿದಿನಗಳಲ್ಲಿ ಮಾತ್ರ ಅನ್ನ ಮಾಡುತ್ತಿದ್ದರು. ಅವರ ಮನೆಗಳಲ್ಲಿ ಮಕ್ಕಳಿಗೆ ಹುಷಾರಿಲ್ಲದ ಸಂದರ್ಭಗಳಲ್ಲಿ ಅನ್ನಕ್ಕಾಗಿ ಬೇರೆಯವರ ಮನೆ ಬಾಗಿಲಿನಲ್ಲಿ ಕಾಯುವ ಪರಿಸ್ಥಿತಿಯಿತ್ತು. ಈ ಘಟನೆ ನನ್ನ ಮೇಲೆ ಸಾಕಷ್ಟು ಪರಿಣಾಮ ಬೀರಿತ್ತು. ಹೀಗಾಗಿಯೇ, ಮುಖ್ಯಮಂತ್ರಿಯಾದ ತಕ್ಷಣ ಹಸಿವು ಮುಕ್ತ ರಾಜ್ಯದ ಕನಸು ನನಸು ಮಾಡಿಕೊಳ್ಳಲು 'ಅನ್ನಭಾಗ್ಯ' ಯೋಜನೆಯನ್ನು ಜಾರಿಗೊಳಿಸಿದೆ'- ಹೀಗೆ ಬಾವುಕ ಧ್ವನಿಯಲ್ಲಿ ಬಡವರ ಕಷ್ಟಕ್ಕೆ ಸ್ಪಂದಿಸಿದ್ದು ಮುಖ್ಯಮಂತ್ರಿ ಸಿದ್ಧರಾಮಯ್ಯ.

ಹೌದು, ರಾಜ್ಯದಲ್ಲಿ ಕಳೆದ 2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ್ದ ಸಿದ್ದರಾಮಯ್ಯನವರು ಕೊಟ್ಟ ಮಾತಿನಂತೆ ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆಯನ್ನು ಆರಂಭಿಸಿದ್ದರು. ರಾಜ್ಯಾದ್ಯಂತ 1.5 ಕೋಟಿಗೂ ಅಧಿಕ ಕುಟುಂಬಗಳಿಗೆ ಉಚಿತವಾಗಿ ಅಕ್ಕಿ ವಿತರಿಸುವ ಮೂಲಕ ಹಸಿವು ಮುಕ್ತ ರಾಜ್ಯದ ಪರಿಕಲ್ಪನೆಗೆ ಜೀವ ತುಂಬಿದ್ದರು. ಜತೆಗೆ, ಕ್ಷೀರಭಾಗ್ಯದ ಮೂಲಕ ಕೆಎಂಎಫ್‌ನ ರೈತರ ಹಾಲನ್ನು ಖರೀದಿಸಿ, ಶಾಲೆಗಳಲ್ಲಿ ಮಕ್ಕಳಿಗೆ ವಿತರಿಸುವ ಕ್ರಾಂತಿಕಾರಕ ಯೋಜನೆಯನ್ನು ಆರಂಭಿಸಿದರು. ನಂತರ ನಾನಾ ಪ್ರಗತಿಯ ಯೋಜನೆಗಳನ್ನಾರಂಭಿಸಿ, ರಾಜ್ಯ ಮತ್ತು ರಾಷ್ಟ್ರದ ಗಮನ ಸೆಳೆದರು.

ಎಂ.ಡಿ.ನಂಜುಂಡಸ್ವಾಮಿಯವರಿಂದಲೇ ಹೋರಾಟ ಮನೋಭಾವ!

ಸಿದ್ದರಾಮಯ್ಯನವರು ಕಾನೂನು ವಿದ್ಯಾರ್ಥಿ. ಮೈಸೂರಿನ ಶಾರದಾ ವಿಲಾಸ ಕಾಲೇಜಿನಲ್ಲಿ ಕಾನೂನು ಅಧ್ಯಯನ ಮಾಡಿದ ಸಿದ್ದರಾಮಯ್ಯ ಪ್ರೊ.ಎಂಡಿ. ನಂಜುಂಡಸ್ವಾಮಿಯವರ ಸಂಪರ್ಕಕ್ಕೆ ಬಂದರು. ಕಾಲೇಜಿನಲ್ಲಿ ಕಾನೂನು ಪಾಠ ಮಾಡುತ್ತಿದ್ದ ಎಂಡಿ.ನಂಜುಂಡಸ್ವಾಮಿಯವರು, ಆ ನಂತರ ತಮ್ಮ ವಿದ್ಯಾರ್ಥಿಗಳಿಗೆ ರಾಜಕೀಯ, ಹೋರಾಟದ ಪಾಠ ಮಾಡುತ್ತಿದ್ದರು. ಈ ಬಗ್ಗೆ ಹೆಮ್ಮೆಯಿಂದ ಮಾತನಾಡಿರುವ ಸಿದ್ದರಾಮಯ್ಯ, 'ಮೈಸೂರಿನಲ್ಲಿ ಕಾನೂನು ಅಧ್ಯಯನ ಮಾಡುವಾಗ ಎಂ.ಡಿ.ನಂಜುಂಡಸ್ವಾಮಿಯವರು ಉಪನ್ಯಾಸಕರಾಗಿದ್ದರು. ಹೋರಾಟ ಮನೋಭಾವ, ಅನ್ಯಾಯಗಳ ವಿರುದ್ಧ ಪ್ರತಿಭಟಿಸುವ ಗುಣ ಬೆಳೆಯಲು ಎಂಡಿಎನ್ ಮುಖ್ಯಕಾರಣ. ಬೆಳಗ್ಗೆ 10 ಗಂಟೆಗೆ ಕಾಲೇಜು ಮುಗಿದ ತಕ್ಷಣ ಕೋರ್ಟ್ ಸಮೀಪದ ಗಾಯಿತ್ರಿ ಭವನ ಹೋಟೆಲ್‌ಗೆ ಕರೆದುಕೊಂಡು ಹೋಗಿ, ಮಧ್ಯಾಹ್ನ 1 ಗಂಟೆಯವರೆಗೆ ರಾಜಕೀಯ ಪಾಠ ಮಾಡುತ್ತಿದ್ದರು. ಹೀಗಾಗಿಯೇ, ನಮ್ಮಲ್ಲಿ ಸರ್ಕಾರಗಳ ವಿರುದ್ಧ ಪ್ರತಿಭಟನೆ, ಅನ್ಯಾಯಗಳ ವಿರುದ್ಧ ಹೋರಾಟ ಮಾಡುವ ಗುಣ ಹೆಚ್ಚಾಯಿತು' ಎಂದಿದ್ದಾರೆ. ವಿಶೇಷವೆಂದರೆ, ಕಾನೂನು ವಿದ್ಯಾರ್ಥಿಯಾಗಿದ್ದ ಸಿದ್ದರಾಮಯ್ಯ, ನಂತರ ಮೈಸೂರಿನ ವಿದ್ಯಾವರ್ಧಕ ಕಾಲೇಜಿನಲ್ಲಿ 3 ವರ್ಷಗಳ ಕಾಲ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದ್ದಾರೆ.

'ಅಹಿಂದ'ರಾಮಯ್ಯರ ಪ್ರಗತಿ

ಅದು 1999ರ ಕಾಲ. ರಾಜ್ಯಾದ್ಯಂತ ಚುನಾವಣಾ ಪ್ರಚಾರಕ್ಕೆ ತೆರಳಿ, ತಮ್ಮ ಪಕ್ಷದ ಪರ ಮತ ಕೇಳುತ್ತಿದ್ದ ಸಿದ್ದರಾಮಯ್ಯನವರು ಗೆಲ್ಲುವ ಭರವಸೆಯಲ್ಲಿದ್ದರು. ಆದರೆ, ತಮ್ಮ ಕ್ಷೇತ್ರದಲ್ಲೇ ಸೋಲು ಕಾದಿತ್ತು. ಈ ಸೋಲಿನಿಂದ ಸಾಕಷ್ಟು ಬೇಸರಗೊಂಡಿದ್ದ ಅವರು, ಸೋಲನ್ನೇ ಸವಾಲಾಗಿ ಸ್ವೀಕರಿಸಿದ್ದರು. ಸತತ ೫ ವರ್ಷಗಳ ಕಾಲ ಬೆಂಗಳೂರಿನಲ್ಲಿ ಬಾಡಿಗೆ ಮನೆಯಲ್ಲಿ ಜೀವನ ಮಾಡಿ, ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷ ಸಂಘಟನೆಯಲ್ಲಿ ತೊಡಗಿದ್ದರು. ನಂತರ, 2004ರಲ್ಲಿ ಗೆದ್ದು, ಉಪಮುಖ್ಯಮಂತ್ರಿಯಾಗಿ ಆಯ್ಕೆಯಾಗಿದ್ದರು. ಇದೇ ವೇಳೆ ಹುಬ್ಬಳ್ಳಿಯಲ್ಲಿ ಅಹಿಂದ ಸಮಾವೇಶ ಸಂಘಟಿಸಲು ನಿರ್ಧರಿಸಿದ್ದರು. ಈ ಕಾರ್ಯಕ್ರಮಕ್ಕೆ ಅಂದಿನ ಕಾಂಗ್ರೆಸ್ ನಾಯಕರಾದ ಆರ್‌ಎಲ್ ಜಾಲಪ್ಪ ಸೇರಿ ನಾನಾ ಮುಖಂಡರು ಪಾಲ್ಗೊಳ್ಳುವವರಿದ್ದರು. ಈ ವಿಷಯ ತಿಳಿದ ಎಚ್.ಡಿ.ದೇವೇಗೌಡರು, ಅಹಿಂದ ಸಮಾವೇಶ ಆಯೋಜನೆ ಬೇಡವೆಂದಿದ್ದರು. ಅವರ ವಿರೋಧದ ನಡುವೆಯೂ ಅಹಿಂದ ಸಮಾವೇಶ ಸಂಘಟಿಸಿದ್ದ ಸಿದ್ಧರಾಮಯ್ಯರನ್ನು ಪಕ್ಷದಿಂದ ಮತ್ತು ಅಧಿಕಾರದಿಂದಲೂ ಉಚ್ಚಾಟನೆ ಮಾಡಿದ್ದರು. ನಂತರ ಸಿದ್ದರಾಮಯ್ಯನವರು ಕಾಂಗ್ರೆಸ್ ಪಕ್ಷದ ಮೂಲಕ ಅಹಿಂದ ಸಂಘಟನೆ ಮುಂದುವರೆಸಿ, ರಾಜ್ಯಾದ್ಯಂತ ಅಹಿಂದರಾಮಯ್ಯ ಎಂದೇ ಖ್ಯಾತಿ ಪಡೆದರು.

ಕಾಂಗ್ರೆಸ್ ಸೇರ್ಪಡೆ ಮತ್ತು ಮೈಲಿಗಲ್ಲು

- 2006ರಲ್ಲಿ ಹೆಚ್.ಡಿ.ದೇವೇಗೌಡರೊಂದಿಗೆ ಭಿನ್ನಾಭಿಪ್ರಾಯವುಂಟಾಗಿ ಜೆಡಿಎಸ್ ತೊರೆದು, ಕಾಂಗ್ರೆಸ್ ಪಕ್ಷ ಸೇರಿದರು.
- 2006ರ ಉಪಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆದ್ದರು.

ಸಿದ್ದರಾಮಯ್ಯನವರ ರಾಜಕಾರಣದಲ್ಲಿನ ಹೆಜ್ಜೆಗುರುತುಗಳು!

ರಾಜ್ಯ ರಾಜಕಾರಣದಲ್ಲಿ ಅಹಿಂದ ನಾಯಕ ಎಂದೇ ಕರೆಸಿಕೊಳ್ಳುವ ಸಿದ್ದರಾಮಯ್ಯನವರ ರಾಜಕೀಯ ಪ್ರಯಾಣದಲ್ಲಿ ಅನೇಕ ತಿರುವುಗಳನ್ನು ಕಾಣಬಹುದಾಗಿದೆ. ವಕೀಲಿ, ಉಪನ್ಯಾಸಕ ವೃತ್ತಿಯಿಂದ ಆರಂಭಿಸಿ ಶಾಸಕ, ಮಂತ್ರಿ, ಉಪಮುಖ್ಯಮಂತ್ರಿ, ಮುಖ್ಯಮಂತ್ರಿ ಸ್ಥಾನದವರೆಗೆ ಅವರ ಸುದೀರ್ಘ ಪಯಣದೊಂದಿಗೆ ಅವರು ನಡೆದು ಬಂದ ರಾಜಕಾರಣದ ಹಾದಿಯನ್ನಿಲ್ಲಿ ನೀಡಲಾಗಿದೆ.

- **ರಾಜಕೀಯ ಪ್ರವೇಶ:** 1978ರಲ್ಲಿ ಮೈಸೂರು ತಾಲೂಕು ಬೋರ್ಡ್ ಸದಸ್ಯರಾಗಿ ರಾಜಕಾರಣ ಆರಂಭ.
- **ಶಾಸಕರಾಗಿ ಆಯ್ಕೆ:** 1983ರಲ್ಲಿ ಮೊದಲ ಬಾರಿಗೆ ಚಾಮುಂಡೇಶ್ವರಿ ಕ್ಷೇತ್ರದಿಂದ ಭಾರತೀಯ ಲೋಕದಳದ ಅಭ್ಯರ್ಥಿಯಾಗಿ ಸ್ಪರ್ಧಿಸಿ, ವಿಧಾನಸಭೆ ಪ್ರವೇಶಿಸಿದರು.
- **ಸಚಿವರಾಗಿ ಹೊಣೆ:** 1985ರಲ್ಲಿ ಎರಡನೇ ಬಾರಿಗೆ ಚುನಾವಣೆಯಲ್ಲಿ ಗೆಲುವು ಸಾಧಿಸಿ, ರಾಮಕೃಷ್ಣಹೆಗಡೆ ಅವರ ಸರ್ಕಾರದಲ್ಲಿ ಪಶುಸಂಗೋಪನೆ ಸಚಿವರಾದರು.
- **ವಿತ್ತ ಖಾತೆ ಜವಾಬ್ದಾರಿ:** 1994ರಲ್ಲಿ ರಾಮಕೃಷ್ಣಹೆಗಡೆ ಸಂಪುಟದಲ್ಲಿ ವಿತ್ತ ಖಾತೆ ಸಚಿವರಾಗಿ ಜವಾಬ್ದಾರಿ ಹೊತ್ತು ರಾಜ್ಯದ ಬಜೆಟ್ ಮಂಡಿಸಿದರು.
- **ಎರಡು ಬಾರಿ ಡಿಸಿಎಂ:** 1996 ಮತ್ತು 2004ರಲ್ಲಿ ಜೆಎಚ್ ಪಟೇಲ್ ಮತ್ತು ಧರಮ್‌ಸಿಂಗ್ ಅಧಿಕಾರಾವಧಿಯಲ್ಲಿ ರಾಜ್ಯದ ಉಪಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದಾರೆ.
- **ವಿರೋಧ ಪಕ್ಷದ ನಾಯಕ:** 2009ರಿಂದ 2013ರವರೆಗೆ ಮತ್ತು 2019ರಿಂದ 2023ರವರೆಗೆ ಎರಡು ಅವಧಿಗೆ ಸಿದ್ದರಾಮಯ್ಯ ವಿರೋಧ ಪಕ್ಷದ ನಾಯಕರಾಗಿಯೂ ರಾಜ್ಯದ ಗಮನ ಸೆಳೆದಿದ್ದಾರೆ.
- **ಎರಡೆರಡು ಬಾರಿ ಸಿಎಂ:** 2013ರಲ್ಲಿ ಮೊದಲ ಅವಧಿಗೆ ಪೂರ್ಣಾವಧಿ ಮುಖ್ಯಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು.

೨೦೨೩ರಲ್ಲಿ ಕಾಂಗ್ರೆಸ್ ಪಕ್ಷ ಬಹುಮತ ಪಡೆದು ಪುನಃ ಸರಕಾರ ರಚನೆ ಮಾಡಿದ್ದು, ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದಾರೆ.

ಮರಳಿನ ಮೇಲೆ ಕಲಿತ ಲೆಕ್ಕಾಚಾರ!

ಸಿದ್ದರಾಮಯ್ಯನವರಿಂದು ಮುಖ್ಯಮಂತ್ರಿಗಳಾಗಿ, ವಿತ್ತ ಸಚಿವರಾಗಿ 16 ಬಜೆಟ್‌ಗಳನ್ನು ನೀಡಿದ್ದಾರೆ. ರಾಜ್ಯದ ಬೊಕ್ಕಸಕ್ಕೆ ಬರುವ ಆದಾಯವೆಷ್ಟು? ಖರ್ಚೆಷ್ಟು? ಯಾವ ಯೋಜನೆಗೆಷ್ಟು ಅನುದಾನ ನಿಗದಿಪಡಿಸಬೇಕೆನ್ನುವ ನಿರ್ಧಾರಗಳನ್ನು ಸಮರ್ಥವಾಗಿ ತೆಗೆದುಕೊಳ್ಳುತ್ತಿದ್ದಾರೆ. ಆದರೆ, ಸಿದ್ದರಾಮಯ್ಯನವರ ಈ ಲೆಕ್ಕಗಳ ಪಾಠ ಶಾಲೆಗಳಲ್ಲಿ ಸಿಕ್ಕಿರಲಿಲ್ಲ.

ಬಾಲ್ಯದಲ್ಲಿ ಸಿದ್ದರಾಮಯ್ಯನವರು ಶಾಲೆಗೆ ಹೋಗಲಾಗದೇ, ವೀರಮಕ್ಕಳ ಕುಣಿತ ಕಲಿಕೆಗೆ ಸೀಮಿತವಾಗಿದ್ದರು. ಈ ತರಬೇತಿ ನೀಡುತ್ತಿದ್ದ ಶಿಕ್ಷಕ ನಂಜೇಗೌಡರು, ಸಿದ್ದರಾಮಯ್ಯ ಮತ್ತವರ ಸ್ನೇಹಿತರಿಗೆ ಮರಳಿನ ಮೇಲೆ ಕನ್ನಡ ಬರೆಯುವುದನ್ನು, ಲೆಕ್ಕಾಚಾರ ಮಾಡುವುದನ್ನು ಕಲಿಸಿದ್ದರು. ಆ ನಂತರ ಶಿಕ್ಷಕ ರಾಜಪ್ಪರ ಪ್ರಯತ್ನದ ಫಲವಾಗಿ ಸಿದ್ದರಾಮಯ್ಯನವರು ನೇರ 5ನೇ ತರಗತಿಗೆ ದಾಖಲಾತಿ ಪಡೆದು, ಶಿಕ್ಷಣ ಮುಂದುವರೆಸಿದ್ದರು.

ಪ್ರಸ್ತುತಿ ಪಿ.ವಿ. ಬ್ರ್ಯಾಂಡ್ ಸ್ಪಾಟ್



ಸಿದ್ದರಾಮಯ್ಯನವರ ಪ್ರಮುಖ ಸಾಧನೆಗಳು

1 **ಬಜೆಟ್ ದಾಖಲೆ:** ಸಿದ್ಧರಾಮಯ್ಯನವರು ಈವರೆಗೆ 16 ಬಜೆಟ್‌ಗಳನ್ನು ಮಂಡಿಸಿದ್ದು, ಕರ್ನಾಟಕದ ಇತಿಹಾಸದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದ ಹಣಕಾಸು ಸಚಿವ ಎಂಬ ದಾಖಲೆ ಹೊಂದಿದ್ದಾರೆ.

2 **ಅಹಿಂದ ಚಳುವಳಿ:** ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ದಲಿತರನ್ನು ಸಂಘಟಿಸುವ ಮೂಲಕ ಪ್ರಬಲ ವೋಟ್ ಬ್ಯಾಂಕ್ ಸೃಷ್ಟಿಸಿದರು.

3 **ಭಾಗ್ಯ ಯೋಜನೆಗಳು:** ಅನ್ನಭಾಗ್ಯ, ಕ್ಷೀರಭಾಗ್ಯ ಮುಂತಾದ ಸಾಮಾಜಿಕ ಕಲ್ಯಾಣ ಯೋಜನೆಗಳ ಮೂಲಕ ಮನೆಮಾತಾದರು

4 **ಗ್ಯಾರಂಟಿ ಯೋಜನೆಗಳು:** ಇಡೀ ದೇಶವನ್ನೇ ನಿಬ್ಬೆರಗಾಗಿಸಿದ ಕಾಂಗ್ರೆಸ್‌ನ ಪಂಚಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದ ಕೀರ್ತಿ ಸಿದ್ದರಾಮಯ್ಯನವರಿಗೆ ಸಲ್ಲುತ್ತದೆ.

5 **ಸುದೀರ್ಘ ಮುಖ್ಯಮಂತ್ರಿ ಹೆಗ್ಗಳಿಕೆ:** ರಾಜ್ಯದಲ್ಲಿ ಡಿ.ದೇವರಾಜ ಅರಸುರವರ ಬಳಿಕ ಸುದೀರ್ಘ ಕಾಲದವರೆಗೆ ರಾಜ್ಯವನ್ನಾಳಿದ ಮುಖ್ಯಮಂತ್ರಿ ಎನ್ನುವ ಕೀರ್ತಿಗೆ ಪಾತ್ರರಾಗಿದ್ದಾರೆ.

ಮುಖ್ಯಮಂತ್ರಿಯಾಗಿ ಎರಡು ಅವಧಿಗಳು

ಸಿದ್ಧರಾಮಯ್ಯನವರು ಕರ್ನಾಟಕದ ಇತಿಹಾಸದಲ್ಲಿ ಪೂರ್ಣ 5 ವರ್ಷಗಳ ಅವಧಿ ಪೂರೈಸಿದ ಕೆಲವೇ ಮುಖ್ಯಮಂತ್ರಿಗಳಲ್ಲಿ ಒಬ್ಬರು.

- **ಮೊದಲ ಅವಧಿ (2013-2018):** 2013ರ ಚುನಾವಣೆಯಲ್ಲಿ ಕಾಂಗ್ರೆಸ್ 122 ಸ್ಥಾನಗಳನ್ನು ಗೆದ್ದಾಗ ಸಿದ್ಧರಾಮಯ್ಯನವರು ಮೊದಲ ಬಾರಿಗೆ ಮುಖ್ಯಮಂತ್ರಿಯಾದರು.
- **ಎರಡನೇ ಅವಧಿ (2023-ಪ್ರಸ್ತುತ):** 2023ರ ಚುನಾವಣೆಯಲ್ಲಿ ಕಾಂಗ್ರೆಸ್ 135 ಸ್ಥಾನಗಳ ಭರ್ಜರಿ ಬಹುಮತ ಪಡೆದ ನಂತರ ಸಿದ್ಧರಾಮಯ್ಯನವರು ಮೇ 20, 2023ರಂದು ಎರಡನೇ ಬಾರಿಗೆ ಸಿಎಂ ಆಗಿ ಅಧಿಕಾರ ಸ್ವೀಕರಿಸಿದರು.

ಉಪಮುಖ್ಯಮಂತ್ರಿಯಾಗಿ ಸಾಧನೆ


ಜನತಾ ಪರಿವಾರದಲ್ಲಿ ಗುರುತಿಸಿಕೊಂಡಿದ್ದ ಸಿದ್ದರಾಮಯ್ಯ ಎರಡು ಬಾರಿ ಉಪಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

ವರ್ಷ	ಸ್ಥಾನ	ಪಕ್ಷ
1996	ಉಪಮುಖ್ಯಮಂತ್ರಿ (ಜೆ.ಹೆಚ್. ಪಟೇಲ್ ಸರ್ಕಾರ)	ಜನತಾದಳ
2004	ಉಪಮುಖ್ಯಮಂತ್ರಿ (ಧರಮ್ ಸಿಂಗ್ ಸಮ್ಮಿಶ್ರ ಸರ್ಕಾರ)	ಜೆಡಿಎಸ್

ಚುನಾವಣಾ ಅಂಕಿಅಂಶಗಳ ಒಂದು ನೋಟ

ಸಿದ್ದರಾಮಯ್ಯನವರು ಇದುವರೆಗೆ 9 ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ

ವರ್ಷ	ಕ್ಷೇತ್ರ	ಫಲಿತಾಂಶ	ಪಕ್ಷ
1983	ಚಾಮುಂಡೇಶ್ವರಿ	ಗೆಲುವು	ಪಕ್ಷೇತರ (ಲೋಕದಳ ಬೆಂಬಲಿತ)
1985	ಚಾಮುಂಡೇಶ್ವರಿ	ಗೆಲುವು	ಜನತಾ ಪಕ್ಷ
1989	ಚಾಮುಂಡೇಶ್ವರಿ	ಸೋಲು	ಜನತಾದಳ
1994	ಚಾಮುಂಡೇಶ್ವರಿ	ಗೆಲುವು	ಜನತಾದಳ
1999	ಚಾಮುಂಡೇಶ್ವರಿ	ಸೋಲು	ಜೆಡಿ(ಎಸ್)
2004	ಚಾಮುಂಡೇಶ್ವರಿ	ಗೆಲುವು	ಜೆಡಿ(ಎಸ್)
2008	ವರುಣಾ	ಗೆಲುವು	ಕಾಂಗ್ರೆಸ್
2013	ವರುಣಾ	ಗೆಲುವು	ಕಾಂಗ್ರೆಸ್
2018	ಬಾದಾಮಿ	ಗೆಲುವು (ವರುಣಾ ಬಿಟ್ಟುಕೊಟ್ಟಿದ್ದರು)	ಕಾಂಗ್ರೆಸ್
2023	ವರುಣಾ	ಗೆಲುವು	ಕಾಂಗ್ರೆಸ್





ಪಾರದರ್ಶಕ ಆಡಳಿತದ 'ಗ್ಯಾರಂಟಿ'



ರಾಜ್ಯದಲ್ಲಿ ಡಿ.ದೇವರಾಜ ಅರಸು ಕಾಲಘಟ್ಟದಲ್ಲಿ ಬಡವರು, ದಲಿತರು, ಅಲ್ಪಸಂಖ್ಯಾತರ ಪರ ಸರ್ಕಾರದಿಂದ ಅನೇಕ ಯೋಜನೆಗಳು, ಭೂಸುಧಾರಣೆಗಳನ್ನು ಆರಂಭಿಸಲಾಗಿತ್ತು. ಇದೇ ಶೈಲಿಯಲ್ಲಿ ಬಡವರ ಪರ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಪ್ರತಿ ಬಾರಿಯೂ ಜಾರಿ ಮಾಡುತ್ತಿದೆ. ಈ ಹಾದಿಯಲ್ಲಿ ಸಿದ್ಧರಾಮಯ್ಯನವರು ಆಗಮನ ಬಳಿಕ ಮತ್ತಷ್ಟು ಜನಪರ, ಬಡವರ ಪರ ಯೋಜನೆಗಳನ್ನು ಆರಂಭಿಸಲಾಗಿದೆ. ವಿಶೇಷವಾಗಿ ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಅನೇಕಾನೇಕ ಯೋಜನೆಗಳು ಜನರ ಮನಸ್ಸನ್ನು ಗೆದ್ದಿವೆ. ಹೀಗಾಗಿಯೇ, ಜನರಲ್ಲಿ ಸಿದ್ಧರಾಮಯ್ಯನವರ ಕುರಿತು ವಿಶೇಷ ಪ್ರೀತಿ, ಗೌರವ ಮೂಡುತ್ತಿದೆ. ರಾಜ್ಯದ ಇತಿಹಾಸದಲ್ಲಿ ಬಡವರ ಭಾಗ್ಯಗಳನ್ನು ನೀಡಿದ ಕಾಂಗ್ರೆಸ್ ಪಕ್ಷ ತನ್ನ ಜನಪರ ಕಾಳಜಿಯನ್ನು ಮುಂದುವರೆಸಿದೆ. ದೇಶದಲ್ಲೇ ಮೊದಲ ಬಾರಿಗೆ ಅತ್ಯಂತ ದೊಡ್ಡ ಪ್ರಮಾಣದ ಜನಪರ ಯೋಜನೆಗಳಾದ ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದ ರಾಜ್ಯವಾಗಿ ಕರ್ನಾಟಕ ಗುರುತಿಸಿಕೊಂಡಿದೆ. ಈ ಹಾದಿಯಲ್ಲಿ ಕಾಂಗ್ರೆಸ್ ಹೈಕಮಾಂಡ್, ಹಿರಿಯ ನಾಯಕರು ಸಹ ಯೋಜನೆಗಳಿಗೆ ಮುಕ್ತಕಂಠದಿಂದ ಬೆಂಬಲ ಸೂಚಿಸಿದ್ದಾರೆ.

ಸಿದ್ದರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಯಾವುದೇ ಯೋಜನೆಗಳನ್ನು ಜಾರಿಗೆ ತಂದರೂ ಸಹ ನಾವೆಲ್ಲಾ ಸ್ವಾಗತಿಸಿದ್ದೇವೆ. ಬೆಂಬಲಿಸಿದ್ದೇವೆ. ವಿಶೇಷವಾಗಿ ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ, ಯುವನಿಧಿ, ಶಕ್ತಿ ಯೋಜನೆಗಳಿಗೆ ಸಂಬಂಧಿಸಿದಂತೆ ಸರ್ಕಾರ ನೀಡುತ್ತಿರುವ ಅನುದಾನ ತಲಾದಾಯದ ಸ್ವರೂಪದಲ್ಲಿ ಸರ್ಕಾರದ ಬೊಕ್ಕಸಕ್ಕೆ ವಾಪಸ್ಸಾಗುತ್ತಿದೆ. ವಿಶ್ವದ ಬಡತನ ಸೂಚ್ಯಂಕದಲ್ಲಿ ದೇಶ ಅತ್ಯಂತ ಕಳಪೆ ಪ್ರದರ್ಶನ ನೀಡಿದೆ. ವಿಶೇಷವಾಗಿ ರಾಜ್ಯದಲ್ಲಿ ಈ ಬಡತನ ನಿರ್ಮೂಲನೆ ಮಾಡಲು ಕಾಂಗ್ರೆಸ್ ಸರ್ಕಾರದ ಈ ವಿಶೇಷ ಯೋಜನೆಗಳು ಸಾಕಷ್ಟು ಸಹಕಾರಿಯಾಗಿವೆ. ವಿಶೇಷವಾಗಿ ಸಿದ್ಧರಾಮಯ್ಯನವರು ಕಾಂಗ್ರೆಸ್ ಪಕ್ಷಕ್ಕೆ ಬಂದಾಗಲೂ, ಅತ್ಯಂತ ಗೌರವಪೂರ್ವಕವಾಗಿ ಸ್ವಾಗತಿಸಿ, ಅವರ ನಾಯಕತ್ವವನ್ನು ಬೆಂಬಲಿಸಿದ್ದೇವೆ. ಪ್ರಸ್ತುತ ರಾಜಕಾರಣದಲ್ಲಿ ಯಾವುದೇ ಭ್ರಷ್ಟಾಚಾರದ ಆರೋಪಗಳನ್ನು ಹೊರದೆ, ಪಾರದರ್ಶಕ ಆಳ್ವಿಕೆ ನೀಡುತ್ತಿದ್ದಾರೆ. ಜತೆಗೆ, ರಾಜ್ಯದಲ್ಲಿನ ಪಂಚಗ್ಯಾರಂಟಿ ಯೋಜನೆಗಳು ಸಹ ಯಾವುದೇ ಭ್ರಷ್ಟಾಚಾರದ ವಾಸನೆಯಿಲ್ಲದೇ, ಜನರಿಗೆ ನೇರ ಮುಟ್ಟುತ್ತಿದೆ. ಸಿದ್ದರಾಮಯ್ಯನವರ ಆಡಳಿತ ವೈಯಕ್ತಿಕವಾಗಿ ಸಾಕಷ್ಟು ಖುಷಿ ನೀಡಿದೆ.

ವೀರಪ್ಪ ಮೊಯ್ಲಿ, ಮಾಜಿ ಮುಖ್ಯಮಂತ್ರಿಗಳು ಹಾಗೂ ಕಾಂಗ್ರೆಸ್‌ನ ಹಿರಿಯ ದುರೀಣರು.

ಕೋಮುವಾದದ ವಿರುದ್ಧ ರಾಜಿಯಿಲ್ಲದ ನಡೆ!



ಅನೇಕ ಕಾರಣಗಳಿಗೆ ಸಿದ್ಧರಾಮಯ್ಯನವರು ಇಷ್ಟವಾಗುತ್ತಾರೆ. ಕೋಮುವಾದದ ವಿರುದ್ಧ ರಾಜಿಯಿಲ್ಲದ ನಿಲುವು ಹೊಂದಿದ ಕೆಲವೇ ವ್ಯಕ್ತಿಗಳಲ್ಲಿ ಇವರೂ ಒಬ್ಬರು. ಹಿಂದುತ್ವದ ಕುರಿತು ಮೃದು ಧೋರಣೆ ವ್ಯಕ್ತವಾಗುವ ಕಾಲದಲ್ಲಿ ನಿರ್ದಾಕ್ಷಿಣ್ಯವಾಗಿ ಖಂಡಿಸುವ ವೈಖರಿ ಶ್ಲಾಘನೀಯವಾದುದು. ಅತಿಮುಖ್ಯವಾಗಿ ಅವರು ಸಕಲ ಸವಲತ್ತುಗಳ ಹಿನ್ನೆಲೆಯಿಂದ ಬಂದವರಲ್ಲ. ಕಡುಕಷ್ಟಗಳನ್ನೆಲ್ಲಾ ಬಲ್ಲ ಸಿದ್ಧರಾಮಯ್ಯನವರು ತಮ್ಮ ಎರಡೂ ಅವಧಿಗಳಲ್ಲಿ ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿದಂತೆ ಜನಕಲ್ಯಾಣ ಯೋಜನೆಗಳ ಜಾರಿಗೆ ಗಮನ ಹರಿಸಿದ್ದರು. ಇವುಗಳನ್ನು ದೇವರಾಜ ಅರಸು ಅವರ ಸಾಧನೆಗಳೊಂದಿಗೆ ಹೋಲಿಸಲು ಸಾಧ್ಯವಿಲ್ಲ. ಏಕೆಂದರೆ, ಅವರಿಬ್ಬರ ಕಾಲಘಟ್ಟಗಳು ವಿಭಿನ್ನ. ಅರಸು ಜಾಗತೀಕರಣ ಮತ್ತು ಉದಾರೀಕರಣದ ಪೂರ್ವದ ಕಾಲದಲ್ಲಿದ್ದವರು. ಅವರು ಜಾರಿಗೆ ತಂದ ಭೂಸುಧಾರಣೆಗಳು ಬಡವರ ಪರ ಈವರೆಗಿನ ಜಾರಿಯಾದ ಅತ್ಯಂತ ದೊಡ್ಡ ಕಾರ್ಯಕ್ರಮಗಳಾಗಿವೆ. ಉದಾರೀಕರಣದ ನಂತರದ ಈ ಕಾಲಘಟ್ಟದಲ್ಲಿ ಸಂಪನ್ಮೂಲಗಳ ಮರುಹಂಚಿಕೆಯ ಸ್ವರೂಪದಲ್ಲಿನ (ಭಾಗ್ಯ ಯೋಜನೆ) ಯೋಜನೆಗಳು ಬಹಳ ಮುಖ್ಯವಾಗುತ್ತವೆ. ಹಿಂದಿನ ಅವಧಿಯಲ್ಲಿ ನೇರ, ನಿಷ್ಠುರವಾಗಿದ್ದ ಸಿದ್ಧರಾಮಯ್ಯನವರ ಆಡಳಿತ ಕ್ರಮೇಣ ನಿಯಂತ್ರಣ ತಪ್ಪುತ್ತಿರುವುದು ನಿರಾಸೆ ಮೂಡಿಸುತ್ತಿದೆ.

ಜತೆಗೆ, ಆಪ್ತ ವಲಯದವರ ಮೇಲಿನ ಆರೋಪಗಳು ಮುಖ್ಯಮಂತ್ರಿ ಹುದ್ದೆಯಲ್ಲಿರುವವರಿಗೆ ಶೋಭೆ ತರುವುದಿಲ್ಲ. ಹೀಗಾಗಿ, ಬಡವರ ಪರ ಉದ್ದೇಶಗಳು ಈಡೇರುವುದರೊಂದಿಗೆ ಆಡಳಿತ ಯಂತ್ರ ಕೈತಪ್ಪದಂತೆ, ಭ್ರಷ್ಟರನ್ನು ದೂರವಿಟ್ಟು ಪಾರದರ್ಶಕ, ಜನಪರ, ಶೋಷಿತರ ಪರ ದನಿಯಾಗಬೇಕೆಂದು ಹಾರೈಸುತ್ತೇನೆ.

ಪ್ರಕಾಶ್‌ರಾಜ್, ಖ್ಯಾತ ನಟ ಮತ್ತು ಪ್ರಗತಿಪರ ಚಿಂತಕ

ಎಲ್ಲರೊಂದಿಗೆ ಕನೆಕ್ಟ್ ಆಗುವುದೇ ವಿಶೇಷ!



ಸಿನಿಮಾ, ಬ್ಯುಸಿನೆಸ್, ರಾಜಕಾರಣ ಯಾವುದೇ ಕ್ಷೇತ್ರದಲ್ಲಿ ಸಾಕಷ್ಟು ವರ್ಷಗಳ ಕಾಲ ಸಮರ್ಥವಾಗಿ ತಮ್ಮ ಸ್ಥಾನ ಕಾಪಾಡಿಕೊಳ್ಳುವುದು ಅತ್ಯಂತ ಸವಾಲಿನ ಕೆಲಸ. ಈ ಹಾದಿಯಲ್ಲಿ ಮಾನ್ಯ ಸಿದ್ಧರಾಮಯ್ಯನವರ ಜರ್ನಿ ನಿಜಕ್ಕೂ ವಿಶೇಷವೆನಿಸುತ್ತದೆ. ಡಿ.ದೇವರಾಜ ಅರಸುರವರ ನಂತರ ಸುದೀರ್ಘ ಅವಧಿಯವರೆಗೆ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯುತ್ತಿರುವುದು ಅತ್ಯಂತ ಅಭಿನಂದನಾರ್ಹ ಸಂಗತಿ. ವೈಯಕ್ತಿಕವಾಗಿ ಈ ವಿಚಾರ ಕೇಳಿದಾಗ ಖುಷಿಯಾಗಿದೆ.

ಜತೆಗೆ, ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮಕ್ಕೆ ಬಂದಾಗ ಸಿದ್ಧರಾಮಯ್ಯನವರ ಮಾತುಗಾರಿಕೆ, ಎಲ್ಲರನ್ನು ಸೆಳೆದಿಟ್ಟುಕೊಳ್ಳುವ ಅವರ ಕೌಶಲ್ಯ, ಪ್ರತಿಯೊಬ್ಬರೊಂದಿಗೆ ಕನೆಕ್ಟ್ ಆಗುವ ರೀತಿ ನಿಜಕ್ಕೂ ಅಚ್ಚರಿ ಮೂಡಿಸಿತ್ತು.

ಒಟ್ಟಾರೆ, ಕಾಲಕ್ಕಿಂತಲೂ ದೊಡ್ಡ ಜಡ್ಜ್ ಇಲ್ಲ. ಹೀಗಿರುವಾಗ, ಸುದೀರ್ಘ ಅವಧಿಯವರೆಗೆ ಅವರು ಮುಖ್ಯಮಂತ್ರಿಗಳಾಗಿ ಮುಂದುವರೆದಿದ್ದಾರೆ. ಜನರ ಪ್ರೀತಿಯನ್ನವರು ಸಂಪಾದಿಸಿದ್ದಾರೆ. ಈ ಸಂದರ್ಭದಲ್ಲಿ ಅವರಿಗೆ ಆತ್ಮೀಯ ಅಭಿನಂದನೆಗಳನ್ನು ತಿಳಿಸಿ, ಶುಭ ಹಾರೈಸುತ್ತೇನೆ.

ರಮೇಶ್ ಅರವಿಂದ್, ಖ್ಯಾತ ಸಿನಿನಟ.

ಜನಾನುರಾಗಿ ನಾಯಕತ್ವಕ್ಕೆ ನಿದರ್ಶನ



ಸಿದ್ದರಾಮಯ್ಯನವರ ಆಡಳಿತ ವೈಖರಿ, ಜನಪರ ನಡೆ, ನುಡಿಯ ಕುರಿತು ಪ್ರತ್ಯೇಕವಾಗಿ ಹೇಳಬೇಕೆಂದಿಲ್ಲ. ರಾಜ್ಯದ ಜನರಿಗೆ ಕಳೆದೆರಡೂ ಅವಧಿಗಳ ಅವರ ಕಾರ್ಯವೈಖರಿ ಅತ್ಯಂತ ಮೆಚ್ಚುಗೆ ಗಳಿಸಿದೆ. 2006ರಲ್ಲಿ ಸಿದ್ದರಾಮಯ್ಯನವರು ಕಾಂಗ್ರೆಸ್ ಪಕ್ಷಕ್ಕೆ ಸೇರಿ ಅಹಿಂದ ಸಮಾವೇಶ ಸಂಘಟಿಸಿದಾಗಲೇ ಅನೇಕರು ಅವರನ್ನು ಅನುಸರಿಸಲು ಸಜ್ಜಾದರು. ಏಕೆಂದರೆ, ಸಿದ್ದರಾಮಯ್ಯನವರು ಯಾವುದೇ ತಾರತಮ್ಯವಿಲ್ಲದೇ, ಎಲ್ಲ ಮತಪಂಥಗಳ ಕಾರ್ಯಕರ್ತರನ್ನು ಅತ್ಯಂತ ಆತ್ಮೀಯವಾಗಿ ನಡೆಸಿಕೊಳ್ಳುತ್ತಿದ್ದರು. ವಿಶೇಷವಾಗಿ ಎಲ್ಲರನ್ನೂ ನಮ್ಮವರೆಂದು ಭಾವಿಸುವ ಗುಣ ಅವರಲ್ಲಿದೆ. ಹೀಗಾಗಿಯೇ, ರಾಜ್ಯದಲ್ಲಿ ಅಹಿಂದ ಸಮಾವೇಶವೊಂದು ಪ್ರತ್ಯೇಕ ಸ್ಥಾನ ಪಡೆದುಕೊಂಡಿದೆ. ಜತೆಗೆ, ಸಿದ್ದರಾಮಯ್ಯನವರನ್ನು ಅಹಿಂದ ನಾಯಕರೆಂದು ಕರೆಯುವ ಹಂತಕ್ಕೆ ಕರೆತಂದಿದೆ. ವೈಯಕ್ತಿಕವಾಗಿ ನಾನು ಅವರನ್ನು ಒಟ್ಟು ೩ ಬಜೆಟ್‌ಗಳನ್ನು ರೂಪಿಸುವಾಗ ಅತ್ಯಂತ ಹತ್ತಿರದಿಂದ ಕಂಡಿದ್ದೇನೆ. ಎಲ್ಲಾ ವರ್ಗಗಳ ಅಭ್ಯುದಯಕ್ಕೆ ಆದ್ಯತೆ ನೀಡಬೇಕೆನ್ನುವ ವಿಷಯದಲ್ಲಿ ಯಾವುದೇ ರಾಜಿಯಾಗದೇ ಯೋಜನೆಗಳನ್ನು ರೂಪಿಸುವಲ್ಲಿ ಅವರ ಕೊಡುಗೆ ಅಪಾರ. ರಾಜ್ಯದ ಜನರ ತಲಾದಾಯ ವೃದ್ಧಿಯಲ್ಲಿ ಪ್ರಮುಖ ಕಾರಣ ಸಿದ್ದರಾಮಯ್ಯನವರು. ಏಕೆಂದರೆ, ರಾಜ್ಯದಲ್ಲಿ ಜನಪರ ಗ್ಯಾರಂಟಿಗಳ ಅನುಷ್ಠಾನದಿಂದ ಪ್ರತಿಯೊಬ್ಬರೂ ಆರ್ಥಿಕವಾಗಿ ಪ್ರಗತಿ ಹೊಂದುತ್ತಿದ್ದಾರೆ. ಸಂಚಾರ ಸಾರಿಗೆ ವ್ಯವಸ್ಥೆಯಲ್ಲೂ ಗಣನೀಯ ಏರಿಕೆ ಕಂಡಿದೆ. ಹೀಗಾಗಿ, ಆರ್ಥಿಕ ವಹಿವಾಟುಗಳು ರಾಜ್ಯದಲ್ಲಿ ಹೆಚ್ಚಾಗಿವೆ. ಈ ಪರಿಣಾಮ ಅರ್ಥವ್ಯವಸ್ಥೆ ವೃದ್ಧಿಗೆ ಹಾದಿ ಮಾಡಿಕೊಟ್ಟಿದೆ. ಈ ಹಣಕಾಸು ಚತುರತೆಯಿಂದಲೇ ಸಿದ್ದರಾಮಯ್ಯನವರು ೧೬ ಬಜೆಟ್‌ಗಳನ್ನು ಮಂಡಿಸಲು ಸಾಧ್ಯವಾಗಿದೆ. ಡಿ.ದೇವರಾಜ ಅರಸು ಕಾಲಘಟ್ಟದ ಬಳಿಕ ಸಿದ್ದರಾಮಯ್ಯನವರ ಅವಧಿಯಲ್ಲಿ ಬಡವರ ಅಭ್ಯುದಯ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸಾಧ್ಯವಾಗುತ್ತಿದೆ. ನೇರ, ದಿಟ್ಟನಡೆಯ ಸಿದ್ದರಾಮಯ್ಯನವರು, ಪ್ರಸ್ತುತ ಎಲ್ಲರನ್ನೂ ಒಟ್ಟಾಗಿ ಮುನ್ನಡೆಸುತ್ತಿದ್ದಾರೆ. ಈ ಆಡಳಿತ ಮತ್ತಷ್ಟು ವೃದ್ಧಿಸುವುದರೊಂದಿಗೆ ಮುಂದಿನ ಚುನಾವಣೆಯಲ್ಲೂ ಸಹ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಪಕ್ಷ ಮುಂದುವರೆಯಲಿ ಎಂದು ಹಾರೈಸುತ್ತೇನೆ.

ಡಾ.ಎಂ.ಆರ್.ಸೀತಾರಾಮ್, ವಿಧಾನಪರಿಷತ್ ಸದಸ್ಯರು, ಮಾಜಿ ಸಚಿವರು

ಸಮಾಜವಾದಿ ಸಿದ್ಧಾಂತ ಗಟ್ಟಿಗೊಳ್ಳಲಿ



1983ರಲ್ಲಿ ಸಿದ್ದರಾಮಯ್ಯ ಶಾಸಕರಾದರು. 1985ರಲ್ಲಿ ನಾನು ಸಹ ಶಾಸಕನಾದೆ. ಅಂದಿನಿಂದಲೂ ಸಹ ಸಿದ್ದರಾಮಯ್ಯರನ್ನು ಹತ್ತಿರದಿಂದ ಗಮನಿಸಿದ್ದಿದೆ. ಎಂ.ಡಿ. ನಂಜುಂಡಸ್ವಾಮಿಯವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯಡಿ ಬಂದ ಅವರ ರಾಜಕಾರಣ ಆರಂಭದಲ್ಲಿ ಕಾಂಗ್ರೆಸ್ ವಿರೋಧಿ ಬಣದಲ್ಲೇ ಗುರುತಿಸಿಕೊಂಡಿತ್ತು. ಆ ನಂತರ ಅವರ ಹಾದಿ, ಪ್ರಗತಿ ನಿಜಕ್ಕೂ ಖುಷಿಯೆನಿಸುತ್ತದೆ. ಏಕೆಂದರೆ, ಪ್ರಬಲ ಸಮುದಾಯಗಳ ನಾಯಕರು ರಾಜ್ಯವನ್ನು ಆಳುತ್ತಿರುವ ಅವಧಿಯಲ್ಲಿ ಪ್ರಾಬಲ್ಯವಿಲ್ಲದ ಸಮುದಾಯದಿಂದ ಬಂದು, ರಾಜ್ಯಮಟ್ಟದಲ್ಲಿ ಗುರುತಿಸಿಕೊಳ್ಳುವುದು ನಿಜಕ್ಕೂ ಸವಾಲಿನ ಕೆಲಸ. ಈ ಪ್ರಯತ್ನ, ಪ್ರಯಾಣದಲ್ಲಿ ಸಿದ್ದರಾಮಯ್ಯ ಯಶಸ್ವಿಯಾಗಿದ್ದಾರೆ. ಈ ಹಾದಿಯಲ್ಲಿ ಅವರ ದೂರದೃಷ್ಟಿ ನಾಯಕತ್ವ, ಅದ್ಭುತವಾದ ವ್ಯಕ್ತಿತ್ವ ಸಾಕಷ್ಟು ಪ್ರಮುಖವಾಗುತ್ತದೆ. ಆಯಾಯ ಸಮಕಾಲೀನ ಸಮಸ್ಯೆ, ಸವಾಲುಗಳನ್ನು ಸಮರ್ಥವಾಗಿ ಎದುರಿಸಿಕೊಂಡು ರಾಜಕಾರಣದಲ್ಲಿ ಅಸ್ತಿತ್ವ ಉಳಿಸಿಕೊಳ್ಳುವುದೇ ಕಷ್ಟ. ಆ ಸ್ಥಿತಿಯಲ್ಲಿ ಸಿದ್ದರಾಮಯ್ಯ ಅವರ ಛಾಪು ಮೂಡಿಸಿದ್ದಾರೆ. ಅವರ ಬೌದ್ಧಿಕ ಚಾಕಚಕ್ಯತೆ ಆಡಳಿತದಿಂದ ಎಲ್ಲರಿಗೂ ಗೊತ್ತಾಗಿದೆ. ಹಣಕಾಸು ಸಚಿವರಾಗಿ 16 ಬಜೆಟ್ ನೀಡುವ ಮೂಲಕ ಲೆಕ್ಕಾಚಾರದಲ್ಲೂ ಸೈ ಎನಿಸಿಕೊಂಡಿದ್ದಾರೆ. ಅತಿಮುಖ್ಯವಾಗಿ ಸಿದ್ದರಾಮಯ್ಯನವರಲ್ಲಿ ಡಿ.ದೇವರಾಜ ಅರಸುರವರ ಛಾಯೆ ಕಾಣಿಸುತ್ತದೆ. ಹಿಂದುಳಿದ ವರ್ಗಗಳ ಅಭ್ಯುದಯಕ್ಕೆ ಸಿದ್ದರಾಮಯ್ಯ ದುಡಿಯುತ್ತಿರುವ ಪರಿ ಅದಕ್ಕೆ ನಿದರ್ಶನ. ಸಮಾಜವಾದದ ಪರಿಕಲ್ಪನೆಯಡಿ ರಾಜ್ಯಕ್ಕೆ ಅತ್ಯುತ್ತಮ ಆಡಳಿತ ನೀಡುತ್ತಿದ್ದಾರೆ. ಇಕ್ಕಟ್ಟು ಮತ್ತು ಬಿಕ್ಕಟ್ಟುಗಳ ನಡುವೆ ಮುಖ್ಯಮಂತ್ರಿಯಾಗಿ ಮುಂದುವರೆಯಲಿ ಎಂದು ಹಾರೈಸುತ್ತೇನೆ.

ಮುಖ್ಯಮಂತ್ರಿ ಚಂದ್ರು, ಹಿರಿಯ ಕಲಾವಿದರು ಹಾಗೂ ರಾಜಕಾರಣಿ.

ಸಾಮಾಜಿಕ–ಆರ್ಥಿಕ ಪ್ರಗತಿಯ ಹಾದಿ!



12ನೇ ಶತಮಾನದ ಬಸವಣ್ಣನವರು ನೀಡಿದ ಪ್ರಜಾಪ್ರಭುತ್ವ ಹಾದಿಯಲ್ಲಿ ಸರ್ಕಾರವನ್ನು ನಡೆಸಿ, ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಕಲ್ಪಿಸಿದ್ದಾರೆ. ವಿಶೇಷವಾಗಿ ಅವರ ಹಿಂದಿನ ಅವಧಿಯಲ್ಲಿ ಬಡವರಿಗೆ ನೆರವಾಗುವ ನಿಟ್ಟಿನಲ್ಲಿ ಅನ್ನಭಾಗ್ಯ, ಕ್ಷೀರಭಾಗ್ಯ ಸೇರಿ ನಾನಾ ಯೋಜನೆಗಳನ್ನು ಅನುಷ್ಠಾನ ಮಾಡಿದ್ದರು. ಈಗ ಗ್ಯಾರಂಟಿ ಯೋಜನೆಗಳಿಂದ ಎಲ್ಲರ ಗಮನ ಸೆಳೆದಿದ್ದಾರೆ. ಸದಾ ಬಡವರು, ಶೋಷಿತರು, ಹಿಂದುಳಿವರ್ಗಗಳ ಪರ ಮಿಡಿಯುವ ಸಿದ್ದರಾಮಯ್ಯನವರ ನಾಯಕತ್ವವು ಕರ್ನಾಟಕದ ಸಾಮಾಜಿಕ - ಆರ್ಥಿಕ ಪರಿಸರದಲ್ಲಿ ದೀರ್ಘಕಾಲಿಕ ಪರಿಣಾಮ ಬೀರಿದ್ದು, ನ್ಯಾಯ ಮತ್ತು ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸಿದೆ. ಸುದೀರ್ಘ ಅವಧಿಗೆ ಮುಖ್ಯಮಂತ್ರಿ ಸ್ಥಾನದಲ್ಲಿರುವುದು ಅತ್ಯಂತ ಸವಾಲಿನ ಕೆಲಸ. ಈ ಪಯಣದಲ್ಲಿ ಅವರು ಯಶಸ್ವಿಯಾಗಿದ್ದಾರೆ. ಅವರಿಗೆ ಶುಭವಾಗಲಿ.

ಡಾ.ಶಾಲಿನಿ ನಲ್ವಾಡ್, ಉದ್ಯಮಿ.



ಚಿಟಿಕೆ ಸುದ್ದಿ

ಆರು ಮಸೂದೆಗಳಿಗೆ ರಾಜ್ಯಪಾಲರ ಅಂಕಿತ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಸದಸ್ಯರ ಪಟ್ಟಿಯಲ್ಲಿ ಕೆಲವು ಜನಪ್ರತಿನಿಧಿಗಳ ಹೆಸರುಗಳು ಬಿಟ್ಟು ಹೋಗಿರುವುದರಿಂದ ಅವರ ಹೆಸರು ಸೇರಿಸುವ ಉದ್ದೇಶದ 'ಗ್ರೇಟರ್ ಬೆಂಗಳೂರು ಆಡಳಿತ ಎರಡನೇ ತಿದ್ದುಪಡಿ ಮಸೂದೆ'ಯೂ ಸೇರಿ ಒಟ್ಟು ಆರು ಮಸೂದೆಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.

ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಮಸೂದೆ, ಕರ್ನಾಟಕ ಕಲ್ಯಾಣ ನಿಧಿ ತಿದ್ದುಪಡಿ ಮಸೂದೆ, ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳು ತಿದ್ದುಪಡಿ ಮಸೂದೆ, ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ ಮಸೂದೆ, ಬಾಂಬೆ ಪಬ್ಲಿಕ್ ಟ್ರಸ್ಟ್ ಮಸೂದೆಗಳಿಗೆ ರಾಜ್ಯಪಾಲರು ಒಪ್ಪಿಗೆ ನೀಡಿದ್ದಾರೆ.

ಮಗಳನ್ನೇ ವೇಶ್ಯಾವಾಟಿಕೆಗೆ ತಳ್ಳಿದ ತಂದೆ

ಕಡೂರು (ಚಿಕ್ಕಮಗಳೂರು): ತಂದೆಯು ಅಪ್ರಾಪ್ತ ವಯಸ್ಕ ಮಗಳನ್ನು ವೇಶ್ಯಾವಾಟಿಕೆಗೆ ತಳ್ಳಿದ ಆರೋಪದ ಪ್ರಕರಣದಲ್ಲಿ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ತಾಯಿ ಆರು ವರ್ಷಗಳ ಹಿಂದೆಯೇ ಮೃತಪಟ್ಟಿದ್ದು, ಪ್ರಥಮ ಪಿಯುನಲ್ಲೇ ಬಾಲಕಿ ಓದು ನಿಲ್ಲಿಸಿದ್ದಾಳೆ. ತಂದೆ ಮತ್ತು ಭರತ್ ಶೆಟ್ಟಿ ಎಂಬ ಮತ್ತೊಬ್ಬ ವ್ಯಕ್ತಿ ಸೇರಿ ಮಂಗಳೂರಿಗೆ ಡಿ.21ರಂದು ಕರೆದೊಯ್ದಿದ್ದಾರೆ. ಅಲ್ಲಿ ಎರಡು ದಿನಗಳಲ್ಲಿ ಹಲವರು ಆಕೆಯ ಮೇಲೆ ಅತ್ಯಾಚಾರ ಎಸಗಿದ್ದಾರೆ ಎನ್ನಲಾಗಿದೆ. ಈ ಸಂದರ್ಭದಲ್ಲಿಯೂ ಆಕೆಯ ತಂದೆ ಕೂಡ ರಕ್ಷಣೆಗೆ ಬಂದಿಲ್ಲ.

ಮನೆಗೆ ಕಳುಹಿಸದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬಾಲಕಿ ಹೇಳಿದ ಬಳಿಕ ವಾಪಸು ಕಳುಹಿಸಿದ್ದಾನೆ. ಮನೆಗೆ ಬಂದ ಬಾಲಕಿ ಸಂಬಂಧಿಕರಿಗೆ ವಿಷಯ ತಿಳಿಸಿದ್ದು, ಬಳಿಕ ಪೊಲೀಸರಿಗೆ ದೂರು ನೀಡಿದ್ದಾರೆ. ಭರತ್ ಶೆಟ್ಟಿ ಮತ್ತು ಇತರ ಮೂವರನ್ನು ಬಂಧಿಸಲಾಗಿದ್ದು, ಎಂದು ಪೊಲೀಸರು ತಿಳಿಸಿದ್ದಾರೆ.

ಕುದಿಯುವ ಪದಾರ್ಥ ಸೋರಿಕೆ: 3 ಕಾರ್ಮಿಕರ ಸಾವು


ಬೈಲಹೊಂಗಲ (ಬೆಳಗಾವಿ ಜಿಲ್ಲೆ): ಮರಕುಂಬಿ ಗ್ರಾಮದ ಬಳಿಯ ಇನಾಮದಾರ ಸಕ್ಕರೆ ಕಾರ್ಖಾನೆಯಲ್ಲಿ ಬುಧವಾರ ಕಬ್ಬಿನ ಹಾಲು ಕುದಿಯುವ ಎವಿಸಿಪಿ ನಂ-1ರ ಕಂಪಾರ್ಟ್‌ಮೆಂಟ್ ವಾಲ್ವ್ ದುರಸ್ತಿ ವೇಳೆ ಕುದಿಯುವ ಪದಾರ್ಥ ಸೋರಿ ಮೂವರು ಕಾರ್ಮಿಕರು ಮೃತಪಟ್ಟು, ಐವರಿಗೆ ಗಂಭೀರ ಗಾಯಗಳಾಗಿವೆ.

ವಾಲ್ವ್ ದುರಸ್ತಿ ಮಾಡುತ್ತಿದ್ದ ಜಮಖಂಡಿಯ ಅಕ್ಷಯ್ ಚೋಪಡೆ (45), ನೇಸರಗಿಯ ದೀಪಕ ಮುನವಳ್ಳಿ (31), ಖಾನಾಪುರ ತಾಲ್ಲೂಕಿನ ಚಿಕ್ಕಮುನವಳ್ಳಿಯ ಸುದರ್ಶನ ಬನೋಶಿ (25) ಮೃತರು.

'ಗೋಕಾಕ ತಾಲ್ಲೂಕಿನ ಗೊಡಚಿನಮಲ್ಕಿ ಗ್ರಾಮದ ಭರತ್ ಬಸಪ್ಪ ಸಾರವಾಡಿ (27), ಗೋಕಾಕದ ರಾಘವೇಂದ್ರ ಗಿರಿಯಾಳ (35), ಅಥಣಿಯ ಮಂಜು ತೇರದಾಳ (35), ಬೈಲಹೊಂಗಲ ಅರವಳ್ಳಿಯ ಮಂಜು ಕಾಜಗಾರ (28), ಬಾಗಲಕೋಟೆ ಮರೆಗುದ್ದಿ ಗುರು ತಮ್ಮಣ್ಣವರ ಗಾಯಗೊಂಡಿದ್ದಾರೆ. ಕಾರ್ಮಿಕರ ದೇಹಗಳು ಸುಟ್ಟಿದ್ದು, ಬೆಳಗಾವಿ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಿಧನ ವಾರ್ತೆ

ಡಿವೈನ್ ಪಾರ್ಕ್‌ನ ಡಾ.ಚಂದ್ರಶೇಖರ ಉಡುಪ



ಬ್ರಹ್ಮಾವರ (ಉಡುಪಿ): ಸಾಲಿಗ್ರಾಮದ ಡಿವೈನ್ ಪಾರ್ಕ್ ಸಂಸ್ಥಾಪಕ ಡಾ.ಎ.ಚಂದ್ರಶೇಖರ ಉಡುಪ (75) ಹೃದಯಾಘಾತದಿಂದ ಬುಧವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಡಾ.ವಿವೇಕ ಉಡುಪ, ಸೊಸೆ, ಪುತ್ರಿ ಇದ್ದಾರೆ. ಅಂತ್ಯಸಂಸ್ಕಾರ ಬುಧವಾರ ಸಂಜೆ ಸಾಲಿಗ್ರಾಮದಲ್ಲಿ ನಡೆಯಿತು.

70ರ ದಶಕದಲ್ಲಿ ವೈದ್ಯಕೀಯ ವ್ಯಾಸಂಗ ಮಾಡುತ್ತಿದ್ದಾಗ ವಿವೇಕಾನಂದರ ಚಿಂತನೆಗಳ ಪ್ರಭಾವಕ್ಕೆ ಒಳಗಾಗಿ ಡಿವೈನ್ ಪಾರ್ಕ್ ಸಂಸ್ಥೆಯನ್ನು ಆರೋಗ್ಯ, ಆಧ್ಯಾತ್ಮದ ಚಿಂತನೆಯಲ್ಲಿ ಪ್ರಾರಂಭಿಸಿದ್ದರು. ಅವರಿಗೆ ದೇಶ, ವಿದೇಶದ ಲಕ್ಷಾಂತರ ಅನುಯಾಯಿಗಳಿದ್ದು, ಅಕ್ಕರೆಯಿಂದ 'ಡಾಕ್ಟರ್‌ಜೀ' ಎಂದೇ ಕರೆಯುತ್ತಿದ್ದರು.

ಡಿವೈನ್ ಪಾರ್ಕ್‌ನ ಸಹಸಂಸ್ಥೆಯಾಗಿ ಕೋಟ ಮೂಡುಗಿಳಿಯಾರಿನಲ್ಲಿ ಎಸ್‌ಎಚ್‌ಆರ್‌ಎಫ್ (ಯೋಗಬನ) ಸ್ಥಾಪಿಸಿ, ಯೋಗ, ಪ್ರಕೃತಿ, ಆಯುರ್ವೇದಗಳ ಜತೆಗೆ ಆಧ್ಯಾತ್ಮಿಕ ಚಿಕಿತ್ಸಕ ಕ್ರಮವನ್ನೂ ಮುನ್ನೆಲೆಗೆ ತಂದಿದ್ದರು.

'ರಬ್ಬರ್ ಸ್ಟ್ಯಾಂಪ್ ಗೃಹ ಸಚಿವರಾ?'

ಬಳ್ಳಾರಿ ಘಟನೆ: ಪೊಲೀಸ್ ಅಧಿಕಾರಿಗಳ ಸಭೆ ನಡೆಸಲು ಡಿಕೆಶಿ ಯಾರು?: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸುವುದಕ್ಕೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಯಾರು? ಅವರಿಗೆ ಆ ಅಧಿಕಾರ ಯಾರು ಕೊಟ್ಟರು? ರಾಜ್ಯದಲ್ಲಿ ಇರೋದು ರಬ್ಬರ್ ಸ್ಟ್ಯಾಂಪ್ ಗೃಹ ಸಚಿವರಾ' ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ.ಕುಮಾರಸ್ವಾಮಿ ಕಟುವಾಗಿ ಪ್ರಶ್ನಿಸಿದರು.



ಕುಮಾರಸ್ವಾಮಿ

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶಿವಕುಮಾರ್ ಅವರು ಬಳ್ಳಾರಿಯಲ್ಲಿ ಮಂಗಳವಾರ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದ್ದಾರೆ. ಅದಕ್ಕೆ ಗೃಹ ಸಚಿವರು ಇಲ್ಲವೇ? ರಾಜ್ಯದಲ್ಲಿ ಇರುವ ಗೃಹ ಸಚಿವರು ಹೆಬ್ಬೆಟ್ಟು ಸಚಿವರಾ' ಎಂದೂ ಪ್ರಶ್ನಿಸಿದರು.

'ಶಿವಕುಮಾರ್ ಅವರು ಯಾವ ಅಧಿಕಾರದಲ್ಲಿ ಬಳ್ಳಾರಿಯಲ್ಲಿ ಪೊಲೀಸ್ ಅಧಿಕಾರಿಗಳ ಸಭೆ ನಡೆಸಿದರು? ಗೃಹ ಇಲಾಖೆಯಲ್ಲಿ ಹಸ್ತಕ್ಷೇಪ ಯಾಕೆ? ಅವರು ಮಂತ್ರಿ ಅಷ್ಟೇ. ಕಾಂಗ್ರೆಸ್ ನಾಯಕರು, ಕಾರ್ಯಕರ್ತರು ಘಟನೆಗೆ ಕಾರಣರಾದ ಶಾಸಕರ ವಿರುದ್ಧವೇ ಕಾಂಗ್ರೆಸ್ ಸತ್ಯಶೋಧನೆ ಸಮಿತಿಗೆ ದೂರು ನೀಡಿದ್ದಾರೆ. ಹಾಗಾದರೆ ನಿಮ್ಮ ತನಿಖೆಯ ಹಣೆಬರಹ ಏನು' ಎಂದೂ ಪ್ರಶ್ನಿಸಿದರು.

ಪ್ರಕರಣ ಮುಚ್ಚಿ ಹಾಕಲು ಪ್ರಯತ್ನ: 'ಬಳ್ಳಾರಿಯ ಇಡೀ ಪ್ರಕರಣವನ್ನು ಮುಚ್ಚಿ ಹಾಕಲು ಸರ್ಕಾರ ತರಾತುರಿಯಲ್ಲಿ ಕೆಲಸ ಮಾಡುತ್ತಿದೆ. ಕೇವಲ ಬ್ಯಾನರ್ ಕಟ್ಟುವ ವಿಚಾರಕ್ಕೆ ಬೀದಿಯಲ್ಲಿ ಗುಂಡು ಹಾರಿಸ್ತಾರಾ? ಕೊಲೆಯಾದ ಕಾರ್ಯಕರ್ತನ ಮೃತದೇಹವನ್ನು ತರಾತುರಿಯಲ್ಲಿ ಸುಟ್ಟಿದ್ದು ಏಕೆ? ಕುಟುಂಬದವರಿಗೆ ಅಂತಿಮ ವಿಧಿ ವಿಧಾನ ನಡೆಸಲೂ ಅವಕಾಶ ನೀಡಿಲ್ಲ ಏಕೆ? ಇದಕ್ಕೆ ಸರ್ಕಾರ ಉತ್ತರಿಸಬೇಕು' ಎಂದು ಆಗ್ರಹಿಸಿದರು.

'ನಕಲಿ ಶ್ಯಾಮನ ಮಾತು ನಿಲ್ಲಿಸಲಿ...': 'ನಕಲಿ ಶ್ಯಾಮನ ಮಾತು ನಿಲ್ಲಿಸಿ ಗೃಹ ಸಚಿವರೇ... ಮೊದಲು ಬಳ್ಳಾರಿ ಪ್ರಕರಣವನ್ನು ಸಿಬಿಐ ತನಿಖೆಗೆ ಕೊಡಿ. ಯಾರ ಯಾರ ತಲೆ ಉರುಳುತ್ತದೆ ಎನ್ನುವುದು ನಿಮಗೆ ಗೊತ್ತಾಗುತ್ತದೆ' ಎಂದು ಅವರು ಹೇಳಿದರು.

'ಬಳ್ಳಾರಿ ಬಿಮ್ಸ್ ನಿರ್ದೇಶಕರೇ ಹೇಳುವಂತೆ ಡಾ. ಯೋಗೀಶ್ ಎಂಬವರು ಮೊದಲು ಮರಣೋತ್ತರ ಪರೀಕ್ಷೆ ಶುರು ಮಾಡಿದರು. ಅವರ ಪರೀಕ್ಷೆ ತಡವಾಯಿತು ಎಂದು ಇನ್ನೊಬ್ಬ ವೈದ್ಯ ಡಾ.ಚೇತನ್ ಅವರನ್ನು ಕರೆಸಿದ್ದಾರೆ. ಆ ವೈದ್ಯರನ್ನು ಕರೆಸಿದ್ದು ಯಾಕೆ? ಯಾರ ಆದೇಶದಂತೆ ಕರೆಸಲಾಯಿತು? ಇತಿಹಾಸದಲ್ಲಿ ಮೊದಲ ಬಾರಿಗೆ ಮರಣೋತ್ತರ ಪರೀಕ್ಷೆಗೆ ಇಬ್ಬರು ವೈದ್ಯರನ್ನು ಕರೆಸಿ ಮಾಡಿಸಿದ್ದಾರೆ' ಎಂದರು.

'ಸಚಿವ ಪ್ರಿಯಾಂಕ್ ಖರ್ಗೆ ಮೊದಲು ಗುರುಮಠಕಲ್ ಕ್ಷೇತ್ರಕ್ಕೆ ನಿಮ್ಮ ಹಾಗೂ ನಿಮ್ಮ ತಂದೆಯ ಕೊಡುಗೆ ಏನು ಅಂತ ಹೇಳಿ. ಕಲ್ಯಾಣ ಕರ್ನಾಟಕ ಬಿಡಿ, ನಿಮ್ಮ ಕ್ಷೇತ್ರ ನೋಡಿದರೆ ನೀವು ಮಾಡಿದ ಅಭಿವೃದ್ಧಿ ಏನು, ಎಂತಹದ್ದು ಎಂಬುದು ಗೊತ್ತಾಗುತ್ತದೆ' ಎಂದು ವ್ಯಂಗ್ಯವಾಡಿದರು.

'ನನ್ನ, ರೆಡ್ಡಿ ಗಲಾಟೆ; ಹಳೇ ಕಥೆ'

'ನನ್ನ ಮತ್ತು ಜನಾರ್ದನ ರೆಡ್ಡಿ ನಡುವೆ ನಡೆದ ಗಲಾಟೆ ಹಳೇ ಕಥೆ. ಅದನ್ನು ಈಗ ಮುಂದೆ ತಂದು ಏನು ಮಾಡಲು ಸಾಧ್ಯ' ಎಂದು ಎಚ್‌.ಡಿ.ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

'ನಾನು ರಾಗದ್ವೇಷ ಇಲ್ಲದೇ ಮಾಧ್ಯಮಗಳ ಮುಂದೆ ಸತ್ಯ ಹೇಳಿದ್ದೇನೆ. ಕಾಂಗ್ರೆಸ್ ಜತೆ ಕೂಡ ಸರ್ಕಾರ ಮಾಡಿದ್ದೇನೆ. ಆಗ ಬಂಡೆ ತರ ನಿಂತಿದ್ದು ಇವರೇ ತಾನೇ. ಎಲ್ಲ ಜೋಡೆತ್ತು ಎಂದರು. ಆಮೇಲೆ ಆಗಿದ್ದು ಏನು? ಬೆನ್ನಿಗೆ ಚೂರಿ ಹಾಕಿ ವಿಶ್ವಾಸದ್ರೋಹ ಎಸಗಿದರು' ಎಂದು ಹರಿಹಾಯ್ದರು.

ಸುದ್ದಿ 2 ನಿಮಿಷ

ಸಂಕ್ರಾಂತಿ: ಯಶವಂತಪುರ-ತಾಳಗುಪ್ಪ ವಿಶೇಷ ರೈಲು

ಬೆಂಗಳೂರು: ಸಂಕ್ರಾಂತಿ ಹಬ್ಬದ ಸಂದರ್ಭದಲ್ಲಿ ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಿಕೊಡಲು ನೈರುತ್ಯ ರೈಲ್ವೆಯು ಯಶವಂತಪುರ ಮತ್ತು ತಾಳಗುಪ್ಪ ನಿಲ್ದಾಣಗಳ ನಡುವೆ ಎರಡು ವಿಶೇಷ ಎಕ್ಸ್‌ಪ್ರೆಸ್ ರೈಲುಗಳನ್ನು ಓಡಿಸಲು ನಿರ್ಧರಿಸಿದೆ.

ಜ.13 ಮತ್ತು ಜ.23ರಂದು ರಾತ್ರಿ 10.45ಕ್ಕೆ ಯಶವಂತಪುರದಿಂದ ಹೊರಟು ಮರುದಿನ ಬೆಳಿಗ್ಗೆ 4.45ಕ್ಕೆ ತಾಳಗುಪ್ಪ ತಲುಪಲಿದೆ. ಜ.14 ಮತ್ತು 24ರಂದು ಬೆಳಿಗ್ಗೆ 10ಕ್ಕೆ ತಾಳಗುಪ್ಪದಿಂದ ಹೊರಟು ಸಂಜೆ 5.15ಕ್ಕೆ ಯಶವಂತಪುರ ತಲುಪಲಿದೆ.



ತುಮಕೂರು, ತಿಪಟೂರು, ಅರಸೀಕೆರೆ, ಬೀರೂರು, ತರೀಕೆರೆ, ಭದ್ರಾವತಿ, ಶಿವಮೊಗ್ಗ ಟೌನ್, ಆನಂದಪುರ ಮತ್ತು ಸಾಗರ ಜಂಬಗಾರು ನಿಲ್ದಾಣಗಳಲ್ಲಿ ವಿಶೇಷ ರೈಲುಗಳು ನಿಲುಗಡೆ ಹೊಂದಿವೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಕುಸಿದ ತಾಪಮಾನ: ಚಳಿ

ಬೆಂಗಳೂರು: ಶೀತ ಗಾಳಿ ಹಾಗೂ ಮೋಡ ಕವಿದ ವಾತಾವರಣದಿಂದ ರಾಜ್ಯದ ವಿವಿಧೆಡೆ ತಾಪಮಾನ ಕುಸಿಯುತ್ತಿದ್ದು, ಮುಂದಿನ ಐದು ದಿನಗಳಲ್ಲಿ ಕನಿಷ್ಠ ಉಷ್ಣಾಂಶವು 2ರಿಂದ 3 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮುಂದಿನ ಎರಡು ದಿನ ಬೀದರ್, ಕಲಬುರಗಿ, ವಿಜಯಪುರ, ಬಾಗಲಕೋಟೆ, ಬೆಳಗಾವಿ, ಧಾರವಾಡ ಮತ್ತು ಗದಗ ಜಿಲ್ಲೆಯಲ್ಲಿ ಶೀತಗಾಳಿ ಬೀಸುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರುವ ಸಂಭವವಿದ್ದು, ಮುಂಜಾನೆ ಮಂಜು ಕವಿಯುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ರಾಜ್ಯದ ವಿವಿಧೆಡೆ ಕನಿಷ್ಠ ಉಷ್ಣಾಂಶವು ಸಾಮಾನ್ಯಕ್ಕಿಂತ 2ರಿಂದ 3 ಡಿಗ್ರಿ ಸೆಲ್ಸಿಯಸ್ ಇಳಿಕೆಯಾಗಿತ್ತು.

ಬೀದರ್‌ನಲ್ಲಿ ಕನಿಷ್ಠ ಉಷ್ಣಾಂಶವು 2.1 ಡಿಗ್ರಿ ಸೆಲ್ಸಿಯಸ್ ನಷ್ಟು ಕುಸಿತವಾಗಿ, 9.5 ಡಿಗ್ರಿ ಸೆಲ್ಸಿಯಸ್ ವರದಿಯಾಗಿತ್ತು. ಧಾರವಾಡದಲ್ಲಿ ಕನಿಷ್ಠ ಉಷ್ಣಾಂಶ 9.8 ಡಿಗ್ರಿ ಸೆಲ್ಸಿಯಸ್‌ಗೆ ಇಳಿಕೆಯಾಗಿತ್ತು. ಕರಾವಳಿ ಹೊರತುಪಡಿಸಿ ಉತ್ತರ ಹಾಗೂ ದಕ್ಷಿಣ ಒಳನಾಡಿನ ವಿವಿಧೆಡೆ ಉಷ್ಣಾಂಶ ಕುಸಿತವಾಗಿತ್ತು ಎಂದು ಇಲಾಖೆ ತಿಳಿಸಿದೆ.

ಬಳ್ಳಾರಿ ವಲಯದ ಐಜಿಪಿ ವರ್ಗಾವಣೆ: ಗೃಹ ಸಚಿವ ಜಿ.ಪರಮೇಶ್ವರ ಹೇಳಿಕೆ

'ವರ್ಗಾಯಿಸಿದ್ದು ಸಿ.ಎಂ, ನಾನಲ್ಲ'

ಪ್ರಜಾವಾಣಿ ವಾರ್ತೆ

ತುಮಕೂರು: 'ಬಳ್ಳಾರಿ ವಲಯದ ಐಜಿಪಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ವರ್ಗಾವಣೆ ಮಾಡಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಹೊರತು ನಾನಲ್ಲ; ಇದರಲ್ಲಿ ವಿಶೇಷವಿಲ್ಲ' ಎಂದು ಗೃಹ ಸಚಿವ ಜಿ.ಪರಮೇಶ್ವರ ಇಲ್ಲಿ ಪ್ರತಿಕ್ರಿಯಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಧಿಕಾರಿಗಳ ವರ್ಗಾವಣೆಗೆ ಏನು ಕಾರಣ ಕೊಡಲು ಸಾಧ್ಯ? ಮುಖ್ಯಮಂತ್ರಿ ಮಾಡಿದ್ದಾರೆ. ನೀವು ಹೇಗಾದರೂ ತಿಳಿದುಕೊಳ್ಳಿ' ಎಂದರು.

'ಸತೀಶ್ ರೆಡ್ಡಿ ಗನ್‌ಮ್ಯಾನ್ ಗುಂಡಿಗೆ ರಾಜಶೇಖರ ಬಲಿ'

ಒಂದನೇ ಪುಟದಿಂದ...

'ಬ್ಯಾನರ್ ವಿಚಾರದ ಗಲಾಟೆ ಮಧ್ಯಾಹ್ನ 2.30ಕ್ಕೆ ಶುರುವಾಗಿತ್ತು. ಇದನ್ನು ನಿಯಂತ್ರಿಸಲು ಪೊಲೀಸರಿಗೆ ಸಾಧ್ಯವಿತ್ತು. ಸತೀಶ್ ರೆಡ್ಡಿ ಸಂಜೆ 4ಕ್ಕೆ ಸ್ಥಳಕ್ಕೆ ತೆರಳಿದ್ದರು. ಅಲ್ಲಿಯವರೆಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಗೂ ಐಜಿಪಿ ಏನು ಮಾಡುತ್ತಿದ್ದರು? ಐಜಿ ಅವರನ್ನು ಮುಖ್ಯಮಂತ್ರಿ ವರ್ಗಾವಣೆ ಮಾಡಿದ್ದಾರೆ. ಇದಕ್ಕೆ ಬಲವಾದ ಕಾರಣ ಇದೆ' ಎಂದು ಜಗಳೂರಿನಲ್ಲಿ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯೆ ನೀಡಿದರು.

'ಶಾಸಕ ಭರತ್ ರೆಡ್ಡಿ ಅವರು ಸ್ಥಳಕ್ಕೆ ಧಾವಿಸಿದ್ದರಿಂದ ಪರಿಸ್ಥಿತಿ ನಿಯಂತ್ರಣಕ್ಕೆ ಬಂತು ಎಂದು ಐಜಿಪಿಯವರೇ ವಿವರಣೆ ನೀಡಿದ್ದಾರೆ. ಸಂಜೆ 7ರ ಬಳಿಕ ಭರತ್ ರೆಡ್ಡಿ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ನಿಯಂತ್ರಿಸಿದ್ದರು. ರಾಜಶೇಖರ ಅವರ ಮರಣೋತ್ತರ ಪರೀಕ್ಷೆಯನ್ನು ಎರಡು ಬಾರಿ ಮಾಡಿಲ್ಲ. ಇದು ಸಾಧ್ಯವೂ ಇಲ್ಲ' ಎಂದರು.

'ರಾಜಶೇಖರ ಅವರ ಸಾವಿಗೆ ಬೆಲೆ ಕಟ್ಟಲಾಗದು. ₹50 ಕೋಟಿ ಕೊಟ್ಟರೂ ಅವರನ್ನು ಜೀವಂತವಾಗಿ ತರಲು ಆಗುವುದಿಲ್ಲ. ಅವರ ಕುಟುಂಬಕ್ಕೆ ಸಣ್ಣ ಕಾಣಿಕೆ ನೀಡಿದ್ದೇವೆ. ₹25 ಲಕ್ಷ ಕೊಟ್ಟಿರುವುದಾಗಿ ಎಲ್ಲಿಯೂ ಹೇಳಿಲ್ಲ. ಒಂದು ವೇಳೆ ಇಷ್ಟು ಮೊತ್ತವನ್ನು ಕೊಟ್ಟಿದ್ದರೆ ಎಚ್‌.ಡಿ. ಕುಮಾರಸ್ವಾಮಿ ಖುಷಿಪಡಬೇಕಿತ್ತು. ಬಡವರಿಗೆ ಸಹಾಯ ಮಾಡಿದರೆ ಏಕಿಷ್ಟು ಅಸಹನೆ' ಎಂದು ಪ್ರಶ್ನಿಸಿದರು.

> ಬಳ್ಳಾರಿ ಗಲಾಟೆಗೆ ಅಲ್ಲಿ ಬ್ಯಾನರ್ ಬಿಚ್ಚಿದ್ದೇ ಪ್ರಚೋದನೆಯಾಯಿತು. ಗಲಾಟೆ ಮತ್ತು ಒಬ್ಬನ ಸಾವಿಗೆ ಪ್ರಚೋದಿಸಿದ್ದು ಯಾರು? ಅವರಿಗೆ ಅಸೂಯೆ ಇದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಜ.17ರಂದು ಬಳ್ಳಾರಿಯಲ್ಲಿ ಬಿಜೆಪಿಯಿಂದ ಪ್ರತಿಭಟನೆ ನಡೆಯಲಿದೆ. ನನ್ನ ಮನೆ ಮೇಲಿನ ದಾಳಿ ಬಗ್ಗೆ ವ್ಯಂಗ್ಯವಾಡಿದ ಡಿಕೆಶಿ ಅವರಿಗೆ ದುರ್ಯೋಧನನ ಅಹಂಕಾರ ಬಂದಿದೆ
> **ಜನಾರ್ದನ ರೆಡ್ಡಿ,** ಶಾಸಕ

> ಭರತ್ ರೆಡ್ಡಿ ಕಡೆಯವರೇ ನೇರವಾಗಿ ಹಿಂದಿನಿಂದ ಗುಂಡು ಹೊಡೆದು ಕಾಂಗ್ರೆಸ್ ಕಾರ್ಯಕರ್ತನ ಕೊಂದಿದ್ದಾರೆ. ಇದನ್ನು ತಿರುಚುವ ಪ್ರಯತ್ನದಲ್ಲೂ ವಿಫಲರಾಗಿದ್ದಾರೆ
> **ಬಿ.ಶ್ರೀರಾಮುಲು,** ಮಾಜಿ ಸಚಿವ

> ಬಳ್ಳಾರಿಯಲ್ಲಿ ಹಲವು ಘಟನೆಗಳು ನಡೆದ ಕಾರಣ ನನಗೆ ಸ್ಪಷ್ಟ ನಿರ್ದೇಶನಗಳಿವೆ. ಅಧಿಕಾರಿಗಳೊಂದಿಗೆ ತುರ್ತು, ಸಂಕ್ಷಿಪ್ತ ಸಭೆ ನಡೆಸಿದ್ದೇನೆ
> **ಪಿ.ಎಸ್‌.ಹರ್ಷ,** ಐಜಿಪಿ, ಬಳ್ಳಾರಿ ವಲಯ

ಬಳ್ಳಾರಿ ಘಟನೆ: ಡಿಐಜಿ ಎತ್ತಂಗಡಿ

ಒಂದನೇ ಪುಟದಿಂದ...

ಎಸ್‌ಪಿ ಆಗಿ ಡಿ.31ರಂದು ಅಧಿಕಾರ ಸ್ವೀಕರಿಸಿದ್ದ ಪವನ್ ನೆಜ್ಜೂರ್ ಅವರನ್ನು ಘರ್ಷಣೆಯ ಕಾರಣಕ್ಕೆ ಅಮಾನತು ಮಾಡಲಾಗಿತ್ತು.

ಸ್ಥಳ ಪರಿಶೀಲಿಸಿದ ಹರ್ಷ: ಬುಧವಾರವೇ ಕರ್ತವ್ಯಕ್ಕೆ ವರದಿ ಮಾಡಿಕೊಂಡ ಪಿ.ಎಸ್‌.ಹರ್ಷ ಅವರು ಘರ್ಷಣೆ ನಡೆದಿದ್ದ ಅವ್ವಂಬಾವಿಗೆ ತೆರಳಿ ಸ್ಥಳ ಪರಿಶೀಲಿಸಿದರು. ಅಧಿಕಾರಿಗಳಿಂದ ಮಾಹಿತಿ ಸಂಗ್ರಹಿಸಿ, ಸೂಚನೆಗಳನ್ನೂ ನೀಡಿದರು.

ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕಾನೂನು ಬದ್ಧ, ನಿಷ್ಪಕ್ಷಪಾತ ಕ್ರಮ, ಕಾನೂನು ಸುವ್ಯವಸ್ಥೆ ಕುರಿತು ಸರ್ಕಾರ, ಹಿರಿಯ ಅಧಿಕಾರಿಗಳು ನಿರ್ದೇಶನಗಳನ್ನು ನೀಡಿದ್ದಾರೆ' ಎಂದರು.

'ಬಳ್ಳಾರಿ ಘರ್ಷಣೆ ಬಗ್ಗೆ ಪರಿಶೀಲನೆ ನಡೆಸಬೇಕಿದೆ. ಅಧಿಕಾರಿಗಳೊಂದಿಗೆ ವಿಚಾರ ವಿನಿಮಯ ಆಗಬೇಕಿದೆ. ಹೊಸ ಎಸ್‌ಪಿ ಬಂದ ಬಳಿಕ ಉಳಿದ ವಿಚಾರಗಳನ್ನು ಚರ್ಚೆ ಮಾಡುತ್ತೇನೆ ಎಂದೂ ತಿಳಿಸಿದರು.

ವಿಡಿಯೊ ಬಿಡುಗಡೆ ಮಾಡಿದ ಬಿಜೆಪಿ: ಜ.1ರಂದು ನಗರದ ಅವ್ವಂಬಾವಿಯಲ್ಲಿ ನಡೆದಿದ್ದ ಘರ್ಷಣೆ ವೇಳೆ ಕಾಂಗ್ರೆಸ್ ಕಾರ್ಯಕರ್ತ ರಾಜಶೇಖರ ಅವರ ಮೇಲೆ ಖಾಸಗಿ ಅಂಗರಕ್ಷಕನೊಬ್ಬ ಗುಂಡು ಹಾರಿಸುತ್ತಿದ್ದಾನೆ ಎನ್ನಲಾದ ವಿಡಿಯೊವನ್ನು ಶಾಸಕ ಜನಾರ್ದನ ರೆಡ್ಡಿ ಬಿಡುಗಡೆ ಮಾಡಿದರು.

ಪ್ರತಿಯಾಗಿ ಶಾಸಕ ಭರತ್ ರೆಡ್ಡಿ ಅವರ ಕಚೇರಿಯಿಂದಲೂ ಘಟನೆಗೆ ಸಂಬಂಧಿಸಿದ ವಿಡಿಯೊಗಳು ಬಿಡುಗಡೆ ಆಗಿವೆ. ಶಾಸಕ ಜನಾರ್ದನ ರೆಡ್ಡಿ ಅವರ ನಿವಾಸದ ಮೇಲೆ ವ್ಯಕ್ತಿಯೊಬ್ಬ ನಿಂತಿರುವುದು ವಿಡಿಯೊದಲ್ಲಿದೆ.

ಗಣಿತ ಪ್ರಶ್ನೆಪತ್ರಿಕೆ ಸೋರಿಕೆ: ಎಫ್‌ಐಆರ್

ಶಿವಮೊಗ್ಗ: ರಾಜ್ಯದಾದ್ಯಂತ ಮಂಗಳವಾರ ನಡೆದ ದ್ವಿತೀಯ ಪಿಯುಸಿ ಪೂರ್ವಸಿದ್ಧತಾ ಪರೀಕ್ಷೆಯ ವೇಳೆ ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ ಗಣಿತ ವಿಷಯದ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ. ಈ ಕುರಿತು ಇಲ್ಲಿನ ಕೋಟೆ ಪೊಲೀಸ್ ಠಾಣೆಯಲ್ಲಿ ಬುಧವಾರ ಎಫ್‌ಐಆರ್ ದಾಖಲಾಗಿದೆ.

'ಸೋರಿಕೆಯಾದ ಪ್ರಶ್ನೆಪತ್ರಿಕೆಯನ್ನು ಸಾರ್ವಜನಿಕರೊಬ್ಬರು ಪದವಿಪೂರ್ವ ಶಿಕ್ಷಣ ಇಲಾಖೆಯ ತುಮಕೂರು ಜಿಲ್ಲಾ ಉಪ ನಿರ್ದೇಶಕರಿಗೆ (ಡಿಡಿಪಿಯು) ಕಳುಹಿಸಿದ್ದಾರೆ. ಪ್ರಶ್ನೆಪತ್ರಿಕೆಯ ವಾಟರ್‌ಮಾರ್ಕ್‌ನಿಂದ ಅದು ಶಿವಮೊಗ್ಗ ಜಿಲ್ಲೆಗೆ ಸಂಬಂಧಿಸಿದ್ದು ಎಂಬುದು ಗೊತ್ತಾಗಿದೆ. ನಂತರ ಅದನ್ನು ಅವರು ನಮಗೆ ಕಳಿಸಿಕೊಟ್ಟಿದ್ದರು' ಎಂದು ಡಿಡಿಪಿಯು ಚಂದ್ರಪ್ಪ ಗುಂಡಪಲ್ಲೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇವರಾಜ ಅರಸು ಅವರ ದಾಖಲೆ ಸರಿಗಟ್ಟಿದ ಹಿನ್ನೆಲೆಯಲ್ಲಿ ಹಾವೇರಿಯಲ್ಲಿ ನಡೆದ ಹಿಮ್ಸ್ ಉದ್ಘಾಟನಾ ಸಮಾರಂಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಿದ್ದರಾಮಯ್ಯ ಅವರಿಗೆ ಕೇಕ್ ತಿನ್ನಿಸಿದರು. ಮೇಲ್ಮನೆ ಮುಖ್ಯ ಸಚೇತಕ ಸಲೀಂ ಅಹ್ಮದ್, ಸಚಿವ ಎಚ್‌.ಕೆ. ಪಾಟೀಲ ಇದ್ದರು

ಕಲಬುರಗಿ ಜೈಲಿನಲ್ಲಿ ಕೈದಿಗಳ ಮಾರಾಮಾರಿ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕೇಂದ್ರ ಕಾರಾಗೃಹದಲ್ಲಿ, ಬೆಂಗಳೂರಿನಿಂದ ಸ್ಥಳಾಂತರಿಸಿದ್ದ ಕೈದಿ ಮತ್ತು ಈ ಮೊದಲೇ ಇದ್ದ ಕೈದಿಗಳ ನಡುವೆ ಮಾರಾಮಾರಿ ನಡೆದಿದೆ. ಜೈಲು ಸಿಬ್ಬಂದಿಯೊಬ್ಬರಿಗೆ ಸಣ್ಣಪುಟ್ಟ ಗಾಯವಾಗಿದೆ.

ಟಿ.ವಿ ನೋಡುವ ವಿಚಾರಕ್ಕೆ ಮಂಗಳವಾರ ತಡರಾತ್ರಿ ಶುರುವಾದ ಅಸಮಾಧಾನ ಬುಧವಾರ ಬೆಳಿಗ್ಗೆ 9.45ರ ಹೊತ್ತಿಗೆ ಹೊಡೆದಾಟಕ್ಕೆ ತಿರುಗಿ ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು. ಪರಿಸ್ಥಿತಿ ಅರಿತ ಜೈಲು ಸಿಬ್ಬಂದಿ, ಅಧಿಕಾರಿಗಳು ಕೂಡಲೇ ಮಧ್ಯ ಪ್ರವೇಶಿಸಿ ಎಲ್ಲರನ್ನು ಚದುರಿಸಿ ಕೈದಿಗಳನ್ನು ಲಾಕ್ ಮಾಡಿದ್ದಾರೆ.

ಮಾಹಿತಿ ತಿಳಿದ ಧಾವಿಸಿದ ಸಿಎಆರ್‌ನ ತುಕಡಿ ಸೇರಿದಂತೆ ಸ್ಥಳೀಯ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದ್ದಾರೆ. 'ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ ಸ್ಥಳಾಂತರಿಸಿದ್ದ ವಿಚಾರಣಾಧೀನ ಕೈದಿ ವೆಂಕಟರಮಣ ಸ್ವಾಮಿ ಹಾಗೂ ಸ್ಥಳೀಯ ಕೈದಿಗಳ ನಡುವೆ ಮಂಗಳವಾರ ತಡರಾತ್ರಿ ಗಲಾಟೆ ನಡೆದಿದೆ. ಬ್ಯಾರಕ್-1ರಲ್ಲಿ ಇದ್ದ ಟಿ.ವಿ ಧ್ವಂಸಗೊಳಿಸಲಾಗಿದೆ. ಬುಧವಾರ ಬೆಳಿಗ್ಗೆ ಮತ್ತೆ ಮಾರಾಮಾರಿ ನಡೆದಿದೆ' ಎಂದು ಮೂಲಗಳು ತಿಳಿಸಿವೆ.

ಸ್ಥಳಕ್ಕೆ ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್‌.ಡಿ, ಡಿಸಿಪಿ (ಅಪರಾಧ) ಪ್ರವೀಣ ನಾಯಕ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ.

> ಟಿ.ವಿ ವಿಚಾರಕ್ಕೆ ಗಲಾಟೆ ನಡೆದಿದ್ದು, ಜೈಲು ಸಿಬ್ಬಂದಿ ಪರಿಸ್ಥಿತಿ ನಿಯಂತ್ರಿಸಿದ್ದಾರೆ. ಕೂಲಂಕಷವಾಗಿ ಪರಿಶೀಲಿಸಿ ತಪ್ಪಿತಸ್ಥ ಕೈದಿಗಳ ವಿರುದ್ಧ ದೂರು ದಾಖಲಿಸುತ್ತೇವೆ
> **ಆರ್‌.ಅನಿತಾ,** ಮುಖ್ಯ ಜೈಲು ಅಧೀಕ್ಷಕಿ

ಕೈದಿಗಳಿಗೆ 'ರಾಜಾತಿಥ್ಯ' ನೀಡುತ್ತಿರುವ ಹಾಗೂ 'ಜೈಲಿನ ಅಧಿಕಾರಿಗಳು ಹಣಕ್ಕೆ ಬೇಡಿಕೆ ಇಟ್ಟಿದ್ದಾರೆ' ಎಂದು ಆರೋಪಿಸಲಾಗಿದ್ದ ವಿಡಿಯೊ ಜಾಲತಾಣಗಳಲ್ಲಿ ಇತ್ತೀಚಿಗೆ ಹಂಚಿಕೆ ಆಗಿ ಸದ್ದು ಮಾಡಿತ್ತು.

ಯಾರೀತ ವೆಂಕಟರಮಣ?: 'ಬೆಂಗಳೂರು ಮೂಲದ ವೆಂಕಟರಮಣ ಸ್ವಾಮಿ ವಿರುದ್ಧ ಎರಡು ಕೊಲೆ ಪ್ರಕರಣಗಳಿವೆ. ಒಂದು ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿದ್ದ ವೆಂಕಟರಮಣ ಸ್ವಾಮಿ, 2006ರಿಂದ 2019ರ ತನಕ ಶಿಕ್ಷೆ ಅನುಭವಿಸಿ ಬಿಡುಗಡೆಯಾಗಿದ್ದ. ಬಳಿಕ ಮತ್ತೊಂದು ಕೊಲೆ ಕೃತ್ಯದಲ್ಲಿ ಸಿಕ್ಕಿಬಿದ್ದು ಬೆಂಗಳೂರಿನ ಜೈಲು ಸೇರಿದ್ದ. ಆ ಜೈಲಿನಲ್ಲೂ ಒರಟಾಗಿ ನಡೆದುಕೊಂಡಿದ್ದ. ಎರಡು ಕೊಲೆ ಮಾಡಿದ್ದಾಗಿ ಸಹ ಕೈದಿಗಳ ಮೇಲೆ ಹಕ್ಕುಸಾಧಿಸಲು ಹವಣಿಸುತ್ತಿದ್ದ. ಪರಿಣಾಮ ಸ್ಥಳಾಂತರ ಶಿಕ್ಷೆಗೆ ಒಳಗಾದ ಆತನನ್ನು 2025ರ ಅಕ್ಟೋಬರ್ 17ರಂದು ಕಲಬುರಗಿ ಜೈಲಿಗೆ ಸ್ಥಳಾಂತರಿಸಲಾಗಿತ್ತು' ಎಂದು ಜೈಲಿನ ಮೂಲಗಳು ಹೇಳಿವೆ.

ಭಾರತಿ ವಿಷ್ಣುವರ್ಧನಗೆ ಸಿದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿ

ಅಮೀನಗಡ (ಬಾಗಲಕೋಟೆ ಜಿಲ್ಲೆ): 'ಸಿದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿ'ಗೆ ಬಹುಭಾಷಾ ನಟಿ ಭಾರತಿ ವಿಷ್ಣುವರ್ಧನ ಮತ್ತು 'ಸಿದ್ಧಶ್ರೀ ರಾಜ್ಯ ಪ್ರಶಸ್ತಿ'ಗೆ ಹಿರಿಯ ರಂಗ ಕಲಾವಿದೆ ಮಾಲತಿ ಸುಧೀರ್ ಅವರನ್ನು ಆಯ್ಕೆ ಮಾಡಲಾಗಿದೆ.

'ಸಿದ್ಧಶ್ರೀ ರಾಷ್ಟ್ರೀಯ ಪ್ರಶಸ್ತಿ ₹50 ಸಾವಿರ ಮತ್ತು ರಾಜ್ಯ ಪ್ರಶಸ್ತಿ ₹25 ಸಾವಿರ ನಗದು ಒಳಗೊಂಡಿದೆ' ಎಂದು ಸಿದ್ಧನಕೊಳ್ಳದ ಧರ್ಮಾಧಿಕಾರಿ ಶಿವಕುಮಾರ ಸ್ವಾಮೀಜಿ ತಿಳಿಸಿದ್ದಾರೆ.



ಭಾರತಿ ವಿಷ್ಣುವರ್ಧನ



ಮಾಲತಿ ಸುಧೀರ್

'ಜನವರಿ 14ರಿಂದ 16ರವರೆಗೆ ಸಿದ್ಧನಕೊಳ್ಳದಲ್ಲಿ ಸಿದ್ಧಶ್ರೀ ರಾಷ್ಟ್ರೀಯ ಉತ್ಸವ, ಅಂತರರಾಷ್ಟ್ರೀಯ ಚಲನ ಚಿತ್ರೋತ್ಸವ ನಡೆಯಲಿದೆ. ಜ. 15ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

ಇರಿತ; ನಾಲ್ವರ ಬಂಧನ

ಬೆಳಗಾವಿ: ಇಲ್ಲಿನ ಬಿ.ಶಂಕರಾನಂದ ಮಾರ್ಗದಲ್ಲಿ ಮಂಗಳವಾರ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಪುತ್ರ ಮೃಣಾಲ್ ಅವರ ಕಾರು ಚಾಲಕ ಬಸವಂತ ಕಡೋಲ್ಕರ ಅವರಿಗೆ ಚಾಕುವಿನಿಂದ ಇರಿದ ಪ್ರಕರಣ ಸಂಬಂಧ ಬುಧವಾರ ನಾಲ್ವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ತಾಲ್ಲೂಕಿನ ಗೋಜಗಾದ ಶಿವಯ್ಯ ಪೂಜಾರಿ, ಮಿತೇಶ ಬಡಿಗೇರ, ಬೆಳಗುಂದಿಯ ಮೋನಪ್ಪ ಪಾಟೀಲ, ಸಂಪತ ಕಡೋಲ್ಕರ ಬಂಧಿತರು.

'ನಕ್ಸಲ್ ಮುಕ್ತ ಕರ್ನಾಟಕ'ವಾಗಿ ಇಂದಿಗೆ ಒಂದು ವರ್ಷ

ಕಾಡಿನಿಂದ ಮರಳಿ ಜೈಲಿನಲ್ಲಿ ಉಳಿದರು

• ವಿಜಯಕುಮಾರ್ ಎಸ್‌.ಕೆ.

ಚಿಕ್ಕಮಗಳೂರು: 'ನಕ್ಸಲ್ ಮುಕ್ತ ಕರ್ನಾಟಕ' ಎಂದು ಸರ್ಕಾರ ಘೋಷಿಸಿ ವರ್ಷವಾಗಿದೆ. ಆರು ನಕ್ಸಲ್ ಹೋರಾಟಗಾರರು ಮುಖ್ಯವಾಹಿನಿಗೆ ಸೇರಿ ಜ.8ಕ್ಕೆ ವರ್ಷವಾಗಿದ್ದು, ಅಷ್ಟೂ ಜನ ಜೈಲಿನಲ್ಲೇ ಇದ್ದಾರೆ.

ನಕ್ಸಲ್ ಪುನರ್ವಸತಿ ಸಮಿತಿ ಮತ್ತು ಶಾಂತಿಗಾಗಿ ನಾಗರಿಕರ ವೇದಿಕೆ ನೇತೃತ್ವದಲ್ಲಿ 2025ರ ಜ.8ರಂದು ಮುಂಡಗಾರು ಲತಾ, ಸುಂದರಿ ಕುತ್ಲೂರು, ವನಜಾಕ್ಷಿ ಬಾಳೆಹೊಳೆ, ಮಾರೆಪ್ಪ ಅರೋಲಿ, ಕೆ.ವಸಂತ, ಟಿ.ಎನ್‌.ಜಿಷಾ ಅವರು ಮುಖ್ಯವಾಹಿನಿಗೆ ಮರಳಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಷ್ಟೂ ಜನರನ್ನು ಬರ ಮಾಡಿಕೊಂಡರು. ನಕ್ಸಲ್ ಮುಕ್ತ ರಾಜ್ಯ ಎಂದು ಘೋಷಣೆ ಮಾಡಿದರು.



2025ರ ಜ.8ರಂದು ಕಾಡಿನಿಂದ ಹೊರ ಬಂದ ನಕ್ಸಲರ ತಂಡ

ಮುಖ್ಯವಾಹಿನಿಗೆ ಬಂದವರಲ್ಲಿ 'ಎ' ವರ್ಗದ ಪ್ರಕರಣಗಳಿರುವ ನಕ್ಸಲರಿಗೆ ₹7.50 ಲಕ್ಷ, 'ಬಿ' ವರ್ಗದ ಪ್ರಕರಣ ಹೊಂದಿದವರಿಗೆ ₹4 ಲಕ್ಷ ನೆರವು ಸಿಗಲಿದೆ. 3 ಹಂತಗಳಲ್ಲಿ ನೆರವು ದೊರಕಲಿದೆ ಎಂದು ಸರ್ಕಾರ ತಿಳಿಸಿತ್ತು.

ಇದಾದ ಬಳಿಕ 2025-26ನೇ ಸಾಲಿನ ಬಜೆಟ್‌ನಲ್ಲಿ ನಕ್ಸಲ್ ಪ್ರದೇಶಗಳ ಮೂಲಸೌಕರ್ಯ ಅಭಿವೃದ್ಧಿಗೆ ₹10 ಕೋಟಿ ಅನುದಾನ ಘೋಷಣೆಯನ್ನು ಮುಖ್ಯಮಂತ್ರಿ ಮಾಡಿದರು. ₹9.12 ಕೋಟಿ ಬಿಡುಗಡೆಯಾಗಿದ್ದು, ಉಡುಪಿ ಮತ್ತು ಚಿಕ್ಕಮಗಳೂರು ಜಿಲ್ಲೆಯಲ್ಲಿ ಮುಖ್ಯವಾಹಿನಿಗೆ ಬಂದ ನಕ್ಸಲರ ಪ್ರೋತ್ಸಾಹ ಧನಕ್ಕಾಗಿ(ಸ್ವಯಂ ಉದ್ಯೋಗಕ್ಕೆ) ₹27.10 ಲಕ್ಷ ನೀಡಿದೆ. ಮೂಲಸೌಕರ್ಯ ಕಾಮಗಾರಿಗಾಗಿ ಉಡುಪಿ ಜಿಲ್ಲೆಗೆ ₹2 ಕೋಟಿ, ಚಿಕ್ಕಮಗಳೂರು ಜಿಲ್ಲೆಗೆ ₹7.12 ಕೋಟಿ ನೀಡಿದೆ.

'ಮುಖ್ಯವಾಹಿನಿಗೆ ಬರುವ ವೇಳೆಯಲ್ಲಿ ನಕ್ಸಲರು ಇಟ್ಟಿದ್ದ ಪ್ರಮುಖ 18 ಬೇಡಿಕೆಗಳಲ್ಲಿ ಒಂದೂ ಈಡೇರಿಲ್ಲ' ಎಂದು ನಕ್ಸಲರ ಸಂಬಂಧಿಕರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಸಿ.ಎಂ ಭೇಟಿ ಇಂದು

ಮುಖ್ಯವಾಹಿನಿಗೆ ಮರಳಿದ ನಕ್ಸಲರ ವಿರುದ್ಧದ ಪ್ರಕರಣ ಸೇರಿ ಎಲ್ಲಾ ವಿಷಯಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಲಾಗುತ್ತಿದೆ ಎಂದು ಶಾಂತಿಗಾಗಿ ನಾಗರಿಕ ವೇದಿಕೆಯ ಕೆ.ಎಲ್‌.ಅಶೋಕ್ ತಿಳಿಸಿದರು. ವಿಚಾರಣೆಗೆ ವಿಶೇಷ ನ್ಯಾಯಾಲಯ ಸ್ಥಾಪಿಸುವ ಭರವಸೆಯನ್ನು ಸರ್ಕಾರ ನೀಡಿತ್ತು. ಇನ್ನೂ ನ್ಯಾಯಾಲಯ ಸ್ಥಾಪನೆಯಾಗಿಲ್ಲ. ಕಾನೂನು ಪ್ರಕ್ರಿಯೆ ಸ್ವಲ್ಪವೂ ಮುಂದುವರಿದಿಲ್ಲ. ಛತ್ತೀಸಗಢ ಮಾದರಿಯಲ್ಲಿ ಪ್ರಕರಣ ಹಿಂಪಡೆಯಬೇಕು ಎಂದು ಅವರು ಆಗ್ರಹಿಸಿದರು.

ಮಹಿಳೆ ವಿವಸ್ತ್ರ ಆರೋಪ, ಪ್ರತಿಭಟನೆ



ಕೇಶ್ವಾಪುರ ಠಾಣೆ ಎದುರು ಬಿಜೆಪಿ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ಒಂದನೇ ಪುಟದಿಂದ...

'ಈ ಪ್ರಕರಣಕ್ಕೆ ಸಂಬಂಧಿಸಿ ಸುಜಾತಾ ಹಂಡಿ ಅವರನ್ನು ಜನವರಿ 5ರಂದು ಪೊಲೀಸರು ವಶಕ್ಕೆ ಪಡೆಯುವಾಗ, ಅವರನ್ನು ವಿವಸ್ತ್ರಗೊಳಿಸಿ ಅವಮಾನಿಸಿದ್ದಾರೆ. ದಲಿತ ಮಹಿಳೆ ಎಂದು ಗೊತ್ತಿದ್ದೂ ಪಾಲಿಕೆ ಸದಸ್ಯೆಯ ಕುಮ್ಮಕ್ಕಿನಿಂದ ಬಿಜೆಪಿ ಕಾರ್ಯಕರ್ತೆ ಎಂದು ಅಮಾನುಷವಾಗಿ ವರ್ತಿಸಿದ್ದಾರೆ' ಎಂದು ಆರೋಪಿಸಿ ಬಿಜೆಪಿ ಮುಖಂಡರು ನಗರದಲ್ಲಿ ಪ್ರತಿಭಟನೆ ನಡೆಸಿದರು. ಮಹಿಳೆಯನ್ನು ವಶಕ್ಕೆ ಪಡೆಯುವಾಗ ಅವರು ವಿವಸ್ತ್ರವಾಗಿರುವ ಎರಡು ವಿಡಿಯೊಗಳು ಜಾಲತಾಣದಲ್ಲಿ ಹಂಚಿಕೆಯಾಗಿದ್ದವು.

ಈ ಬಗ್ಗೆ ಮಾಧ್ಯಮದವರಿಗೆ ಸ್ಪಷ್ಟನೆ ನೀಡಿದ್ದ ಪೊಲೀಸ್ ಕಮಿಷನರ್ ಎನ್‌.ಶಶಿಕುಮಾರ್, 'ಮಹಿಳೆಯು ನಮ್ಮ ಸಿಬ್ಬಂದಿಯ ಮೇಲೆಯೇ ಹಲ್ಲೆ ನಡೆಸಿ, ತಾವೇ ವಿವಸ್ತ್ರವಾಗಿ ಡ್ರಾಮಾ ಮಾಡಿದ್ದಾರೆ. ಇದರಲ್ಲಿ ಪೊಲೀಸರ ತಪ್ಪೇನೂ ಇಲ್ಲ. ನಮ್ಮಲ್ಲಿ ವಿಡಿಯೊಗಳು ಇವೆ' ಎಂದಿದ್ದರು. ಆ ವಿಡಿಯೊ ಸಹ ಹಂಚಿಕೆಯಾಗಿತ್ತು.

ಇತ್ತ, ಬಿಜೆಪಿ ಮಹಿಳಾ ಮೋರ್ಚಾ ಕಾರ್ಯಕರ್ತರು, 'ಯಾವುದೇ ಮಹಿಳೆ ತನ್ನ ಮರ್ಯಾದೆಯನ್ನು ಈ ರೀತಿ ಹರಾಜು ಹಾಕಿಕೊಳ್ಳುವುದಿಲ್ಲ. ವಶಕ್ಕೆ ಪಡೆಯುವಾಗ ಪೊಲೀಸರೇ ವಿವಸ್ತ್ರಗೊಳಿಸಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿ, ಠಾಣೆ ಎದುರು ಪ್ರತಿಭಟನೆ ಆರಂಭಿಸಿದ್ದರು.

'ಇನ್‌ಸ್ಪೆಕ್ಟರ್ ಕೆ.ಎಸ್‌. ಹಟ್ಟಿ ಮತ್ತು ಮಹಿಳೆ ಬಂಧನದ ವೇಳೆ ಇದ್ದ ಎಲ್ಲ ಸಿಬ್ಬಂದಿ ಅಮಾನತು ಮಾಡಬೇಕು. ಪಾಲಿಕೆ ಸದಸ್ಯೆ ಸುವರ್ಣ ಕಲಕುಂಟ್ಲ ಅವರನ್ನು ಬಂಧಿಸಬೇಕು' ಎಂದು ಪಟ್ಟು ಹಿಡಿದರು. ಮೇಯರ್ ಜ್ಯೋತಿ ಪಾಟೀಲ, ಉಪಮೇಯರ್ ಸಂತೋಷ ಚವ್ಹಾಣ್, ಪಾಲಿಕೆಯ ಕೆಲವು ಬಿಜೆಪಿ ಸದಸ್ಯರು ಪ್ರತಿಭಟನೆಯಲ್ಲಿದ್ದರು.

ಪ್ರತಿಭಟನಕಾರರು ಠಾಣೆ ಪ್ರವೇಶಿಸದಂತೆ ಬ್ಯಾರಿಕೇಡ್ ಹಾಕಿ ನಿರ್ಬಂಧಿಸಲಾಗಿತ್ತು. ಮೇಯರ್, ಉಪಮೇಯರ್ ಅವರನ್ನು ತಡೆದಿದ್ದರಿಂದ ಪ್ರತಿಭಟನೆ ತೀವ್ರಗೊಂಡಿತು. ಪೊಲೀಸರು ಮತ್ತು ಮೇಯರ್ ನಡುವೆ ವಾಕ್ಸಮರ ನಡೆಯಿತು. ಪರಿಸ್ಥಿತಿ ಕೈಮೀರುವ ಹಂತಕ್ಕೆ ಬಂದಾಗ ಪೊಲೀಸ್ ಕಮಿಷನರ್ ಎನ್‌.ಶಶಿಕುಮಾರ್ ಸ್ಥಳಕ್ಕೆ ಬಂದು, ಮನವೊಲಿಸಲು ಯತ್ನಿಸಿದರು. ನಂತರ ಮೇಯರ್, ಉಪಮೇಯರ್ ಹೇಳಿಕೆ ಪಡೆದರು.

ಠಾಣೆಯಿಂದ ಹೊರಬರುತ್ತಿದ್ದಂತೆಯೇ ಮೇಯರ್, ಉಪಮೇಯರ್ ನೇತೃತ್ವದಲ್ಲಿ ಠಾಣೆ ಬಳಿ ಪ್ರತಿಭಟನೆ ಮುಂದುವರಿಸಿದರು. ಆಗ 16 ಜನರನ್ನು ಪೊಲೀಸರು ವಶಕ್ಕೆ ಪಡೆದರು.

> ಹಲ್ಲೆಗೊಳಗಾದ ಮಹಿಳೆ ದಲಿತ ಸಮುದಾಯಕ್ಕೆ ಸೇರಿದವರು. ಕಾಂಗ್ರೆಸ್ ಪುಢಾರಿಗಳ ಮಾತುಗಳನ್ನು ಕೇಳಿಕೊಂಡು ಪೊಲೀಸರು ಹಲ್ಲೆ ನಡೆಸಿ ವಿವಸ್ತ್ರಗೊಳಿಸಿದ್ದಾರೆ
> **ಬಿ.ವೈ.ವಿಜಯೇಂದ್ರ,** ಬಿಜೆಪಿ ಅಧ್ಯಕ್ಷ

> ಮಹಿಳೆಯನ್ನು ಥಳಿಸಿ ಅಸಭ್ಯವಾಗಿ ನಡೆಸಿಕೊಂಡ ರೀತಿ ನಾಚಿಕೆಗೇಡು. ಈ ಘಟನೆಗೆ ಕಾರಣರಾದ ಪೊಲೀಸರು ಮತ್ತು ಪಿತೂರಿಗೆ ಕಾರಣರಾದವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಬೇಕು
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

ಸರ್ಕಾರಕ್ಕೆ ಸಿಇಸಿ ತಪರಾಕಿ

ಬನ್ನೇರುಘಟ್ಟ ಪರಿಸರ ಸೂಕ್ಷ್ಮ ಪ್ರದೇಶ ಕಡಿತ

• ಮಂಜುನಾಥ ಹೆಬ್ಬಾರ್

ನವದೆಹಲಿ: ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಪರಿಸರ ಸೂಕ್ಷ್ಮ ಪ್ರದೇಶವನ್ನು (ಇಎಸ್‌ಝಡ್) 268 ಚದರ ಕಿ.ಮೀ. ನಿಂದ 168 ಚದರ ಕಿ.ಮೀ.ಗೆ ಇಳಿಸಿರುವ ಕರ್ನಾಟಕ ಸರ್ಕಾರದ ಕ್ರಮವನ್ನು ಸುಪ್ರೀಂ ಕೋರ್ಟ್ ನೇಮಿಸಿರುವ ಕೇಂದ್ರ ಉನ್ನತಾಧಿಕಾರ ಸಮಿತಿಯು (ಸಿಇಸಿ) ಕಟುವಾಗಿ ಟೀಕಿಸಿದ್ದು, ಈ ಕ್ರಮವು ಉದ್ಯಾನದ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿದೆ ಎಂದು ಅಭಿಪ್ರಾಯಪಟ್ಟಿದೆ.

ಪರಿಸರ ಸೂಕ್ಷ್ಮ ಪ್ರದೇಶವನ್ನು ಇಳಿಸಿರುವ ಸರ್ಕಾರದ ಕ್ರಮ ಪ್ರಶ್ನಿಸಿ ಬೆಂಗಳೂರಿನ ನಿವಾಸಿ ಬೆಳ್ಳಿಯಪ್ಪ ಮತ್ತಿತರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸುವಂತೆ ಸಮಿತಿಗೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು. ಸಮಿತಿಯು ಸುಪ್ರೀಂ ಕೋರ್ಟ್‌ಗೆ 524 ಪುಟಗಳ ವರದಿ ಸಲ್ಲಿಸಿದೆ. ಯಾವುದೇ ವೈಜ್ಞಾನಿಕ, ಪರಿಸರ ಅಥವಾ ಭೂದೃಶ್ಯ ಮಟ್ಟದ ಅಧ್ಯಯನ ಹಾಗೂ ಮೌಲ್ಯಮಾಪನ ನಡೆಸದೆಯೇ ಪರಿಸರ ಸೂಕ್ಷ್ಮ ಪ್ರದೇಶವನ್ನು ನಿರಂತರವಾಗಿ ಕಡಿತ ಮಾಡಲಾಗಿದೆ ಎಂದೂ ಸಮಿತಿ ತಿಳಿಸಿದೆ.


ಪರಿಸರ ಸೂಕ್ಷ್ಮ ಪ್ರದೇಶದ ಪಕ್ಕದಲ್ಲೇ ಕರ್ನಾಟಕ ವಸತಿ ಇಲಾಖೆಯು ಸೂರ್ಯನಗರ ಲೇಔಟ್ (ಕೆಎಚ್‌ಬಿ ಸೂರ್ಯ ಸಿಟಿ) ಎಂಬ ಬೃಹತ್ ವಸತಿ ಯೋಜನೆ ಅನುಷ್ಠಾನಗೊಳಿಸುತ್ತಿದೆ. ಈ ಪ್ರದೇಶವು ಮೊದಲು ಪರಿಸರ ಸೂಕ್ಷ್ಮ ಪ್ರದೇಶದ ಭಾಗವಾಗಿತ್ತು. ವಸತಿ ಬಡಾವಣೆಗಳ ನಿರ್ಮಾಣಕ್ಕೆ ನಿರ್ಬಂಧ ವಿಧಿಸಲಾಗಿತ್ತು. ನಗರೀಕರಣದ ಒತ್ತಡದ ನೆಪವೊಡ್ಡಿ 2018ರ ಅಧಿಸೂಚನೆಯಲ್ಲಿ ಈ ಪ್ರದೇಶವನ್ನು ಇಎಸ್‌ಝಡ್‌ನಿಂದ ಹೊರಗಿಡಲಾಯಿತು. ಆ ಬಳಿಕ, ವಸತಿ ಯೋಜನೆಯನ್ನು ಸುಗಮಗೊಳಿಸಲು ದೊಡ್ಡ ಪ್ರಮಾಣದ ಭೂ ಸಮತಟ್ಟು, ನೈಸರ್ಗಿಕವಾಗಿ ಎತ್ತರದ ಭೂಪ್ರದೇಶವನ್ನು ಸಮತಟ್ಟಾಗಿಸುವುದು ಸೇರಿದಂತೆ ವ್ಯಾಪಕ ಪ್ರಮಾಣದಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಲಾಯಿತು. ಪರಿಸರ ಪರಿಣಾಮದ ಅಧ್ಯಯನ ಹಾಗೂ ವೈಜ್ಞಾನಿಕವಾಗಿ ಮೌಲ್ಯಮಾಪನ ನಡೆಸದೆಯೇ ಈ ಕಾರ್ಯ ನಡೆಸಲಾಯಿತು. ಈ ಯೋಜನೆಯು ಕರಡಿಕ್ಕಲ್–ಮಾದೇಶ್ವರ ಕಾರಿಡಾರ್‌ನ ಪಕ್ಕದಲ್ಲಿಯೇ ಅನುಷ್ಠಾನಗೊಳ್ಳುತ್ತಿದೆ. ಈ ಭಾಗದಲ್ಲಿ ಈಗಾಗಲೇ ಮಾನವ–ವನ್ಯಜೀವಿ ಸಂಘರ್ಷ ಗಣನೀಯ ಪ್ರಮಾಣದಲ್ಲಿ ಹೆಚ್ಚಳವಾಗಿದೆ' ಎಂದು ಸಮಿತಿಯು ವರದಿಯಲ್ಲಿ ಉಲ್ಲೇಖಿಸಿದೆ.

ಬೆಂಗಳೂರಿನ ಸುತ್ತಮುತ್ತ ತ್ವರಿತ ನಗರ ವಿಸ್ತರಣೆ, ಮೂಲ ಸೌಕರ್ಯ ಅಭಿವೃದ್ಧಿ ಮತ್ತು ಸಾಂಪ್ರದಾಯಿಕ ಆನೆ ಕಾರಿಡಾರ್‌ಗಳ ಅವನತಿಯಿಂದಾಗಿ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ದಕ್ಷಿಣ, ಪಶ್ಚಿಮ, ಆಗ್ನೇಯ ಮತ್ತು ನೈರುತ್ಯ ಭಾಗಗಳಲ್ಲಿ ಮಾನವ–ಆನೆ ಸಂಘರ್ಷ ಪ್ರಕರಣಗಳು ವ್ಯಾಪಕ ಪ್ರಮಾಣದಲ್ಲಿ ಜಾಸ್ತಿ ಆಗಿದೆ. ಸುಸ್ಥಿರ ಮಾನವ ಅಭಿವೃದ್ಧಿ ಹಾಗೂ ಪರಿಸರ ಸಂರಕ್ಷಣೆ ಸಮತೋಲನದಿಂದ ಸಾಗಲು ಇಎಸ್‌ಝಡ್‌ಗಳು ನಿಯಂತ್ರಕಗಳಾಗಿ ಕೆಲಸ ಮಾಡುತ್ತವೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ.



ಬನ್ನೇರುಘಟ್ಟ ಪರಿಸರ ಸೂಕ್ಷ್ಮ ಪ್ರದೇಶ

ವಿಷಯ	2016ರ ಕರಡು ಅಧಿಸೂಚನೆ	2020ರ ಅಂತಿಮ ಅಧಿಸೂಚನೆ
ಅಧಿಸೂಚನೆ	15.06.2016	11.03.2020
ಇಎಸ್‌ಝಡ್ (ಚದರ ಕಿ.ಮೀ)	268.96	168.84
ರಾಷ್ಟ್ರೀಯ ಉದ್ಯಾನದ ಗಡಿ	100 ಮೀ.ನಿಂದ 4.5 ಕಿ.ಮೀ	100 ಮೀ.ನಿಂದ 1 ಕಿ.ಮೀ
ಗ್ರಾಮಗಳು	77	77
61 ಗ್ರಾಮಗಳಲ್ಲಿ ಇಎಸ್‌ಝಡ್	4.5 ಕಿ.ಮೀ	1 ಕಿ.ಮೀ
16 ಗ್ರಾಮಗಳಲ್ಲಿ ಇಎಸ್‌ಝಡ್	100 ಮೀ	100 ಮೀ



ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ

ಶಿಫಾರಸುಗಳು

- 2020ರಲ್ಲಿ ಹೊರಡಿಸಿರುವ ಅಂತಿಮ ಅಧಿಸೂಚನೆಯನ್ನು ಕೇಂದ್ರ ಅರಣ್ಯ ಸಚಿವಾಲಯ ಹಿಂಪಡೆಯಬೇಕು
- 2016ರ ಕರಡು ಅಧಿಸೂಚನೆಯಲ್ಲಿ ಪ್ರಸ್ತಾಪಿಸಿದಂತೆ, ಇಎಸ್‌ಝಡ್ ವ್ಯಾಪ್ತಿ 268.96 ಚದರ ಕಿ.ಮೀ. ಇರಬೇಕು. ದಟ್ಟವಾದ, ಬದಲಾಯಿಸಲು ಆಗದ ನಗರಾಭಿವೃದ್ಧಿ ಚಟುವಟಿಕೆ ಇದ್ದಲ್ಲಿ ಮಾತ್ರ ಮಾರ್ಪಾಡು ಮಾಡಬಹುದು. ಆದರೆ, ಇದಕ್ಕೆ ವೈಜ್ಞಾನಿಕ ಪುರಾವೆಗಳೊಂದಿಗೆ ತಜ್ಞರ ಸಮಿತಿಯ ಲಿಖಿತ, ವಿವರವಾದ ಹಾಗೂ ತರ್ಕಬದ್ಧ ಸಮರ್ಥನೆ ಇರಬೇಕು
- ರಾಷ್ಟ್ರೀಯ ಉದ್ಯಾನದ ಪಕ್ಕದ ಅರಣ್ಯ ಪ್ರದೇಶಗಳೊಂದಿಗೆ ಸಂಪರ್ಕಿಸುವ ಆನೆ ಕಾರಿಡಾರ್‌ಗಳ ನಿರಂತರ ಸಂರಕ್ಷಣೆ ಹಾಗೂ ಬಲಪಡಿಸುವಿಕೆ ಅಗತ್ಯ
- 6 ತಿಂಗಳೊಳಗೆ ಇಎಸ್‌ಝಡ್ ಮರು ಅಧಿಸೂಚನೆ ಪ್ರಕ್ರಿಯೆ ಪೂರ್ಣಗೊಳ್ಳಬೇಕು

ಅರಣ್ಯ ಸಚಿವರ ನೇತೃತ್ವದಲ್ಲೇ ಕಡಿತಕ್ಕೆ ನಿರ್ಧಾರ

ಅರಣ್ಯ ಸಚಿವರ ನೇತೃತ್ವದ ಸಚಿವ ಸಂಪುಟ ಉಪಸಮಿತಿಯು 2017ರ ಫೆಬ್ರುವರಿ 10ರಂದು ಸಭೆ ಸೇರಿ ಇಎಸ್‌ಝಡ್ ಗಡಿ ಕಡಿತಗೊಳಿಸುವ ತೀರ್ಮಾನ ತೆಗೆದುಕೊಂಡಿತ್ತು. ಪಿಸಿಸಿಎಫ್ ನೇತೃತ್ವದಲ್ಲಿ ಅಧಿಕಾರಿಗಳು ಹಾಗೂ ತಜ್ಞರ ಸಮಿತಿ ರಚಿಸಿ ವರದಿ ಪಡೆಯಬೇಕಿತ್ತು. ಈ ವರದಿಯನ್ನು ಕೇಂದ್ರ ಅರಣ್ಯ ಸಚಿವಾಲಯಕ್ಕೆ ಕಳುಹಿಸಬೇಕಿತ್ತು. ಆದರೆ, ರಾಜ್ಯ ಸರ್ಕಾರವು ಇಂತಹ ಯಾವುದೇ ಕ್ರಮ ಕೈಗೊಂಡಿಲ್ಲ. ಇಎಸ್‌ಝಡ್ ಕಡಿತ ಪರಿಷ್ಕೃತ ಪ್ರಸ್ತಾವನೆಯು ಅರಣ್ಯ ಸಚಿವಾಲಯದ 2011ರ ಮಾರ್ಗಸೂಚಿಗಳ ಸ್ಪಷ್ಟ ಉಲ್ಲಂಘನೆ ಎಂದು ಸಿಇಸಿ ಅಭಿಪ್ರಾಯಪಟ್ಟಿದೆ.

ಮೂರು ಆನೆ ಕಾರಿಡಾರ್‌ಗಳಿಗೆ ಧಕ್ಕೆ

- **ಕರಡಿಕ್ಕಲ್-ಮಾದೇಶ್ವರ ಕಾರಿಡಾರ್:** ಈ ಕಾರಿಡಾರ್ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಿಂದ ಹೊಸೂರು ಅರಣ್ಯ ವಿಭಾಗದ ಕಡೆಗೆ ಮತ್ತು ನಂತರ ಕಾವೇರಿ ಭೂದೃಶ್ಯದವರೆಗೆ ಆನೆಗಳ ನಿಯಮಿತ ಸಂಚಾರಕ್ಕೆ ಅನುವು ಮಾಡಿಕೊಡುತ್ತದೆ. ಈ ಕಾರಿಡಾರ್ 6 ಕಂದಾಯ ಗ್ರಾಮಗಳನ್ನು ಹೊಂದಿದೆ. ಕಲ್ಲುಗಣಿಗಾರಿಕೆ, ರಾಜ್ಯ ಹೆದ್ದಾರಿ ಮತ್ತು ರೆಸಾರ್ಟ್‌ಗಳ ವ್ಯಾಪಕ ಹೆಚ್ಚಳದಿಂದ ಆನೆಗಳ ಸುಗಮ ಸಂಚಾರಕ್ಕೆ ಅಡ್ಡಿಯಾಗಿದೆ. ಗಣಿಗಾರಿಕೆ ಮತ್ತು ಕಲ್ಲು ಗಣಿಗಾರಿಕೆ ನಿಷೇಧಕ್ಕೆ ತುರ್ತು ಕ್ರಮ ಅಗತ್ಯ.
- **ಥಳ್ಳಿ-ಬಿಳಿಕಲ್ ಕಾರಿಡಾರ್:** ಈ ಅಂತರ್-ರಾಜ್ಯ ಕಾರಿಡಾರ್ ಮೂಲಕ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನ ಮತ್ತು ಉತ್ತರ ಕಾವೇರಿ ವನ್ಯಜೀವಿ ಅಭಯಾರಣ್ಯದ ನಡುವೆ 100-200 ಆನೆಗಳು ಸಂಚರಿಸುತ್ತವೆ. ಈ ಕಾರಿಡಾರ್ ಏಳು ಕಂದಾಯ ಗ್ರಾಮಗಳ ಮೂಲಕ ಹಾದು ಹೋಗುತ್ತದೆ. ಈ ಭಾಗದಲ್ಲಿ ರಸ್ತೆಗಳು, ವಿದ್ಯುತ್ ಮಾರ್ಗಗಳು, ಆನೆ ತಡೆ ಬೇಲಿಗಳು ಹಾಗೂ ಒತ್ತುವರಿ ಹೆಚ್ಚಾಗಿದೆ. ಆದರೂ, ಈ ಭಾಗದಲ್ಲಿ ಆನೆಗಳ ಸಂಚಾರ ಜಾಸ್ತಿ ಆಗಿದೆ. ಒತ್ತುವರಿ ತೆರವುಗೊಳಿಸಿ ಈ ಪ್ರದೇಶದ ಸಂರಕ್ಷಣೆಗೆ ಆದ್ಯತೆ ಕೊಡಬೇಕು.
- **ಬಿಳಿಕಲ್-ಜವಳಗಿರಿ ಕಾರಿಡಾರ್ (ಅಂತರ್-ರಾಜ್ಯ):** ಬಿಳಿಕ್ಕಲ್ ರಾಜ್ಯ ಅರಣ್ಯವನ್ನು ಜವಳಗಿರಿ ಮೀಸಲು ಅರಣ್ಯದೊಂದಿಗೆ ಸಂಪರ್ಕಿಸುವ ಈ ಕಾರಿಡಾರ್‌ನಲ್ಲಿ ಸುಮಾರು 200 ಆನೆಗಳಿವೆ. ಈ ಪ್ರದೇಶವು ಕಂದಾಯ ಗ್ರಾಮಗಳನ್ನು ಹೊಂದಿಲ್ಲ. ಆದಾಗ್ಯೂ, ರಸ್ತೆಗಳು ಮತ್ತು ಧಾರ್ಮಿಕ ಕೇಂದ್ರಗಳಿಂದಾಗಿ ಆನೆಗಳ ಸಂಚಾರಕ್ಕೆ ಅಡೆತಡೆ ಸೃಷ್ಟಿಯಾಗುತ್ತಿದೆ. ಆವಾಸಸ್ಥಾನ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು.

ಒಕ್ಕೂಟ ವ್ಯವಸ್ಥೆಗೆ ಸಂವಿಧಾನದ ಕಾವಲು

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ

• ಜಿ.ಬಿ.ನಾಗರಾಜ್

ಭಾರತವು 'ರಾಜ್ಯಗಳ ಒಕ್ಕೂಟ' (Union of States) ಎಂಬುದನ್ನು ಸಂವಿಧಾನ ಸ್ಪಷ್ಟಪಡಿಸಿದೆ. 'ಭಾರತೀಯ ಸಂವಿಧಾನ'ದ ಮೊದಲ ವಿಧಿಯಲ್ಲಿಯೇ ಈ ಉಲ್ಲೇಖವಿದೆ. ಕೇಂದ್ರ ಮತ್ತು ರಾಜ್ಯ ಎಂಬ ಎರಡು ಹಂತದ ಆಡಳಿತ ವ್ಯವಸ್ಥೆ ದೇಶದಲ್ಲಿದೆ. ಒಕ್ಕೂಟ ವ್ಯವಸ್ಥೆ ಸುಗಮವಾಗಿ ಸಾಗಲು ಕೇಂದ್ರ, ರಾಜ್ಯ ಹಾಗೂ ಸಮವರ್ತಿ ಪಟ್ಟಿಯಲ್ಲಿ ಅಧಿಕಾರ ವರ್ಗೀಕರಿಸಲಾಗಿದೆ.

ಸಂವಿಧಾನ ರಚನಾ ಸಮಿತಿ 1949ರ ನ.26ರಂದು ಒಕ್ಕೂಟ ವ್ಯವಸ್ಥೆಗೆ ಸಮ್ಮತಿ ಸೂಚಿಸಿತು. 1950 ಜ.26ರಂದು ಸಂವಿಧಾನ ಅನುಷ್ಠಾನಗೊಂಡಿತು. ಅಂದಿನಿಂದಲೇ ಒಕ್ಕೂಟ ವ್ಯವಸ್ಥೆಗೆ ಸಾಂವಿಧಾನಿಕ ಮುದ್ರೆ ಸಿಕ್ಕಿತು. 'ರಾಜ್ಯಗಳ ಒಕ್ಕೂಟ'ವು ದೇಶದ ಸಮಗ್ರತೆಯನ್ನು ರಕ್ಷಿಸಿ, 'ವೈವಿಧ್ಯದಲ್ಲಿ ಏಕತೆ'ಯನ್ನು ಕಾಪಾಡಿಕೊಳ್ಳಲು ರೂಪಿಸಿದ ವಿಶಿಷ್ಟ ವ್ಯವಸ್ಥೆಯಾಗಿದೆ.

ಒಕ್ಕೂಟ ವ್ಯವಸ್ಥೆಯನ್ನು ಗಟ್ಟಿಯಾಗಿ ಹಿಡಿದಿಟ್ಟಿದ್ದು ಸಂವಿಧಾನ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ನಡುವೆ ರಾಜಕೀಯ, ಆರ್ಥಿಕ, ಆಡಳಿತಾತ್ಮಕ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಸಂಘರ್ಷಗಳು ನಡೆದಿದ್ದರೂ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಆಗದಂತೆ ಕಾಪಾಡಿದೆ. ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿ ಗೆಲ್ಲುವುದಕ್ಕೆ ಸಂವಿಧಾನದ ಕೊಡುಗೆ ಅನನ್ಯ. 'ರಾಜ್ಯಗಳ ಒಕ್ಕೂಟ'ದಲ್ಲಿ ಪ್ರತಿ ರಾಜ್ಯ ತನ್ನದೇ ಆಗಿರುವ ಅಸ್ಮಿತೆ, ಅನನ್ಯತೆ ಹಾಗೂ ಸಂಪನ್ಮೂಲ ಕಾಪಾಡಿಕೊಳ್ಳುವ ಅವಕಾಶವನ್ನು ಸಂವಿಧಾನ ಕಲ್ಪಿಸಿದೆ.

1947ರ ಆ.15ರಂದು ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕರೂ ದೇಶದೊಳಗಿನ 570ಕ್ಕೂ ಹೆಚ್ಚು ಸಂಸ್ಥಾನಗಳಲ್ಲಿ ರಾಜಾಡಳಿತವಿತ್ತು. ಭಾರತದಲ್ಲಿ ತಮ್ಮ ಸಂಸ್ಥಾನಗಳನ್ನು ವಿಲೀನಗೊಳಿಸಲು ಅನೇಕರು ಹಿಂದೇಟು ಹಾಕಿದರು. ಈ ಸಂಸ್ಥಾನಗಳನ್ನು ಒಗ್ಗೂಡಿಸಿ ಭಾರತೀಯತೆಯ ಸ್ವರೂಪ ನೀಡುವುದು ಆರಂಭದಲ್ಲಿ ಸವಾಲಾಗಿತ್ತು. ಭಾಷಾವಾರು ರಾಜ್ಯ ರಚನೆ ದೇಶದ ಒಕ್ಕೂಟ ವ್ಯವಸ್ಥೆಯನ್ನು ಭದ್ರಪಡಿಸಿತು.

ದೇಶದಲ್ಲಿ ಖನಿಜ ಸಂಪತ್ತು ಹೇರಳವಾಗಿದೆ. ಒಡಿಶಾ, ಮಹಾರಾಷ್ಟ್ರದಲ್ಲಿ ಕಲ್ಲಿದ್ದಲು, ಕರ್ನಾಟಕದಲ್ಲಿ ಕಬ್ಬಿಣದ ಅದಿರು ಲಭ್ಯವಿವೆ. ಪರಿಸರವನ್ನು ಕಾಪಾಡಿಕೊಂಡು ಸಂಪತ್ತು ಅನುಭವಿಸಬೇಕಿದೆ. ಇದಕ್ಕೆ ಕೇಂದ್ರ ಸರ್ಕಾರದ ಅನುಮತಿ ಅಗತ್ಯವಿದೆ. ಭವಿಷ್ಯದ ಭಾರತವನ್ನು ದೃಷ್ಟಿಯಲ್ಲಿಟ್ಟುಕೊಂಡು ಹಣಕಾಸು, ಜಲ, ಗಣಿ ಸೇರಿದಂತೆ ದೇಶದ ಸಂಪನ್ಮೂಲಗಳ ಹಂಚಿಕೆಯಾಗಿದೆ. ಸಂವಿಧಾನವು ಸ್ಪಷ್ಟ ಮಾರ್ಗದರ್ಶನ ಕೂಡ ನೀಡಿದೆ.

ಪ್ರಜಾವಾಣಿ ನೋಡಿಯೊ
ವಿಡಿಯೊ ನೋಡಲು ಸ್ಕ್ಯಾನ್ ಮಾಡಿ



'ಸಂವಿಧಾನವೇ ಬೆಳಕು' – ಒಂದು ಚರ್ಚೆ'ಯ ಭಾಗವಾಗಿ ದಾವಣಗೆರೆಯಲ್ಲಿ ನಡೆದ 'ಒಕ್ಕೂಟ ವ್ಯವಸ್ಥೆ ಮತ್ತು ಸಂಪನ್ಮೂಲ (ಹಣಕಾಸು, ಜಲ, ಗಣಿ) ಹಂಚಿಕೆ ಆಗುತ್ತಿರುವುದೇನು?' ಸಂವಾದದಲ್ಲಿ ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ ಮಾತನಾಡಿದರು. ದಾವಣಗೆರೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕ್ ಕುಮಾರ್ ಪಾಳೇದ, ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಕರೆಣ್ಣವರ, 'ಪ್ರಜಾವಾಣಿ' ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ, ಸಾಮಾಜಿಕ ಕಾರ್ಯಕರ್ತ ಬಿ.ಎಂ. ನಿರಂಜನ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಒಕ್ಕೂಟ ವ್ಯವಸ್ಥೆ: ಸಂವಾದ

'ಒಕ್ಕೂಟ ವ್ಯವಸ್ಥೆ ಮತ್ತು ಸಂಪನ್ಮೂಲ (ಹಣಕಾಸು, ಜಲ, ಗಣಿ) ಹಂಚಿಕೆ - ಆಗುತ್ತಿರುವುದೇನು?' ಎಂಬ ವಿಷಯದ ಕುರಿತು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ ಸಂಸ್ಥೆಯ ಸಹಯೋಗದಲ್ಲಿ ದಾವಣಗೆರೆಯಲ್ಲಿ ಸಂವಾದ ನಡೆಯಿತು.

'ಸಂವಿಧಾನವೇ ಬೆಳಕು– ಒಂದು ಚರ್ಚೆ' ವಿಷಯದ ಭಾಗವಾಗಿ ನಡೆದ ಸಂವಾದದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು ಪಾಲ್ಗೊಂಡಿದ್ದರು. ಹಿರಿಯ ಸಿವಿಲ್ ನ್ಯಾಯಾಧೀಶ ಮಹಾವೀರ ಕರೆಣ್ಣವರ, ಪೂರ್ವ ವಲಯದ ಐಜಿಪಿ ಬಿ.ಆರ್. ರವಿಕಾಂತೇಗೌಡ, ದಾವಣಗೆರೆ ವಿಶ್ವವಿದ್ಯಾಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಅಶೋಕಕುಮಾರ್ ಪಾಳೇದ ಹಾಗೂ ಸಾಮಾಜಿಕ ಕಾರ್ಯಕರ್ತ ಬಿ.ಎಂ. ನಿರಂಜನ್ ಸಂವಾದದಲ್ಲಿ ಪಾಲ್ಗೊಂಡಿದ್ದ ಪ್ರಮುಖರು. 'ಪ್ರಜಾವಾಣಿ' ದಾವಣಗೆರೆ ಬ್ಯೂರೊ ಮುಖ್ಯಸ್ಥ ಸಿದ್ದಯ್ಯ ಹಿರೇಮಠ ಸಂವಾದದ ಸಂವಹನಕಾರರಾಗಿದ್ದರು.

ಚರ್ಚೆಯ ಪ್ರಮುಖ ಅಂಶಗಳು

- ಸ್ವಾತಂತ್ರ್ಯ ಪೂರ್ವದ, 1935ರ 'ಭಾರತ ಸರ್ಕಾರದ ಕಾಯ್ದೆ' ಒಕ್ಕೂಟ ವ್ಯವಸ್ಥೆಯ ಕುರಿತ ಚರ್ಚೆಯನ್ನು ಮುನ್ನೆಲೆಗೆ ತಂದಿತು. ಆಗ ಭಾರತದಲ್ಲಿ ಪ್ರಾಂತೀಯ ಮತ್ತು ಕೇಂದ್ರೀಯ ವ್ಯವಸ್ಥೆ ಜಾರಿಯಲ್ಲಿತ್ತು.
- 1946ರಲ್ಲಿ ಮೀರಠ್‌ನಲ್ಲಿ ನಡೆದ ಭಾರತೀಯ ಕಾಂಗ್ರೆಸ್ ಅಧಿವೇಶನದಲ್ಲಿ ಜವಾಹರಲಾಲ್ ನೆಹರೂ ಒಕ್ಕೂಟ ವ್ಯವಸ್ಥೆಗೆ ಸಂಬಂಧಿಸಿದಂತೆ ನಿರ್ಣಯ ಮಂಡಿಸಿದರು.
- ಸಂವಿಧಾನವು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ವ್ಯವಸ್ಥೆ ರೂಪಿಸಿದೆ. ನ್ಯಾಯಾಂಗ ಸ್ವತಂತ್ರವಾಗಿದ್ದು, ಕೇಂದ್ರ ಮತ್ತು ರಾಜ್ಯಗಳ ನಡುವೆ ಮೂಡುವ ಗೊಂದಲ, ವ್ಯಾಜ್ಯಗಳನ್ನು ಬಗೆಹರಿಸುವ ಜವಾಬ್ದಾರಿ ಹೊಂದಿದೆ.
- ಒಕ್ಕೂಟ ವ್ಯವಸ್ಥೆಗೆ ಅಪಾಯ ಎದುರಾಗುವ ಸಂದರ್ಭ ತೀರಾ ವಿರಳ. ಸಂವಿಧಾನ ಹಾಗೂ ನ್ಯಾಯಾಂಗ ವ್ಯವಸ್ಥೆ ಸಬಲವಾಗಿದೆ. ಲಿಖಿತ ಸಂವಿಧಾನದಲ್ಲಿ ಈ ಬಗ್ಗೆ ಸ್ಪಷ್ಟತೆ ಇದೆ.
- ನೇರ ತೆರಿಗೆ, ಪರೋಕ್ಷ ತೆರಿಗೆ, ಖನಿಜ ಸಂಪನ್ಮೂಲಗಳ ಹಂಚಿಕೆಗೆ ಸಂಬಂಧಿಸಿದಂತೆ ಸಂವಿಧಾನದಲ್ಲಿ ಸ್ಥೂಲವಾದ ಮಾರ್ಗದರ್ಶನವಿದೆ.

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'ನೀರಿನ ಮಾಲಿನ್ಯ ಪತ್ತೆಗೆ ತಂತ್ರಜ್ಞಾನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಡಿಯುವ ನೀರಿನಲ್ಲಿ ಇರುವ ಮಾಲಿನ್ಯವನ್ನು ಪೂರೈಕೆಗೂ ಮೊದಲೇ ಪತ್ತೆಹಚ್ಚುವ ತಂತ್ರಜ್ಞಾನ ಮಾದರಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ರಾಜ್ಯ ಸರ್ಕಾರ ಮುಂದಡಿ ಇಟ್ಟಿದೆ.

ಈ ಕುರಿತಂತೆ ಸಿಂಗಪುರದ 'ಝ್ವೀಕ್' ಎಂಬ ತಂಡದ ಜೊತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಬುಧವಾರ ಚರ್ಚೆ ನಡೆಸಿದರು.

ನೀರಿನಲ್ಲಿರುವ ಮಾಲಿನ್ಯ ಪತ್ತೆ ಮಾಡುವ ತಂತ್ರಜ್ಞಾನದ ಮೇಲೆ 'ಝ್ವೀಕ್' ಕೆಲಸ ಮಾಡುತ್ತಿದೆ. ನೀರಿನ ಸುರಕ್ಷತೆ ಮತ್ತು ಪರಿಸರದ ಮೇಲೆ ನಿಗಾ ವಹಿಸಲು ಸ್ವಯಂಚಾಲಿತ ಮತ್ತು ಆಧುನಿಕ ತಂತ್ರಜ್ಞಾನ ವ್ಯವಸ್ಥೆಗಳನ್ನು ಬಳಸಿಕೊಳ್ಳುವ ಕುರಿತು ತಂಡದ ಜೊತೆ ಪ್ರಿಯಾಂಕ್ ಸಮಾಲೋಚನೆ ನಡೆಸಿದರು.

'ರಾಜ್ಯದಲ್ಲಿ ಗ್ರಾಮೀಣ ಕುಡಿಯುವ ನೀರಿನ ವ್ಯವಸ್ಥೆಗೆ ಸಿಂಗಪುರ ತಂತ್ರಜ್ಞಾನ ಹೇಗೆ ಪ್ರಸ್ತುತ ಆಗಬಹುದು ಎನ್ನುವ ಕುರಿತು ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಇಲಾಖೆಯ ಸಹಭಾಗಿತ್ವದಲ್ಲಿ ಮೌಲ್ಯಮಾಪನ ನಡೆಸಲಾಗುವುದು' ಎಂದು ಖರ್ಗೆ ತಿಳಿಸಿದರು.



ಸಿಂಗಪುರದ 'ಝ್ವೀಕ್' ತಂಡದ ಜೊತೆ ಪ್ರಿಯಾಂಕ್ ಖರ್ಗೆ

ಬಾಲಕಿ ಅಪಹರಿಸಿ ಕತ್ತು ಹಿಸುಕಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಲ್ಲೂರುಹಳ್ಳಿಯಲ್ಲಿ ಪೋಷಕರ ಜತೆಗೆ ನೆಲಸಿದ್ದ ಆರು ವರ್ಷದ ಬಾಲಕಿಯನ್ನು ಅಪಹರಿಸಿ, ಕೊಲೆ ಮಾಡಿ, ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಎಸೆದು, ಆರೋಪಿ ಪರಾರಿ ಆಗಿದ್ದಾನೆ.

ಪಶ್ಚಿಮ ಬಂಗಾಳದ ಇಂಜಮುಲ್ ಶೇಖ್ ಅವರ ಪುತ್ರಿ ಶಹನಾಜ್ ಖಾತುನ್ ಕೊಲೆಯಾದವಳು. ಆರೋಪಿಯ ಪತ್ತೆಗೆ ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

ಕೆಲವು ತಿಂಗಳ ಹಿಂದೆ ನಗರಕ್ಕೆ ಬಂದಿದ್ದ ಇಂಜಮುಲ್ ಕುಟುಂಬವು ನಲ್ಲೂರುಹಳ್ಳಿ ಸುತ್ತಮುತ್ತ ಕೂಲಿ ಕೆಲಸ ಮಾಡುತ್ತಿತ್ತು. ಸೋಮವಾರ ಬೆಳಿಗ್ಗೆ ಮನೆಯ ಎದುರು ಬಾಲಕಿ ಆಟವಾಡುತ್ತಿದ್ದಳು. ಆಗ ಅಪಹರಣ ನಡೆದಿತ್ತು. ಮಂಗಳವಾರ ಬೆಳಿಗ್ಗೆ ಪೋಷಕರು ದೂರು ದಾಖಲಿಸಿದ್ದರು. ಪೊಲೀಸರಿಗೆ ಅದೇ ದಿನ ರಾತ್ರಿ ಮೃತದೇಹ ಪತ್ತೆಯಾಗಿದೆ.

'ಬಾಲಕಿಯ ಪೋಷಕರು ವಾಸವಿದ್ದ ಪ್ರದೇಶದಲ್ಲಿ ವ್ಯಕ್ತಿಯೊಬ್ಬ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದ್ದು, ಆರೋಪಿ ಪತ್ತೆಗೆ ಮೂರು ತಂಡ ರಚಿಸಲಾಗಿದೆ. ಮೃತದೇಹದಲ್ಲಿ ಬೇರೆ ಯಾವುದೇ ಗಾಯಗಳು ಕಂಡುಬಂದಿಲ್ಲ. ಪ್ಲಾಸ್ಟಿಕ್ ಹಗ್ಗ ಬಳಸಿ ಉಸಿರುಗಟ್ಟಿಸಿ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಸೈದುಲು ಅಡಾವತ್ ತಿಳಿಸಿದರು.

ಉಚಿತ ತರಬೇತಿ: ಅರ್ಜಿ ಆಹ್ವಾನ

ಬೆಂಗಳೂರು: ಆರ್.ಎಲ್. ಜಾಲಪ್ಪ ಅಕಾಡೆಮಿಯು ಗ್ರಾಮೀಣ ಭಾಗದ ಪದವೀಧರ ಬಡ ವಿದ್ಯಾರ್ಥಿ–ವಿದ್ಯಾರ್ಥಿನಿಯರಿಗೆ ಕೆಎಎಸ್, ಪಿಎಸ್‌ಐ, ವಿಎಓ ಇಎಸ್‌ಐ, ಎಫ್‌ಡಿಎ, ಎಸ್‌ಡಿಎ ಪರೀಕ್ಷೆಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿಯನ್ನು ಫೆ.1ರಂದು ಪ್ರಾರಂಭಿಸಲಿದೆ.

ದೊಡ್ಡಬಳ್ಳಾಪುರದ ಕೊಡಗೇನಹಳ್ಳಿಯಲ್ಲಿ ಆರ್.ಎಲ್. ಜಾಲಪ್ಪ ಎಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕ್ಯಾಂಪಸ್‌ನಲ್ಲಿ ತರಬೇತಿ ನಡೆಯಲಿದೆ. ಊಟ, ಪ್ರತ್ಯೇಕ ವಸತಿ ವ್ಯವಸ್ಥೆ ಇದೆ.

www.rljacademy.in ವೆಬ್‌ಸೈಟಿನಲ್ಲಿ ಜ.25ರ ಒಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ 9900606042, 9731480759 ಸಂಪರ್ಕಿಸಬಹುದು ಎಂದು ಅಕಾಡೆಮಿಯ ಕಾರ್ಯದರ್ಶಿ ಲಕ್ಷ್ಮಣ ಕೊಡಸೆ ತಿಳಿಸಿದ್ದಾರೆ.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ವಿದ್ಯೆ ಕಲಿಸುವವನೆಂದರೆ ಜ್ಯೋತಿ ಇದ್ದಹಾಗೆ. ಆ ಜ್ಯೋತಿ ಜಗತ್ತನ್ನು ಬೆಳಗಬೇಕು.

–ಗೌತಮ ಬುದ್ಧ

ಸಂಪಾದಕೀಯ

ಬಳ್ಳಾರಿ ರಿಪಬ್ಲಿಕ್ ನೆನಪು ಮರುಕಳಿಕೆ ಬಂದೂಕು ಸಂಸ್ಕೃತಿ ತಲೆ ಎತ್ತದಿರಲಿ

ಬಳ್ಳಾರಿಯಲ್ಲಿ ಇದ್ದಕ್ಕಿದ್ದಂತೆ ಭುಗಿಲೆದ್ದ (ಜನವರಿ 1 ರಂದು) ಹಿಂಸಾಚಾರವು, ಕಾಂಗ್ರೆಸ್ ಪಕ್ಷದ ಯುವ ಕಾರ್ಯಕರ್ತನೊಬ್ಬನನ್ನು ಬಲಿ ತೆಗೆದುಕೊಂಡಿದೆ. ಈ ಘಟನೆ, ಬಳ್ಳಾರಿ ಜಿಲ್ಲೆಯ ಕರಾಳ ಇತಿಹಾಸದ ಮರುಕಳಿಕೆಯಂತಿದೆ. ಮಹರ್ಷಿ ವಾಲ್ಮೀಕಿ ಪ್ರತಿಮೆ ಅನಾವರಣದ ಕಾರ್ಯಕ್ರಮಕ್ಕೆ ಸಂಬಂಧಿಸಿದ ಬ್ಯಾನರ್‌ಗಳನ್ನು ಕಟ್ಟುವ ವಿಷಯಕ್ಕೆ ಆರಂಭವಾದ ವಿವಾದ, ಕೆಲ ಸಮಯದಲ್ಲೇ ಗಲಭೆಯಾಗಿ ಪರಿವರ್ತನೆಗೊಂಡಿತು. ಕಲ್ಲು ತೂರಾಟ ಹಾಗೂ ಗುಂಡಿನ ದಾಳಿ ನಡೆದಿರುವುದು ಕಾನೂನು ಮತ್ತು ಸುವ್ಯವಸ್ಥೆ ಕುಸಿದುಬೀಳಲು ಕಾರಣವಾಗಿದೆ. ರಾಜಕೀಯ ಅಧಿಕಾರದ ಅಟ್ಟಹಾಸ, ತೋಳ್ಬಲದ ಪ್ರದರ್ಶನ ಹಾಗೂ ಅಕ್ರಮ ಸಂಪತ್ತು ಸೇರಿಕೊಂಡು 'ಬಳ್ಳಾರಿ ರಿಪಬ್ಲಿಕ್' ಎನ್ನುವ ಸಮಾನಾಂತರ ಸರ್ಕಾರ ಜಾರಿಯಲ್ಲಿದೆ ಎನ್ನುವ ಭಾವನೆ ಮೂಡಿಸಿದ್ದ ಕುಖ್ಯಾತಿಯ ದಿನಗಳನ್ನು ಪ್ರಸ್ತುತ ಘಟನೆ ನೆನಪಿಸುವಂತಿದೆ. ಗಣಿ ಉದ್ಯಮಿ ಮತ್ತು ಬಿಜೆಪಿ ಶಾಸಕ ಜನಾರ್ದನ ರೆಡ್ಡಿ ಅವರ ನಿವಾಸದ ಬಳಿ ಬ್ಯಾನರ್‌ಗಳನ್ನು ಕಟ್ಟುವ ಕಾಂಗ್ರೆಸ್ ಕಾರ್ಯಕರ್ತರ ಪ್ರಯತ್ನಕ್ಕೆ ಶಾಸಕರ ಬೆಂಬಲಿಗರಿಂದ ಎದುರಾದ ತೀವ್ರ ವಿರೋಧದಿಂದ ಸಂಘರ್ಷ ಆರಂಭವಾಗಿದ್ದರೂ, ಆ ಪ್ರಚೋದನೆಯನ್ನು ಸಾಂಕೇತಿಕವಾಗಿಯಷ್ಟೇ ನೋಡಬೇಕಾಗಿದೆ. ವಾಲ್ಮೀಕಿ ಪ್ರತಿಮೆ ಅನಾವರಣದ ಹಿಂದೆ ಇರುವುದು ಸಾಂಸ್ಕೃತಿಕ ಮಹತ್ವದ ಚಿಂತನೆಯಲ್ಲ. ಕಲ್ಯಾಣ ಕರ್ನಾಟಕದಲ್ಲಿ ಪ್ರಬಲ ಮತಬ್ಯಾಂಕ್ ಆಗಿರುವ ವಾಲ್ಮೀಕಿ ಸಮುದಾಯವನ್ನು ಗಮನದಲ್ಲಿ ಇರಿಸಿಕೊಂಡು ನಡೆದಿರುವ ಪ್ರತಿಮಾ ರಾಜಕಾರಣ ಇದಾಗಿದೆ. ಪ್ರತಿಮೆ ಅನಾವರಣದ ನೆಪದಲ್ಲಿ ಆರಂಭಗೊಂಡ ಸಂಘರ್ಷದಲ್ಲಿ ಬ್ಯಾನರ್‌ಗಳಿಗಿಂತಲೂ ರಾಜಕಾರಣದ ಪಾತ್ರವೇ ಹೆಚ್ಚಾಗಿದೆ.



'ಪ್ರತಿಮಾ ರಾಜಕಾರಣ'ದ ನೆಪದಲ್ಲಿ ನಡೆದ ಹಿಂಸಾಚಾರ ಪೊಲೀಸ್ ವೈಫಲ್ಯವನ್ನು ಸೂಚಿಸುವಂತಿದೆ ಹಾಗೂ 'ಬಳ್ಳಾರಿ'ಯ ಕುಖ್ಯಾತ ಚರಿತ್ರೆಯನ್ನು ನೆನಪಿಸುವಂತಿದೆ.

ಜನಾರ್ದನ ರೆಡ್ಡಿ ಮತ್ತು ಬಳ್ಳಾರಿ ಕಾಂಗ್ರೆಸ್ ಶಾಸಕ ಭರತ್ ರೆಡ್ಡಿ ನಡುವಿನ ಜಿದ್ದಾಜಿದ್ದಿ ನಿಯಂತ್ರಣ ತಪ್ಪುವ ಮಟ್ಟಕ್ಕೆ ತಲುಪಿದ್ದು, ಗುಪ್ತಚರ ಮತ್ತು ಪೊಲೀಸ್ ಇಲಾಖೆಯ ವೈಫಲ್ಯದ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕುವಂತಿದೆ. ಹಾಗೆಯೇ, ಘಟನೆ ನಡೆದ ಕೆಲವು ಗಂಟೆಗಳ ಹಿಂದಷ್ಟೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದ ಪವನ್ ನೆಜ್ಜೂರ್ ಅವರನ್ನು ಅಮಾನತುಗೊಳಿಸಿರುವುದು ಆಡಳಿತದ ವ್ಯವಸ್ಥೆ ಕುಸಿತವನ್ನು ಸ್ಪಷ್ಟವಾಗಿ ಸೂಚಿಸುವಂತಿದೆ. ಪೊಲೀಸ್ ವರಿಷ್ಠಾಧಿಕಾರಿಯ ಅಮಾನತಿಗೆ ನೀಡಿರುವ ಕಾರಣಗಳು ಗಂಭೀರವಾದವು: ಘಟನೆಯ ಸ್ಥಳಕ್ಕೆ ಕೂಡಲೇ ತಲುಪುವಲ್ಲಿನ ವೈಫಲ್ಯ, ವಿಶ್ವಸ್ತ ಸಮಯದಲ್ಲಿ ಹಿರಿಯ ಅಧಿಕಾರಿಗಳ ಸಂಪರ್ಕಕ್ಕೆ ದೊರೆಯದಿರುವುದು, ಸುಸಂಬದ್ಧ ಮಾಹಿತಿ ನೀಡುವಲ್ಲಿ ಅಸಮರ್ಥರಾಗಿರುವುದು ಹಾಗೂ ದ್ವಿತೀಯ ಮಾಹಿತಿಯನ್ನು ಅವಲಂಬಿಸಿರುವುದು. ಪವನ್ ಅವರು ಸಂಘರ್ಷವನ್ನು ನಿಭಾಯಿಸುವಲ್ಲಿ ನಿರ್ಲಕ್ಷ್ಯ ವಹಿಸಿದರೋ ಅಥವಾ ಪರಿಸ್ಥಿತಿಯ ಬಲಿಪಶು ಆಗಿದ್ದಾರೋ ಎನ್ನುವುದಕ್ಕಿಂತಲೂ, ಆತಂಕಕಾರಿ ಸಂದರ್ಭದಲ್ಲಿ ಪೊಲೀಸರು ಸನ್ನಿವೇಶವನ್ನು ನಿಭಾಯಿಸುವಲ್ಲಿ ವಿಫಲರಾದರು ಎನ್ನುವುದು ಕಳವಳಕ್ಕೆ ಕಾರಣವಾಗುವ ಸಂಗತಿಯಾಗಿದೆ.

ರಾಜಕೀಯ ಸಂಘರ್ಷದ ಸಮಯದಲ್ಲಿ ಬಂದೂಕುಗಳು ಸುಲಭವಾಗಿ ಪ್ರವೇಶ ಪಡೆದಿರುವುದು ಹೆಚ್ಚು ಆತಂಕ ಹುಟ್ಟಿಸುವ ವಿದ್ಯಮಾನ. ಖಾಸಗಿ ಭದ್ರತಾ ಸಿಬ್ಬಂದಿಗೆ ಶಸ್ತ್ರಾಸ್ತ್ರಗಳನ್ನು ಹೊಂದಲು ಕಾನೂನು ಅನುಮತಿಸಿದೆ. ಆದರೆ, ಬಂದೂಕುಧಾರಿಗಳೊಂದಿಗೆ ಸಾರ್ವಜನಿಕವಾಗಿ ಗುಂಡು ಹಾರಿಸುವ ದೃಶ್ಯಗಳು ವೈರಲ್ ಆಗಿದ್ದು, ರಾಜಕಾರಣಿಗಳು ಬಂದೂಕು ಸಂಸ್ಕೃತಿಯನ್ನು ಸಹಜಗೊಳಿಸುವ ಪ್ರಯತ್ನದಂತಿದೆ. ಶಸ್ತ್ರಾಸ್ತ್ರಗಳನ್ನು ಹೊಂದಿರುವವರ ಪರಿಶೀಲನೆ, ತಪಾಸಣೆ ಮತ್ತು ಹೊಣೆಗಾರಿಕೆಗೆ ಸಂಬಂಧಿಸಿದ ನಿಯಂತ್ರಣಗಳಿಗೆ ಸಂಬಂಧಿಸಿದಂತೆ ನಿರ್ವಾತ ಸ್ಥಿತಿ ಇರುವುದನ್ನು ಪ್ರಸ್ತುತ ಪ್ರಕರಣ ಸೂಚಿಸುವಂತಿದೆ. ಖಾಸಗಿ ಭದ್ರತಾ ಸಿಬ್ಬಂದಿ ಅತ್ಯಂತ ಸಮೀಪದಿಂದ ಗುಂಡು ಹಾರಿಸಿರುವುದನ್ನು ದೃಢೀಕರಿಸಿರುವ ಬ್ಯಾಲಿಸ್ಟಿಕ್ ವರದಿ, ಸಮಸ್ಯೆ ಗುರುತರವಾದುದನ್ನು ಸೂಚಿಸುವಂತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರ, ಅಮಾನತು ಕ್ರಮಗಳು ಮತ್ತು ಮಾತಿನ ಸಮರದಾಚೆಗೆ ಕಾರ್ಯಪ್ರವೃತ್ತವಾಗಬೇಕು. ಸಮಗ್ರ ತನಿಖೆ, ಖಾಸಗಿ ವ್ಯಕ್ತಿಗಳು ಹೊಂದಿರುವ ಬಂದೂಕುಗಳ ಪರವಾನಗಿಗಳ ರಾಜ್ಯವ್ಯಾಪಿ ಪರಿಶೋಧನೆ, ಖಾಸಗಿ ಸಶಸ್ತ್ರ ಭದ್ರತೆಗೆ ಕಠಿಣ ಮಾನದಂಡ ನಿಗದಿ ಮತ್ತು ಗುಪ್ತಚರ ವೈಫಲ್ಯಕ್ಕೆ ಸ್ಪಷ್ಟ ಹೊಣೆಗಾರಿಕೆ ಅಗತ್ಯ. ಕಾನೂನು ಸುವ್ಯವಸ್ಥೆಗಿಂತಲೂ ಯಾವುದೇ ನಾಯಕ, ಪರಂಪರೆ ಅಥವಾ ಮತಬ್ಯಾಂಕ್ ಮಿಗಿಲಲ್ಲ ಎನ್ನುವುದನ್ನು ಖಚಿತಪಡಿಸುವಂತೆ ಸರ್ಕಾರ ನಡೆದುಕೊಳ್ಳಬೇಕು ಹಾಗೂ 'ಬಳ್ಳಾರಿ ರಿಪಬ್ಲಿಕ್' ಮತ್ತೆ ಚಿಗುರದಂತೆ ಎಚ್ಚರ ವಹಿಸಬೇಕು.

ಚಾಟಿ

ಮಾಡು ಇಲ್ಲವೆ ಮಡಿ



ಅಮೆರಿಕ, ರಷ್ಯಾ, ಚೀನಾ ಯಾರನ್ನೇ ತೆಗೆದುಕೊಳ್ಳಿ– ದೊಡ್ಡ ಮೀನುಗಳಿಗೆ ಸಣ್ಣ ಮೀನುಗಳೇ ಆಹಾರ. ದೊಡ್ಡವರಿಗೆ ಸಣ್ಣವರು. ಮಂಡಿಯೂರಿಯೇ ವ್ಯಾಪಾರ. ಪ್ರತಿಯೊಬ್ಬರೂ ಒತ್ತುವರಿ ವೀರರು. ಇಲ್ಲಿ ಅಕ್ರಮವೇ ವಿಕ್ರಮ!

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಭಾರತವನ್ನು ಯಾರು ಮುನ್ನಡೆಸಬೇಕು ಎಂಬುದನ್ನು ಆರ್‌ಎಸ್‌ಎಸ್‌ನಂತಹ ನೋಂದಾಯಿಸದ ಮತ್ತು ನಿಯಮಗಳಿಗೆ ಒಳಪಡದ ಸಂಘಟನೆಯು ಏಕೆ ನಿರ್ಧರಿಸಬೇಕು? ನೀವು ಅಖಾಡದಿಂದ ಆರ್‌ಎಸ್‌ಎಸ್ ಅನ್ನು ತೆಗೆದುಹಾಕಿ. ಆಗ, ಬಿಜೆಪಿ ಕೇವಲ ಒಂದು ಗಂಭೀರ ಪ್ರಾದೇಶಿಕ ಪಕ್ಷವಾಗಿ ಕೂಡ ಅರ್ಹತೆ ಪಡೆಯುವುದಿಲ್ಲ.

ಪ್ರಿಯಾಂಕ್ ಖರ್ಗೆ, ಐಟಿ–ಬಿಟಿ ಸಚಿವ

25 ವರ್ಷಗಳ ಹಿಂದೆ

ಸೋಮವಾರ, 8-1-2001

• ಚಿತ್ರೀಕರಣ ವೇಳೆ ಹೆಜ್ಜೇನು ಕಚ್ಚಿ ಕ್ಯಾಮೆರಾಮನ್ ಸಾವು

ಚನ್ನಪಟ್ಟಣ, ಜ. 7– ಚನ್ನಪಟ್ಟಣದ ಪೊಲೀಸ್ ತರಬೇತಿ ಶಾಲೆಯ ಆವರಣದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿರುವ 'ಹುಚ್ಚ' ಚಿತ್ರದ ಚಿತ್ರೀಕರಣ ಸಂದರ್ಭದಲ್ಲಿ ಹೆಜ್ಜೇನು ಕಚ್ಚಿದ ಪರಿಣಾಮವಾಗಿ ಇಂದು ಮಧ್ಯಾಹ್ನ ಕ್ಯಾಮೆರಾಮನ್ ಸತ್ತು, ಇತರ ಏಳು ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರನ್ನು ಇಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಿತ್ರೀಕರಣದಲ್ಲಿದ್ದ ಕ್ಯಾಮೆರಾಮನ್ ಸಹಾಯಕ ಕರುಣಾಕರ ಶೆಟ್ಟಿ (30) ಮೃತಪಟ್ಟಿದ್ದಾರೆ. ಓಂಪ್ರಕಾಶ್ ನಿರ್ದೇಶನದ ಈ ಚಿತ್ರದಲ್ಲಿ 'ಸ್ಪರ್ಶ' ಖ್ಯಾತಿಯ ಸುದೀಪ್ ಮತ್ತು ರೇಖಾ ನಾಯಕ ನಾಯಕಿಯಾಗಿ ನಟಿಸುತ್ತಿದ್ದು, ಭಾನುವಾರ ಹಾಡಿನ ಚಿತ್ರೀಕರಣದಲ್ಲಿ ಮುಂಬೈನ ನರ್ತಕ, ನರ್ತಕಿಯರು ಭಾಗವಹಿಸಿದ್ದ ಸಂದರ್ಭದಲ್ಲಿ ಈ ದುರ್ಘಟನೆ ಸಂಭವಿಸಿದೆ.

• ರಾಣಿ ಮುಖರ್ಜಿ, ಪ್ರೀತಿ ಜಿಂಟಾ ವಿಚಾರಣೆ ಸಂಭವ

ಮುಂಬೈ, ಜ. 7 (ಪಿಟಿಐ)– ಭೂಗತ ಜಗತ್ತು ಮತ್ತು ಬಾಲಿವುಡ್ ಸಂಪರ್ಕ ಕುರಿತಂತೆ ಒಂದೆರಡು ದಿನಗಳಲ್ಲಿ ಹಿಂದಿ ಚಿತ್ರರಂಗದ ಖ್ಯಾತ ತಾರೆಯರಾದ ರಾಣಿ ಮುಖರ್ಜಿ ಮತ್ತು ಪ್ರೀತಿ ಜಿಂಟಾ ಅವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸುವ ಸಾಧ್ಯತೆ ಇದೆ ಎಂದು ಮುಂಬೈ ಉನ್ನತ ಪೊಲೀಸ್ ಮೂಲಗಳು ತಿಳಿಸಿವೆ.

ಬಾಲಿವುಡ್ ಮತ್ತು ಭೂಗತ ಜಗತ್ತಿನ ಸಂಪರ್ಕ ಸಾಕಷ್ಟು ಸಾಕ್ಷ್ಯಾಧಾರಗಳೊಂದಿಗೆ ಬಹಿರಂಗವಾಗುತ್ತಿದೆ. ಅಲ್ಲದೆ, ಬಾಲಿವುಡ್‌ನಲ್ಲಿ ತಯಾರಾಗುವ ಸುಮಾರು ಶೇ 60ರಷ್ಟು ಚಿತ್ರಗಳಿಗೆ ಮಾಫಿಯಾ ಗುಂಪುಗಳೇ ಹಣ ನೀಡುತ್ತವೆ ಎಂದು ತಿಳಿಸಿವೆ.

75 ವರ್ಷಗಳ ಹಿಂದೆ

ಸೋಮವಾರ, 8-1-1951

• ನೆಹರು ಸಂಧಿಸಲು ಲಂಡನ್‌ಗೆ ಬಿ.ಎನ್. ರಾವ್

ಲಂಡನ್, ಜ. 7– ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಯಾಗಿರುವ ಬಿ.ಎನ್. ರಾವ್‌ರವರು ಪಂಡಿತ ನೆಹರುರವರನ್ನು ಸಂಧಿಸಲು ಸದ್ಯದಲ್ಲೇ ಲಂಡನ್‌ಗೆ ಬರಲಿರುವರೆಂಬ ಲೇಕ್ ಸಕ್ಸೆಸ್ ವರದಿಯು, ರಾವ್‌ರವರು ಭಾರತ ಪ್ರಧಾನಿಯೊಂದಿಗೆ ಕೊರಿಯದಲ್ಲಿ ಯುದ್ಧ ಸ್ತಂಭನ ಮತ್ತು ಚೀನಾದೊಂದಿಗೆ ಪೌರಾತ್ಯ ಸಮಸ್ಯೆಗಳ ಬಗ್ಗೆ, ಹೊಸ ಯೋಜನೆಗಳ ಬಗ್ಗೆ ಚರ್ಚಿಸಬಹುದೆಂಬ ವದಂತಿಗೆ ಕಾರಣವಾಗಿದೆ.

ಪಂಡಿತ ನೆಹರುರವರು, ಕಾಮನ್‌ವೆಲ್ತ್ ರಾಷ್ಟ್ರಗಳೆಲ್ಲ ಒಂದೇ ರೀತಿಯ ಧೋರಣೆ ಅನುಸರಿಸಬೇಕೆಂದು ಒತ್ತಾಯಪಡಿಸಬಹುದೆಂದೂ ಅಧಿಕೃತ ವಲಯಗಳಿಂದ ತಿಳಿದುಬಂತು.

ಮರ್ಯಾದೆಗೇಡು: ಕಾನೂನೇ ಅಂಕುಶ



ವಿಶ್ಲೇಷಣೆ

ಶೋಯಿಂಕಾ ಎಚ್.ಎನ್.

> ಜಾತಿ ಗೌರವದ ಹೆಸರಿನಲ್ಲಿ ಕರುಳಕುಡಿಗಳನ್ನೇ ಕೊಲ್ಲಲು ಹಿಂಜರಿಯದ ಮನಸ್ಸುಗಳು ಸಮಾಜದ ಸ್ವಾಸ್ಥ್ಯಕ್ಕೆ ಅಪಾಯಕಾರಿ. ಈ ಜಾತಿಗ್ರಸ್ತ ಮನಸ್ಸುಗಳ ದುಷ್ಕೃತ್ಯಗಳನ್ನು ನಿಯಂತ್ರಿಸಲು ಪರಿಣಾಮಕಾರಿ ಕಾನೂನು ಅಗತ್ಯ. ಮರ್ಯಾದೆಗೇಡು ಹತ್ಯೆ ಮರ್ಯಾದೆಗೆ ಸಂಬಂಧಿಸಿದ್ದಾಗಿರದೆ, ಅಪರಾಧ ಮನಃಸ್ಥಿತಿಯ ಸಂಕೇತವಾಗಿದೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನ ಇನಾಂ ವೀರಾಪುರ ಗ್ರಾಮದಲ್ಲಿ ಇತ್ತೀಚೆಗೆ ನಡೆದಿರುವ ಭೀಕರ ಮರ್ಯಾದೆಗೇಡು ಹತ್ಯೆ ನಾಗರಿಕ ಸಮಾಜವನ್ನು ಕಳವಳಕ್ಕೀಡುಮಾಡುವ ವಿದ್ಯಮಾನ. ಕರ್ನಾಟಕದಲ್ಲಿ ಇತ್ತೀಚೆಗೆ ನಡೆದಿರುವ ಇಂಥ ಬೆಳವಣಿಗೆಗಳ ಹಿನ್ನೆಲೆಯಲ್ಲಿ, ಮರ್ಯಾದೆಗೇಡು ಹತ್ಯೆಗಳಿಗೆ ಸಂಬಂಧಿಸಿದ ಹಾಗೆ ಒಂದು ಸಮಗ್ರವಾದ ಕಾನೂನಿನ ಅವಶ್ಯಕತೆ ಇದೆ. ಏಕೆಂದರೆ, ನಮ್ಮ ಮುಂದೆ ನಡೆಯುವ ಪ್ರತಿಯೊಂದು ಮರ್ಯಾದೆಗೇಡು ಹತ್ಯೆ ಜಾತ್ಯತೀತತೆಯ ಆಶಯವನ್ನು ನಾಶ ಮಾಡುವಂತಹ ಕೃತ್ಯವಾಗಿದೆ.

ಭಾರತದ ಸುಪ್ರೀಂ ಕೋರ್ಟ್ 'ಶಕ್ತಿವಾಹಿನಿ ವರ್ಸಸ್ ಯೂನಿಯನ್ ಆಫ್ ಇಂಡಿಯಾ' (2018) 7 ಎಸ್.ಸಿ.ಸಿ 192:2018 3 ಎಸ್.ಸಿ.ಸಿ (ಕ್ರಿ. 1:2018) ಪ್ರಕರಣದಲ್ಲಿ, ಮರ್ಯಾದೆಗೇಡು ಹತ್ಯೆಗಳಿಗೆ ಸಂಬಂಧಪಟ್ಟಂತೆ ಒಂದು ವಿಶೇಷವಾದ ಕಾನೂನಿನ ಅಗತ್ಯದ ಬಗ್ಗೆ ಸ್ಪಷ್ಟ ಸಂದೇಶ ಕೊಟ್ಟಿದೆ. ಆ ತೀರ್ಪಿನ ಪುಟ ಸಂಖ್ಯೆ 215, ಪ್ಯಾರಾ 53ರಲ್ಲಿ ಸುಪ್ರೀಂ ಕೋರ್ಟಿನ ಪೀಠವು ವ್ಯಕ್ತಪಡಿಸಿರುವ ಅಭಿಪ್ರಾಯ ಹೀಗಿದೆ:

'ಸತಿಪದ್ಧತಿ ಹಾಗೂ ವರದಕ್ಷಿಣೆಯಂತಹ ಸಾಮಾಜಿಕ ಪಿಡುಗುಗಳಿಗೆ ಸಂಬಂಧಪಟ್ಟ ಹಾಗೆ ಶಾಸನಬದ್ಧವಾದ ಕಾನೂನುಗಳು ಜಾರಿಗೆ ಬಂದಿವೆ. ಸದರಿ ಕಾನೂನುಗಳು ಸಂವಿಧಾನಕ್ಕೆ ಅನುಗುಣವಾಗಿ ಇವೆ. ಅದೇ ರೀತಿಯಲ್ಲಿ ಮಾನವ ಹಕ್ಕುಗಳ ರಕ್ಷಣೆಯೂ ನಮ್ಮ ಸಂವಿಧಾನದ ಅತ್ಯಗತ್ಯ ಅಂಶ ಆಗಿದ್ದು, ಈ ಅಂಶವು ಮಾನವತಾವಾದವನ್ನು ಎತ್ತಿ ಹಿಡಿಯುತ್ತದೆ. ಹೀಗಾಗಿ ನಾಗರಿಕರಿಗೆ ಲಭ್ಯವಾಗಿರುವ ನ್ಯಾಯಯುತವಾದ, ಸಮಾನವಾದ ಹಕ್ಕುಗಳನ್ನು ಕಿತ್ತುಕೊಳ್ಳುವ ಯಾವುದೇ ರೀತಿಯ ಅನಗತ್ಯ ನಿಷೇಧವನ್ನು, ಅಥವಾ ನಿರ್ಬಂಧವನ್ನು ಸಂವಿಧಾನದ ಮೂಲತತ್ತ್ವವಾದ ಮಾನವ ಹಕ್ಕುಗಳ ಸಿದ್ಧಾಂತ ಸಹಿಸುವುದಿಲ್ಲ. ಕಾನೂನಿನ ಸಾರ್ವಭೌಮತ್ವದ ವಿಸ್ತಾರವನ್ನು ಉಸಿರುಗಟ್ಟಿಸುವ ಯಾವುದೇ ಥರದ ಮಾನವ ವಿರೋಧಿ ಚಟುವಟಿಕೆಗಳಿಗೆ ಅವಕಾಶ ನೀಡಬಾರದು ಎಂಬ ಕಾರಣದಿಂದ ನಮ್ಮ ಪೀಠವು ಮರ್ಯಾದೆಗೇಡು ಹತ್ಯೆಗೆ ಸಂಬಂಧಿಸಿದ ಒಂದು ಬಲವಾದ ಕಾನೂನನ್ನು ಜಾರಿಮಾಡುವುದಕ್ಕೆ ಶಾಸನಸಭೆಗೆ ಒಂದು ಗಟ್ಟಿಯಾದ ಸೂಚನೆಯನ್ನು ನೀಡುತ್ತಿದೆ.'

ಕಾನೂನು ಸುವ್ಯವಸ್ಥೆ ಹಾಗೂ ಅಪರಾಧ ನಿಯಂತ್ರಣ ರಾಜ್ಯಗಳ ವ್ಯಾಪ್ತಿಗೆ ಬರುವುದರಿಂದ, ಕರ್ನಾಟಕ ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕಾಯ್ದೆ ರೂಪಿಸಲು ಇದು ಸಕಾಲವಾಗಿದೆ. ಮರ್ಯಾದೆಗೇಡು ಹತ್ಯೆ ಕುರಿತಂತೆ 2018ರ ಮಾರ್ಚ್ 27ರ ಸುಪ್ರೀಂ ಕೋರ್ಟ್ ತೀರ್ಪಿನ ನಂತರ, ಕೇಂದ್ರ ಗೃಹ ಸಚಿವಾಲಯವು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಒಂದು ಸುತ್ತೋಲೆ ಹೊರಡಿಸಿತು. ಆ ಸುತ್ತೋಲೆ ಮರ್ಯಾದೆಗೇಡು ಹತ್ಯೆಗಳ ವಿರುದ್ಧ ಮುಂಜಾಗ್ರತಾ ಕ್ರಮಗಳು, ಪರಿಹಾರಾತ್ಮಕ ಕ್ರಮಗಳು ಹಾಗೂ ದಂಡನಾತ್ಮಕ ಕ್ರಮಗಳನ್ನು ಸೂಚಿಸಿದೆ. ಮುಂಜಾಗ್ರತಾ ಕ್ರಮವಾಗಿ ಇಂಥ ಕೃತ್ಯಗಳು ದಾಖಲಾಗಿರುವ ಹಳ್ಳಿ, ತಾಲ್ಲೂಕು, ಜಿಲ್ಲೆಗಳಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಸುತ್ತೋಲೆ ಸೂಚಿಸಿದೆ.

ಇದೇ ರೀತಿಯಲ್ಲಿ ಸುಪ್ರೀಂ ಕೋರ್ಟ್ 'ಲತಾ ಸಿಂಗ್ ವರ್ಸಸ್ ದಿ ಸ್ಟೇಟ್ ಆಫ್ ಉತ್ತರ ಪ್ರದೇಶ ಮತ್ತು ಇತರರು' (2006 (5) ಎಸ್.ಸಿ.ಸಿ 475) ಪ್ರಕರಣದಲ್ಲಿ ಮರ್ಯಾದೆಗೇಡು ಹತ್ಯೆಗೆ ಸಂಬಂಧಿಸಿದಂತೆ ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದೆ:

'ಕೆಲವೊಮ್ಮೆ ವಯಸ್ಕ ವ್ಯಕ್ತಿಗಳು ತಮ್ಮ ಇಚ್ಛಾನುಸಾರ ಜಾತಿ, ಧರ್ಮ ಮೀರಿ ಮದುವೆ ಆದಾಗ, ಈ ವ್ಯಕ್ತಿಗಳು ಮರ್ಯಾದೆಗೇಡು ಹತ್ಯೆಗಳಿಗೆ ಗುರಿಯಾಗಿರುವ ವಿಷಯದ ಬಗ್ಗೆ ನಾವು ಕೇಳುತ್ತಿರುತ್ತೇವೆ. ಇದರಲ್ಲಿ ಗಮನಿಸಬೇಕಾದ ವಿಷಯ ಏನೆಂದರೆ, ಇಂಥ ಹತ್ಯೆಗಳಲ್ಲಿ ಯಾವುದೇ 'ಮರ್ಯಾದೆ' ಇರುವುದಿಲ್ಲ. ಈ ರೀತಿಯ ಭೀಕರವಾದ ಹತ್ಯೆಗಳನ್ನು ಕ್ರೂರವಾದ ಮತ್ತು ಪಾಳೆಗಾರಿಕೆಯ ಮನಃಸ್ಥಿತಿ ಉಳ್ಳವರು ಮಾತ್ರ ಮಾಡಬಲ್ಲರು. ಈ ರೀತಿಯ ಹತ್ಯೆ ಮಾಡುವ, ಮಾಡಿಸುವ ವ್ಯಕ್ತಿಗಳಿಗೆ ಅತ್ಯಂತ ಉಗ್ರವಾದ ಶಿಕ್ಷೆ ನೀಡಿದಾಗ ಮಾತ್ರ ಇಂಥ ಬರ್ಬರವಾದ ಕ್ರಿಯೆಗಳು ನಿಲ್ಲಬಹುದು.'

ಇದೇ ತೀರ್ಪಿನ ಪ್ಯಾರಾ 17ರಲ್ಲಿ ಸುಪ್ರೀಂ ಕೋರ್ಟ್, ಮರ್ಯಾದೆಗೇಡು ಹತ್ಯೆಗಳಿಗೆ ಸಂಬಂಧಿಸಿದ ಹಾಗೆ ಆಡಳಿತಾತ್ಮಕ ಸಂಸ್ಥೆಗಳಿಗೆ, ಪೊಲೀಸ್ ಇಲಾಖೆಗೆ ನಿರ್ದೇಶನವನ್ನೂ ನೀಡಿದೆ: 'ಈ ಪೀಠ ನೀಡುವ ನಿರ್ದೇಶನವೇನೆಂದರೆ, ವಯಸ್ಕರಾಗಿರುವ ಅಥವಾ ಪ್ರೌಢಾವಸ್ಥೆಗೆ ಬಂದಿರುವ ಗಂಡು ಅಥವಾ ಹೆಣ್ಣು ಅಂತರ್ಜಾತಿ ಅಥವಾ ಅಂತರ್‌ಧರ್ಮೀಯ ಮದುವೆಯಾದರೆ, ಅಂತಹ ಜೋಡಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ಅವರು ಯಾವುದೇ ರೀತಿಯ ಹಿಂಸಾಚಾರಕ್ಕೆ ಗುರಿಯಾಗದಂತೆ ದೇಶದಾದ್ಯಂತ ಇರುವ ಆಡಳಿತಾತ್ಮಕ ಸಂಸ್ಥೆಗಳು, ಪೊಲೀಸ್ ಇಲಾಖೆ, ರಾಜ್ಯ ಹಾಗೂ ಕೇಂದ್ರ ಸರ್ಕಾರ ನೋಡಿಕೊಳ್ಳಬೇಕಾಗುತ್ತದೆ. ಹಾಗೆಯೇ ಯಾರಾದರೂ ಹಿಂಸೆಗೆ ಕುಮ್ಮಕ್ಕು ಕೊಟ್ಟರೆ, ಅಂಥವರ ವಿರುದ್ಧವೂ ಪೊಲೀಸರು ಸ್ವಯಂಪ್ರೇರಣೆಯಿಂದ ಕ್ರಮ ತೆಗೆದುಕೊಳ್ಳಬೇಕು.'

ಸುಪ್ರೀಂ ಕೋರ್ಟ್‌ನ ಆದೇಶಗಳನ್ನು, ತೀರ್ಪುಗಳನ್ನು ಗಮನದಲ್ಲಿಟ್ಟುಕೊಂಡು ಇವತ್ತಿಗೂ ಈ ಮರ್ಯಾದೆಗೇಡು ಹತ್ಯೆಗಳು ನಡೆಯುವುದು ಏಕೆ ಎಂಬುದನ್ನು ಸೂಕ್ಷ್ಮವಾಗಿ ನೋಡಬೇಕಾಗುತ್ತದೆ. ಮೊದಲಿಗೆ, ಅಂತರ್ಜಾತಿ ವಿವಾಹಿತರನ್ನು, ಅಂತರ್‌ಧರ್ಮೀಯ ವಿವಾಹಿತರನ್ನು ಕೊಲೆ ಮಾಡುವ ಕ್ರಿಯೆಯನ್ನು 'ಮರ್ಯಾದಾ'ಹತ್ಯೆಯೆಂದು ಕರೆಯುವುದೇ ತಪ್ಪು. ಇಂಥ ಹತ್ಯೆಗಳಲ್ಲಿ ಯಾವುದೇ 'ಮರ್ಯಾದೆ' ಇಲ್ಲದಿರುವುದರಿಂದ, ಈ ಕೊಲೆಗಳನ್ನು ಬೇರೆಯದೇ ಆದ ರೀತಿಯಲ್ಲಿ ನೋಡಬೇಕಾಗುತ್ತದೆ. ಸಾಮಾನ್ಯವಾಗಿ, ಮನುಷ್ಯರು ಆಸ್ತಿಗಾಗಿ, ಜಿದ್ದಿಗಾಗಿ, ಹಣಕ್ಕಾಗಿ ಕೊಲೆ ಮಾಡುತ್ತಾರೆ. ಆದರೆ, ಈ ದೇಶದಲ್ಲಿ ಕೊಲೆಗೆ ಕಾರಣಗಳಾಗಿ ಇನ್ನೂ ಒಂದೆರಡು ಸಂಗತಿ ಸೇರಿಕೊಳ್ಳುತ್ತವೆ: ಅವುಗಳೆಂದರೆ: ಜಾತೀಯತೆ ಹಾಗೂ ಧರ್ಮಾಂಧತೆ. ತಮ್ಮ ಮನೆಯ ಮಗಳು, ಇನ್ನೊಂದು ಜಾತಿಗೆ, ಧರ್ಮಕ್ಕೆ ಸೇರಿದ ಯುವಕನನ್ನು ಮದುವೆಯಾದರೆ, ತಮ್ಮ 'ಮರ್ಯಾದೆ' ಏನಾಗುತ್ತದೆಯೋ ಎಂಬ ಹುಸಿ ಭ್ರಮೆಯಲ್ಲಿ ಇರುವ ಇಂಥವರು ದೇಶದ ಏಕತೆಗೆ ದೊಡ್ಡ ಧಕ್ಕೆಯಾಗಿದ್ದಾರೆ.

ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ನಮ್ಮನ್ನು ನಾವು 'ವಿ ದ ಪೀಪಲ್ ಆಫ್ ಇಂಡಿಯಾ' (ಭಾರತ ದೇಶದ ಜನರಾದ ನಾವು) ಎಂದು ಘೋಷಿಸಿಕೊಂಡಿದ್ದೇವೆ. ಈ ಸಾಲಿನ ಒಳಾರ್ಥವನ್ನು ಅರಗಿಸಿಕೊಳ್ಳಲು ಎಷ್ಟೋ ಜನ ಭಾರತೀಯರೇ ತಯಾರಿಲ್ಲ. ಅಂದರೆ, ಇನ್ನೊಂದು ಜಾತಿಗೆ ಸೇರಿದ ಜನರನ್ನು 'ಮನುಷ್ಯರು' ಎಂದು ಪರಿಗಣಿಸಲೂ ಕೆಲವರು ತಯಾರಿಲ್ಲವೆಂದಾದರೆ, ಬರೀ ಕಾನೂನಿನ ಬಲದಿಂದ ಮಾತ್ರ 'ಮರ್ಯಾದೆಗೇಡು' ಹತ್ಯೆಗಳು ನಿಲ್ಲುವುದಿಲ್ಲ. ಕಾನೂನು ಜಾರಿಯ ಜೊತೆ ಜೊತೆಗೆ, ಮನೆಗಳಲ್ಲೇ ಜಾತೀಯತೆ ಆಚರಿಸುವುದು ತಪ್ಪು ಎಂದು ಮಕ್ಕಳಿಗೆ ಹೇಳಿಕೊಡಬೇಕಾಗುತ್ತದೆ.


ಮರ್ಯಾದೆಗೇಡು ಹತ್ಯೆಗೆ ಸಂಬಂಧಿಸಿದಂತೆ ಸರ್ಕಾರ ಮಸೂದೆ ರೂಪಿಸಿದೆ. ಅದು ಕಾಯ್ದೆ ಆಗುವಾಗ ಇಂತಹ ಕೃತ್ಯಗಳನ್ನು 'ವಿಶೇಷ ಅಪರಾಧ' ಎಂದು ಪರಿಗಣಿಸಬೇಕು. ಪ್ರತ್ಯೇಕ ನ್ಯಾಯಾಲಯ ಸ್ಥಾಪಿಸಿ, ಶೀಘ್ರದಲ್ಲಿ ನ್ಯಾಯ ನೀಡುವ ಪ್ರಕ್ರಿಯೆಯನ್ನು ಜಾರಿಯಾಗುವಂತೆ ನೋಡಿಕೊಂಡರೆ, ಮರ್ಯಾದೆಗೇಡು ಹತ್ಯೆಗಳು ನಿಲ್ಲಬಹುದು.

ಈ ಅಪರಾಧಕ್ಕೆ ಸಂಬಂಧಿಸಿದ ಹಾಗೆ ಪೊಲೀಸರಿಗೆ ವಿಶೇಷವಾದ ತರಬೇತಿ ನೀಡುವ, ಶಿಬಿರಗಳನ್ನು ಆಯೋಜಿಸುವ ಕೆಲಸಗಳು ಕೂಡ ಆಗಬೇಕಾಗಿದೆ. ಕೆಲವೊಮ್ಮೆ ಪೊಲೀಸರೇ ಜಾತಿ, ಧರ್ಮ ಮೀರಿ ಪ್ರೀತಿಸುವ ಗಂಡು-ಹೆಣ್ಣುಗಳ ಮೇಲೆಯೇ ಎಫ್‌ಐಆರ್ ದಾಖಲು ಮಾಡುವ ಸಾಧ್ಯತೆಗಳಿವೆ. ಇನ್ನೂ ಒಂದು ವಿಚಿತ್ರವೆಂದರೆ, ಮರ್ಯಾದೆಗೇಡು ಹತ್ಯೆ ಮಾಡುವವರ ಪರ ಮಾತಾಡುವ ಒಂದು ವರ್ಗವೂ ಸಮಾಜದಲ್ಲಿ ಹುಟ್ಟಿಕೊಂಡಿದೆ. ಹೀಗೆ ಚೀರಾಡುವ ಮನಃಸ್ಥಿತಿಗಳೇ ಜಾತೀಯತೆಯನ್ನು ಪೋಷಿಸುವ ವರ್ಗಗಳಾಗಿ ಮಾರ್ಪಟ್ಟಿವೆ. ಮನೋವೈಜ್ಞಾನಿಕ ದೃಷ್ಟಿಕೋನದಲ್ಲಿ ನೋಡುವುದಾದರೆ, ನಮ್ಮ ದೇಶದಲ್ಲಿ ಜಾತಿಯ ಹೆಸರಿನಲ್ಲಿ ಶುರುವಾಗುವ ಅಸಹನೆಯೇ ಇದಕ್ಕೆಲ್ಲ ಕಾರಣವೇ ಹೊರತು, ಇನ್ನಾವ ಕಾರಣವೂ ಇಲ್ಲ.

ಸುಪ್ರೀಂ ಕೋರ್ಟ್ ಇತ್ತೀಚೆಗಷ್ಟೇ 'ಕೆ.ಪಿ. ತಮಿಳ್‌ಮಾರನ್ ವರ್ಸಸ್ ದಿ ಸ್ಟೇಟ್ ಬೈ ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್' ಪ್ರಕರಣದ ಪ್ಯಾರಾ ಏಳರಲ್ಲಿ, ಮರ್ಯಾದೆಗೇಡು ಹತ್ಯೆಯ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದೆ:

'ಮುರುಗೇಸನ್ ಮತ್ತು ಕಣ್ಣಗಿ ಎಂಬ ನವಜೋಡಿಯನ್ನು ಅತ್ಯಂತ ಭೀಕರವಾಗಿ ಕೊಲೆ ಮಾಡಿದಾಗ ಅವರಿನ್ನೂ ಇಪ್ಪತ್ತರಿಂದ ಇಪ್ಪತ್ತೈದರ ಅಸುಪಾಸಿನಲ್ಲಿದ್ದರು. ಅವರಿಬ್ಬರಿಗೂ ಊರಿನ ಜನರ ಸಮ್ಮುಖದಲ್ಲೇ ವಿಷ ಕೊಡಲಾಯಿತು. ಆ ಕೃತ್ಯದ ಹಿಂದೆಯಿರುವ ಪಿತೂರಿಗಾರರು ಸ್ವತಃ ಆ ಹೆಣ್ಣುಮಗಳ ತಂದೆ ಮತ್ತು ಆಕೆಯ ಸಹೋದರ. ಇದರ ಹಿಂದೆ ಇರುವ ಏಕೈಕ ಕಾರಣ, ತಮ್ಮ ಜಾತಿಗೆ ಸೇರಿದ ಯುವತಿ ಅದೇ ಊರಿನ 'ದಲಿತ' ಯುವಕನನ್ನು ಮದುವೆಯಾಗಲು ಹೊರಟಿದ್ದು. ಇದನ್ನು ಅರಗಿಸಿಕೊಳ್ಳಲಾರದೆ ಅವರಿಗೆ ವಿಷ ಕೊಡಲಾಯಿತು. ಹಾಗಾಗಿ, ಈ ಅಪರಾಧದ ಮೂಲ ನಮ್ಮ ಭಾರತದಲ್ಲಿ ಆಳವಾಗಿ ಬೇರೂರಿರುವ ಶ್ರೇಣೀಕೃತ ಜಾತಿ ವ್ಯವಸ್ಥೆ. ಆ ವ್ಯವಸ್ಥೆಯಿಂದಲೇ ಮರ್ಯಾದೆಗೇಡು ಕೃತ್ಯಗಳು 'ಮರ್ಯಾದೆಗೇಡು ಹತ್ಯೆ'ಯ ಹೆಸರಿನಲ್ಲಿ ನಡೆಯುತ್ತಿವೆ.

ಕರ್ನಾಟಕ ಸರ್ಕಾರವು ಮರ್ಯಾದೆಗೇಡು ಹತ್ಯೆ ನಿಷೇಧ ಕಾನೂನನ್ನು ಜಾರಿ ಮಾಡಲು ಹೊರಟಿರುವುದು ಸ್ವಾಗತಾರ್ಹ. ಜಾತಿ ಹೆಸರಿನಲ್ಲಿ ಸ್ವಂತ ಮಕ್ಕಳನ್ನೇ ಕೊಲ್ಲುವ ಕೃತ್ಯಗಳು ಇನ್ನಾದರೂ ಕೊನೆಗೊಳ್ಳಲು ಸಮರ್ಥ ಕಾನೂನು ಅಗತ್ಯ, ಜನರ ಸಂಕಲ್ಪವೂ ಅತ್ಯಗತ್ಯ.



ವಾಚಕರ ವಾಣಿ

ನ್ಯಾಯತಕ್ಕಡಿ ತಾರುಮಾರು, ಕಣ್ಣಪಟ್ಟಿ ಒದ್ದೆ

ಉಮರ್ ಖಾಲಿದ್ ಮತ್ತು ಶರ್ಜೀಲ್ ಇಮಾಮ್ ಅವರಿಗೆ ಜಾಮೀನು ನೀಡಲು ನಿರಾಕರಿಸುತ್ತ ಸುಪ್ರೀಂ ಕೋರ್ಟ್ ತೋರಿರುವ ಧೋರಣೆ ಕುರಿತಾದ 'ಪ್ರಜಾವಾಣಿ'ಯ ಸಂಪಾದಕೀಯ (ಜ. 7) ಮಾರ್ಮಿಕವಾಗಿದೆ; ಸದ್ಧರ್ಮವೆಂದರೆ ಏನು ಎಂಬುದನ್ನು ದಿಟ್ಟವಾಗಿ, ಸ್ಫಟಿಕಸ್ಪಷ್ಟವಾಗಿ ಮುಂದಿಟ್ಟಿದೆ. ಯುಎಪಿಎ ಕಾಯ್ದೆ ಮೊದಲೇ ರಕ್ಕಸಕ್ರೂರವಾದದ್ದು. ಖಾಲಿದ್ ಮತ್ತು ಇಮಾಮರ ವಿಷಯದಲ್ಲಿ ನ್ಯಾಯಾಲಯವು ಅದನ್ನು ವಿಚಿತ್ರವಾಗಿ ವ್ಯಾಖ್ಯಾನಿಸಿ, ಇನ್ನಷ್ಟು ಕ್ರೌರ್ಯ ಮೆರೆದಿದೆ. ನ್ಯಾಯದೇವತೆಯ ಕೈಯಲ್ಲಿರುವ ತಕ್ಕಡಿ ತಾರುಮಾರಾಗಿ, ಅವಳ ಕಣ್ಣ ಕಪ್ಪುಪಟ್ಟಿ ಕಂಬನಿಯಿಂದ ಒದ್ದೆಯಾಗಿರುತ್ತದೆ.

ರಘುನಂದನ, ಬೆಂಗಳೂರು

ಸಮಸಮಾಜ ನಿರ್ಮಾಣ ಇಂದಿನ ಅಗತ್ಯ

'ಸಹಬಾಳ್ವೆ, ಪ್ರಜಾಪ್ರಭುತ್ವಕ್ಕಾಗಿ...' ಲೇಖನವು (ಲೇ: ದೇವನೂರ ಮಹಾದೇವ, ಪ್ರ.ವಾ., ಜ. 7) ವಾಸ್ತವ ಸಂಗತಿಯ ಮೇಲೆ ಬೆಳಕು ಚೆಲ್ಲಿದೆ. ಬುದ್ಧ, ಬಸವ, ಅಂಬೇಡ್ಕರ್ ಆಶಿಸಿದ್ದ ಸಮಸಮಾಜ ದೇಶದಲ್ಲಿ ಅಸ್ತಿತ್ವಕ್ಕೆ ಬರಬೇಕಿದೆ. ಕೆಲವು ಜನರ ಮನಸ್ಸಿನ ಕೊಳಕನ್ನು ಹೊರಹಾಕಲು ಎಷ್ಟು ವರ್ಷ ಬೇಕೋ? ಇದು ಸೃಷ್ಟಿಕರ್ತನಿಗೂ ಅರ್ಥವಾಗುವುದಿಲ್ಲ. ಜಾತೀಯತೆ ಬೂದಿಮುಚ್ಚಿದ ಕೆಂಡದಂತಿದೆ. ಈ ಬಗ್ಗೆ ಮೇಲುಕೀಳು, ಅಸ್ಪೃಶ್ಯತೆಯ ನೋವು ಅನುಭವಿಸುತ್ತಿರುವ ಜನರಲ್ಲಿ ಅರಿವು ಮೂಡಿಸಬೇಕಿದೆ. ಇದರ ಮೂಲೋತ್ಪಾಟನೆಗೆ ಒಗ್ಗಟ್ಟಿನಿಂದ ಒಂದೇ ವೇದಿಕೆಯಡಿ ಹೋರಾಟವನ್ನೂ ಮಾಡಬೇಕಿದೆ.

ಮೋಟಮ್ಮ, ಬೆಂಗಳೂರು

ಒಡವೆ ಸಾಲ: ಹೊಸ ನಿಯಮ ಅಸ್ಪಷ್ಟ

ಸರ್ಕಾರಿ ಸ್ವಾಮ್ಯದ ಹಾಗೂ ಖಾಸಗಿ ಬ್ಯಾಂಕ್‌ಗಳಲ್ಲಿ ಚಿನ್ನಾಭರಣ ಸಾಲ ನೀಡಿಕೆಯಲ್ಲಿನ ಹೊಸ ನಿಯಮವು ಸಾಲಗಾರರಿಗೆ ಉರುಳಾಗಿದೆ. ವ್ಯಕ್ತಿಯೊಬ್ಬ 8.1.2025ರಂದು ಸಾಲ ಪಡೆದಿದ್ದಾನೆ ಎಂದಿಟ್ಟುಕೊಳ್ಳಿ. ಆ ಸಾಲವು 7.1.2026ಕ್ಕೆ ಮುಕ್ತಾಯವಾಗುತ್ತದೆ. ಆಗ ಸಾಲಗಾರ ತನ್ನ ಸಾಲದ ಖಾತೆ ಮುಂದುವರಿಸಲು ಅಸಲು ಮತ್ತು ಬಡ್ಡಿ ಎರಡನ್ನೂ ಪಾವತಿಸಬೇಕು ಎಂಬುದು ಬ್ಯಾಂಕ್‌ನವರ ವಾದ. ಈ ಮೊದಲು ಕೇವಲ ಬಡ್ಡಿ ಪಾವತಿಸಿದರೆ ಹಳೆಯ ಸಾಲವನ್ನು ನವೀಕರಿಸಲಾಗುತ್ತಿತ್ತು. ಇದರಿಂದ ಗ್ರಾಹಕರಿಗೆ ಅನುಕೂಲವಾಗುತ್ತಿತ್ತು. ಹೊಸ ನಿಯಮದಿಂದ ರೈತರು, ಮಧ್ಯಮವರ್ಗದವರಿಗೆ ತೊಂದರೆಯಾಗಿದೆ. ಸಾಲ ನವೀಕರಣವಾಗದಿದ್ದರೆ ಬ್ಯಾಂಕ್‌ನಲ್ಲಿ ಸಾಲಗಾರ ಹೊಂದಿರುವ ಎಲ್ಲಾ ಖಾತೆಗಳೂ ಅಮಾನತು ಆಗುತ್ತವೆ. ಬ್ಯಾಂಕ್‌ನ ಸಾಲ ತೀರಿಸಲು ಸಾಲಗಾರ ಖಾಸಗಿಯವರ ಹತ್ತಿರ ಹೆಚ್ಚಿನ ಬಡ್ಡಿಗೆ ಹಣ ಪಡೆಯಬೇಕಾಗುತ್ತದೆ. ಇದರಿಂದ ಸರ್ಕಾರವೇ ನೇರವಾಗಿ ಖಾಸಗಿ ವ್ಯಕ್ತಿಗಳಿಗೆ ಅನುಕೂಲ ಮಾಡಿಕೊಟ್ಟಂತಾಗುತ್ತದೆ. ಈ ಬಗ್ಗೆ ಭಾರತೀಯ ರಿಸರ್ವ್ ಬ್ಯಾಂಕ್ ಸ್ಪಷ್ಟವಾದ ನಿಯಮಾವಳಿ ರೂಪಿಸಬೇಕಿದೆ.

ಮಲ್ಲಿಕಾರ್ಜುನ ಕೊಡಗನೂರ್, ದಾವಣಗೆರೆ

ಭಕ್ತನ ಸರಳ ಭಕ್ತಿ ಮತ್ತು ತೋರುಗಾಣಿಕೆ

ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರ ಚತುರ್ಥ ಪರ್ಯಾಯದ ಅಂಗವಾಗಿ ದೆಹಲಿಯ ಶ್ರೀಕೃಷ್ಣ ಭಕ್ತರೊಬ್ಬರು ₹2 ಕೋಟಿ ವೆಚ್ಚದಲ್ಲಿ ಸಿದ್ಧಪಡಿಸಿರುವ ಚಿನ್ನದ ಭಗವದ್ಗೀತೆ ಹೊತ್ತಿಗೆ ಲೋಕಾರ್ಪಣೆ ಮಾಡುತ್ತಿರುವುದು ಭಕ್ತಿಯ ಸಂಕೇತದಂತೆ ಕಾಣಿಸುತ್ತಿಲ್ಲ. ಇದು ಹೆಚ್ಚುಗಾರಿಕೆಯ, ಪ್ರದರ್ಶನದ ಆಡಂಬರ. ಸಮಾಜಕ್ಕೆ ತಪ್ಪುಮಾದರಿಯ ಸಂದೇಶ ನೀಡುತ್ತದೆ. ಈ ರೀತಿ ಕೀರ್ತಿ, ತೋರುಗಾಣಿಕೆಗಾಗಿ ವೃಥಾ ಹಣ ಪೋಲು ಮಾಡುವುದನ್ನು ಬಿಟ್ಟು ಭಗವದ್ಗೀತೆಯಲ್ಲಿನ ಭಕ್ತಿ ಮತ್ತು ಸ್ಥಿತಪ್ರಜ್ಞ ಸಂದೇಶದಲ್ಲಿ ಭಕ್ತನ ಸರಳ ಭಕ್ತಿ ಹೇಗಿರಬೇಕು ಎನ್ನುವ ಶ್ರೀಕೃಷ್ಣನ ಮಾತುಗಳನ್ನು ನಾವೆಲ್ಲರೂ ಅನುಸರಿಸಬೇಕು. ಭಗವದ್ಗೀತೆಯ ಚಿಂತನೆಗಳು ಆಂತರಿಕವಾಗಿ ಆಚರಣೆಗೆ ಬರಲಿ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಜವಾಬ್ದಾರಿ ಮರೆತ ಚಲನಚಿತ್ರ ಅಕಾಡೆಮಿ

'ಚಿತ್ರೋತ್ಸವಕ್ಕೆ ಸೀಮಿತವಾದ ಚಲನಚಿತ್ರ ಅಕಾಡೆಮಿ' ವರದಿಯಲ್ಲಿ (ಪ್ರ.ವಾ., ಜ. 4) ಪ್ರಸ್ತಾಪಿಸಿರುವ ಒಟ್ಟಾರೆ ಸ್ಥಿತಿ ಯಥಾರ್ಥವಾದುದು. 'ಹಿಂದಿನ ಅಧ್ಯಕ್ಷರಿಂದಲೂ ಏನೂ ಕಾರ್ಯಕ್ರಮ ಆಗಿರಲಿಲ್ಲ' ಎಂಬುದು ಸಮರ್ಥನೆ ಆಗದು. ಪ್ರಥಮ ಅಧ್ಯಕ್ಷ ಟಿ.ಎಸ್. ನಾಗಾಭರಣ ಕೆಲವು ಯೋಜನೆ ಆರಂಭಿಸಿದ್ದರು. ರಾಜೇಂದ್ರಸಿಂಗ್ ಬಾಬು ಅವರು ಕೆಲವು ಕಾರ್ಯಕ್ರಮ ನಡೆಸಿದರಾದರೂ, ಅವು ವಾಣಿಜ್ಯ ಮಂಡಳಿ ನಡೆಸುವಂತಹವಾಗಿದ್ದವು. ಮಾಧ್ಯಮವಾಗಿ ಚಲನಚಿತ್ರವನ್ನು ಬೆಳೆಸುವುದು ಹೇಗೆ ಎಂಬುದರತ್ತ ಅಕಾಡೆಮಿಯು ಗಮನಹರಿಸಬೇಕು. ಹದಿನಾರು ವರ್ಷಗಳ ನಂತರವೂ ಅಕಾಡೆಮಿಯು ಒಂದು ಸಾರ್ಥಕ ಸಂಸ್ಥೆಯಾಗಿ ರೂಪುಗೊಂಡಿಲ್ಲ. 'ಬಿಫೆಸ್' ನಡೆಸುವುದು ಸರ್ಕಾರ. ಅದರಲ್ಲಿ ಅಕಾಡೆಮಿಯ ಪಾತ್ರ ಸೀಮಿತ. ಅದನ್ನೇ ತನ್ನ ಸಾಧನೆ ಎಂದು ಅಕಾಡೆಮಿ ಹೇಳಿಕೊಳ್ಳಬಾರದು.

ಎಚ್.ಎಸ್. ಮಂಜುನಾಥ, ಗೌರಿಬಿದನೂರು

ಪರಿಹಾರ ತಡ: ಪ್ರಜಾಪ್ರಭುತ್ವದ ಅಣಕ

ಬಳ್ಳಾರಿಯಲ್ಲಿ ನಡೆದ ಬ್ಯಾನರ್ ಗಲಾಟೆಯಲ್ಲಿ ಮೃತಪಟ್ಟ ಕಾಂಗ್ರೆಸ್ ಕಾರ್ಯಕರ್ತನ ಕುಟುಂಬಕ್ಕೆ ಎರಡು ದಿನದಲ್ಲಿಯೇ ಸಚಿವ ಜಮೀರ್ ಅಹಮದ್ ಖಾನ್ ಅವರು ₹25 ಲಕ್ಷ ಪರಿಹಾರ ನೀಡಿ ಸಾಂತ್ವನ ಹೇಳಿದ್ದಾರೆ. ಆದರೆ, ಮೈಸೂರಿನಲ್ಲಿ ಸಂಭವಿಸಿದ ಸಿಲಿಂಡರ್ ಸ್ಫೋಟದಲ್ಲಿ ಸಂತ್ರಸ್ತರಾದವರಿಗೆ ಇನ್ನೂ ಪರಿಹಾರ ನೀಡಿಲ್ಲ. ಈ ಎರಡೂ ಪ್ರಕರಣಗಳಲ್ಲಿ ಸಂಭವಿಸಿರುವುದು ದುರಂತ ಸಾವುಗಳೇ! ಆದರೆ, ರಾಜಕೀಯ ಸಾವಿಗೆ ಸ್ಪಂದಿಸಿದ ರೀತಿಗೂ, ಬಡಪಾಯಿ ಮಹಿಳೆಯರ ಸಾವಿಗೆ ಸ್ಪಂದಿಸುತ್ತಿರುವ ರೀತಿಗೂ ವ್ಯತ್ಯಾಸವಿದೆ. ಪ್ರಜಾಪ್ರಭುತ್ವವನ್ನೇ ಅಣಕಿಸುವಂತಹ ಇಂತಹ ವೈರುಧ್ಯಗಳಿಗೆ ಹೊಣೆ ಯಾರು?

ಅಶೋಕ ಓಜಿನಹಳ್ಳಿ, ಕೊಪ್ಪಳ

ಚುರುಮುರಿ



ದೀರ್ಘಾವಧಿ ಡಿಸಿಎಂ!

• ಗುರು ಪಿ.ಎಸ್.

'ಕಂಗ್ರಾಟ್ಸ್ ಸರ್...' ಹಾರ–ತುರಾಯಿಗಳೊಂದಿಗೆ ಮುಗುಳ್ನಗುತ್ತಾ ಒಳಬಂದರು ಡಿಸಿಎಂ.

'ಓಹ್, ಬಾರಯ್ಯ, ಬಾ... ಥ್ಯಾಂಕ್ಯೂ' ಹಾರ ಹಾಕಿಸಿಕೊಂಡು ಮುಗುಳ್ನಕ್ಕರು ಸಿಎಂ.

'ರಾಜ್ಯದಲ್ಲಿ ದೀರ್ಘಾವಧಿ ಮುಖ್ಯಮಂತ್ರಿ ಆಗಿ ಕೆಲಸ ಮಾಡಿದವರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದೀರಿ'.

'ಎಲ್ಲಾ ಜನರ ಆಶೀರ್ವಾದ' ಎನ್ನುತ್ತಾ ಕೂರುವಂತೆ ಸನ್ನೆ ಮಾಡಿ ತಾವೂ ಕುಳಿತರು.

'ಮತ್ತೆ ಸರ್, ಮುಂದೇನು?'

'ಏನಿಲ್ಲ, ಸಂಜೆ ಕಾರ್ಯಕ್ರಮ ಇದೆ ಹೋಗಬೇಕು'.

'ಅದಾಯ್ತು ಸಾರ್, ಆಮೇಲೇನು?'

'ಆಮೇಲೆ ಅಂದ್ರೆ, ನಾಳೆ ಮೈಸೂರಿಗೆ ಹೋಗಬೇಕು'.

'ಅದಲ್ಲ ಸಾರ್... ಹೋಗ್ಲಿ ಬಿಡಿ. ನನ್ನ ಬಗ್ಗೆ ನಿಮಗೇನನಿಸುತ್ತೆ ಸಾರ್?'

'ಒಳ್ಳೆ ನಾಯಕ, ಚೆನ್ನಾಗಿ ಇಂಗ್ಲಿಷ್ ಮಾತನಾಡ್ತೀಯ, ಮಹಾನ್ ದೈವಭಕ್ತ ಬೇರೆ' ಹೊಗಳತೊಡಗಿದರು.

'ನನ್ನನ್ನ ಮತ್ತಷ್ಟು ಬೆಳೆಸಬೇಕು ಅಂತ ನಿಮಗನ್ನಿಸ್ತಿಲ್ವ ಸಾರ್'.

'ನನಗಿಂತ ಒಂದಿಂಚು ಎತ್ತರಾನೇ ಇದ್ದೀಯಲ್ಲಯ್ಯ, ಮತ್ತೆಷ್ಟು ಬೆಳೆಯಬೇಕು' ನಗೆಚಟಾಕಿ ಹಾರಿಸಿದರು ಸಿಎಂ.

'ಸಾರ್, ಅದಲ್ಲ. ಈಗ ನೀವು ರಾಜ್ಯದಲ್ಲಿ ದೀರ್ಘಾವಧಿಯವರೆಗೆ ಸಿಎಂ ಕುರ್ಚಿಯಲ್ಲಿದ್ದ ಸಾಧನೆ ಮಾಡಿದ್ದೀರಿ...' ತಲೆ ಕೆರೆದುಕೊಂಡರು ಡಿಸಿಎಂ.

'ಓಹ್, ಹಾಗಾ..! ಗೊತ್ತಾಯ್ತು. ನನ್ನ ರೀತಿಯೇ ನೀನೂ ಸಾಧನೆ ಮಾಡಬೇಕು ಅಂತ ಕೇಳ್ತಿದ್ದೀಯ ಅಲ್ಲವಾ?'

ಸ್ವರ್ಗಕ್ಕೆ ಮೂರೇ ಗೇಣು ಅನ್ನುವ ಉತ್ಸಾಹದಲ್ಲಿ 'ಹೂಂ, ಹೂಂ' ತಲೆ ಅಲ್ಲಾಡಿಸಿದರು ಡಿಸಿಎಂ.

'ನೋಡು, ಈವರೆಗೂ ರಾಜ್ಯದಲ್ಲಿ ಯಾರೂ ಮಾಡದ ಸಾಧನೆ ಮಾಡುವ ಅವಕಾಶ ನಿನ್ನ ಕೈಯಲ್ಲೇ ಇದೆ' ಪ್ರೋತ್ಸಾಹದ ಧ್ವನಿಯಲ್ಲಿ ಹೇಳಿದರು ಸಿಎಂ.

'ಹೇಳಿ ಸಾರ್, ನಿಮ್ಮಂಗೆ ನನ್ನದೂ ದಾಖಲೆ ಆಗುತ್ತೆ ಅನ್ನೋದಾದರೆ ಖಂಡಿತ ಮಾಡುತ್ತೇನೆ'.

'ನೋಡಯ್ಯ, ಈ ರಾಜ್ಯದಲ್ಲಿ ಯಾರೂ 5 ವರ್ಷ ಸತತವಾಗಿ ಉಪಮುಖ್ಯಮಂತ್ರಿಯಾಗಿದ್ದ ಸಾಧನೆ ಮಾಡಿಲ್ಲ. ಇನ್ನೂ ಎರಡೂವರೆ ವರ್ಷ ನೀನು ಇದೇ ಹುದ್ದೆಯಲ್ಲಿದ್ದರೆ, ರಾಜ್ಯದಲ್ಲಿಯೇ ದೀರ್ಘಾವಧಿ ಉಪಮುಖ್ಯಮಂತ್ರಿ ಅನ್ನೋ ಹಿರಿಮೆ ನಿನ್ನದಾಗುತ್ತೆ' ಎಂದು ಕೈ ಕುಲುಕುತ್ತಾ ನಕ್ಕರು.

ಮರುಕ್ಷಣದಲ್ಲೇ ಡಿಸಿಎಂ ಕಾರು ಹೊರಟಿತು.

ಸಂಗತ

ಅತ್ಯಾಚಾರ: ಅಧಿಕಾರ ಮತ್ತು ಧರ್ಮಭಯ!


ರಾಜಕಾರಣಿ – ಧರ್ಮಗುರು ಎಸಗುವ ಅತ್ಯಾಚಾರದ ಹಿಂದೆ ಲೈಂಗಿಕ ಆಸೆಯಷ್ಟೇ ಇರುವುದಿಲ್ಲ. ಅದು ಅಧಿಕಾರ ಹಾಗೂ ಧರ್ಮದ ದುರುಪಯೋಗವೂ ಹೌದು.

• ಶಿವಲಿಂಗಸ್ವಾಮಿ ಎಚ್.ಕೆ.

ಪ್ರಪಂಚದಲ್ಲಿ ಎಲ್ಲಿ ಅತ್ಯಾಚಾರ ಸಂಭವಿಸಿದರೂ ಅದನ್ನು ಸಾಮಾನ್ಯವಾಗಿ ಲೈಂಗಿಕ ಹಿಂಸೆಯ ಒಂದು ಕ್ಷಣಿಕ ಘಟನೆ ಎಂದು ಅರ್ಥೈಸಿ, ವಿಕೃತ ಮನಃಸ್ಥಿತಿಯ ವ್ಯಕ್ತಿಯಿಂದ ನಡೆದ ಅಚಾನಕ್ ಅಪರಾಧವೆಂದು ವಿವರಿಸಲಾಗುತ್ತದೆ. ಆದರೆ, ರಾಜಕಾರಣಿಗಳು ಅಥವಾ ಧಾರ್ಮಿಕ ನಾಯಕರು ಅತ್ಯಾಚಾರ ಎಸಗಿರುವ ಸಂದರ್ಭಗಳಲ್ಲಿ ಆ ಕೃತ್ಯಗಳನ್ನು ಬೇರೆ ರೀತಿಯಲ್ಲಿ ಅರ್ಥಮಾಡಿಕೊಳ್ಳಬೇಕಾಗುತ್ತದೆ. ಬಹಳಷ್ಟು ಸಂದರ್ಭಗಳಲ್ಲಿ ಅತ್ಯಾಚಾರವು ಬರೀ ದೇಹದ ಮೇಲಿನ ದೌರ್ಜನ್ಯವಷ್ಟೇ ಆಗಿರುವುದಿಲ್ಲ ಮತ್ತು ಅತಿಕಾಮದ ಅಭಿವ್ಯಕ್ತಿ ಮಾತ್ರವಾಗಿರುವುದಿಲ್ಲ; ಬದಲಾಗಿ ಅದು ಸಂಬಂಧಪಟ್ಟ ವ್ಯಕ್ತಿಯ ಶಕ್ತಿ ಮತ್ತು ಅಧಿಕಾರದ ಬಹಿರಂಗ ಪ್ರದರ್ಶನ ಆಗಿರುತ್ತದೆ. ಈ ಕೃತ್ಯದ ಮೂಲಕ ಅತ್ಯಾಚಾರಕ್ಕೆ ಒಳಗಾದ ಮಹಿಳೆಗೆ ಮತ್ತು ಸಮಾಜಕ್ಕೆ ಆತ ನೀಡುವ ಸಂದೇಶ: ನಾನು ಇದನ್ನು ನಿರ್ಭಯವಾಗಿ ಮಾಡಬಲ್ಲೆ, ನನಗೆ ಏನೂ ಆಗುವುದಿಲ್ಲ.

ಜೇಮ್ಸ್ ಮ್ಯಾಕ್ಸ್‌ವೆಲ್ ಕಟ್ಸಿ ಅವರ ಕಾದಂಬರಿ, 'ಡಿಸ್‌ಗ್ರೇಸ್'ನಲ್ಲಿ ಮೂವರು ವ್ಯಕ್ತಿಗಳಿಂದ ಏಕಕಾಲಕ್ಕೆ ಅತ್ಯಾಚಾರಕ್ಕೊಳಗಾಗುವ ಲೂಸಿ ಎಂಬ ಹೆಣ್ಣುಮಗಳು, ಅತ್ಯಾಚಾರದ ವ್ಯಾಖ್ಯಾನವನ್ನು ಲೈಂಗಿಕ ಆಸೆಯ ಪರಿಧಿಯಿಂದ ಬೇರ್ಪಡಿಸಿ, ಅದನ್ನು ಮಹಿಳೆಯರ ಮೇಲೆ ಅಧಿಕಾರ ಸ್ಥಾಪನೆಯ ಮತ್ತು ದ್ವೇಷದ ಕ್ರಿಯೆಯಾಗಿ ನಿರೂಪಿಸುತ್ತಾಳೆ. ಅಪರಿಚಿತ ಹೆಣ್ಣೊಬ್ಬಳ ಜೊತೆ ಲೈಂಗಿಕ ಸಂಪರ್ಕ ಸಾಧಿಸುವುದು ಕೊಲೆಯಿದ್ದಂತೆ ಎಂದು ವಾದಿಸುತ್ತಾಳೆ. ಚೂರಿಯನ್ನು ದೇಹದ ಒಳಗೆ ಚುಚ್ಚಿ, ರಕ್ತಸಿಕ್ತ ದೇಹವನ್ನು ನರಳಲು ಬಿಟ್ಟು ಕಾಲ್ತೆಗೆಯುವ ಕೊಲೆಗಾರನಂತೆಯೇ ಪ್ರತಿಯೊಬ್ಬ ಅತ್ಯಾಚಾರಿ ಎನ್ನುತ್ತಾಳೆ. ಲೂಸಿಗೆ ಅತ್ಯಾಚಾರವೆಂದರೆ, ಪೂರ್ಣಾಧಿಕಾರದ ಘೋಷಣೆ. ಆಕೆಯ ಪ್ರಕಾರ, ಅತ್ಯಾಚಾರಿಯ ಕಣ್ಣಲ್ಲಿ ಮಹಿಳೆಯ ದೇಹವು ಆಕ್ರಮಿಸಿ ತ್ಯಜಿಸಬಹುದಾದ ವಸ್ತು.

ಅತ್ಯಾಚಾರವೆಸಗುವ ವ್ಯಕ್ತಿಗಳಲ್ಲಿ ಜನಪ್ರತಿನಿಧಿಗಳು ಮತ್ತು ಧರ್ಮಗುರುಗಳು ಇರುವ ಪ್ರಕರಣಗಳು ಆಗಾಗ ಬೆಳಕಿಗೆ ಬರುತ್ತಿವೆ. ಇದರಲ್ಲಿ, ದೇವಮಾನವ ಅಂದರೆ ಧಾರ್ಮಿಕ ಗುರುಗಳು ಮಾಡುವ ಅತ್ಯಾಚಾರವು ಅತ್ಯಂತ ಭೀಕರ ಅಪರಾಧ. ಇಲ್ಲಿ ಲೈಂಗಿಕ ಹಿಂಸೆಯು ಧರ್ಮ ಮತ್ತು ಆಧ್ಯಾತ್ಮಿಕತೆಯ ಮುಖವಾಡದ ಹಿಂದೆ ನಡೆಯುತ್ತದೆ. ಇಂತಹ ಕೃತ್ಯಗಳು ಅತ್ಯಾಚಾರಿಯ ವೈಯಕ್ತಿಕ ನೈತಿಕ ವೈಫಲ್ಯದಿಂದಷ್ಟೇ ಅಲ್ಲದೆ, ಅನುಯಾಯಿಗಳ ಮೌಢ್ಯದಿಂದಲೂ ಆಗುತ್ತವೆ. ಕೆಲ ಸಂದರ್ಭಗಳಲ್ಲಿ ಲೈಂಗಿಕ ಶೋಷಣೆಯನ್ನೇ 'ಆಶೀರ್ವಾದ', 'ಚಿಕಿತ್ಸೆ' ಎಂದು ನಂಬಿಸಲಾಗುತ್ತದೆ. ಧರ್ಮಗುರುಗಳೂ ಮನುಷ್ಯರು ಮತ್ತು ಅವರಿಗೂ ಲೈಂಗಿಕ ಆಸೆಗಳು ಇರುವುದು ಅಸಹಜವಲ್ಲ. ಆದರೆ, ಅವರು ಧಾರ್ಮಿಕ ಪರಿಭಾಷೆಯನ್ನು ದುರುಪಯೋಗಪಡಿಸಿಕೊಳ್ಳುವುದು, ತಮ್ಮ ಆಸೆಗಳನ್ನು ಮರೆಮಾಡಿ ಭಕ್ತರನ್ನು ಬಲಿಪಶುಗಳನ್ನಾಗಿ ಮಾಡುವುದು ಶಿಕ್ಷಾರ್ಹ ಅಪರಾಧ.



ರಾಜಕಾರಣಿಗಳು ಅತ್ಯಾಚಾರ ನಡೆಸುವ ಸಂದರ್ಭಗಳಲ್ಲಿ ಅದು ಬರೀ ಲೈಂಗಿಕ ಅಪರಾಧವಾಗಿರದೆ, ಅಧಿಕಾರದಿಂದ ಬೆಂಬಲಿತವಾದ ಶಕ್ತಿಯ ಪ್ರದರ್ಶನವಾಗುತ್ತದೆ. ರಾಜಕಾರಣಿಗಳು ಸಾಮಾನ್ಯವಾಗಿ ಸಾಮಾಜಿಕ ಪ್ರತಿಷ್ಠೆ ಅನುಭವಿಸುತ್ತಿರುತ್ತಾರೆ ಮತ್ತು ಎಲ್ಲ ಸಾಮಾಜಿಕ ಸಂಸ್ಥೆಗಳ ಮೇಲೆ ತಮ್ಮ ನಿಯಂತ್ರಣ ಹೊಂದಿರುವುದರಿಂದ ತಾವು ಶಿಕ್ಷಾತೀತರು ಎಂಬ ಭಾವನೆ ಹೊಂದಿರುತ್ತಾರೆ. ಅಧಿಕಾರದ ನಶೆಯು ಅವರಲ್ಲಿ 'ನಿಯಮಗಳು ಇತರರಿಗೆ ಮಾತ್ರ' ಎಂಬ ಅಹಂಕಾರ ಹುಟ್ಟುಹಾಕುತ್ತದೆ. ಈ ಕಾರಣದಿಂದ ಬಲಿ ಆದವರು ಭಯ, ಅಥವಾ ಸಾಮಾಜಿಕ ಒತ್ತಡಗಳಿಂದ ಮೌನವಾಗುತ್ತಾರೆ. ರಾಜಕೀಯ ಪ್ರಭಾವದ ಕಾರಣದಿಂದ ವ್ಯವಸ್ಥೆಯೂ ಅವರ ಮೇಲೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಹಿಂಜರಿಯುತ್ತದೆ.

ಯುದ್ಧಗಳಲ್ಲಿ ಮತ್ತು ಕೋಮುಗಲಭೆಗಳಲ್ಲಿ ನಡೆಯುವ ಅತ್ಯಾಚಾರವು ಕೂಡ ಶಕ್ತಿ ಪ್ರದರ್ಶನದ ಆಯುಧವಾಗಿದೆ. ಇಂತಹ ಸಂದರ್ಭಗಳಲ್ಲಿ ಮಹಿಳೆಯರ ದೇಹಗಳನ್ನು ಶತ್ರು ಸಮುದಾಯದ ಮತ್ತು ಶತ್ರು ರಾಷ್ಟ್ರದ ಗೌರವದ ಸಂಕೇತಗಳಾಗಿ ಪರಿಗಣಿಸಲಾಗುತ್ತದೆ. ಹೆಣ್ಣುಮಕ್ಕಳ ಅತ್ಯಾಚಾರದ ಮೂಲಕ ಭೀತಿಯನ್ನು ಹುಟ್ಟಿಸಿ, ಎದುರಿನ ಸಮುದಾಯದ ಮತ್ತು ರಾಷ್ಟ್ರದ ಮನೋಬಲವನ್ನು ಕುಗ್ಗಿಸುವುದು ಇದರ ಮುಖ್ಯ ಉದ್ದೇಶವಾಗಿರುತ್ತದೆ. ಈ ಕೃತ್ಯವು ಲೈಂಗಿಕ ಆಸೆಗಿಂತಲೂ, ಆಧಿಪತ್ಯವನ್ನು ಸ್ಥಾಪಿಸುವುದು, ಭಯವನ್ನು ಬಿತ್ತುವುದು ಮತ್ತು ಜಯವನ್ನು ಪ್ರದರ್ಶಿಸುವ ಉದ್ದೇಶಗಳಿಂದ ಹೆಚ್ಚು ಪ್ರೇರಿತವಾಗಿರುತ್ತದೆ.

ಧರ್ಮಗುರುಗಳು ಹಾಗೂ ರಾಜಕಾರಣಿಗಳು ಅತ್ಯಾಚಾರಗಳನ್ನು ಎಸಗಿ ಶಿಕ್ಷೆಯಿಂದ ತಪ್ಪಿಸಿಕೊಳ್ಳುವುದು ಅತ್ಯಂತ ಸಹಜ ಸಂಗತಿ. ಇದಕ್ಕೆ ಕಾರಣ, ಅವರ ಅಪರಾಧಗಳನ್ನು ಸಾಬೀತುಪಡಿಸಲು ಸಾಧ್ಯವಿಲ್ಲ ಎನ್ನುವುದಲ್ಲ. ಫ್ರೆಂಚ್ ಚಿಂತಕ ಮಿಷೆಲ್ ಫೂಕೋ ಹೇಳುವಂತೆ, ಇವರೆಲ್ಲ ಅಧಿಕಾರ ಮತ್ತು ಜ್ಞಾನದ ವ್ಯವಸ್ಥೆಗಳೊಳಗೆ ಕಾರ್ಯನಿರ್ವಹಿಸುತ್ತಿರುವುದು. ಅವರ ಅಧಿಕಾರವು ಸಾಂಸ್ಥಿಕವಾಗಿ ನಿರ್ಮಿತಗೊಂಡು ಸಮಾಜದೊಳಗೆ ಪ್ರಸರಣಗೊಂಡಿರುತ್ತದೆ. ದೇವಮಾನವರು ಧರ್ಮದ ಹೆಸರಿನಲ್ಲಿ ವಿಧೇಯತೆಯನ್ನು ಸೃಷ್ಟಿಸುತ್ತಾರೆ; ರಾಜಕಾರಣಿಗಳು ಕಾನೂನು ಮತ್ತು ಆಡಳಿತಾತ್ಮಕ ಪ್ರಭಾವವನ್ನು ಬಳಸುತ್ತಾರೆ.

ಅತ್ಯಾಚಾರದ ಮೂಲಕ ಅಧಿಕಾರದ ಶಕ್ತಿಯನ್ನು ಪ್ರದರ್ಶಿಸಿ ಬಲವಂತರು ಸಾಮಾನ್ಯ ಜನರನ್ನು ತ್ಯಾಜ್ಯವನ್ನಾಗಿಸುವಾಗ, ಜನಸಾಮಾನ್ಯರು ಸ್ವತಂತ್ರವಾಗಿ ನ್ಯಾಯವನ್ನು ಪಡೆಯಲು ಪ್ರಯತ್ನಿಸುವುದು ದುರಂತಗಳಲ್ಲಿ ಕೊನೆಗೊಳ್ಳುತ್ತದೆ. ಅಧಿಕಾರಕ್ಕೆ ಬಲಿಯಾದ ಜನರು ತಮ್ಮ ದೌರ್ಬಲ್ಯವನ್ನು ಸಾಮೂಹಿಕಗೊಳಿಸಬೇಕು ಮತ್ತು ತಮ್ಮ ವೇದನೆಯನ್ನು ರಾಜಕೀಯಗೊಳಿಸಬೇಕು. ವ್ಯಕ್ತಿಗಳು ಒಂಟಿಯಾಗಿ ಹೋರಾಟ ಮಾಡುವಾಗ ಅವರ ಖಾಸಗಿ ಆಘಾತವನ್ನು ಸಾರ್ವಜನಿಕ ಆಘಾತವಾಗಿ ಪರಿವರ್ತಿಸಬೇಕು.


Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ತಿರುಪರನ್‌ಕುಂದ್ರಂ: ಸಾಮರಸ್ಯದ ‘ದೀಪ’ದಲ್ಲಿ ಒಡಕಿನ ಬಿಂಬಗಳು

ಪ್ರಜಾವಾಣಿ ವಾರ್ತೆ

ಶತಮಾನಗಳಿಂದ ಸಹಬಾಳ್ವೆಯ ಪ್ರತೀಕವಾಗಿದ್ದ ತಮಿಳುನಾಡಿನ ತಿರುಪರನ್‌ಕುಂದ್ರಂ ಈಗ ವಿವಾದದ ಕೇಂದ್ರಬಿಂದುವಾಗಿದೆ. ಜೈನ, ಬೌದ್ಧ, ಮುಸ್ಲಿಂ ಮತ್ತು ಹಿಂದೂಗಳ ಶ್ರದ್ಧಾಕೇಂದ್ರವಾಗಿದ್ದ ಈ ಸ್ಥಳವು ಈಗ ರಾಷ್ಟ್ರ ಮಟ್ಟದಲ್ಲಿ ಗಮನ ಸೆಳೆದಿದೆ. ಬೆಟ್ಟಕ್ಕೆ ಮರುನಾಮಕರಣ ಮಾಡುವುದಕ್ಕೆ ಮತ್ತು ಕಾರ್ತಿಕ ದೀಪ ಹಚ್ಚುವುದಕ್ಕೆ ಸಂಬಂಧಿಸಿದ ವಿವಾದದಿಂದ ನೂರಾರು ವರ್ಷಗಳ ಸೌಹಾರ್ದಕ್ಕೆ ಭಂಗ ಉಂಟಾಗುವ ಆತಂಕ ಎದುರಾಗಿದೆ. ಒಂದು ಬೆಟ್ಟ, ಅದರ ಬುಡದಲ್ಲಿರುವ ಮುರುಗನ ದೇವಾಲಯ ಮತ್ತು ಬೆಟ್ಟದ ಮೇಲಿರುವ ದರ್ಗಾಗೆ ಸಂಬಂಧಿಸಿದ ವಿಚಾರವು ರಾಜಕೀಯ ಪ್ರವೇಶದಿಂದ ದೊಡ್ಡ ವಿವಾದವೆಂಬಂತೆ ಬಿಂಬಿತವಾಗುತ್ತಿದೆ



ಮದುರೆ ಬಳಿ ಇರುವ ತಿರುಪರನ್‌ಕುಂದ್ರಂ ಹಲವು ಧರ್ಮಗಳ ಪವಿತ್ರ ಸ್ಥಳವಾಗಿದೆ. ಯುದ್ಧಭೂಮಿಯಾಗಿ, ದೇವರ ನೆಲೆಯಾಗಿ, ಸ್ಮಾರಕವಾಗಿ ಪ್ರಸಿದ್ಧವಾಗಿದೆ. ತಮಿಳುನಾಡಿನ ಹಿಂದೂಗಳ ಆರಾಧ್ಯದೈವವಾದ ಮುರುಗನ ದೇವಾಲಯ ಇಲ್ಲಿನ ಬೆಟ್ಟದ ಬುಡದಲ್ಲಿದೆ. ರಾಜ್ಯದಲ್ಲಿರುವ ಮುರುಗನ (ಸುಬ್ರಹ್ಮಣ್ಯಸ್ವಾಮಿ) ಪವಿತ್ರವಾದ ಆರು ಆಲಯಗಳಲ್ಲಿ ಇದೂ ಒಂದು. ಇದಕ್ಕೆ ರಾಜ್ಯದ ಸಾಂಸ್ಕೃತಿಕ ಮತ್ತು ಧಾರ್ಮಿಕ ಪರಂಪರೆಯಲ್ಲಿ ಮುಖ್ಯ ಸ್ಥಾನವಿದೆ. ತಮಿಳಿನ ಭಕ್ತಿ ಸಾಹಿತ್ಯ ಮತ್ತು ದೇವರ ಆರಾಧನೆಗಳಲ್ಲಿ ಮುರುಗನ ವಿವಾಹದ ಉಲ್ಲೇಖ ಇದ್ದು, ಅದು ಈ ಸ್ಥಳದೊಂದಿಗೆ ಬೆಸೆದುಕೊಂಡಿದೆ. ಸಂಗಂ ಕಾಲದ ಪಠ್ಯಗಳಲ್ಲಿಯೂ ದೇವಾಲಯದ ಪ್ರಸ್ತಾಪವಿದ್ದು, ಅದಕ್ಕೆ ಎರಡು ಸಾವಿರ ವರ್ಷಗಳ ಪ್ರಾಚೀನತೆ ಇದೆ ಎಂದು ವಿದ್ವಾಂಸರು ನಿರ್ಧರಿಸಿದ್ದಾರೆ. ಎಂಟನೇ ಶತಮಾನದಲ್ಲಿ ಪಾಂಡ್ಯ ದೊರೆಗಳು ಕಲ್ಲಿನಲ್ಲಿ ಶಿವ, ಪಾರ್ವತಿ, ಮುರುಗನ ಮೂರ್ತಿಗಳನ್ನು ಕೆತ್ತಿಸಿದ್ದಾರೆ. ಇಲ್ಲಿ ಒಂದೇ ಸ್ಥಳದಲ್ಲಿ ಹಲವು ದೇವರ ಆಲಯಗಳಿದ್ದು, ಪ್ರಾಚೀನ ಕಾಲದಿಂದ ವಿವಿಧ ಕಾಲಘಟ್ಟಗಳಲ್ಲಿ ಅವು ನಿರ್ಮಾಣಗೊಂಡಿವೆ.

ಪುರಾತತ್ವ ಇಲಾಖೆಯು ಇಲ್ಲಿನ ಧಾರ್ಮಿಕ ಕೇಂದ್ರಗಳಿಗೆ 2,300 ವರ್ಷಗಳ ಇತಿಹಾಸವಿದೆ ಎಂದು ಗುರುತಿಸಿದೆ. ದೇವಾಲಯ ಇಲ್ಲಿ ನಿರ್ಮಾಣವಾಗುವುದಕ್ಕೆ ಮುಂಚೆಯೇ ಜೈನ ಸನ್ಯಾಸಿಗಳು ಬೆಟ್ಟದ ಇಳಿಜಾರಿನ ಕಲ್ಲುಗಳ ಮೇಲೆ ಅಕ್ಷರಗಳನ್ನು, ಶಾಸನಗಳನ್ನು ಕೆತ್ತಿದ್ದರು ಎಂದು ಇಲಾಖೆ ಹೇಳಿದೆ.

ದರ್ಗಾ ನಿರ್ಮಾಣ: 13–14ನೇ ಶತಮಾನದಲ್ಲಿ ತಿರುಪರನ್‌ಕುಂದ್ರಂನಲ್ಲಿ ಒಂದಷ್ಟು ಬದಲಾವಣೆಗಳು ಘಟಿಸಿದವು. ಅಲ್ಲಾವುದ್ದೀನ್ ಖಿಲ್ಜಿಯ ಆಕ್ರಮಣದಿಂದ ಪಾರಾಗಲು ಇಲ್ಲಿಗೆ ಬಂದ ಮದುರೆ ಸುಲ್ತಾನ್ ವಂಶದ ಕೊನೆಯ ರಾಜ ಸಿಕಂದರ್ ಬಾದ್‌ಶಾ, ಇಲ್ಲಿಯೇ ಅಸುನೀಗಿದರು. ಕಾಲಾಂತರದಲ್ಲಿ ಅವರು ಸೂಫಿ ಸಂತನೆಂದು ಹೆಸರಾಗುವುದರೊಂದಿಗೆ, ಅವರ ಸಮಾಧಿಯು ಸಿಕಂದರ್ ಬಾದ್‌ಶಾ ದರ್ಗಾ ಎಂದು ಪ್ರಸಿದ್ಧಿ ಪಡೆಯಿತು. 17ನೇ ಶತಮಾನದಲ್ಲಿ ಇಲ್ಲಿ ಧಾರ್ಮಿಕ ಕಟ್ಟಡಗಳ ನಿರ್ಮಾಣವಾಯಿತು. ಪಾಂಡ್ಯ ದೊರೆಯೇ ಇಲ್ಲಿ ಮುಸ್ಲಿಮರ ಪ್ರಾರ್ಥನೆಗೆ ಸ್ಥಳ ನೀಡಿದರು ಎಂದು ಕೆಲವು ಇತಿಹಾಸಕಾರರು ಹೇಳಿರುವುದಾಗಿ ವರದಿಯಾಗಿದೆ.

ಹಲವು ಶತಮಾನಗಳಿಂದಲೂ ತಿರುಪರನ್‌ಕುಂದ್ರಂನಲ್ಲಿ ಹಿಂದೂಗಳು ಮತ್ತು ಮುಸ್ಲಿಮರು ತಮ್ಮ ದೇವರು/ದರ್ಗಾಕ್ಕೆ ಸಂಬಂಧಿಸಿದ ಆಚರಣೆಗಳನ್ನು ಸಾಮರಸ್ಯದಿಂದ ಆಚರಿಸಿಕೊಂಡು ಬರುತ್ತಿದ್ದರು. ಆದರೆ, ಇತ್ತೀಚೆಗೆ ಕೆಲವರು ಇಲ್ಲಿನ ಆಚರಣೆಗಳ ಬಗ್ಗೆ ಹಲವು ಆಕ್ಷೇಪಗಳನ್ನು ಎತ್ತಿದ್ದಾರೆ. ನ್ಯಾಯಾಲಯ ಈ ಸಂಬಂಧ ಆದೇಶ ನೀಡಿದೆ. ಡಿಎಂಕೆ, ಬಿಜೆಪಿ, ಹಿಂದೂ ಕಾರ್ಯಕರ್ತರು, ಮುಸ್ಲಿಂ ಧರ್ಮದ ಪ್ರತಿನಿಧಿಗಳು ಎಲ್ಲರೂ ತಮ್ಮ ತಮ್ಮ ನೆಲೆಯಿಂದ ವಾದ ಮಂಡಿಸುತ್ತಿದ್ದಾರೆ. ಆದರೆ, ಸ್ಥಳೀಯರ ಪಾಲಿಗೆ ಇದು ವೈವಿಧ್ಯಮಯವಾದ ಧಾರ್ಮಿಕ ಪರಂಪರೆಯ ಭಾಗವಾಗಿದೆ. ತಿರುಪರನ್‌ಕುಂದ್ರಂ ಎಂದೂ ಯಾವುದೇ ಒಂದು ಧರ್ಮದ ಸ್ವತ್ತಾಗಿರಲಿಲ್ಲ ಎನ್ನುವುದು ಅವರ ಅಭಿಪ್ರಾಯ.

ಆಧಾರ: ಪಿಟಿಐ, ಮಾಧ್ಯಮ ವರದಿಗಳು

ತೀರ್ಪಿಗೆ ಅಸಮಾಧಾನ

ನ್ಯಾಯಮೂರ್ತಿ ಜಿ.ಆರ್.ಸ್ವಾಮಿನಾಥನ್ ನೇತೃತ್ವದ ಏಕಸದಸ್ಯ ಪೀಠವು ನೀಡಿದ್ದ ತೀರ್ಪು (ಡಿ.1ರಂದು ಬೆಟ್ಟದ ಮೇಲಿರುವ ದರ್ಗಾದ ಬಳಿಯ ದೀಪಸ್ತಂಭದಲ್ಲಿ ದೀಪ ಬೆಳಗಿಸಬೇಕು) ಡಿಎಂಕೆ ನೇತೃತ್ವದ ಸರ್ಕಾರಕ್ಕೆ ಪಥ್ಯವಾಗಲಿಲ್ಲ. ದೀಪಸ್ತಂಭ ಇರುವ ಜಾಗ ದೇವಾಲಯಕ್ಕೆ ಸೇರಿರುವುದರಿಂದ ಅಲ್ಲಿ ದೀಪ ಬೆಳಗಿಸಿ ಎಂದು ಅವರು ಹೇಳಿದ್ದರು. ಅರ್ಜಿದಾರರಿಗೆ ಭದ್ರತೆ ಒದಗಿಸುವಂತೆ ಕೇಂದ್ರ ಕೈಗಾರಿಕಾ ಭದ್ರತಾ ಪಡೆಗೂ ಅವರು ಸೂಚಿಸಿದ್ದರು. ಇದು ಕೂಡ ಡಿಎಂಕೆ ಸರ್ಕಾರವನ್ನು ಕೆರಳಿಸಿತ್ತು.

ಈ ತೀರ್ಪನ್ನು ಸರ್ಕಾರ ಪಾಲಿಸಲಿಲ್ಲ. ನ್ಯಾಯಮೂರ್ತಿ ಸ್ವಾಮಿನಾಥನ್ ಅವರು ಸರ್ಕಾರದ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಆರಂಭಿಸಿದ್ದರು. ರಾಜ್ಯ ಸರ್ಕಾರವು ನ್ಯಾಯಮೂರ್ತಿಯವರ ತೀರ್ಪಿನ ವಿರುದ್ಧ ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು.

ಈಗ ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠದ ಇಬ್ಬರು ನ್ಯಾಯಮೂರ್ತಿಗಳ ನ್ಯಾಯಪೀಠವು ಏಕಸದಸ್ಯ ಪೀಠದ ತೀರ್ಪನ್ನು ಎತ್ತಿ ಹಿಡಿದಿದೆ. ಇದರ ವಿರುದ್ಧ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ರಾಜ್ಯ ಸರ್ಕಾರ ತೀರ್ಮಾನಿಸಿದೆ.

ವಾಗ್ದಂಡನೆಗೆ ನೋಟಿಸ್




ನ್ಯಾಯಮೂರ್ತಿ ಸ್ವಾಮಿನಾಥನ್ ಅವರ ನಿಲುವು ನ್ಯಾಯಾಂಗದ ನಿಷ್ಪಕ್ಷಪಾತ ಧೋರಣೆ, ಪಾರದರ್ಶಕತೆ ಮತ್ತು ಜಾತ್ಯತೀತ ನಿಲುವುಗಳ ಬಗ್ಗೆ ಪ್ರಶ್ನೆಗಳನ್ನು ಹುಟ್ಟುಹಾಕಿದೆ ಎಂದು ಆಕ್ಷೇಪಿಸಿದ್ದ ಡಿಎಂಕೆಯನ್ನೊಳಗೊಂಡ ಇಂಡಿಯಾ ಕೂಟದ ಸಂಸದರು ಲೋಕಸಭೆಯಲ್ಲಿ ಅವರ ವಿರುದ್ಧ ವಾಗ್ದಂಡನೆಗೆ ಮನವಿಯನ್ನೂ ಸಲ್ಲಿಸಿದ್ದರು.

ರಾಜಕೀಯ ಪ್ರವೇಶ; ಬಿಗಡಾಯಿಸಿದ ಬಿಕ್ಕಟ್ಟು

ಇತಿಹಾಸದಲ್ಲಿ ಮೊದಲ ಬಾರಿಗೆ 1923ರಲ್ಲಿ ಬೆಟ್ಟದ ಮಾಲೀಕತ್ವದ ಬಗ್ಗೆ ಚರ್ಚೆ ನಡೆದಿತ್ತು. ಬ್ರಿಟಿಷ್ ಆಡಳಿತದಲ್ಲಿದ್ದ ನ್ಯಾಯಾಲಯವು ಕೃಷಿ ಮಾಡಲಾಗುತ್ತಿರುವ ಜಾಗ ಮತ್ತು ದರ್ಗಾ ಇರುವ ಪ್ರದೇಶ ಬಿಟ್ಟು ಉಳಿದ ಜಾಗ ಮುರುಗನ ದೇವಾಲಯಕ್ಕೆ ಸೇರಿದ್ದು ಎಂದು ಆದೇಶ ನೀಡುವ ಮೂಲಕ ಆ ಚರ್ಚೆಗೆ ಇತಿಶ್ರೀ ಹಾಡಿತ್ತು.

2025ರ ಫೆಬ್ರುವರಿಯವರೆಗೂ ಬೆಟ್ಟ ಹಾಗೂ ಅಲ್ಲಿ ನಡೆಯುತ್ತಿದ್ದ ಸಾಂಪ್ರದಾಯಿಕ ವಿಧಿ ವಿಧಾನಗಳ ಬಗ್ಗೆ ಯಾವುದೇ ತಕರಾರು ಇರಲಿಲ್ಲ. ಫೆಬ್ರುವರಿ ತಿಂಗಳಲ್ಲಿ ಕೆಲವು ಮುಸ್ಲಿಂ ಸಂಘಟನೆಗಳು ಈ ಬೆಟ್ಟವನ್ನು ‘ಸಿಕಂದರ್ ಮಲೆ’ ಎಂದು ಮರುನಾಮಕರಣ ಮಾಡಬೇಕು ಎಂದು ಒತ್ತಾಯಿಸಿದವು. ಇದಕ್ಕೆ ಬಲಪಂಥೀಯ ಸಂಘಟನೆಗಳು ಆಕ್ಷೇಪ ವ್ಯಕ್ತಪಡಿಸಿದವು. ಬೆಟ್ಟದ ತುದಿಯಲ್ಲಿ ಜನರು ಮಾಂಸಾಹಾರ ಸೇವನೆ ಮಾಡುತ್ತಿರುವ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಬಳಿಕ ವಿವಾದ ತೀವ್ರ ಸ್ವರೂಪ ಪಡೆದುಕೊಂಡಿತು.



ಇದೇ ವೇಳೆ ವಿವಾದಕ್ಕೆ ರಾಜಕೀಯವೂ ಪ್ರವೇಶಿಸಿತು. ಬೆಟ್ಟದ ಮರುನಾಮಕರಣ ಖಂಡಿಸಿ ನಡೆದ (ಫೆ.4ರಂದು) ಪ್ರತಿಭಟನೆಯಲ್ಲಿ ಮಾತನಾಡಿದ್ದ ಬಿಜೆಪಿ ಮುಖಂಡ ರಾಜಾ ತಿರುಪರನ್‌ಕುಂದ್ರಂ ಬೆಟ್ಟವನ್ನು ‘ದಕ್ಷಿಣದ ಅಯೋಧ್ಯೆ’ ಎಂದು ಕರೆದರು. ಬಿಜೆಪಿಯ ಕೆ.ಅಣ್ಣಾಮಲೆ ಮತ್ತು ರಾಮನಾಥಪುರಂ ಸಂಸದ ನವಾಜ್ ಖನಿ ನಡುವೆ ವಾಕ್ಸಮರವೂ ನಡೆದಿತ್ತು.

ನಂತರ ಪ್ರತಿಭಟನೆ, ವಿರೋಧ ತಣ್ಣಗಾದಂತೆ ಕಂಡರೂ ಜೂನ್‌ನಲ್ಲಿ ಮದುರೆಯಲ್ಲಿ ಬಿಜೆಪಿ ಹಮ್ಮಿಕೊಂಡಿದ್ದ ಮುರುಗ ಸಮ್ಮೇಳನದಲ್ಲಿ ಮತ್ತೆ ಈ ವಿಚಾರ ಪ್ರಸ್ತಾಪವಾಯಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಡಿಎಂಕೆ ಸರ್ಕಾರವು ಬೆಟ್ಟದ ಮರುನಾಮಕರಣ ಬೆಂಬಲಿಸುತ್ತಿದೆ ಎಂದು ಅಲ್ಲಿ ಆರೋಪಿಸಿದ್ದರು.

ಬೆಟ್ಟದ ಮೇಲಿರುವ ದರ್ಗಾದಲ್ಲಿ ಪ್ರಾಣಿ ಬಲಿ ಕೊಡುತ್ತಿರುವುದಕ್ಕೆ ಹಿಂದೂ ಸಂಘಟನೆಗಳು ಆಕ್ಷೇಪ ಎತ್ತುವ ಮೂಲಕ ಮತ್ತೆ ವಿವಾದ ಮುನ್ನೆಲೆಗೆ ಬಂತು. ಅಕ್ಟೋಬರ್‌ನಲ್ಲಿ ಹೈಕೋರ್ಟ್, ಪ್ರಾಣಿ ಬಲಿ ಕೊಡುವುದನ್ನು ನಿರ್ಬಂಧಿಸಿತು.

ಡಿಸೆಂಬರ್‌ನಲ್ಲಿ ಹಿಂದೂ ಕಾರ್ಯಕರ್ತ, ವಕೀಲ ರಾಮ ರವಿಕುಮಾರ್ ಎಂಬವರು ಬೆಟ್ಟದ ಮೇಲಿರುವ ದೀಪಸ್ತಂಭದಲ್ಲಿ ಕಾರ್ತಿಕ ಉತ್ಸವದಲ್ಲಿ ದೀಪ ಬೆಳಗಿಸಲು ಅವಕಾಶ ನೀಡಬೇಕು ಎಂದು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವುದರೊಂದಿಗೆ ವಿವಾದ ಮತ್ತೊಂದು ಮಜಲಿಗೆ ತೆರೆದುಕೊಂಡಿತು.

ಡಿಸೆಂಬರ್‌ನಲ್ಲಿ ತಿರುಚಿರಾಪಲ್ಲಿಯಲ್ಲಿ ನಡೆದ ಆರ್‌ಎಸ್‌ಎಸ್ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಅದರ ಮುಖ್ಯಸ್ಥ ಮೋಹನ್ ಭಾಗವತ್ ಕೂಡ ಈ ವಿಚಾರದ ಬಗ್ಗೆ ಮಾತನಾಡಿದ್ದರು. ‘ಈ ವಿವಾದದಲ್ಲಿ ತಮಗೆ ಬೇಕಾದ ಫಲಿತಾಂಶವನ್ನು ಪಡೆಯಲು ತಮಿಳುನಾಡಿನ ಜಾಗೃತ ಹಿಂದೂಗಳು ಸಾಕು. ಒಂದು ವೇಳೆ ಅಗತ್ಯಬಿದ್ದರೆ ಮಧ್ಯಪ್ರವೇಶಿಸುವ ಬಗ್ಗೆ ಸಂಘ ಪರಿಗಣಿಸಲಿದೆ’ ಎಂದು ಹೇಳಿದ್ದರು.

‘ಬಿಜೆಪಿಯು ರಾಜ್ಯದಲ್ಲಿ ಧಾರ್ಮಿಕ ವಿಚಾರವನ್ನು ಮುಂದಿಟ್ಟುಕೊಂಡು ರಾಜಕೀಯ ಮಾಡಲು ಹೊರಟಿದೆ. ಆರ್‌ಎಸ್‌ಎಸ್ ಮತ್ತು ಬಿಜೆಪಿಯು ಉತ್ತರ ಭಾರತದ ಹಲವು ಕಡೆಗಳಲ್ಲಿ ಇದೇ ರೀತಿ ಮಾಡಿದೆ’ ಎಂದು ಡಿಎಂಕೆ ಹೇಳಿದೆ.

ದೀಪ ಬೆಳಗುತ್ತಿದ್ದುದು ಎಲ್ಲಿ?

ಕಾರ್ತಿಕ ದೀಪೋತ್ಸವದ ಸಂದರ್ಭದಲ್ಲಿ ಬೆಟ್ಟದ ಮೇಲಿರುವ ಕಲ್ಲಿನ ದೀಪಸ್ತಂಭದಲ್ಲಿ ದೀಪ ಬೆಳಗಬೇಕು ಎಂಬುದು ಅರ್ಜಿದಾರ ರಾಮ ರವಿಕುಮಾರ್, ಬಲಪಂಥೀಯ ಸಂಘಟನೆಗಳ ಪ್ರತಿನಿಧಿಗಳ ಈಗಿನ ಬೇಡಿಕೆ. ಹೈಕೋರ್ಟ್‌ನ ಏಕ ಸದಸ್ಯ ಪೀಠ ಮತ್ತು ವಿಭಾಗೀಯ ಪೀಠಗಳು ಬೆಟ್ಟದ ಮೇಲೆಯೇ ದೀಪ ಬೆಳಗುವಂತೆ ನಿರ್ದೇಶನ ನೀಡಿವೆ. ಆದರೆ, ಇತ್ತೀಚಿನ ದಶಕಗಳಲ್ಲಿ ಕಾರ್ತಿಕ ದೀಪವನ್ನು ಬೆಟ್ಟದ ಮೇಲೆ ಉರಿಸಿದ ಉದಾಹರಣೆ ಇಲ್ಲ. ಶತಮಾನದಿಂದಲೂ ಬೆಟ್ಟದ ದಾರಿ ಮಧ್ಯೆ ಇರುವ ಗಣೇಶ ದೇವಾಲಯದ (ಉಚ್ಚಿ ಪಿಳ್ಳೆಯಾರ್ ಕೊವಿಲ್) ಸಮೀಪ ಕಾರ್ತಿಕ ದೀಪವನ್ನು ಬೆಳಗಲಾಗುತ್ತದೆ. ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠವು ಡಿಸೆಂಬರ್ 3ರಂದು ಬೆಟ್ಟದ ತುದಿಯಲ್ಲಿರುವ ಸ್ತಂಭದಲ್ಲಿ ದೀಪ ಬೆಳಗುವಂತೆ ಸರ್ಕಾರಕ್ಕೆ ಸೂಚಿಸಿದ್ದರೂ ಸರ್ಕಾರ ಹಿಂದೆ ನಡೆಯುತ್ತಿದ್ದಂತೆ ಗಣೇಶ ದೇವಾಲಯದ ಬಳಿಯಲ್ಲಿರುವ ನಿಗದಿತ ಜಾಗದಲ್ಲೇ ದೀಪ ಬೆಳಗಿಸಿತ್ತು.



ರಾಷ್ಟ್ರೀಯ

ಬಾಲಕಿ ಅರಿಹಾ ಪ್ರಕರಣ: ಸಚಿವ ಜೈಶಂಕರ್ ಮಧ್ಯಪ್ರವೇಶಕ್ಕೆ ಒತ್ತಾಯ

ನವದೆಹಲಿ (ಪಿಟಿಐ): ನಾಲ್ಕೂವರೆ ವರ್ಷಗಳಿಂದ ಜರ್ಮನಿಯ ಪಾಲನಾ ಕೇಂದ್ರದಲ್ಲಿರುವ ಭಾರತೀಯ ಬಾಲಕಿ ಅರಿಹಾ ಶಾಳನ್ನು ಸ್ವದೇಶಕ್ಕೆ ವಾಪಸ್ ಕರೆತರುವ ಸಂಬಂಧ ಮಧ್ಯಪ್ರವೇಶಿಸುವಂತೆ ಸಿಪಿಎಂ ಸಂಸದ ಜಾನ್ ಬ್ರಿಟ್ಟಾಸ್ ಅವರು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದಾರೆ.

‘ಮಗುವಿಗೆ ಈಗ ಐದು ವರ್ಷ ತುಂಬುತ್ತಿದೆ. ಮಗುವಿನ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವ ಯಾವುದೇ ಸಾಕ್ಷ್ಯ, ಪುರಾವೆಗಳಿಲ್ಲ ಎಂದು ಜರ್ಮನ್ ಆಸ್ಪತ್ರೆ ಹೇಳಿದೆ. ನ್ಯಾಯಾಲಯ ನೇಮಿಸಿದ್ದ ಮನಃಶಾಸ್ತ್ರಜ್ಞರು ಮಗುವನ್ನು ಪೋಷಕರ ಸುಪರ್ದಿಗೆ ಕೊಡಬಹುದೆಂದು ಶಿಫಾರಸು ಮಾಡಿದ್ದಾರೆ. ಆದರೂ ಮಗುವನ್ನು ಇನ್ನೂ ಜರ್ಮನಿಯ ಮಕ್ಕಳ ಪಾಲನಾ ಕೇಂದ್ರದಲ್ಲಿಯೇ ಇಡಲಾಗಿದೆ’ ಎಂದು ಬ್ರಿಟ್ಟಾಸ್ ದೂರಿದ್ದಾರೆ.

ಇದೇ 12 ಮತ್ತು 13ರಂದು ಜರ್ಮನಿಯ ಚಾನ್ಸಲರ್ ಫ್ರೆಡ್ರಿಕ್ ಮೆರ್ಜ್ ಅವರು ಎರಡು ದಿನಗಳ ಭಾರತ ಭೇಟಿಗೆ ಆಗಮಿಸುತ್ತಿರುವ ಸಂದರ್ಭದಲ್ಲೇ ಬ್ರಿಟ್ಟಾಸ್ ಅವರು ವಿದೇಶಾಂಗ ಸಚಿವರಿಗೆ ಪತ್ರ ಬರೆದಿದ್ದಾರೆ.

ಅರಿಹಾ ಶಾ ಆರು ತಿಂಗಳ ಮಗುವಾಗಿದ್ದಾಗ, ಪೋಷಕರಿಂದ ಆಕಸ್ಮಿಕವಾಗಿ ಗಾಯಗೊಂಡಿದ್ದರು. ‘ಮಗುವಿನ ಮೇಲೆ ದೈಹಿಕ ದೌರ್ಜನ್ಯ ನಡೆದಿದೆ’ ಎಂಬ ಆರೋಪದ ಮೇಲೆ ಜರ್ಮನಿ ಅಧಿಕಾರಿಗಳು 23ರ ಸೆಪ್ಟೆಂಬರ್ 2021ರಂದು ಮಗುವನ್ನು ವಶಕ್ಕೆ ಪಡೆದು, ಪಾಲನಾ ಕೇಂದ್ರಕ್ಕೆ ಕಳುಹಿಸಿದ್ದರು.

ಅನುದಾನ ದತ್ತಾಂಶ ಅಲಭ್ಯ ಪ್ರಮಾಣಪತ್ರ ಸಲ್ಲಿಸಲು ಸೂಚನೆ

ನವದೆಹಲಿ (ಪಿಟಿಐ): ಕೋವಿಡ್–19 ಲಸಿಕೆ ತಯಾರಿಕರಿಗೆ ಸರ್ಕಾರ ನೀಡಿರುವ ಅನುದಾನದ ಕುರಿತು ‘ದತ್ತಾಂಶ ಲಭ್ಯವಿಲ್ಲ’ ಎಂಬುದಕ್ಕೆ ಸಂಬಂಧಿಸಿ ಪ್ರಮಾಣಪತ್ರ ಸಲ್ಲಿಸುವಂತೆ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆಗೆ ಕೇಂದ್ರ ಮಾಹಿತಿ ಆಯೋಗವು ನಿರ್ದೇಶನ ನೀಡಿದೆ.



ಮಹಾವೀರ್ ಸಿಂಗ್ ಶರ್ಮಾ ಅವರು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯಡಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ ಈ ನಿರ್ದೇಶನ ನೀಡಿದೆ.

ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಮತ್ತು ಭಾರತ್ ಬಯೋಟೆಕ್ ಕಂಪನಿಗಳಿಗೆ ಕೋವಿಡ್–19 ಲಸಿಕೆ ಉತ್ಪಾದನೆಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ್ದ ಸಾವಿರಾರು ಕೋಟಿ ರೂಪಾಯಿ ಬಗ್ಗೆ ವಿವರಣೆ ಕೇಳಿ ಮಹಾವೀರ್ ಅವರು ಅರ್ಜಿ ಸಲ್ಲಿಸಿದ್ದರು. ‘ಕೇಳಿರುವ ಮಾಹಿತಿಯು ಇಲಾಖೆಯ ಲಾಜಿಸ್ಟಿಕ್ ವಿಭಾಗದ ಬಳಿ ಇಲ್ಲ’ ಎಂದು ಆರ್‌ಟಿಐ ಅರ್ಜಿಗೆ ಉತ್ತರಿಸಲಾಗಿತ್ತು.

‘ಇಲಾಖೆ ಬಳಿ ದತ್ತಾಂಶ ಲಭ್ಯವಿಲ್ಲ’ ಎಂಬುದನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುವಂತೆ ಕೇಂದ್ರ ಮಾಹಿತಿ ಆಯೋಗದ ಮಾಹಿತಿ ಆಯುಕ್ತ ಆಯುಕ್ತ ಖುಶ್ವಂತ್ ಸಿಂಗ್ ಸೇಥಿ ಅವರು ಆದೇಶಿಸಿದ್ದಾರೆ.

ಮಣಿಪುರ: ಸಂಪೂರ್ಣ ಆಡಿಯೊ ಪರೀಕ್ಷೆಗೆ ಸುಪ್ರೀಂ ಕೋರ್ಟ್ ಆದೇಶ



ನವದೆಹಲಿ (ಪಿಟಿಐ): 2023ರ ಮಣಿಪುರ ಜನಾಂಗೀಯ ಸಂಘರ್ಷದಲ್ಲಿ ಮಾಜಿ ಮುಖ್ಯಮಂತ್ರಿ ಎನ್.ಬಿರೇನ್ ಸಿಂಗ್ ಅವರ ಪಾತ್ರವಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಸಂಪೂರ್ಣ 48 ನಿಮಿಷಗಳ ಆಡಿಯೊ ತುಣುಕನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಲು ಸುಪ್ರೀಂ ಕೋರ್ಟ್ ಬುಧವಾರ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕುಮಾರ್ ಮತ್ತು ಕೆ.ವಿನೋದ್ ಚಂದ್ರನ್ ಅವರನ್ನೊಳಗೊಂಡ ಪೀಠವು ಈ ಆದೇಶ ಹೊರಡಿಸಿದೆ.

‘ಚರ್ಚೆಗೆ ಗ್ರಾಸವಾಗಿರುವ 48 ನಿಮಿಷಗಳ ಸಂಭಾಷಣೆಯ ಸಂಪೂರ್ಣ ಆಡಿಯೊ ತುಣುಕು ಹಾಗೂ ಬಿರೇನ್ ಅವರು ತಮ್ಮದೇ ಧ್ವನಿ ಎಂದು ಒಪ್ಪಿಕೊಂಡಿರುವ ಆಡಿಯೊ ತುಣುಕು ಈಗಾಗಲೇ ಲಭ್ಯವಿವೆ. ಇವುಗಳ ಜತೆಗೆ ಅರ್ಜಿದಾರರು ಒದಗಿಸಿದ ಸೋರಿಕೆಯಾಗಿದೆ ಎನ್ನಲಾದ ಆಡಿಯೊ ತುಣುಕು ಸೇರಿಸಿ ಎಲ್ಲವನ್ನೂ ಗಾಂಧಿನಗರದ ರಾಷ್ಟ್ರೀಯ ವಿಧಿವಿಜ್ಞಾನ ವಿಶ್ವವಿದ್ಯಾಲಯಕ್ಕೆ ಕಳುಹಿಸಬೇಕು’ ಎಂದು ಪೀಠ ಆದೇಶಿಸಿದೆ.

ಜತೆಗೆ ಆಡಿಯೊ ತುಣುಕನ್ನು ತ್ವರಿತವಾಗಿ ಪರೀಕ್ಷಿಸಿ, ಈ ಸಂಬಂಧಿಸಿದ ವರದಿಯನ್ನು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ವಿವಿಗೆ ಪೀಠ ನಿರ್ದೇಶಿಸಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭೂಗತ ಕಟ್ಟಡವೊಂದರಿಂದ ಮಹಿಳೆಯರು ಹೊರಬರುತ್ತಿರುವ ವಿಡಿಯೊ ಮತ್ತು ಅದರ ಸ್ಕ್ರೀನ್‌ಶಾಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಉತ್ತರ ಪ್ರದೇಶದ ಗೋರಖ್‌ಪುರದ ಮಂದಿರವೊಂದರಲ್ಲಿ ವೇಶ್ಯಾವಾಟಿಕೆ ನಡೆಯುತ್ತಿತ್ತು, ಅಲ್ಲಿದ್ದ ಮಹಿಳೆಯರನ್ನು ರಕ್ಷಿಸಿ ಹೊರಕ್ಕೆ ಕರತರಲಾಯಿತು ಎಂದು ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಉತ್ತರ ಪ್ರದೇಶದ ಗೋರಖ್‌ಪುರದಲ್ಲಿ ಅಂತಹ ಘಟನೆ ಏನಾದರೂ ನಡೆದಿದೆಯೇ ಎನ್ನುವುದನ್ನು ತಿಳಿಯಲು ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಲಾಯಿತು. ಅದನ್ನು ಸಾಬೀತುಪಡಿಸುವ ಯಾವುದೇ ವರದಿ ಕಂಡುಬರಲಿಲ್ಲ. ಗೂಗಲ್‌ನಲ್ಲಿ ರಿವರ್ಸ್ ಇಮೇಜ್ ಸರ್ಚ್ ಮಾಡಿದಾಗ, ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರವಂಥದ್ದೇ ವಿಡಿಯೊ ಅನ್ನು 2021ರ ಡಿ.13ರಂದು ಹಲವರು ಹಂಚಿಕೊಂಡಿರುವುದು ಕಂಡಿತು. ಮುಂಬೈನ ಅಂಧೇರಿ ಪಶ್ಚಿಮದ ದೀಪಾ ಡ್ಯಾನ್ಸ್ ಬಾರ್ ಮೇಲೆ ಪೊಲೀಸರು ದಾಳಿ ಮಾಡಿ, ರಹಸ್ಯ ಕೋಣೆಯಲ್ಲಿ ಅಡಗಿದ್ದ 17 ಮಹಿಳೆಯರನ್ನು ರಕ್ಷಿಸಿದರು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಕೋವಿಡ್ ನಿಯಮಗಳನ್ನು ಮೀರಿದ್ದೂ ಸೇರಿದಂತೆ ಹಲವು ಆರೋಪಗಳು ಬಾರ್ ವಿರುದ್ಧ ಕೇಳಿಬಂದಿದ್ದವು. ಬಾರ್‌ನ ವಿಡಿಯೊ ಹಂಚಿಕೊಂಡು ಕೆಲವರು ಅದು ದೇವಸ್ಥಾನದ ವಿಡಿಯೊ ಎಂದು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂಬುದಾಗಿ ‘ಫ್ಯಾಕ್ಟ್‌ಲಿ’ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಜೊತೆಗಿರುವುದು ಎಂದರೆ...

ನುಡಿ ಬೆಳಗು



ಪಿ.ಚಂದ್ರಿಕಾ

ಐನ್‌ಸ್ಟೀನ್ ಅವರು ಗೌರವ ಪ್ರಶಸ್ತಿಯನ್ನು ಸ್ವೀಕರಿಸಲು ಹಾರ್ವರ್ಡ್‌ಗೆ ಹೊರಟಿದ್ದರು. ಅವರ ಜೊತೆ ಸದಾ ಇರುತ್ತಿದ್ದ ಪತ್ನಿ ಅನಾರೋಗ್ಯದ ಕಾರಣಕ್ಕೆ ಹೊರಡಲಿಲ್ಲ. ಆಕೆ ಪತಿಯ ಮೇಲಿನ ಕಾಳಜಿಯಿಂದ ಐನ್‌ಸ್ಟೀನ್‌ರಿಗೆ ಏನು ಮಾಡಬೇಕು, ಏನನ್ನು ಮಾಡಬಾರದು ಎನ್ನುವುದರ ದೊಡ್ಡ ಪಟ್ಟಿಯನ್ನೇ ಬರೆದು ಕೊಟ್ಟಿದ್ದರು. ಅದರಲ್ಲಿ ಸ್ವಲ್ಪವೂ ವ್ಯತ್ಯಾಸವಾಗದಂತೆ ನೋಡಿಕೊಳ್ಳಬೇಕೆಂದು ಮತ್ತೆ ಮತ್ತೆ ಹೇಳಿದ್ದರು. ಅದರಲ್ಲಿ ಮೊದಲಿಗೆ ಇದ್ದದ್ದೇ ತಂಬಾಕನ್ನು ಸೇದಕೂಡದು, ಅದು ಅವರ ಜೀವಕ್ಕೆ ಒಳ್ಳೆಯದಲ್ಲವೆಂದು. ಐನ್‌ಸ್ಟೀನ್ ಅವರು ಅದನ್ನು ಜೊತೆಯಲ್ಲೇ ಇಟ್ಟುಕೊಂಡು ಸ್ವಲ್ಪವೂ ಬಿಡದೆ ಅದನ್ನು ಅನುಸರಿಸುವುದಾಗಿ ಮಾತಿತ್ತಿದ್ದರು.


ಹಾರ್ವರ್ಡ್‌ನಲ್ಲಿ ಕಾರ್ಯಕ್ರಮದ ನಂತರ ಭೋಜನ ವ್ಯವಸ್ಥೆ ಇತ್ತು. ಅಲ್ಲಿ ಐನ್‌ಸ್ಟೀನ್ ಎಲ್ಲರ ಜೊತೆ ಹರಟೆ ಹೊಡೆಯುತ್ತಾ ಮೈಮರೆತು ಗೆಳೆಯರು ಕೊಟ್ಟ ಸಿಗರೇಟನ್ನು ಸೇದಿಬಿಟ್ಟರು. ಹಾಗೆ ಸೇದಿದ್ದು ಅವರಿಗೆ ಗೊತ್ತೂ ಆಗಲಿಲ್ಲ - ಮಾತಿನ ಜೋಶು ಹಾಗಿತ್ತು. ಸಿಗರೇಟು ಸೇದುತ್ತಿರುವುದೂ ಅವರಿಗೆ ಗೊತ್ತಾಗಿದ್ದೇ ಕೈಬೆರಳ ತುದಿಗೆ ಸಿಗರೇಟಿನ ಬೆಂಕಿ ತಾಕಿದಾಗಲೆ. ಎಚ್ಚೆತ್ತುಕೊಂಡ ಅವರು, ‘ಅರೆ ನನ್ನ ಪತ್ನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲಿಲ್ಲವಲ್ಲಾ’ ಎಂದು ಪೇಚಾಡಿಕೊಳ್ಳತೊಡಗಿದರು.

ಅದನ್ನು ಕಂಡ ಗೆಳೆಯರೆಲ್ಲರೂ, ‘ನೀನೊಬ್ಬ ಅಮ್ಮಾವ್ರ ಗಂಡನ ಹಾಗೆ ಯಾಕೆ ಆಡುತ್ತಿದ್ದೀಯೆ? ನಿನ್ನದು ಎನ್ನುವ ಅವಕಾಶ ಬೇಡವೇ? ಇಷ್ಟು ಸಣ್ಣ ವಿಷಯಕ್ಕೆ ಪೇಚಾಡಿಕೊಂಡರೆ ಹೇಗೆ? ಇಷ್ಟಕ್ಕೂ ನಿನ್ನ ಹೆಂಡತಿ ನಿನ್ನ ಹತ್ತಿರವಿಲ್ಲ. ನೀನು ಹೇಳದೆ ಆಕೆಗೆ ತಿಳಿಯುವುದೂ ಇಲ್ಲ. ಸುಮ್ಮನೆ ಇದ್ದುಬಿಡು. ಇಂಥಾದ್ದೆಲ್ಲವನ್ನೂ ನಾವು ಎಷ್ಟು ಮಾಡಿಲ್ಲ ಹೇಳು’ ಎಂದು ಸಮಾಧಾನ ಪಡಿಸಿದರು. ‘ಇರಬಹುದು ನೀವು ಹೇಳದೆ ಏನು ಬೇಕಾದರೂ ಮಾಡಿರಬಹುದು. ನನಗೆ ಇದು ಸಾಧ್ಯವಿಲ್ಲ. ನನ್ನ ಮೇಲೆ ನಂಬಿಕೆ ಇಟ್ಟು ನಾನು ಇದೆಲ್ಲವನ್ನೂ ಮಾಡುತ್ತೇನೆ ಎನ್ನುವ ಭರವಸೆಯಿಂದ ನನ್ನನ್ನು ಇಲ್ಲಿಗೆ ಕಳುಹಿಸಿದ್ದಾಳೆ. ನಾನು ಆಕೆಗೆ ಹಾಗೇ ಮಾತೂ ಕೊಟ್ಟಿದ್ದೇನೆ. ಈಗ ಅವಳು ನನ್ನ ಎದುರಿಲ್ಲ ಎನ್ನುವ ಕಾರಣಕ್ಕೆ ಸುಳ್ಳನ್ನು ಹೇಳಲು ಸಾಧ್ಯವೇ’ ಎನ್ನುತ್ತಾರೆ ಐನ್ ಸ್ಟೀನ್.

ಊರಿಗೆ ಬಂದು ಪತ್ನಿಗೆ ವಿಷಯ ತಿಳಿಸುವವರೆಗೂ ಐನ್‌ಸ್ಟೀನ್‌ಗೆ ಸಮಾಧಾನವೇ ಇಲ್ಲ. ನಿದ್ದೆ ಇಲ್ಲ, ಸರಿಯಾಗಿ ಊಟವೂ ಇಲ್ಲ. ಮನೆಗೆ ಬಂದವರೇ ನಡೆದದ್ದೆಲ್ಲವನ್ನೂ ಹೆಂಡತಿಗೆ ವಿವರಿಸುತ್ತಾರೆ. ಅವರ ಎಲ್ಲ ಮಾತನ್ನು ಕೇಳಿದ ಪತ್ನಿ, ‘ಪರವಾಗಿಲ್ಲ. ಒಮ್ಮೆ ಮಾತ್ರ ತಾನೆ? ಅದಕ್ಕಾಗಿ ಪಶ್ಚಾತ್ತಾಪ ಬೇಡ’ ಎಂದರು. ಅದಕ್ಕೆ ಐನ್‌ಸ್ಟೀನ್, ‘ಪ್ರಶ್ನೆ ಒಂದು ಸಲದ್ದೋ ಎರಡು ಸಲದ್ದೋ ಅಲ್ಲ. ಹೆಂಡತಿಯ ನಂಬಿಕೆಗಳನ್ನು ಗಂಡ ತಿಳಿದೋ ತಿಳಿಯದೆಯೋ ಮುರಿಯಬಾರದು. ಅವಳು ಎದುರಿಲ್ಲ ಅಂದ ಮಾತ್ರಕ್ಕೆ ಜೊತೆಗಿಲ್ಲ ಎಂದಲ್ಲ. ನಾನು ಏನನ್ನೂ ಮಾಡಬಹುದು ಎಂದುಕೊಂಡರೆ ಅದು ಅಪರಾಧ. ನೀನು ನನ್ನ ಒಳಿತಿಗಾಗಿ ಎಂದು ನಿರೀಕ್ಷಿಸಿದ ಯಾವುದನ್ನೂ ನಾನು ಉಪೇಕ್ಷಿಸಬಾರದು. ಇದು ಗೃಹಸ್ಥನೊಬ್ಬನ ಧರ್ಮ’ ಎಂದರು. ಜೊತೆಗಿರುವುದು ಎನ್ನುವುದರ ಅರ್ಥ ಇದೇ ಅಲ್ಲವೇ?

ಪದಬಂಧ 6278

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಬರದಲ್ಲಿ ಹೊರದೂಡುವಿಕೆ (4)
3.ನವಿರಾಗಿ ಪಸರಿಹ ಸುವಾಸನೆ (4)
5.ಸರದ ದರ ನೀಡಿ ತೋರಿದ ಸಲಿಗೆ (3)
7.ಸಲ್ಲಾಪದ ಮಾತುಕತೆ (0)
7.ಪದರದೊಳಗೆ ಮೋಕ್ಷ ಕಂಡೀತೇ? (2)
9.ಶಿಷ್ಯನಿಗೆ ವಿದ್ಯೆಯನ್ನು ಕಲಿಸುವವನು (2)
10. ಈತ ಆನೆ ನಡೆಸುವವನು (3)
11.ಹೆಚ್ಚು ಬೆಲೆ ಎಂದು ಹೀಗೂ ಹೇಳುವರು (3)
13.ಮಧುರ ಫಲಗಳನ್ನು ನೀಡುವ ವೃಕ್ಷ (2)
14.ಜನನಿ ನುಡಿದಿರುವ ಸತ್ಯ (2)
16.ಶಿವನ ಇನ್ನೊಂದು ಹೆಸರು (3)
18.ಹೊಗಳಿಕೆಯ ವಿರುದ್ಧ ಪದ (4)
19.ಎಳ್ಳು ನೀರು ಬಿಡುವಿಕೆ (4)

ಮೇಲಿಂದ ಕೆಳಕ್ಕೆ

1.ಸ್ಲೇಟಿನ ಬರೆಯುವ ಸಾಧನ (3)
2.ರಸನಕ್ಕೆ ಅಂಟಿರುವ ದ್ರವ (2)
3.ನಗರದಲ್ಲಿರುವ ಮನುಷ್ಯ (2)
4.ಪುರದ ತುಂಬಾ ಹಬ್ಬಿದ ಸುಳ್ಳು ಸುದ್ದಿ (3)
6.ಧಣಿಗೆ ಆಗಿರುವ ಆಯಾಸ (3)
8.ನೆತ್ತರು ಹರಿಯುವಿಕೆ (5)
9.ಗುಟ್ಟಾಗಿ ಪ್ರವಹಿಸುವುದು (5)
12.ಲಾಂಗೂಲವಿರುವ ಹುಡುಗ! (3)
13.ಮಾತೆ ಹರಿಸಿದ ಪ್ರೀತಿ (3)
15.ಜನರು ಗಲಿಬಿಲಿಯಿಂದ ಏರಿದ ವೇದಿಕೆ (3)
16.ಅಂಕೆಗೆ ಸಿಕ್ಕದಿರುವಾಗ ಬಂದಿರುವ ಅನುಮಾನ (2)
17.ಕಾಮನ ಪತ್ನಿ (2)

6277ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹಣಾಹಣಿ 3.ಲಂಚಗುಳಿ 5.ಪದವಿ 7.ಆರೋಗ್ಯ 8.ಆವೇಗ 10.ಪರಕಾಯ 11.ಮನಸಿಜ 13.ವ್ಯಸನ 14.ಸಹಾಯ 16.ಗುಮಾನಿ 18.ಕನ್ನಡಕ 19.ಜತುಗೃಹ

ಮೇಲಿಂದ ಕೆಳಕ್ಕೆ: 1.ಹಡಪ 2.ಹರವಿ 4.ಚಮಾಂರೋ 6.ದಸರ 7.ಆಗಮನ 8.ಆಯವ್ಯಯ 9.ಹುಂಜ 10.ಪಣ 12.ಸಿನಿಮಾ 15.ಹಾಯ್ಗಡ 16.ಗುರುತು 17.ನಿರ್ವಾಹ

ಸುಡೊಕು 6662

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7	5			1	6		8	
		6			9			7
4			7				9	
	7			2	1			8
	6	4	9		8		7	
8		1				9		4
	8			9				
1		2				7		3
	4		1		7		2	

6661 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

08 ಜನವರಿ 2026 ಗುರುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಪೌಷ ಕೃಷ್ಣ ಷಷ್ಠಿ ಅಹೋರಾತ್ರ ನಕ್ಷತ್ರ: ಪೂರ್ವಫಲ್ಗುನಿ ಗಂ 12-25 ಯೋಗ: ಸೌಭಾಗ್ಯ ಗಂ. 17-26 ಕರಣ: ಗರ ಗಂ. 18-44 ಧನು ಮಾಸದ 24 ನೇ ದಿನ. ಮಳೆ ನಕ್ಷತ್ರ : ಪೂರ್ವಾಷಾಢ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 01-30 - 03-00 ಸೂರ್ಯೋದಯ: 06-59 ಸೂರ್ಯಾಸ್ತ : 06-15 ಮುಸ್ಲಿಂ ದಿನಾಂಕ : 18 ರಜಬ್ ಅದೃಷ್ಟ ಸಂಖ್ಯೆ : 1, 8

ಮೇಷ: ತಂದೆ ತಾಯಿಯರ ಹಿತಕ್ಕಾಗಿ ವಿದೇಶಕ್ಕೆ ಹೋಗುವುದನ್ನು ನಿಲ್ಲಿಸುವಂತಾಗುವುದು. ವಿವಾಹ ಸಂಬಂಧದ ಮಾತುಕತೆಗಳು ಫಲಕಾರಿಯಾಗುವವು. ವಿವಿಧ ಮೂಲಗಳಿಂದ ದ್ರವ್ಯಲಾಭ ಇರುವುದು.

ವೃಷಭ: ಯಾರೊಂದಿಗೆ ನಿಮಗೆ ಸಮಸ್ಯೆಗಳಿದ್ದರೂ ಸಹ ಅದನ್ನು ಸ್ವತಃ ನೀವೇ ಪರಿಹರಿಸಿಕೊಳ್ಳುವುದು ಉತ್ತಮ ಮಾರ್ಗ. ಆರೋಗ್ಯದಲ್ಲಿ ವಾಯು ಸಂಬಂಧವಾಗಿ ತೊಂದರೆ ಕಾಣಿಸಿಕೊಳ್ಳಬಹುದು. ಅತಿಥಿ ಸತ್ಕಾರ ಮಾಡುವಿರಿ.

ಮಿಥುನ: ನಿಮ್ಮ ಪಾಲಿನ ನಂದಾದೀಪವಾದ ಮಗಳನ್ನು ಮತ್ತೊಂದು ಮನೆಯ ನಂದಾದೀಪವಾಗಿ ಕಳುಹಿಸಿಕೊಡುವ ಸನ್ನಿವೇಶ ಪದೇ ಪದೇ ನಿಮ್ಮ ಕಣ್ಣೆದುರು ಬರುವುದು. ತರಕಾರಿ ಮಾರಾಟಗಾರರಿಗೆ ಉತ್ತಮ ದಿನ.

ಕರ್ಕಾಟಕ: ವ್ಯಾಪಾರದಲ್ಲಿ ಸಹಚರರಿಂದಲೇ ಮೋಸವಾಗುತ್ತಿರುವ ವಿಚಾರವು ಅನುಭವಕ್ಕೆ ಬಂದು ದುಃಖವಾಗಬಹುದು. ನೀವು ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ.

ಸಿಂಹ: ಹೊಸ ಕೆಲಸ ಪ್ರಾರಂಭ ಮಾಡಬೇಕಾದಾಗ ಸೂಕ್ತ ಮಾರ್ಗದರ್ಶನ ಉತ್ತಮ. ಅವಿವಾಹಿತರ ಮನೋಕಾಮನೆ ಪೂರ್ಣಗೊಳ್ಳುವ ದಿನ. ನಿಮ್ಮ ಮುಂದಿನ ಹಾದಿ ಏನೆಂಬುದು ನಿಮಗೆ ಈ ದಿನ ಸ್ಪಷ್ಟವಾಗಿರಲಿ.

ಕನ್ಯಾ: ಮಗಳ ಗಂಡನ ಮನೆಯಲ್ಲಿನ ಕಾರ್ಯಕ್ರಮಗಳಿಗೆ ನೀವು ಭೇಟಿ ನೀಡುವಂತಾಗಿ ಸಂತೋಷ ಹೊಂದುವಿರಿ. ನಿರುದ್ಯೋಗಿಗಳಿಗೆ ಸಾಧಾರಣ ಉದ್ಯೋಗ ದೊರಕಿದರೂ ಯಾವುದೇ ಕಾರಣಕ್ಕೂ ತಿರಸ್ಕರಿಸಬೇಡಿ.

ತುಲಾ: ಕೃತಕ ಅಂಗಾಂಗಗಳ ಅಳವಡಿಕೆ ಮಾಡಿಸಿಕೊಂಡವರು ಆರೋಗ್ಯದಲ್ಲಿ ಉಂಟಾಗುವ ಯಾವುದೇ ಬದಲಾವಣೆಗಳನ್ನು ಸಹ ಸಸಾರ ಮಾಡದಿರಿ. ರಾಜಕೀಯ ವ್ಯಕ್ತಿಗಳು ಜನರಲ್ಲಿ ತಾಳ್ಮೆಯಿಂದ ವರ್ತಿಸುವುದು ಸೂಕ್ತ.

ವೃಶ್ಚಿಕ: ಮನೆಯ ಜನರ ಆಕಾಂಕ್ಷೆಗಳನ್ನು ನೀವೇ ಪೂರೈಸಬೇಕಾದರೂ ಸಹ ನೆಮ್ಮದಿಯ ವಿಷಯವೇನೆಂದರೆ ಖರ್ಚಿಗೆ ತಕ್ಕಂತೆ ಧನಾಗಮನ ಇರುವುದರಿಂದ ಚಿಂತೆ ಇರದು. ಗುತ್ತಿಗೆದಾರರಿಗೆ ಬಿಡುವಿಲ್ಲದಂತಾದೀತು.

ಧನು: ಇಂದಿನ ಹಲವಾರು ದುಃಖಗಳು ಮಧುರವಾದ ಸಂಗೀತವನ್ನು ಕೇಳುವ ಮೂಲಕ ಪರಿಹರಿಸಿಕೊಳ್ಳುವಿರಿ. ನಿಮ್ಮ ಕೆಲಸಗಳ ಬಗ್ಗೆ ಪುನಃಪುನಃ ಅವಲೋಕನೆಯನ್ನು ಮಾಡುವಂತಹ ಪದ್ಧತಿಯನ್ನು ರೂಢಿಸಿಕೊಳ್ಳುವಿರಿ.


ಮಕರ: ಒಂದು ಸಣ್ಣ ಕಾರಣವನ್ನೇ ಹಿಡಿದು ನಿಮ್ಮನ್ನು ಒಂದು ಕೆಲಸದಿಂದ ಅಮಾನತ್ತುಗೊಳಿಸುವಂತಹ ಸಾಧ್ಯತೆಗಳು ಬರಬಹುದು. ಶ್ರೀ ವಿಷ್ಣುಸಹಸ್ರ ನಾಮದ ಪಠನೆಯು ಹೆಚ್ಚಿನ ಏಳಿಗೆ ಹಾಗೂ ನೆಮ್ಮದಿಯನ್ನು ತರುವುದು.

ಕುಂಭ: ಸೇತುವೆ ನಿರ್ಮಾಣಕ್ಕೆ ಗುತ್ತಿಗೆ ಸಿಗಬಹುದು ಅಥವಾ ಕಾರ್ಮಿಕರಾಗುವ ಅವಕಾಶ ಸಿಗಬಹುದು. ಮಾರಣಾಂತಿಕ ಕಾಯಿಲೆಗಳಿಂದ ಪಾರು ಮಾಡುವ ಪಾರಂಪರಿಕ ಔಷಧಗಳ ಕಲೆಯನ್ನು ಕಲಿಯುವ ಸದವಕಾಶಗಳು ಸಿಗಬಹುದು.

ಮೀನ: ಪರಿಸ್ಥಿತಿಯನ್ನು ಜಾಣತನದಿಂದ ಉಪಯೋಗಿಸಿಕೊಂಡಲ್ಲಿ, ಜೀವನದಲ್ಲಿ ಸ್ಥಿರತೆಯು ಪ್ರಾಪ್ತಿ. ಕೆಲಸದ ಒತ್ತಡ, ಜವಾಬ್ದಾರಿಗಳು ಹೆಚ್ಚಲಿವೆ. ಉದ್ಯೋಗದಲ್ಲಿನ ಸಮಸ್ಯೆಯಿಂದಾಗಿ ಬದಲಾವಣೆಯ ಮನಸ್ಸು ಬರಲಿದೆ.

ಗುಂಡಣ್ಣ





ಒತ್ತುವರಿ ತೆರವು: ಕಲ್ಲುತೂರಾಟ, ನಾಲ್ವರ ಬಂಧನ

ದೆಹಲಿ ರಾಮಲೀಲಾ ಮೈದಾನದ ಸೈಯದ್ ಫೈಜ್ ಇಲಾಹಿ ಮಸೀದಿ ಬಳಿ ಕಾರ್ಯಾಚರಣೆ

ನವದೆಹಲಿ (ಪಿಟಿಐ): ದೆಹಲಿಯ ರಾಮಲೀಲಾ ಮೈದಾನ ಪ್ರದೇಶದಲ್ಲಿರುವ ಸೈಯದ್ ಫೈಜ್ ಇಲಾಹಿ ಮಸೀದಿ ಸಮೀಪ ಬುಧವಾರ ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ನಡೆದ ಕಲ್ಲು ತೂರಾಟದಲ್ಲಿ ಐವರು ಪೊಲೀಸರು ಗಾಯಗೊಂಡಿದ್ದಾರೆ. ಎಫ್‌ಐಆರ್ ದಾಖಲಿಸಿರುವ ಪೊಲೀಸರು ನಾಲ್ವರು ಆರೋಪಿಗಳನ್ನು ಬಂಧಿಸಿದ್ದು, 10ರಿಂದ 15 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ದೆಹಲಿ ಹೈಕೋರ್ಟ್ ಸೂಚನೆಯಂತೆ, ಮಸೀದಿಗೆ ಹೊಂದಿಕೊಂಡಿರುವ ಜಾಗ ಮತ್ತು ತುರ್ಕ್‌ಮಾನ್ ಗೇಟ್ ಹತ್ತಿರದ ಸ್ಮಶಾನದಲ್ಲಿನ ಒತ್ತುವರಿ ತೆರವು ಕಾರ್ಯವನ್ನು ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಬುಧವಾರ ಬೆಳಿಗ್ಗೆ ಕೈಗೆತ್ತಿಕೊಂಡಿತ್ತು. ಜೆಸಿಬಿ ಕಾರ್ಯಾಚರಣೆ ಆರಂಭಿಸುತ್ತಿದ್ದಂತೆ ಕೆಲವು ಕಿಡಿಗೇಡಿಗಳು ಎಂಸಿಡಿ ಸಿಬ್ಬಂದಿ, ಪೊಲೀಸರತ್ತ ಕಲ್ಲು ತೂರಾಟ ಆರಂಭಿಸಿದರು. ಪರಿಸ್ಥಿತಿ ನಿಯಂತ್ರಿಸಲು ಪೊಲೀಸರು ಅಶ್ರುವಾಯು ಪ್ರಯೋಗಿಸಿದರು.

> ದೆಹಲಿ ಹೈಕೋರ್ಟ್ ಸೂಚನೆಯಂತೆ ಕಾರ್ಯಾಚರಣೆ ನಡೆಯಿತು. ಒತ್ತುವರಿ ಮಾಡಿಕೊಂಡಿದ್ದ 36 ಸಾವಿರ ಚದರ ಅಡಿ ಪ್ರದೇಶವನ್ನು ವಶಕ್ಕೆ ಪಡೆಯಲಾಗಿದೆ
> **ವಿವೇಕ್ ಕುಮಾರ್,** ದೆಹಲಿ ಮಹಾನಗರ ಪಾಲಿಕೆ ಉಪ ಆಯುಕ್ತ

‘ಎಂಸಿಡಿ ಮನವಿಯಂತೆ ತೆರವು ಕಾರ್ಯಕ್ಕೆ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಮಸೀದಿ ಸಮೀಪದ ಸ್ಥಳದಲ್ಲಿ ಜೆಸಿಬಿ ಕಾರ್ಯಾಚರಣೆ ಆರಂಭಿಸುತ್ತಿದ್ದಂತೆ, 100ರಿಂದ 150ರಷ್ಟು ಜನರು ಸ್ಥಳದಲ್ಲಿ ಜಮಾಯಿಸಿದರು. ಕೆಲವು ಕಿಡಿಗೇಡಿಗಳು ಕಲ್ಲು ತೂರಾಟ ನಡೆಸಿದ್ದರಿಂದ, ಪರಿಸ್ಥಿತಿ ನಿಯಂತ್ರಿಸಲು ಅಶ್ರುವಾಯು ಸಿಡಿಸಿ ಗುಂಪು ಚದುರಿಸಲಾಯಿತು’ ಎಂದು ಡಿಸಿಪಿ ನಿಧಿನ್ ವಲ್ಸನ್ ತಿಳಿಸಿದ್ದಾರೆ.

‘ಮಸೀದಿಗೆ ಹಾನಿ ಆಗಿಲ್ಲ’

ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ಮಸೀದಿಗೆ ಯಾವುದೇ ಹಾನಿ ಆಗಿಲ್ಲ ಎಂದು ದೆಹಲಿ ಪೊಲೀಸರು ಮತ್ತು ಎಂಸಿಡಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

‘ಕಲ್ಲು ತೂರಾಟದ ಬೆನ್ನಲ್ಲೇ, ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಈಗ ಪರಿಸ್ಥಿತಿ ಸಹಜ ಸ್ಥಿತಿಗೆ ಮರಳಿದೆ. ಸಮೀಪದ ಕಟ್ಟಡಗಳ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ’ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ.



ದೆಹಲಿಯ ರಾಮಲೀಲಾ ಮೈದಾನದ ಬಳಿ ಸೈಯದ್ ಫೈಜ್ ಇಲಾಹಿ ಮಸೀದಿ ಬಳಿ ದೆಹಲಿ ಮಹಾನಗರ ಪಾಲಿಕೆ ವತಿಯಿಂದ ಒತ್ತುವರಿ ತೆರವು ಕಾರ್ಯಾಚರಣೆ ನಡೆಯಿತು ಪಿಟಿಐ ಚಿತ್ರ

ಒತ್ತುವರಿ ಮಾಡಿಕೊಂಡಿದ್ದ ಪ್ರದೇಶದಲ್ಲಿ ಒಂದು ಡಯಾಗ್ನಾಸ್ಟಿಕ್ ಕೇಂದ್ರ, ಮದುವೆ ಸಭಾಂಗಣ, ಆವರಣ ಗೋಡೆ ಇತ್ತು. ಎಲ್ಲವನ್ನೂ ತೆರವು ಮಾಡಲಾಗಿದೆ. ಕಟ್ಟಡದ ಅವಶೇಷ ಸೇರಿ 200ರಿಂದ 250 ಲೋಡ್‌ನಷ್ಟು ಕಸವನ್ನು ಲಾರಿಗಳ ಮೂಲಕ ಹೊರಗೆ ಸಾಗಿಸಲಾಗಿದೆ ಎಂದು ಎಂಸಿಡಿ ಹೇಳಿದೆ.

‘ಮಂಗಳವಾರ ತಡರಾತ್ರಿಯಿಂದಲೇ ಒತ್ತುವರಿ ಕಾರ್ಯಾಚರಣೆ ನಡೆಯುತ್ತಿತ್ತು. ಬುಧವಾರ ಬೆಳಿಗ್ಗೆ ಹೊತ್ತಿಗೆ ಮಸೀದಿಯನ್ನು ಕೆಡವಲಾಗುತ್ತಿದೆ ಎಂಬ ವದಂತಿ ಹರಡಿತು’ ಎಂದು ರಿಕ್ಷಾ ಚಾಲಕರೊಬ್ಬರು ಹೇಳಿದರು. ‘ತೆರವು ಮಾಡಲಾದ ಜಾಗವು ಮಸೀದಿಗೆ ಸೇರಿದ ಸ್ಮಶಾನವಾಗಿದೆ’ ಎಂದು ಸ್ಥಳೀಯರೊಬ್ಬರು ಹೇಳಿದರು.

ಕಾರ್ಯಾಚರಣೆ ಪೂರ್ವದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಎಂಸಿಡಿ ಸಿಬ್ಬಂದಿ ಅಮನ್ ಕಮಿಟಿ ಸದಸ್ಯರ ಜತೆಗೆ ಮಾತುಕತೆ ನಡೆಸಿದ್ದರು. ಸೂಕ್ಷ್ಮ ಪ್ರದೇಶಗಳಲ್ಲಿ ಭದ್ರತೆಗೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಲಾಗಿತ್ತು.

ಸುದ್ದಿ 2 ನಿಮಿಷ

ದೆಹಲಿ ಗಲಭೆ: ಜಾಮೀನಿಗೆ ಅರ್ಜಿ

ನವದೆಹಲಿ (ಪಿಟಿಐ): 2020ರ ದೆಹಲಿ ಗಲಭೆಗೆ ಸಂಚು ನಡೆಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ಆರೋಪಿಗಳ ಪೈಕಿ ಐವರಿಗೆ ಸುಪ್ರೀಂ ಕೋರ್ಟ್ ಜಾಮೀನು ಮಂಜೂರು ಮಾಡಿದ ಬೆನ್ನಿಗೆ, ಮತ್ತೊಬ್ಬ ಆರೋಪಿಯು ಜಾಮೀನು ಕೋರಿ ಹೊಸದಾಗಿ ಅರ್ಜಿ ಸಲ್ಲಿಸಿದ್ದಾರೆ.

ಸಿಎಎ/ಎನ್‌ಆರ್‌ಸಿ ವಿರೋಧಿ ಸಭೆಯ 11 ಸಂಘಟಕರು ಮತ್ತು ಭಾಷಣಕಾರರಲ್ಲಿ ಒಬ್ಬರಾದ ಸಲೀಂ ಮಲಿಕ್ ಅಲಿಯಾಸ್ ಮುನ್ನಾ ಅವರು, ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಸಮೀರ್ ಬಾಜಪೈ ಮುಂದೆ ತಮ್ಮ ಜಾಮೀನು ಅರ್ಜಿ ಸಲ್ಲಿಸಿದ್ದಾರೆ.

ಕ್ರಿಮಿನಲ್ ಪಿತೂರಿ ಆರೋಪದಡಿ ಸಲೀಂ ವಿರುದ್ಧ ನ್ಯಾಯಾಲಯದಲ್ಲಿ ಆರೋಪಗಳನ್ನು ದಾಖಲಿಸಲಾಗಿದೆ. ಇದೇ ರೀತಿಯ ಆರೋಪ ಎದುರಿಸುತ್ತಿರುವ ಮತ್ತೊಬ್ಬ ಆರೋಪಿಗೆ ಸುಪ್ರೀಂ ಕೋರ್ಟ್ ಸೋಮವಾರ ಜಾಮೀನು ಮಂಜೂರು ಮಾಡಿತ್ತು. ಮಲಿಕ್ ಅವರ ಜಾಮೀನು ಅರ್ಜಿಯನ್ನು ನ್ಯಾಯಾಲಯವು ಜ.8ರಂದು ವಿಚಾರಣೆಗಾಗಿ ಪಟ್ಟಿ ಮಾಡಿದೆ.

ಬಿಡುಗಡೆ ಆದೇಶ: ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಿಂದ ಜಾಮೀನು ಪಡೆದಿರುವ ಗುಲ್‌ಫಿಶಾ ಫಾತಿಮಾ, ಮೀರನ್ ಹೈದರ್, ಶಿಫಾ ಉರ್ ರೆಹಮಾನ್ ಮತ್ತು ಮೊಹಮ್ಮದ್ ಸಲೀಂ ಖಾನ್ ಅವರನ್ನು ಬಿಡುಗಡೆ ಮಾಡುವಂತೆ ದೆಹಲಿ ನ್ಯಾಯಾಲಯವು ಬುಧವಾರ ಆದೇಶ ಹೊರಡಿಸಿದೆ.



ಪ್ರಕರಣದ ಐದನೇ ಆರೋಪಿ ಶದಾಬ್ ಅಹ್ಮದ್ ಅವರಿಗೂ ಸುಪ್ರೀಂ ಕೋರ್ಟ್ ಸೋಮವಾರ ಜಾಮೀನು ಮಂಜೂರು ಮಾಡಿತ್ತು. ಆದರೆ, ಜಾಮೀನಿಗೆ ಸಂಬಂಧಿಸಿದ ಭದ್ರತಾ ಬಾಂಡ್‌ಗಳನ್ನು ಸಲ್ಲಿಸಲು ಅವರು ನ್ಯಾಯಾಲಯಕ್ಕೆ ಹಾಜರಾಗಲಿಲ್ಲ.

‘ಅರಣ್ಯ ನಿರ್ವಹಣೆ: ಖಾಸಗಿಗೆ ರಹದಾರಿ ಸೃಷ್ಟಿಸಿದ ಕೇಂದ್ರ’

ನವದೆಹಲಿ (ಪಿಟಿಐ): ‘ಅರಣ್ಯ (ಸಂರಕ್ಷಣೆ) ಕಾಯ್ದೆಗೆ 2023ರಲ್ಲಿ ತಿದ್ದುಪಡಿ ಮಾಡಿ ಅರಣ್ಯ ನಿರ್ವಹಣೆಯಲ್ಲಿ ಖಾಸಗಿಯವರ ಪ್ರವೇಶಕ್ಕೆ ರಹದಾರಿ ಸೃಷ್ಟಿಸಲಾಗಿದೆ’ ಎಂದು ಕಾಂಗ್ರೆಸ್ ಬುಧವಾರ ದೂರಿದೆ.

ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯವು ಬಿಡುಗಡೆ ಮಾಡಿರುವ ಸುತ್ತೋಲೆಯನ್ನು ಲಗತ್ತಿಸಿ ಕೇಂದ್ರದಲ್ಲಿ ಈ ಹಿಂದೆ ಪರಿಸರ ಸಚಿವರಾಗಿದ್ದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ. ಮಾರ್ಗಸೂಚಿಗೆ ಕೆಲವು ಬದಲಾವಣೆಗಳನ್ನು ಮಾಡಿ, ಕೇಂದ್ರ ಸರ್ಕಾರವು ಜ.2ರಂದು ಈ ಸುತ್ತೋಲೆಯನ್ನು ಹೊರಡಿಸಿತ್ತು.

‘1980ರ ಅರಣ್ಯ (ಸಂರಕ್ಷಣೆ) ಕಾಯ್ದೆಗೆ 2023ರಲ್ಲಿ ತಿದ್ದುಪಡಿಗಳನ್ನು ತಂದು, ಇಡೀ ಕಾಯ್ದೆಯನ್ನೇ ಬುಲ್ಡೋಜರ್ ಮೂಲಕ ನೆಲಸಮ ಮಾಡಲಾಯಿತು. ಈ ಕಾಯ್ದೆಗೆ ವನ (ಸಂರಕ್ಷಣೆ ಮತ್ತು ಸಂವರ್ಧನೆ) ಅಧಿನಿಯಮ, 1980 ಎಂದೂ ಮರುನಾಮಕರಣ ಮಾಡಿತು. ಈಗ ಜ.2ರ ಸುತ್ತೋಲೆಯು ಅರಣ್ಯ ನಿರ್ವಹಣೆಯಲ್ಲಿ ಖಾಸಗಿಯವರಿಗೆ ಅವಕಾಶ ನೀಡಿರುವುದನ್ನು ಸಾಕ್ಷೀಕರಿಸಿದೆ’ ಎಂದರು.

ಬಿಜೆಪಿ ಜೊತೆ ಕಾಂಗ್ರೆಸ್, ಎಐಎಂಐಎಂ ಸದಸ್ಯರ ಮೈತ್ರಿ: 12 ಸದಸ್ಯರ ಅಮಾನತು

ಮುಂಬೈ (ಪಿಟಿಐ): ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡ ಅಂಬರನಾಥ ನಗರ ಪರಿಷತ್‌ನ ತನ್ನ 12 ಸದಸ್ಯರನ್ನು ಅಮಾನತುಗೊಳಿಸಿರುವ ಕಾಂಗ್ರೆಸ್, ಬ್ಲಾಕ್ ಕಾಂಗ್ರೆಸ್ ಸಮಿತಿಯನ್ನು (ಬಿಸಿಸಿ) ವಿಸರ್ಜಿಸಿದೆ.

ಠಾಣೆ ಜಿಲ್ಲೆಯ ಅಂಬರನಾಥ ನಗರ ಪರಿಷತ್‌ಗೆ ಕಳೆದ ತಿಂಗಳಷ್ಟೇ ಚುನಾವಣೆ ನಡೆದಿತ್ತು. ಮಹಾರಾಷ್ಟ್ರದ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನೆಯು 27 ವಾರ್ಡ್‌ಗಳಲ್ಲಿ ಗೆಲ್ಲುವ ಮೂಲಕ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತ್ತು.

ಶಿವಸೇನೆಯನ್ನು ಅಧಿಕಾರದಿಂದ ದೂರವಿಡಲಿಕ್ಕಾಗಿ, ಬಿಜೆಪಿಯು ಅಜಿತ್ ಪವಾರ್ ಬಣದ ಎನ್‌ಸಿಪಿ ಮತ್ತು ಕಾಂಗ್ರೆಸ್ ಸದಸ್ಯರ ಜೊತೆಗೂಡಿ ತನ್ನ ಮೈತ್ರಿಕೂಟದ ಬಲವನ್ನು 31 ಸ್ಥಾನಗಳಿಗೆ ಹೆಚ್ಚಿಸಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದಿತ್ತು.

ಪರಿಷತ್ ಸದಸ್ಯರ ನಡೆಯಿಂದ ಮುಖಭಂಗಕ್ಕೀಡಾದ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯು, ಅಂಬರನಾಥ ಬ್ಲಾಕ್ ಕಾಂಗ್ರೆಸ್ ಸಮಿತಿಯನ್ನು ವಿಸರ್ಜಿಸಿದೆ. ಬಿಸಿಸಿ ಅಧ್ಯಕ್ಷ ಪ್ರದೀಪ್ ಪಾಟೀಲ್ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

60 ಸದಸ್ಯ ಬಲದ ಪಾಲಿಕೆಗೆ ಡಿ. 27ರಂದು ಚುನಾವಣೆ ನಡೆದಿತ್ತು. ಏಕನಾಥ ಶಿಂದೆ ಬಣ 27, ಬಿಜೆಪಿ 14, ಕಾಂಗ್ರೆಸ್ 12, ಎನ್‌ಸಿಪಿ ನಾಲ್ಕು ವಾರ್ಡ್‌ಗಳಲ್ಲಿ ಗೆಲುವು ಸಾಧಿಸಿದ್ದರೆ, ಪಕ್ಷೇತರರು ಎರಡು ವಾರ್ಡ್‌ಗಳಲ್ಲಿ ಜಯಶಾಲಿಯಾಗಿದ್ದರು.

ಶಿಂದೆ ಬಣ ಅಧಿಕಾರದ ಚುಕ್ಕಾಣಿ ಹಿಡಿಯಲು ನಾಲ್ವರು ಸದಸ್ಯರ ಬೆಂಬಲ ಬೇಕಿತ್ತು. ಆದರೆ, ಬಿಜೆಪಿ–ಕಾಂಗ್ರೆಸ್–ಎನ್‌ಸಿಪಿ, ಪಕ್ಷೇತರರು ಒಟ್ಟಾಗಿ ಅಧಿಕಾರದ ಗದ್ದುಗೆಗೆ ಏರಿದ್ದಾರೆ.

ಎಐಎಂಐಎಂ ಜೊತೆ ಬಿಜೆಪಿ ನಂಟು: ಅಕೋಲ ಜಿಲ್ಲೆಯ ಅಕೋಟ್ ನಗರ ಪರಿಷತ್‌ನಲ್ಲಿ ಅಸಾದುದ್ದೀನ್ ಒವೈಸಿ ನೇತೃತ್ವದ ಎಐಎಂಐಎಂ ಜೊತೆ ಬಿಜೆಪಿ ಮೈತ್ರಿ ಮಾಡಿಕೊಂಡು ಅಧಿಕಾರದ ಚುಕ್ಕಾಣಿ ಹಿಡಿದಿದೆ.



ಮಧ್ಯಪ್ರದೇಶದ ಇಂದೋರ್‌ನಲ್ಲಿ ಕಲುಷಿತ ನೀರು ಸೇವಿಸಿ ಮೃತಪಟ್ಟವರಿಗೆ ಗೌರವ ಸಲ್ಲಿಸಲು ಮಹಿಳಾ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಭೋಪಾಲ್‌ನಲ್ಲಿ ಮೇಣದಬತ್ತಿ ಹಚ್ಚಿ ಮೆರವಣಿಗೆ ನಡೆಸಿದರು ಪಿಟಿಐ ಚಿತ್ರ

ಮತದಾರರ ಪಟ್ಟಿಯ ಕರಡು ಪ್ರಕಟಿಸಿದ ಕೇಂದ್ರ ಚುನಾವಣಾ ಆಯೋಗ

6.5 ಕೋಟಿ ಮತದಾರರಿಗೆ ಕೊಕ್

ನವದೆಹಲಿ(ಪಿಟಿಐ): ಒಂಬತ್ತು ರಾಜ್ಯಗಳು ಹಾಗೂ ಮೂರು ಕೇಂದ್ರಾಡಳಿತ ಪ್ರದೇಶಗಳಲ್ಲಿ ಕೈಗೊಂಡಿರುವ ಎರಡನೇ ಹಂತದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ(ಎಸ್‌ಐಆರ್) ಸಂಬಂಧಿಸಿ ಕರಡು ಪಟ್ಟಿಯನ್ನು ಚುನಾವಣಾ ಆಯೋಗ ಪ್ರಕಟಿಸಿದ್ದು, ಒಟ್ಟು 6.5 ಕೋಟಿ ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ.

ಎರಡನೇ ಹಂತದ ಎಸ್‌ಐಆರ್ ಕಳೆದ ಅಕ್ಟೋಬರ್ 27ರಂದು ಆರಂಭವಾಗಿತ್ತು. ಈ ಪ್ರಕ್ರಿಯೆ ಆರಂಭಕ್ಕೂ ಮುನ್ನ ಈ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 50.90 ಕೋಟಿ ಮತದಾರರು ಇದ್ದರು. ಎಸ್‌ಐಆರ್ ಬಳಿಕ ಮತದಾರರ ಕರಡು ಪಟ್ಟಿಗಳನ್ನು ಪ್ರಕಟಿಸಲಾಗಿದ್ದು, ಮತದಾರರ ಸಂಖ್ಯೆ 44.40 ಕೋಟಿಗೆ ಇಳಿದಿದೆ.

‘ಕರಡು ಪಟ್ಟಿಯಿಂದ ಕೈಬಿಡಲಾದ ಹೆಸರಗಳನ್ನು ‘ಎಎಸ್‌ಡಿ’ (ಗೈರು/ಸ್ಥಳಾಂತರಗೊಂಡವರು ಮತ್ತು ಮೃತಪಟ್ಟವರು) ಎಂದು ವರ್ಗೀಕರಿಸಿ, ಪ್ರತ್ಯೇಕವಾಗಿ ನಮೂದಿಸಲಾಗಿದೆ’ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ಹೇಳಿದ್ದಾರೆ.

ಪ್ರಸ್ತಾವ: ಇತರ ರಾಜ್ಯಗಳಲ್ಲಿ ಹಾಗೂ ವಿದೇಶಗಳಲ್ಲಿ ನೆಲಸಿರುವ ಪಶ್ಚಿಮ ಬಂಗಾಳದ ಮತದಾರರು ಎಸ್‌ಐಆರ್‌ಗೆ ಸಂಬಂಧಿಸಿದ ವಿಚಾರಣೆಗೆ ಹಾಜರಾಗುವುದಕ್ಕೆ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ) ಕಚೇರಿಯು ಪರ್ಯಾಯ ವಿಧಾನ ಒಳಗೊಂಡ ಪ್ರಸ್ತಾವವನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದಾರೆ.

ವಿವಿಧ ರಾಜ್ಯಗಳಿಗೆ ವಲಸೆ ಹೋಗಿರುವ ಕಾರ್ಮಿಕರು, ಬೇರೆ ರಾಜ್ಯಗಳು/ದೇಶಗಳಲ್ಲಿ ತಾತ್ಕಾಲಿಕವಾಗಿ ನೆಲಸಿರುವ ವಿದ್ಯಾರ್ಥಿಗಳು ಹಾಗೂ ವೃತ್ತಿಪರರಿಗೆ ನಿಗದಿತ ದಿನದಂದು ವಿಚಾರಣೆಗೆ ಖುದ್ದಾಗಿ ಹಾಜರಾಗಲು ಸಾಧ್ಯವಾಗುವುದಿಲ್ಲ. ಮತದಾರರ ಪಟ್ಟಿಯಿಂದ ಇಂಥವರ ಹೆಸರುಗಳನ್ನು ತೆಗೆದು ಹಾಕದಿರುವುದನ್ನು ಖಾತ್ರಿಪಡಿಸಲು ಪರ್ಯಾಯ ವಿಧಾನ ಸೂಚಿಸುವಂತೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ವಿಡಿಯೊ ಕಾನ್ಫರೆನ್ಸ್ ಮೂಲಕ ಇಲ್ಲವೇ ಅವರು ಇರುವ ಸ್ಥಳದಲ್ಲಿನ ಮತಗಟ್ಟೆಗೆ ತೆರಳಿ ವಿಚಾರಣೆಗೆ ಹಾಜರಾಗಲು ಅನುಮತಿ ನೀಡಬೇಕು ಎಂಬ ಸಲಹೆಯನ್ನು ಈ ಪ್ರಸ್ತಾವ ಒಳಗೊಂಡಿದೆ’ ಎಂದು ತಿಳಿಸಿದ್ದಾರೆ.

ಅಮರ್ತ್ಯ ಸೇನ್‌ಗೆ ನೋಟಿಸ್ ನಾಚಿಕೆಗೇಡಿನದು: ಟಿಎಂಸಿ

ಕೋಲ್ಕತ್ತ (ಪಿಟಿಐ): ಎಸ್‌ಐಆರ್‌ಗೆ ಸಂಬಂಧಿಸಿದ ವಿಚಾರಣೆಗೆ ಹಾಜರಾಗುವಂತೆ, ನೊಬೆಲ್ ಪ್ರಶಸ್ತಿ ಪುರಸ್ಕೃತ ಅರ್ಥಶಾಸ್ತ್ರಜ್ಞ ಅಮರ್ತ್ಯ ಸೇನ್ ಅವರಿಗೆ ಚುನಾವಣಾ ಆಯೋಗ ನೋಟಿಸ್ ನೀಡಿರುವುದು ನಾಚಿಕೆಗೇಡಿನ ವಿಚಾರ ಎಂದು ಟಿಎಂಸಿ ಬುಧವಾರ ಟೀಕಿಸಿದೆ.

ಈ ವಿಚಾರ ಮುಂದಿಟ್ಟುಕೊಂಡು ಆಯೋಗ ಮತ್ತು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸುತ್ತಿರುವ ಟಿಎಂಸಿ,‘ಆಯೋಗದ ಈ ನಡೆ ಪಶ್ಚಿಮ ಬಂಗಾಳ ವಿರೋಧಿ ಕ್ರಮ. ರಾಜ್ಯವನ್ನು ವಿಭಜಿಸುವುದು ಹಾಗೂ ಅವನತಿಗೆ ತಳ್ಳುವ ಕಾರ್ಯಸೂಚಿ ಭಾಗವಾಗಿ ಈ ರೀತಿ ನಡೆದುಕೊಳ್ಳಲಾಗುತ್ತಿದೆ’ ಎಂದು ಟೀಕಿಸಿದೆ.

‘ಸೇನ್ ಅವರು ಪ್ರಸ್ತುತ ವಿದೇಶದಲ್ಲಿದ್ದು, ಇಲ್ಲಿನ ಬೋಲ್ಪುರದಲ್ಲಿ ಅವರ ಪೂರ್ವಿಕರ ಮನೆ ಇದೆ. ಅವರ ಸಂಬಂಧಿಕರಿಗೆ ಈ ನೋಟಿಸ್ ತಲುಪಿಸಲಾಗಿದೆ’ ಎಂದು ಆಯೋಗದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ನೋಟಿಸ್ ಸ್ವೀಕರಿಸಿದ್ದೇನೆ. ಈ ಬಗ್ಗೆ ಸೇನ್ ಅವರಿಗೆ ಮಾಹಿತಿ ನೀಡುವೆ’ ಎಂದು ಅಮರ್ತ್ಯ ಸೇನ್ ಅವರ ಸಂಬಂಧಿಯೊಬ್ಬರು ಹೇಳಿದ್ದಾರೆ.

ಬಿಎಲ್‌ಒ ಸಾವು: ಒತ್ತಡ ಕಾರಣ–ಆರೋಪ

ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಬೂತ್ ಮಟ್ಟದ ಅಧಿಕಾರಿ(ಬಿಎಲ್‌ಒ) ಸಂಪ್ರೀತಾ ಚೌಧರಿ ಸನ್ಯಾಲ್ ಬುಧವಾರ ಮೃತಪಟ್ಟಿದ್ದಾರೆ.

‘ಎಸ್‌ಐಆರ್‌ನಿಂದಾಗಿ ಕೆಲಸದ ಒತ್ತಡ ಹೆಚ್ಚಿದ್ದೇ ಸಂಪ್ರೀತಾ ಸಾವಿಗೆ ಕಾರಣ’ ಎಂದು ಅವರ ಕುಟುಂಬ ಆರೋಪಿಸಿದೆ.

ಫುಲ್ಬರಿ ಪಕುರ್ತಲಾ ನಿವಾಸಿಯಾಗಿದ್ದ ಸಂಪ್ರೀತಾ ಅವರು ಇಂಗ್ಲಿಷ್ ಬಜಾರ್ ಪ್ರದೇಶದಲ್ಲಿ ಬಿಎಲ್‌ಒ ಆಗಿ ಕಾರ್ಯನಿರ್ವಹಿಸುತ್ತಿದ್ದರು.

‘ಸಂಪ್ರೀತಾಗೆ ಕೆಲದಿನಗಳಿಂದ ಆರೋಗ್ಯ ಸರಿ ಇರಲಿಲ್ಲ. ವಿಶ್ರಾಂತಿ ಪಡೆಯುವಂತೆ ವೈದ್ಯರು ಸಲಹೆ ನೀಡಿದ್ದರು. ಆದರೆ, ಎಸ್‌ಐಆರ್ ಕಾರ್ಯವನ್ನು ಆಕೆ ಮುಂದುವರಿಸಿದ್ದಳು’ ಎಂದು ಅವರ ಪತಿ ಹೇಳಿದ್ದಾರೆ.

‘ಎಸ್‌ಐಆರ್ ಕಾರ್ಯಭಾರದಿಂದಾಗಿ ಒತ್ತಡಕ್ಕೆ ಒಳಗಾಗಿದ್ದರಿಂದ ಆಕೆಯ ಆರೋಗ್ಯ ಕ್ಷೀಣಿಸಿತು. ಬುಧವಾರ ಬೆಳಿಗ್ಗೆ ಆಕೆ ನಮ್ಮ ಮನೆಯಲ್ಲಿ ಮೃತಪಟ್ಟಳು’ ಎಂದೂ ಹೇಳಿದ್ದಾರೆ.

ಐಎಸ್‌ಜೆಡಿಯಲ್ಲಿ ಜೆಡಿಎಸ್ ವಿಲೀನ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ರಾಷ್ಟ್ರ ಮಟ್ಟದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವ ನಿರ್ಧಾರವನ್ನು ವಿರೋಧಿಸಿ, ಜಾತ್ಯತೀತ ಜನತಾ ದಳ (ಜೆಡಿಎಸ್) ಪಕ್ಷದ ಕೇರಳ ಘಟಕವು, ಹೊಸದಾಗಿ ಸ್ಥಾಪನೆ ಆಗಿರುವ ಭಾರತೀಯ ಸಮಾಜವಾದಿ ಜನತಾದಳದೊಂದಿಗೆ (ಐಎಸ್‌ಜೆಡಿ) ವಿಲೀನಗೊಳ್ಳಲು ನಿರ್ಧರಿಸಿದೆ.

ಆಡಳಿತಾರೂಢ ಎಲ್‌ಡಿಎಫ್(ಎಡ ಪ್ರಜಾಸತ್ತಾತ್ಮಕ ರಂಗ) ಭಾಗವಾಗಿರುವ ಜೆಡಿಎಸ್, ಐಎಸ್‌ಜೆಡಿಯೊಂದಿಗೆ ವಿಲೀನಗೊಳ್ಳುತ್ತಿರುವ ವಿಚಾರವನ್ನು ಇಂಧನ ಸಚಿವ ಕೆ. ಕೃಷ್ಣನ್ ಕುಟ್ಟಿ ಸೇರಿದಂತೆ ಪಕ್ಷದ ಇಬ್ಬರು ಶಾಸಕರು ವಿಧಾನಸಭಾ ಸ್ಪೀಕರ್‌ಗೆ ಅಧಿಕೃತವಾಗಿ ತಿಳಿಸಿದ್ದಾರೆ. ಜೆಡಿಎಸ್ ಪಕ್ಷವು ಐಎಸ್‌ಜೆಡಿಯಲ್ಲಿ ಅಧಿಕೃತವಾಗಿ ವಿಲೀನ ಗೊಳ್ಳುವ ಸಭೆಯು ಇದೇ 17ರಂದು ಕೊಚ್ಚಿಯಲ್ಲಿ ನಡೆಯಲಿದೆ.

ಜೆಡಿಎಸ್ ಕೇರಳ ರಾಜ್ಯ ಘಟಕದ ಅಧ್ಯಕ್ಷ ಹಾಗೂ ಶಾಸಕ ಮ್ಯಾಥ್ಯೂ ಟಿ. ಥಾಮಸ್, ‘ಜೆಡಿಎಸ್, ಹೊಸ ಪಕ್ಷದೊಂದಿಗೆ ವಿಲೀನ ಗೊಳ್ಳುತ್ತಿರುವುದರಿಂದ, ಪಕ್ಷದ ಇಬ್ಬರೂ ಶಾಸಕರಿಗೆ ಸದಸ್ಯತ್ವದ ಅನರ್ಹತೆ ಪ್ರಶ್ನೆ ಎದುರಾಗುವುದಿಲ್ಲ’ ಎಂದು ಹೇಳಿದ್ದಾರೆ.

2024ರ ಲೋಕಸಭಾ ಚುನಾವಣೆ ವೇಳೆ, ಕರ್ನಾಟಕದಲ್ಲಿ ಬಿಜೆಪಿಯೊಂದಿಗೆ ಮೈತ್ರಿ ಮಾಡಿಕೊಳ್ಳುವ ಪಕ್ಷದ ರಾಷ್ಟ್ರೀಯ ನಾಯಕರ ನಿರ್ಧಾರವನ್ನು ವಿರೋಧಿಸಿದ ಒಂದು ಬಣ, ಐಎಸ್‌ಜೆಡಿ ಸ್ಥಾಪನೆ ಮಾಡಿತು ಎಂದು ಥಾಮಸ್ ಹೇಳಿದರು.

ಕೇರಳದ ಜೆಡಿಎಸ್‌ನ ಎಲ್ಲ ಜಿಲ್ಲಾ ಘಟಕಗಳು ವಿಲೀನಗೊಳ್ಳಲು ನಿರ್ಧರಿಸಿವೆ. ಇತರ ರಾಜ್ಯಗಳಿಂದಲೂ ಸಮಾನ ಮನಸ್ಕ ಪಕ್ಷದ ಕಾರ್ಯಕರ್ತರು, ಐಎಸ್‌ಜೆಡಿ ಸೇರುವ ಸಾಧ್ಯತೆ ಇದೆ ಎಂದು ಅವರು ಹೇಳಿದರು.

ನ್ಯಾ.ಯಶವಂತ್ ವಿರುದ್ಧದ ಭ್ರಷ್ಟಾಚಾರ ಆರೋಪ

‘ತನಿಖಾ ಸಮಿತಿಗೆ ನಿರ್ಬಂಧವಿಲ್ಲ’

ನವದೆಹಲಿ (ಪಿಟಿಐ): ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧದ ಭ್ರಷ್ಟಾಚಾರ ಆರೋಪಗಳ ಕುರಿತು ತನಿಖೆಗೆ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು ತನಿಖಾ ಸಮಿತಿ ರಚಿಸಿರುವುದಕ್ಕೆ ಮೇಲ್ನೋಟಕ್ಕೆ ಕಾನೂನಿನಲ್ಲಿ ಯಾವುದೇ ಅಡೆತಡೆಯಿಲ್ಲ ಎಂದು ಸುಪ್ರೀಂ ಕೋರ್ಟ್ ಬುಧವಾರ ಮೌಖಿಕವಾಗಿ ಅಭಿಪ್ರಾಯಪಟ್ಟಿದೆ.

‘ಈ ಕುರಿತ ಪ್ರಸ್ತಾವ ರಾಜ್ಯಸಭೆಯಲ್ಲಿ ತಿರಸ್ಕೃತಗೊಂಡಿದ್ದರೂ ಲೋಕಸಭಾ ಸ್ಪೀಕರ್ ತನಿಖಾ ಸಮಿತಿ ರಚಿಸಬಹುದಾಗಿದೆ. ಅದಕ್ಕೆ ನ್ಯಾಯಮೂರ್ತಿಗಳ ವಿಚಾರಣಾ ಕಾಯ್ದೆಯಲ್ಲಿ ಯಾವುದೇ ನಿರ್ಬಂಧವಿಲ್ಲ’ ಎಂದು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಮತ್ತು ಸತೀಶ್ ಚಂದ್ರ ಶರ್ಮಾ ಅವರನ್ನು ಒಳಗೊಂಡ ಪೀಠ ಹೇಳಿದೆ.

ನ್ಯಾಯಮೂರ್ತಿ ಯಶವಂತ್ ವರ್ಮಾ ಪರ ವಾದ ಮಂಡಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ‘ವಾಗ್ದಂಡನೆ ಕುರಿತ ನಿರ್ಣಯಗಳನ್ನು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಒಂದೇ ದಿನ ಮಂಡಿಸಿ ಅಂಗೀಕಾರವಾದರೆ, ನ್ಯಾಯಮೂರ್ತಿಗಳ ವಿಚಾರಣಾ ಕಾಯ್ದೆ–1968ರ ನಿಬಂಧನೆಗಳ ಪ್ರಕಾರ ಎರಡೂ ಸದನಗಳು ಜಂಟಿಯಾಗಿ ತನಿಖಾ ಸಮಿತಿ ರಚಿಸಬೇಕಾಗುತ್ತದೆ. ಆದರೆ ಈ ಪ್ರಕರಣದಲ್ಲಿ ರಾಜ್ಯಸಭೆಯು ನಿರ್ಣಯವನ್ನು ತಿರಸ್ಕರಿಸಿದೆ ಮತ್ತು ಲೋಕಸಭೆಯ ಸ್ಪೀಕರ್ ತನಿಖಾ ಸಮಿತಿ ರಚಿಸಿದ್ದಾರೆ. ಅದು ಸರಿಯಲ್ಲ’ ಎಂದರು.

ರಾಜ್ಯಸಭೆಯ ಸಭಾಪತಿಯಾಗಿದ್ದ ಜಗದೀಪ್ ಧನಕರ್ ಅವರು ರಾಜೀನಾಮೆ ನೀಡಿದ ಬಳಿಕ, ಉಪ ಸಭಾಪತಿ ಅವರು ಈ ಪ್ರಸ್ತಾವವನ್ನು ತಿರಸ್ಕರಿಸಲು ಸಮರ್ಥರಲ್ಲ ಎಂದೂ ಅವರು ವಾದಿಸಿದರು.

ಈ ಕುರಿತ ರೋಹಟಗಿ ಅವರ ವಾದ ಒಪ್ಪದ ಪೀಠವು, ‘ಜಂಟಿ ತನಿಖಾ ಸಮಿತಿ ರಚನೆಯಿಂದ ನ್ಯಾ. ವರ್ಮಾ ಅವರಿಗೆ ಅನುಕೂಲ ಆಗುತ್ತದೆಯೇ ಎಂಬುದನ್ನು ಗಮನಿಸಬೇಕಿದೆ. ಇಲ್ಲಿ ಸಂವಿಧಾನದ 32ನೇ ವಿಧಿಯಡಿ ಮಧ್ಯ ಪ್ರವೇಶಿಬಹುದೇ ಎಂಬುದನ್ನು ಮಾತ್ರ ನಾವು ನೋಡಬೇಕಿದೆ’ ಎಂದು ಹೇಳಿತು.

ಯಶವಂತ್ ಅವರ ಅಧಿಕೃತ ನಿವಾಸದಲ್ಲಿ 2025ರ ಮಾರ್ಚ್ 14ರಂದು ಅರೆ ಸುಟ್ಟ ನೋಟುಗಳ ಕಂತೆಗಳು ಪತ್ತೆಯಾಗಿದ್ದವು. ಈ ಸಂಬಂಧ ನ್ಯಾಯಮೂರ್ತಿಗಳ ವಿಚಾರಣಾ ಕಾಯ್ದೆಯಡಿ ರಚಿಸಲಾಗಿರುವ ಸಮಿತಿಯ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ವರ್ಮಾ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠ ನಡೆಸಿತು.

‘ಎರಡೂ ಸದನಗಳಲ್ಲಿ ಪ್ರಸ್ತಾವ ಅಂಗೀಕಾರವಾಗದ ಹೊರತು ಯಾವುದೇ ಸಮಿತಿ ರಚಿಸಲು ಆಗದು. ಒಂದು ವೇಳೆ ಎರಡೂ ಸದನಗಳಲ್ಲಿ ಅಂಗೀಕಾರವಾಗಿದ್ದರೆ ಸ್ಪೀಕರ್ ಮತ್ತು ಸಭಾಪತಿ ಜಂಟಿಯಾಗಿ ತನಿಖಾ ಸಮಿತಿ ರಚಿಸಬೇಕು ಎಂದು ಕಾಯ್ದೆಯ ಸೆಕ್ಷನ್ 3(2) ಹೇಳುತ್ತದೆ. ಹೀಗಾಗಿ ಲೋಕಸಭೆ ರಚಿಸಿರುವ ಸಮಿತಿ ಕಾನೂನು ಬಾಹಿರ’ ಎಂದು ರೋಹಟಗಿ ವಾದಿಸಿದರು.

ಇದನ್ನು ಒಪ್ಪದ ಪೀಠವು, ಒಂದು ಸದನ ಪ್ರಸ್ತಾವವನ್ನು ತಿರಸ್ಕರಿಸಿದರೆ ಇನ್ನೊಂದು ಸದನ ವಿಚಾರಣೆ ನಡೆಸಬಾರದು ಎಂದು ಕಾಯ್ದೆಯಲ್ಲಿ ಸ್ಪಷ್ಟವಾಗಿ ಹೇಳಿಲ್ಲ ಎಂದಿತು.

ಒಂದು ವೇಳೆ ರಾಜ್ಯಸಭೆಯಲ್ಲಿ ಪ್ರಸ್ತಾವ ಅಂಗೀಕಾರವಾಗಿದ್ದರೆ ವರ್ಮಾ ಅವರಿಗೆ ಜಂಟಿ ತನಿಖಾ ಸಮಿತಿಯ ಪ್ರಯೋಜನ ದೊರೆಯುತ್ತಿತ್ತು ಎನಿಸುತ್ತದೆ ಎಂಬುದನ್ನು ಗಮನಿಸಿದ ಪೀಠವು, ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿತು.

‘ಮುಖಗವಸು ಧರಿಸಿದವರಿಗೆ ಚಿನ್ನಾಭರಣ ಮಾರಲ್ಲ’

ಪಟ್ನಾ (ಪಿಟಿಐ): ಮುಖಗವಸು ಧರಿಸಿದ ಗ್ರಾಹಕರಿಗೆ ಚಿನ್ನಾಭರಣಗಳನ್ನು ಮಾರಾಟ ಮಾಡದಿರಲು ಬಿಹಾರದ ಆಭರಣ ಮಳಿಗೆ ಮಾಲೀಕರು ಬುಧವಾರ ನಿರ್ಧರಿಸಿದ್ದಾರೆ.



ಅಖಿಲ ಭಾರತ ಜ್ಯುವೆಲರ್ಸ್ ಮತ್ತು ಗೋಲ್ಡ್‌ಸ್ಮಿತ್ ಫೆಡರೇಷನ್‌ನ (ಎಐಜೆಜಿಎಫ್) ರಾಜ್ಯ ಘಟಕವು ತನ್ನ ಸದಸ್ಯರಿಗೆ, ಮುಖಗವಸು ಧರಿಸಿ ಮಳಿಗೆಗಳಿಗೆ ಭೇಟಿ ನೀಡುವವರಿಗೆ ಆಭರಣಗಳ ಪ್ರದರ್ಶನ ಮತ್ತು ಮಾರಾಟ ಮಾಡದಿರುವಂತೆ ಹೇಳಿದೆ.

‘ಮುಖ ಮುಚ್ಚಿಕೊಂಡು ಅಂಗಡಿಯನ್ನು ಪ್ರವೇಶಿಸುವ ಗ್ರಾಹಕರ ಜೊತೆ ವ್ಯಾಪಾರ ಮಾಡದಿರಲು ನಿರ್ಧರಿಸಿದ್ದೇವೆ. ಹಿಜಾಬ್ ಧರಿಸಿದ ಮಹಿಳೆಯರೇ ಆಗಿರಲಿ ಅಥವಾ ಮುಖಗವಸು ಧರಿಸಿದ ಯಾವ ವ್ಯಕ್ತಿಗೂ ಚಿನ್ನಾಭರಣಗಳನ್ನು ಪ್ರದರ್ಶಿಸುವುದಿಲ್ಲ’ ಎಂದು ಎಐಜೆಜಿಎಫ್‌ನ ಬಿಹಾರ ಘಟಕದ ಅಧ್ಯಕ್ಷ ಅಶೋಕ್ ಕುಮಾರ್ ವರ್ಮಾ ಸುದ್ದಿಗಾರರಿಗೆ ತಿಳಿಸಿದರು.

‘ಕಳ್ಳತನ ತಡೆಗಟ್ಟಲಿಕ್ಕಾಗಿ, ಭದ್ರತೆಯ ಕಾರಣಗಳಿಗಾಗಿ ಹಾಗೂ ಆಭರಣಗಳ ವ್ಯಾಪಾರಿಗಳು ಮತ್ತು ಗ್ರಾಹಕರ ಸುರಕ್ಷತೆಗಾಗಿ’ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

800 ಶಾಲೆಗಳ ಮೇಲ್ದರ್ಜೆಗೆ ಡಿಪಿಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿನ 800ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳಾಗಿ ಮೇಲ್ದರ್ಜೆಗೇರಿಸಲು ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸಲು ಶಾಲಾ ಶಿಕ್ಷಣ ಇಲಾಖೆ ಟೆಂಡರ್ ಆಹ್ವಾನಿಸಿದೆ.

ಕೆಟಿಪಿಪಿ ಅನ್ವಯ ಪ್ರಕ್ರಿಯೆ ನಡೆಯಬೇಕು. ರಾಷ್ಟ್ರೀಯ ಕಟ್ಟಡ ಸಂಹಿತೆ, ಲೋಕೋಪಯೋಗಿ ಇಲಾಖೆಯ ದರಪಟ್ಟಿ, ಶಾಲೆಯ ಅಗತ್ಯ, ಭೌಗೋಳಿಕ ಪರಿಸರ ಹಾಗೂ ಲಭ್ಯವಿರುವ ಮೂಲಸೌಕರ್ಯ ಆಧರಿಸಿ ಡಿಪಿಆರ್ ಸಿದ್ಧಪಡಿಸಬೇಕು ಎಂದು ಸೂಚಿಸಲಾಗಿದೆ. ಡಿಪಿಆರ್ ತಯಾರಿಕೆಗೆ ಇಲಾಖೆ ₹18 ಕೋಟಿ ಅನುದಾನ ಮೀಸಲಿಟ್ಟಿದೆ.

ವೈದ್ಯಕೀಯ ಕಾಲೇಜು: ಅನುಮತಿ ಹಿಂದಕ್ಕೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಿಯಾಸಿಯಲ್ಲಿನ ಶ್ರೀಮಾತಾ ವೈಷ್ಣೋದೇವಿ ವೈದ್ಯಕೀಯ ಎಕ್ಸ್‌ಲೆನ್ಸ್ ಸಂಸ್ಥೆಗೆ ನೀಡಲಾಗಿದ್ದ ಅನುಮತಿ ಪತ್ರವನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಹಿಂತೆಗೆದುಕೊಂಡಿದೆ.

ಈ ವೈದ್ಯಕೀಯ ಶಿಕ್ಷಣ ಸಂಸ್ಥೆಯು ವೈದ್ಯಕೀಯ ಮೌಲ್ಯಮಾಪನ ಮತ್ತು ರೇಟಿಂಗ್ ಮಂಡಳಿಯ (ಎಂಎಆರ್‌ಬಿ) ಕನಿಷ್ಠ ಮಾನದಂಡಗಳನ್ನು ಪಾಲಿಸದ ಕಾರಣ ಅನುಮತಿ ಹಿಂದಕ್ಕೆ ಪಡೆಯಲಾಗಿದೆ ಎಂದು ಅದು ತಿಳಿಸಿದೆ.

ಈ ಕಾಲೇಜಿಗೆ ಪ್ರವೇಶ ಪಡೆದ ಎಲ್ಲ ವಿದ್ಯಾರ್ಥಿಗಳಿಗೆ ಜಮ್ಮು ಮತ್ತು ಕಾಶ್ಮೀರದ ಇತರ ವೈದ್ಯಕೀಯ ಕಾಲೇಜುಗಳಲ್ಲಿ ಪ್ರವೇಶಾವಕಾಶ ಕಲ್ಪಿಸಲಾಗುವುದು. ಇವುಗಳನ್ನು ಕೇಂದ್ರಾಡಳಿತ ಪ್ರದೇಶದ ಸಕ್ಷಮ ಪ್ರಾಧಿಕಾರದ ‘ಸೂಪರ್‌ನ್ಯೂಮರರಿ ಸೀಟು’ಗಳಾಗಿ ಪರಿಗಣಿಸಲಾಗುವುದು ಎಂದು ಅದು ಆದೇಶದಲ್ಲಿ ಹೇಳಿದೆ.

ತಪಾಸಣೆ ನಡೆಸಿದಾಗ ಸಂಸ್ಥೆಯಲ್ಲಿ ಹಲವು ಮಾನದಂಡ ಪಾಲನೆ ಆಗದಿರುವುದು ಗೊತ್ತಾಗಿದೆ ಎಂದಿರುವ ಮಂಡಳಿ, ಈ ಆದೇಶ ತಕ್ಷಣದಿಂದಲೇ ಜಾರಿಗೆ ಬರುತ್ತದೆ ಎಂದಿದೆ.

‘ಸ್ಥಳೀಯ ಸಂಸ್ಥೆ ಗೆಲುವಿಗೆ ಕಾರ್ಯತಂತ್ರ’

ಪ್ರಜಾವಾಣಿ ವಾರ್ತೆ


ಬಿ.ಎಸ್. ಯಡಿಯೂರಪ್ಪ

ಬೆಂಗಳೂರು: ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಗೆಲ್ಲಲು ಸೂಕ್ತ ಕಾರ್ಯತಂತ್ರ ರೂಪಿಸಲಾಗುವುದು ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಸುದ್ದಿಗಾರರ ಜತೆ ಬುಧವಾರ ಮಾತನಾಡಿದ ಅವರು, ಈ ಸಂಬಂಧ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಎಲ್ಲ ಜಿಲ್ಲೆಗಳ ಪ್ರಮುಖ ನಾಯಕರ ಜತೆ ನಿರಂತರ ಸಭೆಗಳನ್ನು ನಡೆಸುತ್ತಿದ್ದಾರೆ ಎಂದರು.

ರಾಜ್ಯ ಸರ್ಕಾರದ ದುರಾಡಳಿತದಿಂದ ಜನತೆ ಬೇಸತ್ತು ಹೋಗಿದ್ದಾರೆ. ಈ ಎಲ್ಲ ವಿಚಾರಗಳನ್ನು ಜನರಿಗೆ ಮನದಟ್ಟು ಮಾಡುವುದರ ಜತೆಗೆ, ಸ್ಥಳೀಯ ಸಂಸ್ಥೆ ಚುನಾವಣೆ ಗೆಲ್ಲಲು ಸಂಘಟನಾತ್ಮಕವಾಗಿ ಕೆಲಸ ಮಾಡಲಾಗುವುದು ಎಂದು ಹೇಳಿದರು.

ಎರಡು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ, ವಿಧಾನ ಪರಿಷತ್ತಿನ ನಾಲ್ಕು ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲೂ ಗೆಲುವು ಸಾಧಿಸುವುದರ ಜತೆಗೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ದೊಡ್ಡ ಬಹುಮತದೊಂದಿಗೆ ಸರ್ಕಾರ ರಚಿಸಬೇಕು ಎಂಬ ಉದ್ದೇಶದಿಂದ ಪಕ್ಷವನ್ನು ಸಂಘಟಿಸಲಾಗುತ್ತಿದೆ ಎಂದು ಯಡಿಯೂರಪ್ಪ ತಿಳಿಸಿದರು.

ಅರಸುಗೆ ಹೋಲಿಸಲಾಗದು: ದೇವರಾಜ ಅರಸು ಅವರ ಆಡಳಿತ ವೈಖರಿಯೇ ಬೇರೆ, ಸಿದ್ದರಾಮಯ್ಯ ಆಡಳಿತದ ವೈಖರಿಯೇ ಬೇರೆ. ಇವರನ್ನು ಅರಸು ಜತೆ ಹೋಲಿಸಲಾಗದು. ಸಿದ್ದರಾಮಯ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಅರಸು ದಾಖಲೆ ಮುರಿದೆವು ಎಂಬ ಸಂಭ್ರಮದ ಸಮಾವೇಶ ಮಾಡಲು ಹೊರಟಿರುವುದನ್ನು ಜನ ಮೆಚ್ಚುವುದಿಲ್ಲ ಎಂದು ಹೇಳಿದರು.

ಯೋಗೀಶ್ ಗೌಡ ಗೌಡರ್ ಕೊಲೆ ಪ್ರಕರಣ: ಸಿಬಿಐಗೆ ತಾಕೀತು

‘ವಿನಯ ಅರ್ಜಿ: ಸಾಕ್ಷಿ ವಿವರ ಸಲ್ಲಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್ ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ವಿಚಾರಣೆಗೆ ಬಾಕಿ ಇರುವ ಸಾಕ್ಷಿಗಳ ಬಗ್ಗೆ ಮೆಮೊ ಸಲ್ಲಿಸಿ’ ಎಂದು ಹೈಕೋರ್ಟ್, ಸಿಬಿಐಗೆ ನಿರ್ದೇಶಿಸಿದೆ.

ಜಾಮೀನು ನಿರಾಕರಿಸಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪ್ರಕರಣದ ಆರೋಪಿಯಾಗಿ ನ್ಯಾಯಾಂಗ ಬಂಧನದಲ್ಲಿರುವ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ಪದಾಂಕಿತ ಹಿರಿಯ ವಕೀಲ ಸಿ.ವಿ. ನಾಗೇಶ್, ‘ಸಾಕ್ಷಿಯೊಬ್ಬರು ವಿನಯ್ ಕುಲಕರ್ಣಿ ಕಾಲಿಗೆ ಬಿದ್ದರೆಂಬ ಆರೋಪವಿದೆ. ಸಾಕ್ಷ್ಯ ನಾಶಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳಿಲ್ಲ. ತನಿಖಾಧಿಕಾರಿಯೊಬ್ಬರನ್ನು ಬಿಟ್ಟು ಉಳಿದೆಲ್ಲ ಸಾಕ್ಷಿಗಳ ವಿಚಾರಣೆ ಮುಕ್ತಾಯಗೊಂಡಿದೆ. ರಾಜಕೀಯ ದುರುದ್ದೇಶದಿಂದ ಪ್ರಕರಣ ದಾಖಲಿಸಲಾಗಿದೆ. ಹಾಗಾಗಿ, ಜಾಮೀನು ನೀಡಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರಲ್ಲದೆ, ‘ಪ್ರಕರಣದಲ್ಲಿ ಇನ್ನೂ ಹೆಚ್ಚುವರಿ ಸಾಕ್ಷಿಗಳ ವಿಚಾರಣೆ ಬಾಕಿಯಿದೆ. ಎಲ್ಲ ಸಾಕ್ಷಿಗಳ ವಿಚಾರಣೆ ಮುಗಿಯುವ ತನಕ ಅರ್ಜಿದಾರರಿಗೆ ಜಾಮೀನು ಮಂಜೂರು ಮಾಡಬಾರದು. ಈಗಾಗಲೇ ಸುಪ್ರೀಂ ಕೋರ್ಟ್ ವಿನಯ ಕುಲಕರ್ಣಿ ಅವರ ಜಾಮೀನು ರದ್ದುಪಡಿಸಿರುವುದನ್ನು ನ್ಯಾಯಪೀಠ ಗಂಭೀರವಾಗಿ ಪರಿಗಣಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಬಾಕಿಯಿರುವ ಸಾಕ್ಷಿಗಳ ಬಗ್ಗೆ ವಿವರವಾದ ಮೆಮೊ ಸಲ್ಲಿಸಿ’ ಎಂದು ಪ್ರಸನ್ನ ಕುಮಾರ್ ಅವರಿಗೆ ಸೂಚಿಸಿ ವಿಚಾರಣೆಯನ್ನು ಗುರುವಾರಕ್ಕೆ (ಜ.8) ಮುಂದೂಡಿತು. ವಿನಯ ಕುಲಕರ್ಣಿ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?

ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶ್ ಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಪ್ರಕರಣದ ಪ್ರಮುಖ ಆರೋಪಿ ವಿನಯ ಕುಲಕರ್ಣಿ ಅವರು 2025ರ ಜೂನ್ 13ರಿಂದ ನ್ಯಾಯಾಂಗ ಬಂಧನದಲ್ಲಿದ್ದು ಪ್ರಕರಣದ ವಿಚಾರಣೆ ಎದುರಿಸುತ್ತಿದ್ದಾರೆ. ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ 2025ರ ಡಿಸೆಂಬರ್ 8ರಂದು ಕುಲಕರ್ಣಿ ಅವರ ಜಾಮೀನು ಅರ್ಜಿಯನ್ನು ವಜಾಗೊಳಿಸಿತ್ತು.

ಕಸಾಪ ವ್ಯವಹಾರ: ರಾಜ್ಯಪಾಲ, ಮುಖ್ಯಮಂತ್ರಿಗೆ ಪತ್ರ ಬರೆದು ಒತ್ತಾಯ

ನ್ಯಾಯಾಂಗ ತನಿಖೆಗೆ ಮಹೇಶ ಜೋಶಿ ಆಗ್ರಹ

ಪ್ರಜಾವಾಣಿ ವಾರ್ತೆ


ಮಹೇಶ ಜೋಶಿ

ಬೆಂಗಳೂರು: ‘ತಾವು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ವ್ಯವಹಾರದ ಬಗೆಗಿನ ಆರೋಪಗಳ ತನಿಖೆಗೆ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಆಯೋಗ ರಚಿಸಬೇಕು’ ಎಂದು ಮಹೇಶ ಜೋಶಿ ಆಗ್ರಹಿಸಿದ್ದಾರೆ.

ಈ ಬಗ್ಗೆ ಅವರು ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

‘ರಾಜಕೀಯ ನಂಟು ಹೊಂದಿರುವ ಮಂಡ್ಯದ ಪ್ರೊ. ಜಯಪ್ರಕಾಶ್ ಗೌಡ, ಕೆ.ಟಿ. ಶ್ರೀಕಂಠೇಗೌಡ, ರಾಮನಗರದ ಸಿ.ಕೆ. ರಾಮೇಗೌಡ, ಎಸ್.ಜಿ. ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ, ವಸುಂಧರಾ ಭೂಪತಿ, ಆರ್.ಜಿ.ಹಳ್ಳಿ ನಾಗರಾಜ್, ಹಂಪ ನಾಗರಾಜಯ್ಯ ಮೊದಲಾದ ಬೆರಳೆಣಿಕೆಯಷ್ಟು ಮಂದಿ ಪೂರ್ವಗ್ರಹ ಪೀಡಿತರಾಗಿದ್ದಾರೆ. ಕಸಾಪ ಚುನಾವಣೆ ವೇಳೆಯಲ್ಲಿಯೂ ನನ್ನ ವಿರುದ್ಧ ಅಪಪ್ರಚಾರ ಮಾಡಿದ್ದರು. ಅಂತಹವರು ನೀಡಿರುವ ದೂರು ಆಧರಿಸಿ ವಿಚಾರಣಾಧಿಕಾರಿಗಳನ್ನು ನೇಮಿಸಲಾಗಿದೆ. ಈ ಕಾರಣಕ್ಕೆ ನಡೆಯುತ್ತಿರುವ ವಿಚಾರಣೆಯು ನಿಷ್ಪಕ್ಷಪಾತ ಹಾಗೂ ನ್ಯಾಯೋಚಿತವಾಗಿ ನಡೆಯುತ್ತಿದೆ ಎಂಬ ವಿಶ್ವಾಸವಿಲ್ಲ’ ಎಂದಿದ್ದಾರೆ.

‘ಈ ಕೆಲವರು ದುರುದ್ದೇಶದಿಂದ ಕಸಾಪ, ನನ್ನ ಮೇಲೆ ಮತ್ತು ಕಾರ್ಯಕಾರಿ ಸಮಿತಿಯ ವಿರುದ್ಧ ಅಪಪ್ರಚಾರ ಮಾಡಿಸುತ್ತಾ, ನಿರಂತರ ದೂರು ನೀಡುತ್ತಿದ್ದಾರೆ. ಕಸಾಪ ಹಾಗೂ ನನ್ನನ್ನು ತಪ್ಪಿತಸ್ಥ ಸ್ಥಾನದಲ್ಲಿ ನಿಲ್ಲಿಸಲು ಭಗೀರಥ ಪ್ರಯತ್ನ ಮಾಡುತ್ತಿದ್ದಾರೆ. ವಿಚಾರಣಾಧಿಕಾರಿಯು ವಿಚಾರಣೆ ನಡೆಸದೆ ವರದಿ ನೀಡುವ ಬಗ್ಗೆ ಅನುಮಾನವಿದೆ. ಹೀಗಾಗಿ, ನ್ಯಾಯಾಂಗ ತನಿಖೆ ನಡೆಸಬೇಕು’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಈ ಹಿಂದೆ ಹಂಪ ನಾಗರಾಜಯ್ಯ ಅವರ ವಿರುದ್ಧ ಆರೋಪಗಳು ಎದುರಾದಾಗ ನ್ಯಾಯಮೂರ್ತಿ ಪಿ.ಕೆ. ಶ್ಯಾಮ್ ಸುಂದರ್ ಅವರ ಏಕ ಸದಸ್ಯ ಆಯೋಗ ರಚಿಸಿ, ವಿಚಾರಣೆ ನಡೆಸಲಾಗಿತ್ತು. ಅದೇ ರೀತಿ, ಈಗಲೂ ಏಕ ಸದಸ್ಯ ವಿಚಾರಣಾ ಆಯೋಗ ರಚಿಸಿ, ನ್ಯಾಯ ಕೊಡಬೇಕು’ ಎಂದು ಮನವಿ ಮಾಡಿದ್ದಾರೆ.

‘ಕಸಾಪದ ಎಲ್ಲ ಕಾರ್ಯಚಟುವಟಿಕೆಗಳ ವಿಷಯದಲ್ಲಿ ಅಧ್ಯಕ್ಷರು ಏಕಪಕ್ಷೀಯವಾಗಿ ನಿರ್ಧಾರ ತೆಗೆದುಕೊಳ್ಳಲು ಪರಿಷತ್ತಿನ ನಿಯಮಗಳ ಅಡಿ ಆಸ್ಪದವಿಲ್ಲ. ಬಹುಮತದ ಒಪ್ಪಿಗೆ ನಂತರ ಚಟುವಟಿಕೆಗಳು ಜಾರಿಗೆ ಬರುತ್ತವೆ. ಅಲ್ಲಿ ತೆಗೆದುಕೊಂಡ ನಿರ್ಣಯಗಳು ಸಾಮೂಹಿಕ ಜವಾಬ್ದಾರಿಗಳಾಗಿರುತ್ತವೆ’ ಎಂದು ಹೇಳಿದ್ದಾರೆ.

ಸಮಂತಾ ಹೊಸ ಸಿನಿಮಾ ಘೋಷಣೆ



ಸಮಂತಾ



ಇತ್ತೀಚೆಗಷ್ಟೇ ಹಸೆಮಣೆ ಏರಿದ್ದ ನಟಿ ಸಮಂತಾ ರುತ್ ಪ್ರಭು ನಟನೆಯ ಹೊಸ ತೆಲುಗು ಸಿನಿಮಾ ಘೋಷಣೆಯಾಗಿದೆ. ನಂದಿನಿ ರೆಡ್ಡಿ ನಿರ್ದೇಶನದ 'ಮಾ ಇಂಟಿ ಬಂಗಾರಂ' ಸಿನಿಮಾದಲ್ಲಿ ಸಮಂತಾ ಮುಖ್ಯಭೂಮಿಕೆಯಲ್ಲಿ ನಟಿಸುತ್ತಿದ್ದಾರೆ.

ಸಿನಿಮಾದ ಕಥೆಯನ್ನು ಸಮಂತಾ ಪತಿ, ನಿರ್ದೇಶಕ ರಾಜ್ ನಿಧಿಮೋರು ಅವರೇ ಬರೆದಿದ್ದಾರೆ. ರಾಜ್ ಈ ಹಿಂದೆ 'ಫ್ಯಾಮಿಲಿ ಮ್ಯಾನ್' ವೆಬ್ ಸರಣಿ, 'ಗೋ ಗೋವಾ ಗಾನ್' ಹಾಗೂ 'ಎ ಜೆಂಟಲ್‌ಮ್ಯಾನ್' ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. 'ಈಗ', 'ರಂಗಸ್ಥಲಂ', 'ಸೂಪರ್ ಡಿಲಕ್ಸ್', 'ದೂಕುಡು', 'ಅತ್ತರಿಂಟಿಕಿ ದಾರಿದಿ', 'ಥೆರಿ' ಹೀಗೆ ಹಿಟ್ ಸಿನಿಮಾಗಳಲ್ಲಿ ನಟಿಸಿರುವ ಸಮಂತಾ 'ಫ್ಯಾಮಿಲಿ ಮ್ಯಾನ್–2' ವೆಬ್ ಸರಣಿಯಲ್ಲಿ ರಗಡ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. 'ಮಾ ಇಂಟಿ ಬಂಗಾರಂ' ಸಿನಿಮಾವೂ ಫ್ಯಾಮಿಲಿ ಕಥೆಯ ಜೊತೆಗೆ ಆ್ಯಕ್ಷನ್ ಜಾನರ್ ಹೊಂದಿರುವ ಸುಳಿವನ್ನು ಚಿತ್ರದ ಪೋಸ್ಟರ್ ನೀಡಿದೆ. ಸಿನಿಮಾವನ್ನು ತ್ರಲಾಲಾ ಮೂವಿಂಗ್ ಪಿಕ್ಚರ್ಸ್ ನಿರ್ಮಾಣ ಮಾಡಿದೆ. ಚಿತ್ರದ ಟ್ರೇಲರ್ ಜ.9ರಂದು ಬಿಡುಗಡೆಯಾಗಲಿದೆ.

ಕಳೆದ ಡಿ.2ರಂದು ಸಮಂತಾ–ರಾಜ್ ಮದುವೆ ನಡೆದಿತ್ತು.

ರಾಜ್ ಆ್ಯಂಡ್ ಡಿಕೆ ಜತೆ ಸಲ್ಮಾನ್ ಸಿನಿಮಾ?



ಸಲ್ಮಾನ್ ಖಾನ್

ನಟ ಸಲ್ಮಾನ್ ಖಾನ್ ದೊಡ್ಡ ಗೆಲುವಿನ ನಿರೀಕ್ಷೆಯಲ್ಲಿದ್ದಾರೆ. ಅವರ ಹಿಂದಿನ ಸಿನಿಮಾಗಳು ಒಂದರ ಹಿಂದೊಂದರಂತೆ ಸೋಲು ಕಂಡಿದ್ದವು. ಹೀಗಾಗಿ ಈ ಸಲ ಸಲ್ಮಾನ್ ಗಟ್ಟಿಯಾದ ಕಥಾವಸ್ತುವಿನ ಚಿತ್ರಕ್ಕೆ ಕೈಹಾಕಲು ಸಿದ್ಧರಾಗಿದ್ದು, ರಾಜ್ ಆ್ಯಂಡ್ ಡಿಕೆ ಜತೆ ತಮ್ಮ ಮುಂದಿನ ಸಿನಿಮಾದ ಮಾತುಕತೆ ನಡೆಸಿದ್ದಾರೆ ಎಂದು ಹಿಂದಿ ಮಾಧ್ಯಮಗಳು ವರದಿ ಮಾಡಿವೆ.

'ದಿ ಫ್ಯಾಮಿಲಿ ಮ್ಯಾನ್' ವೆಬ್ ಸಿರೀಸ್‌ನಿಂದ ಜನಪ್ರಿಯರಾದ ರಾಜ್ ಮತ್ತು ಡಿಕೆ, ವಿಭಿನ್ನ ಕಥಾವಸ್ತುವಿನ ಸರಣಿಯಿಂದಲೇ ಗಮನ ಸೆಳೆದವರು. ಸಲ್ಮಾನ್ ಖಾನ್ ಈ ಜೋಡಿಯ ಜತೆ ಆ್ಯಕ್ಷನ್-ಕಾಮಿಡಿ ಶೈಲಿಯ ಸಿನಿಮಾ ಮಾಡಲು ಸಿದ್ಧತೆ ನಡೆಸಿದ್ದಾರೆ. ಸ್ಕ್ರಿಪ್ಟ್ ಕೆಲಸಗಳು ನಡೆಯುತ್ತಿದ್ದು, ಶೀಘ್ರದಲ್ಲಿಯೇ ಚಿತ್ರ ಸೆಟ್ಟೇರಲಿದೆ ಎನ್ನಲಾಗಿದೆ.

ಸಲ್ಮಾನ್ ಖಾನ್ ನಟನೆಯ 'ಸಿಕಂದರ್' ಸಿನಿಮಾ 2025ರಲ್ಲಿ ತೆರೆ ಕಂಡಿತ್ತು. ಎ.ಆರ್. ಮುರುಗದಾಸ್ ನಿರ್ದೇಶನ ಮಾಡಿದ್ದ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಯಶಸ್ಸು ಕಾಣಲಿಲ್ಲ. ಸದ್ಯ ಸಲ್ಮಾನ್ ಅವರ 'ಬ್ಯಾಟಲ್ ಆಫ್ ಗಲ್ವಾನ್' ಚಿತ್ರ ಬಿಡುಗಡೆಗಿದೆ.

ಏಪ್ರಿಲ್‌ನಲ್ಲಿ ದೃಶ್ಯಂ–3 ತೆರೆಗೆ



ಸೀಕ್ವೆಲ್ ಸಿನಿಮಾಗಳು ಮೂಲ ಸಿನಿಮಾಗಳಿಗಿಂತ ಹೆಚ್ಚು ಜನಪ್ರಿಯವಾಗಿದ್ದು ಬಹಳ ವಿರಳ. ಆದರೆ ಮಲಯಾಳದ 'ದೃಶ್ಯಂ' ಆ ಲೆಕ್ಕಾಚಾರವನ್ನು ತಲೆಕೆಳಗಾಗಿಸಿತ್ತು. ಹಿಂದಿನ ಎರಡೂ ಭಾಗಗಳು ಸೂಪರ್ ಹಿಟ್ ಆಗಿದ್ದು, ಬಹುನಿರೀಕ್ಷಿತ 'ದೃಶ್ಯಂ–3' ಏಪ್ರಿಲ್‌ನಲ್ಲಿ ತೆರೆಗೆ ಬರಲಿದೆ.

ಜೀತು ಜೋಸೆಫ್ ನಿರ್ದೇಶಿಸಿ ಮೋಹನ್ ಲಾಲ್ ಮುಖ್ಯ ಪಾತ್ರದಲ್ಲಿರುವ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಮುಕ್ತಾಯಗೊಂಡಿತ್ತು. ಜೀತು ಜೋಸೆಫ್ ಮಾಧ್ಯಮಕ್ಕೆ ನೀಡಿದ ಸಂದರ್ಶನದಲ್ಲಿ ಸಿನಿಮಾ ಇದೇ ಏಪ್ರಿಲ್ ತಿಂಗಳಲ್ಲಿ ಬಿಡುಗಡೆಯಾಗಲಿದೆ ಎಂದು ಹೇಳಿದ್ದಾರೆ.

2013ರಲ್ಲಿ ತೆರೆಕಂಡ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ 'ದೃಶ್ಯಂ' ಸೂಪರ್ ಹಿಟ್ ಆಗಿತ್ತು. ಕನ್ನಡ, ಹಿಂದಿ, ತೆಲುಗು ಭಾಷೆಗಳಲ್ಲಿಯೂ ರಿಮೇಕ್ ಆಗಿಯೂ ಯಶಸ್ಸು ಕಂಡಿತ್ತು. ಅದರ ಬಳಿಕ 2021ರಲ್ಲಿ ಬಿಡುಗಡೆಗೊಂಡ 'ದೃಶ್ಯಂ–2' ಕೂಡ ವ್ಯಾಪಕ ಯಶಸ್ಸು ಗಳಿಸಿತು.

ಕಥಾನಾಯಕ ಜಾರ್ಜ್ ಕುಟ್ಟಿಯ ಕಥೆಯೇ ಇಲ್ಲಿ ಮುಂದುವರಿಯಲಿದೆ ಎಂದು ಜೀತು ಹೇಳಿದ್ದರು. ಮೀನಾ, ಅನ್ಸಿಬಾ ಹಸನ್ ಮತ್ತು ಎಸ್ತರ್ ಅನಿಲ್ ಪ್ರಮುಖ ಪಾತ್ರಗಳಲ್ಲಿದ್ದಾರೆ. ಅನಿಲ್ ಜಾನ್ಸನ್ ಸಂಗೀತ, ಸತೀಶ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಸಿನಿಮಾ ನಿರ್ಮಾಣಕ್ಕಿಳಿದ ಪ್ರಿಯಾ



ಪ್ರಿಯಾ ಸುದೀಪ್

ನಟ ಸುದೀಪ್ ಅವರ ಪತ್ನಿ ಪ್ರಿಯಾ ತಮ್ಮ ಜನ್ಮದಿನದಂದು 'ಸುಪ್ರಿಯಾನ್ವಿ ಪಿಕ್ಚರ್ ಸ್ಟುಡಿಯೊ' ಅನಾವರಣಗೊಳಿಸಿದ್ದಾರೆ. ಈ ಮೂಲಕ ಯುವ ಪ್ರತಿಭೆಗಳಿಗೆ ವೇದಿಕೆ ಒದಗಿಸುವ ಭರವಸೆ ನೀಡಿದ್ದಾರೆ.

ಸುದೀಪ್ ನಟನೆಯ 'ಮಾರ್ಕ್' ಸಿನಿಮಾ ಮೂಲಕ ಈಗಾಗಲೇ ವಿತರಣೆ ಕ್ಷೇತ್ರಕ್ಕೆ ಕಾಲಿಟ್ಟಿದ್ದರು ಪ್ರಿಯಾ. ಮುಂದೆಯೂ ಅವರು ಸಿನಿಮಾ ವಿತರಣೆಯಲ್ಲಿ ಮುಂದುವರಿಯುವ ಮುನ್ಸೂಚನೆಯನ್ನು ಸುದೀಪ್ ನೀಡಿದ್ದರು. ಸುದೀಪ್ ಅಕ್ಕನ ಮಗ ಸಂಚಿತ್ ಅವರ 'ಮ್ಯಾಂಗೋ ಪಚ್ಚ' ಸಿನಿಮಾವನ್ನು ಕೆಆರ್‌ಜಿ ಸಂಸ್ಥೆ ಜೊತೆಗೂಡಿ ಪ್ರಿಯಾ ನಿರ್ಮಾಣ ಮಾಡಿದ್ದಾರೆ. ಇದೀಗ ಸುಪ್ರಿಯಾನ್ವಿ ಪಿಕ್ಚರ್ ಸ್ಟುಡಿಯೊ ಮೂಲಕ ಸ್ವತಂತ್ರವಾಗಿ ಪ್ರತಿಭಾನ್ವಿತರಿಗೆ ಜೊತೆಯಾಗಲಿದ್ದಾರೆ. ಇತ್ತೀಚೆಗೆ ಸುಪ್ರಿಯಾನ್ವಿ ನಿರ್ಮಾಣ ಸಂಸ್ಥೆಯ ಮೋಷನ್ ಪೋಸ್ಟರ್ ಬಿಡುಗಡೆಯಾಗಿದ್ದು, 'ಅರ್ಥಭರಿತವಾದ ಕಥೆಗಳೊಂದಿಗೆ ಬರಲಿದ್ದೇವೆ' ಎಂದು ಪ್ರಿಯಾ ತಿಳಿಸಿದ್ದಾರೆ.


'ಸುಪ್ರಿಯಾನ್ವಿ ಸಂಸ್ಥೆಯಡಿ ಹೊಸ ಹೊಸ ಕಥೆಗಳಿಗೆ, ಪ್ರತಿಭಾನ್ವಿತ ಕಲಾವಿದರಿಗೆ ಅವಕಾಶ ಕಲ್ಪಿಸಲಾಗುವುದು, ವಿಭಿನ್ನ ಬಗೆಯ ಕಾಂಟೆಂಟ್ ಆಧಾರಿತ ಸಿನಿಮಾಗಳು ನಮ್ಮ ಆದ್ಯತೆ' ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಅವರು ಬರೆದುಕೊಂಡಿದ್ದಾರೆ.

ಈರಣ್ಣ, ಕಾಡಪ್ಪ ಸೇರಿ ಐವರಿಗೆ ಪ್ರಶಸ್ತಿ

ಬಾಗಲಕೋಟೆ: 'ಕರ್ನಾಟಕ ಬಯಲಾಟ ಅಕಾಡೆಮಿಯ 2025ನೇ ಸಾಲಿನ ಗೌರವ ಪ್ರಶಸ್ತಿಗೆ ಐವರನ್ನು ಮತ್ತು ವಾರ್ಷಿಕ ಪ್ರಶಸ್ತಿಗೆ 10 ಜನರನ್ನು ಆಯ್ಕೆ ಮಾಡಲಾಗಿದೆ. ಫೆಬ್ರುವರಿ ಮೊದಲ ವಾರದಲ್ಲಿ ಧಾರವಾಡದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು' ಎಂದು ಅಕಾಡೆಮಿ ಅಧ್ಯಕ್ಷ ಪ್ರೊ. ಕೆ.ಆರ್.ದುರ್ಗಾದಾಸ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗೌರವ ಪ್ರಶಸ್ತಿ ಪುರಸ್ಕೃತರು: ಕೆ.ಈರಣ್ಣ, ಬಯಲಾಟ (ಬಳ್ಳಾರಿ), ಹನಮಂತಪ್ಪ ಪೂಜಾರ, ಸಣ್ಣಾಟ (ಕೊಪ್ಪಳ), ಕಾಡಪ್ಪ ಉಪ್ಪಾರ, ಸಣ್ಣಾಟ (ಬೆಳಗಾವಿ), ಆರ್. ಬಿ. ಪುಟ್ಟೇಗೌಡ, ಮೂಡಲಪಾಯ (ಹಾಸನ) ಮತ್ತು ಸುಶೀಲವ್ವ ಹೆಗಡೆ, ದೊಡ್ಡಾಟ (ಬೆಳಗಾವಿ). ಪ್ರಶಸ್ತಿಯು 50 ಸಾವಿರ ನಗದು ಒಳಗೊಂಡಿದೆ.

ವಾರ್ಷಿಕ ಪ್ರಶಸ್ತಿ ಪುರಸ್ಕೃತರು: ಎಚ್.ಸಿ.ಶಿವಬುದ್ಧಿ, ಸೂತ್ರದ ಗೊಂಬೆಯಾಟ, (ಮೈಸೂರು), ಜಯಪ್ರಕಾಶಗೌಡ, ಮೂಡಲಪಾಯ (ಮಂಡ್ಯ), ಹೊಳೆಯಾಚೆ ಕೊಟ್ರಪ್ಪ, ಬಯಲಾಟ (ವಿಜಯನಗರ), ಶಿವಾಜಿ ಜಾಧವ, ಬಯಲಾಟ (ಬಾಗಲಕೋಟೆ), ನಂದಗೋಪಾಲ, ಬಯಲಾಟ (ಚಿತ್ರದುರ್ಗ), ಮಲ್ಲಪ್ಪ ಕರಿಮಲ್ಲಣ್ಣವರ, ದೊಡ್ಡಾಟ (ಧಾರವಾಡ), ಬಂಡ್ರಿ ಲಿಂಗಪ್ಪ, ಬಯಲಾಟ (ಬಳ್ಳಾರಿ), ಚೂಟಿ ಚಿದಾನಂದ, ಬಯಲಾಟ (ವಿಜಯನಗರ), ಓದೋವೀರಪ್ಪ, ಬಯಲಾಟ (ದಾವಣಗೆರೆ) ಮತ್ತು ಮಳೆಪ್ಪ ಬಡಿಗೇರ, ಬಯಲಾಟ (ವಿಜಯಪುರ). ಪ್ರಶಸ್ತಿಯು ₹25 ಸಾವಿರ ನಗದು ಒಳಗೊಂಡಿದೆ.




ಕೆ. ಈರಣ್ಣ



ಕಾಡಪ್ಪ



ಸುಶೀಲವ್ವ



ಹನುಮಂತಪ್ಪ



ಪುಟ್ಟೇಗೌಡ

ಅಧಿಕಾರಕ್ಕಾಗಿ ಸಿದ್ಧಾಂತ ಕೈಬಿಟ್ಟ ವಿರೋಧಿಗಳ ಮೈತ್ರಿ ಒಪ್ಪಿತವೇ?

• ಸರಿ • ತಪ್ಪು • ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ನಿತೀಶ್ ಹಿಜಾಬ್ ತೆಗೆಸಿದ್ದ ವೈದ್ಯೆ ಕೆಲಸಕ್ಕೆ ಹಾಜರ್

ಪಟ್ನಾ (ಪಿಟಿಐ): ನೇಮಕಾತಿ ಪತ್ರ ನೀಡುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಹಿಜಾಬ್ ತೆಗೆದಿದ್ದರಿಂದ ಮುಜುಗರ ಅನುಭವಿಸಿದ್ದ ಆಯುಷ್ ವೈದ್ಯೆ ನುಸ್ರತ್ ಪರ್ವೀನ್ ಅವರು ಕರ್ತವ್ಯಕ್ಕೆ ಬುಧವಾರ ವರದಿ ಮಾಡಿಕೊಂಡಿದ್ದಾರೆ.

'ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಬುಧವಾರ ಕೊನೆಯ ದಿನವಾಗಿತ್ತು. ಈ ದಿನವೇ ನುಸ್ರತ್ ಕರ್ತವ್ಯಕ್ಕೆ ಸೇರಿದ್ದಾರೆ' ಎಂದು ಸರ್ಕಾರಿ ತಿಬ್ಬಿ ಕಾಲೇಜು ಮತ್ತು ಆಸ್ಪತ್ರೆಯ ಪ್ರಾಚಾರ್ಯ ಮಹಪೂಜುರ್ ರಹಮಾನ್ ತಿಳಿಸಿದ್ದಾರೆ. ಡಿಸೆಂಬರ್ 15ರಂದು ನೇಮಕಾತಿ ಪತ್ರ ವಿತರಣಾ ಕಾರ್ಯಕ್ರಮ ನಡೆದಿತ್ತು. ವೈದ್ಯೆ ನುಸ್ರತ್ ಪರ್ವೀನ್ ಅವರು ಮುಖವನ್ನು ಮರೆಮಾಚುವ ರೀತಿಯಲ್ಲಿ ಹಿಜಾಬ್ ಧರಿಸಿ ಬಂದಿದ್ದರು. ಅವರಿಗೆ ನೇಮಕಾತಿ ಪತ್ರ ನೀಡುವಾಗ ಮುಖ್ಯಮಂತ್ರಿ ನಿತೀಶ್ ಕುಮಾರ್, ಮುಖದ ಮೇಲಿನ ಬಟ್ಟೆಯನ್ನು ಏಕಾಏಕಿ ಹಿಡಿದೆಳೆದಿದ್ದರು. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತಲ್ಲದೇ, ಭಾರಿ ವಿವಾದಕ್ಕೆ ಕಾರಣವಾಗಿತ್ತು.

ಎನ್‌ಡಿಎ ಸೇರಿದ ಅನ್ಬುಮಣಿ

ಚೆನ್ನೈ (ಪಿಟಿಐ): ತಮಿಳುನಾಡಿನ ಪಿಎಂಕೆಯ ಡಾ. ಅನ್ಬುಮಣಿ ರಾಮದಾಸ್ ನೇತೃತ್ವದ ಬಣವು ಬುಧವಾರ ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿತು. ರಾಜ್ಯದಲ್ಲಿ ಎನ್‌ಡಿಎ ಮುನ್ನಡೆಸುತ್ತಿರುವ ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರು ವಿಧಾನಸಭಾ ಚುನಾವಣೆ ಹೊಸ್ತಿಲಲ್ಲೇ ತಮ್ಮ ಮೈತ್ರಿಯನ್ನು ಬಲಪಡಿಸಿಕೊಂಡಿದ್ದಾರೆ.

ರಾಮದಾಸ್ ಅವರು ಎಐಎಡಿಎಂಕೆಯ ಪ್ರಧಾನ ಕಾರ್ಯದರ್ಶಿಯನ್ನು ಅವರ ನಿವಾಸದಲ್ಲಿ ಭೇಟಿಯಾಗಿ ಮಾತುಕತೆ ನಡೆಸಿದರು.

'ಬೀದಿಗಳನ್ನು ನಾಯಿಗಳಿಂದ ಮುಕ್ತವಾಗಿಸಿ'

ಒಂದನೇ ಪುಟದಿಂದ...

ಅಲ್ಲದೇ 'ರಸ್ತೆಯಲ್ಲಿ ಬೀದಿ ನಾಯಿಗಳಿಲ್ಲ ಎನ್ನುವುದು ಖಾತ್ರಿ ಇದ್ದರೆ ಆ ಮಾರ್ಗದಲ್ಲಿ ಧೈರ್ಯದಿಂದ ಹೋಗಬಹುದು. ನಾಯಿಗಳು ದಾಳಿ ಮಾಡುವುದರಿಂದ ಮಾತ್ರವಲ್ಲ, ದಿಢೀರ್ ರಸ್ತೆಗೆ ನುಗ್ಗುವುದರಿಂದಲೂ ಅಪಘಾತಗಳು ಸಂಭವಿಸಿ ಜೀವಹಾನಿ ಸಂಭವಿಸುತ್ತದೆ. ಹಾಗಾಗಿ ರಸ್ತೆಗಳನ್ನು ನಾಯಿಗಳಿಂದ ಮುಕ್ತವಾಗಿಸುವುದೇ ಈ ಸಮಸ್ಯೆಗೆ ಪರಿಹಾರ' ಎಂದು ನ್ಯಾಯಪೀಠ ಒತ್ತಿ ಹೇಳಿತು.

'ನಾನು ಹಿಂದೆ ವಿಶ್ವವಿದ್ಯಾಲಯದಲ್ಲಿದ್ದಾಗ ಅಲ್ಲಿ ನಾಯಿಗಳಿದ್ದವು, ಆದರೆ, ಯಾವುದೂ ಕಚ್ಚುತ್ತಿರಲಿಲ್ಲ. ಈಗಲೂ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಆವರಣದಲ್ಲಿ ನಾಯಿಗಳಿವೆ' ಎಂದು ಕಪಿಲ್ ಸಿಬಲ್ ಪೀಠದ ಗಮನಕ್ಕೆ ತಂದರು.

'ನಿಮ್ಮ ಮಾಹಿತಿ ಹಳೆಯದು' ಎಂದ ಪೀಠ, 'ಬೆಂಗಳೂರಿನ ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಯೂನಿವರ್ಸಿಟಿ (ಎನ್‌ಎಲ್‌ಎಸ್‌ಐಯು) ಆವರಣದಲ್ಲಿ ಬೀದಿ ನಾಯಿಗಳಿಂದ ದಾಳಿ ನಡೆದಿರುವ ಹಲವು ಪ್ರಕರಣಗಳು ವರದಿಯಾಗಿವೆ' ಎಂದು ಹೇಳಿತು. 'ಸಂಘ ಸಂಸ್ಥೆಗಳ ಆವರಣವನ್ನು ಬೀದಿ ಎಂದು ಹೇಳಲಾಗದು. ಆದರೆ, ನಿಮಗೆ ಕೋರ್ಟ್ ಆವರಣದಲ್ಲಿ, ವಿಶ್ವವಿದ್ಯಾಲಯದಲ್ಲಿ, ಆಸ್ಪತ್ರೆಯಲ್ಲಿ, ಬಸ್ ನಿಲ್ದಾಣದಲ್ಲಿ ನಾಯಿಗಳು ಯಾಕೆ ಬೇಕು' ಎಂದು ಪೀಠ ಪ್ರಶ್ನಿಸಿತು.

'ನಾಯಿಯನ್ನು ಎಲ್ಲಿಂದ ಸೆರೆ ಹಿಡಿಯಲಾಗಿದೆಯೇ ವಾಪಸ್ ಅಲ್ಲಿಯೇ ಅವುಗಳನ್ನು ಬಿಡಬೇಕು ಎನ್ನುತ್ತದೆ ನಿಯಮ. ಹಾಗಿದ್ದರೆ, ಸಂಘ ಸಂಸ್ಥೆಗಳ ಆವರಣವನ್ನು ನಾಯಿಗಳಿಂದ ಮುಕ್ತವಾಗಿಸುವುದು ಹೇಗೆ? ಇಲ್ಲಿಂದ ಸೆರೆ ಹಿಡಿದ ನಾಯಿಗಳನ್ನು ಬೀದಿಗೆ ತಂದು ಬಿಡುತ್ತೀರಾ' ಎಂದು ಪೀಠ ಪ್ರಶ್ನಿಸಿತು.

'ಪರಿಣಾಮಕಾರಿ ವಿಧಾನ ರೂಪಿಸಿ': 'ಬೀದಿ ನಾಯಿಗಳನ್ನು ಸ್ಥಳಾಂತರಿಸಿ, ರಸ್ತೆಗಳನ್ನು ನಾಯಿಗಳಿಂದ ಮುಕ್ತವಾಗಿಸಿ' ಎಂದು ಯಾರೊಬ್ಬರೂ ಹೇಳುತ್ತಿಲ್ಲ' ಎಂದು ಹೇಳಿದ ಪೀಠವು, 'ಸಾರ್ವಜನಿಕರಿಗೆ ನಾಯಿ ಕಡಿತದಿಂದ ರಕ್ಷಣೆ ಒದಗಿಸಲು ಪರಿಣಾಮಕಾರಿ ವಿಧಾನವೊಂದನ್ನು ರೂಪಿಸಬೇಕು. ಇದಕ್ಕಾಗಿ ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ರೂಪಿಸಲಾಗುವುದು' ಎಂದಿತು.

'ಎಲ್ಲ ಬೀದಿ ನಾಯಿಗಳಿಗೆ ಆಶ್ರಯ ಒದಗಿಸುವುದು ಈ ಸಮಸ್ಯೆಗೆ ಪರಿಹಾರ ಅಲ್ಲ. ಇದು ಭೌತಿಕವಾಗಿ ಸಾಧ್ಯವಿಲ್ಲ. ಆರ್ಥಿಕವಾಗಿಯೂ ಅಸಾಧ್ಯ. ವೈಜ್ಞಾನಿಕ ರೀತಿಯಲ್ಲಿ ಇದಕ್ಕೆ ಪರಿಹಾರ ಹುಡುಕಬೇಕು' ಎಂದು ಸಿಬಲ್ ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನಾಯಿಗಳನ್ನು ಪಳಗಿಸುವ ಕೇಂದ್ರಗಳಿಗೆ ಕಳುಹಿಸಿ, ಮತ್ತೆ ಅವು ಜನರನ್ನು ಕಚ್ಚದಂತೆ ಮಾಡಿ, ವಾಪಸ್ ತಂದುಬಿಡುವುದೊಂದೇ ಉಳಿದಿರುವ ಪರಿಹಾರ' ಎಂದು ಪ್ರತಿಕ್ರಿಯಿಸಿತು.

ಚಿಟಿಕೆ ಸುದ್ದಿ


ಹಿಂದೂ ರಕ್ಷಾ ದಳದ ಅಧ್ಯಕ್ಷ, ಪುತ್ರನ ಬಂಧನ

ಗಾಜಿಯಾಬಾದ್ (ಪಿಟಿಐ): ಖಡ್ಗಗಳನ್ನು ವಿತರಿಸಿದ ಮತ್ತು ಕೋಮು ಸಾಮರಸ್ಯಕ್ಕೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಇಲ್ಲಿನ 80 ಅಡಿ ರಸ್ತೆ ಪ್ರದೇಶದಲ್ಲಿ ಹಿಂದೂ ರಕ್ಷಾ ದಳದ ಅಧ್ಯಕ್ಷ ಭೂಪೇಂದ್ರ ಚೌಧರಿ ಅಲಿಯಾಸ್ ಪಿಂಕಿ ಮತ್ತು ಅವರ ಪುತ್ರ ಹರ್ಷ ಚೌಧರಿಯನ್ನು ಪೊಲೀಸರು ಬಂಧಿಸಿದ್ದಾರೆ.

ಸಬ್ ಇನ್‌ಸ್ಪೆಕ್ಟರ್ ಪ್ರದೀಪ್‌ಕುಮಾರ್ ಮಂಗಳವಾರ ನೀಡಿದ್ದ ದೂರು ಆಧರಿಸಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಡಿಸಿಪಿ ನಿಮಿಷ್ ಪಾಟೀಲ್ ಅವರು ಬುಧವಾರ ತಿಳಿಸಿದರು.

ಭೂಪೇಂದ್ರ ಚೌಧರಿ ಸಾಮಾಜಿಕ ಮಾಧ್ಯಮಗಳಲ್ಲಿ ಹಲವು ವಿಡಿಯೊಗಳನ್ನು ಹಾಕಿದ್ದರು. ಬಾಂಗ್ಲಾದೇಶದಲ್ಲಿ ಹಿಂದೂ ಕುಟುಂಬಗಳ ಮೇಲೆ ನಡೆಯುತ್ತಿರುವ ದಾಳಿಗೆ ಪ್ರತೀಕಾರವಾಗಿ ಶಸ್ತ್ರಗಳನ್ನು ವಿತರಿಸುತ್ತಿರುವುದಾಗಿ, ಸಾರ್ವಜನಿಕರು ಶಸ್ತ್ರಾಸ್ತ್ರ ಹಿಡಿಯುವಂತೆಯೂ ಪ್ರಚೋದಿಸಿದ್ದರು ಎಂದು ದೂರಿನಲ್ಲಿ ಉಲ್ಲೇಖಿಸಲಾಗಿತ್ತು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	26,178
ಇಂದಿನ ಅಂತ್ಯ:	26,140
ದಿನದ ಕನಿಷ್ಠ:	26,067
	▼ 37

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು

	100 ಕ್ಕೆ	₹625
	12 ಕ್ಕೆ	₹90
ಮೈಸೂರು:	100 ಕ್ಕೆ	₹625

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182.50
ಆರ್‌ಎಸ್‌ಎಸ್-5	₹177.50
ಗುಡ್ ಲಾಟ್	₹165.50

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹345-756
ದ್ವಿತಳಿ (ಬಿ.ವಿ)	₹334-916

ಮುದ್ರಮನೆ ಕಾಫಿ

ಎಪಿ	₹27000
ಎಸಿ	₹14700
ಆರ್‌ಪಿ	₹17000
ಆರ್‌ಸಿ	₹9825

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1295 (1295)
ಸೂರ್ಯಕಾಂತಿ (ರಿಫೈನ್ಡ್)	₹1510 (1510)
ಪಾಮೋಲಿನ್	₹1260 (1260)

ಅಡಿಕೆ ಧಾರಣೆ

ಪುತ್ತೂರು					
ಕೋಕ	20000-35500	ಚಿಪ್ಪು	29029-37099	ಸಿಂಕು	58069-90439
ಹೊಸತು	26000-44500	ಕೋಕ	15019-31039	**ಶಿರಸಿ**	
ಹಳತು	45000-54000	ಫ್ಯಾಕ್ಟರಿ	9569-25249	ಬೆಟ್ಟೆ	38699-53899
ಕುಮಟಾ		ಹೊಸಚಾಲಿ	40099-45036	ಬಿಳಿಗೋಟು	25123-41360
ಬೆಟ್ಟೆ	38699-51699	**ಶಿವಮೊಗ್ಗ**		ಚಾಲಿ	45578-51699
ಚಾಲಿ	44699-51039	ಬೆಟ್ಟೆ	54069-68800	ಕೆಂಪುಗೋಟು	18118-38018
		ಗೊರಬಲು	19010-43201	ರಾಶಿ	52199-58699
		ರಾಶಿ	47899-58777		

ಜಿಡಿಪಿ ಬೆಳವಣಿಗೆ ಶೇ 7.4

ಮೊದಲ ಮುಂಗಡ ಅಂದಾಜನ್ನು ಪ್ರಕಟಿಸಿದ ಕೇಂದ್ರ ಸರ್ಕಾರ



ನವದೆಹಲಿ (ಪಿಟಿಐ): ದೇಶದ ಅರ್ಥ ವ್ಯವಸ್ಥೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ (2025-26) ಶೇಕಡ 7.4ರಷ್ಟು ಬೆಳವಣಿಗೆ ಕಾಣುವ ನಿರೀಕ್ಷೆ ಇದೆ. ಹಿಂದಿನ ಹಣಕಾಸು ವರ್ಷದಲ್ಲಿ ಬೆಳವಣಿಗೆ ಪ್ರಮಾಣವು ಶೇ 6.5ರಷ್ಟು ಇತ್ತು.

ಸೇವಾ ವಲಯ ಹಾಗೂ ತಯಾರಿಕಾ ವಲಯಗಳಲ್ಲಿ ಚಟುವಟಿಕೆ ಚೆನ್ನಾಗಿ ಇರುವುದು ಈ ಬಾರಿ ಬೆಳವಣಿಗೆಯು ಕಳೆದ ವರ್ಷಕ್ಕಿಂತ ಹೆಚ್ಚಿರುವಂತೆ ಮಾಡಲಿದೆ. ಈ ಮೂಲಕ ಭಾರತವು ಪ್ರಮುಖ ಅರ್ಥವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಕಾಣುವ ದೇಶವಾಗಿ ಮುಂದುವರಿಯಲಿದೆ.

2023-24ರಲ್ಲಿ ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಬೆಳವಣಿಗೆ ಪ್ರಮಾಣವು ಶೇ 9.2ರಷ್ಟು ಇತ್ತು. ದೇಶದ ಜಿಡಿಪಿ ಬೆಳವಣಿಗೆಗೆ ಸಂಬಂಧಿಸಿದ ಮೊದಲ ಅಂದಾಜನ್ನು ಕೇಂದ್ರ ಸರ್ಕಾರವು ಬುಧವಾರ ಬಿಡುಗಡೆ ಮಾಡಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ತಯಾರಿಕಾ ವಲಯದಲ್ಲಿನ ಒಟ್ಟು ಮೌಲ್ಯ ಸೇರ್ಪಡೆಯು (ಜಿವಿಎ) ಶೇ 7ರಷ್ಟು ಇರಲಿದೆ ಎಂದು ಅಂದಾಜು ಮಾಡಲಾಗಿದೆ. ಇದು ಹಿಂದಿನ ವರ್ಷದ ಶೇ 4.5ರಷ್ಟು ಜಿವಿಎಗಿಂತ ಹೆಚ್ಚಿನದ್ದಾಗಲಿದೆ.

ಮುಖ್ಯಾಂಶಗಳು

- ಚೀನಾದ ಜಿಡಿಪಿ ಪ್ರಗತಿ- 2025ರಲ್ಲಿ ಶೇ 4.9ರಷ್ಟು: ವಿಶ್ವಬ್ಯಾಂಕ್ ಅಂದಾಜು
- ಆರ್‌ಬಿಐ ಅಂದಾಜಿನ ಪ್ರಕಾರ ಭಾರತದ ಪ್ರಗತಿ 2025-26ರಲ್ಲಿ ಶೇ 7.3ರಷ್ಟು

ಸೇವಾ ವಲಯದಲ್ಲಿನ ಬೆಳವಣಿಗೆಯು ಶೇ 9.1ರಷ್ಟು ಇರಲಿದೆ (ಹಿಂದಿನ ವರ್ಷದಲ್ಲಿ ಇದು ಶೇ 7.2ರಷ್ಟು ಇತ್ತು) ಎಂದು ಕೇಂದ್ರ ಸಾಂಖ್ಯಿಕ ಮತ್ತು ಯೋಜನಾ ಅನುಷ್ಠಾನ ಸಚಿವಾಲಯದ ಅಧೀನದಲ್ಲಿ ಕೆಲಸ ಮಾಡುವ ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಬಿಡುಗಡೆ ಮಾಡಿರುವ ಅಂದಾಜಿನಲ್ಲಿ ಹೇಳಲಾಗಿದೆ.

ಕೃಷಿ ಮತ್ತು ಸಂಬಂಧಿತ ವಲಯಗಳಲ್ಲಿನ ಬೆಳವಣಿಗೆಯು ಈ ವರ್ಷದಲ್ಲಿ ಶೇ 3.1ಕ್ಕೆ ಇಳಿಕೆ ಆಗುವ ಸಾಧ್ಯತೆ ಇದೆ. ಹಿಂದಿನ ವರ್ಷದಲ್ಲಿ ಇದು ಶೇ 4.6ರ ಮಟ್ಟದಲ್ಲಿತ್ತು. ಈ ವರ್ಷದಲ್ಲಿ ನೈಜ ಜಿಡಿಪಿ ಗಾತ್ರವು ₹201.90 ಲಕ್ಷ ಕೋಟಿಯಷ್ಟಾಗುವ ಅಂದಾಜು ಮಾಡಲಾಗಿದೆ. ಅಮೆರಿಕದ ಡಾಲರ್ ಲೆಕ್ಕದಲ್ಲಿ ಜಿಡಿಪಿ ಗಾತ್ರವು 3.97 ಟ್ರಿಲಿಯನ್ ಆಗಲಿದೆ (1 ಡಾಲರ್ 90 ರೂಪಾಯಿಗೆ ಸಮ ಎಂಬ ಅಂದಾಜಿನೊಂದಿಗೆ).

ಕೇಂದ್ರ ಸರ್ಕಾರವು ಮುಂದಿನ ಹಣಕಾಸು ವರ್ಷದ ಬಜೆಟ್‌ಅನ್ನು ಫೆಬ್ರುವರಿ 1ರಂದು ಮಂಡಿಸುವ ನಿರೀಕ್ಷೆ ಇದ್ದು, ಬಜೆಟ್ ಸಿದ್ಧಪಡಿಸುವ ಸಂದರ್ಭದಲ್ಲಿ ಮುಂಗಡ ಅಂದಾಜನ್ನು ಆಶ್ರಯಿಸುತ್ತದೆ.

'ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆಗಳು ಹೆಚ್ಚಿದ್ದರೂ, ದೇಶದ ಬೆಳವಣಿಗೆ ದರವು ಕಡಿಮೆ ಆಗಿಲ್ಲ. ಹಣಕಾಸು ಮತ್ತು ವಿತ್ತೀಯ ನೀತಿಗಳು ಹೊಂದಾಣಿಕೆಯ ಗುಣ ಹೊಂದಿದ್ದುದು, ಕಾರ್ಪೊರೇಟ್ ಕಂಪನಿಗಳ ಹಣಕಾಸಿನ ಸ್ಥಿತಿ ಚೆನ್ನಾಗಿರುವುದು, ಮುಂಗಾರು ಮಳೆ ಚೆನ್ನಾಗಿ ಆಗಿರುವುದು ಹಾಗೂ ಕಚ್ಚಾ ತೈಲದ ಬೆಲೆಯು ಕಡಿಮೆ ಇರುವುದು ಇದಕ್ಕೆ ಕಾರಣ' ಎಂದು ಕ್ರಿಸಿಲ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞ ಧರ್ಮಕೀರ್ತಿ ಜೋಷಿ ಹೇಳಿದ್ದಾರೆ.

ಹಬ್ಬಗಳ ಹೊತ್ತಿನಲ್ಲಿ ನಡೆಯುವ ಉತ್ತಮ ಮಾರಾಟ, ಜಿಎಸ್‌ಟಿ ದರ ಪರಿಷ್ಕರಣೆ ಹಾಗೂ ಆದಾಯ ತೆರಿಗೆ ಮಿತಿಯಲ್ಲಿನ ವಿನಾಯಿತಿಗಳು ಬೇಡಿಕೆಯನ್ನು ಹೆಚ್ಚಿಸುವ ನಿರೀಕ್ಷೆ ಇದೆ. ಹಬ್ಬಗಳ ನಂತರದಲ್ಲಿಯೂ ಬೇಡಿಕೆ ಉತ್ತಮ ಮಟ್ಟದಲ್ಲಿ ಮುಂದುವರಿದಿದೆ ಎಂದು ಬ್ಯಾಂಕ್ ಆಫ್ ಬರೋಡದ ಮುಖ್ಯ ಅರ್ಥಶಾಸ್ತ್ರಜ್ಞೆ ಜಾಹ್ನವಿ ಪ್ರಭಾಕರ್ ಹೇಳಿದ್ದಾರೆ.

ಸವಾಲಿನ ನಡುವೆಯೂ ಉತ್ತಮ ಪ್ರಗತಿ?

ಭಾರತದಿಂದ ಆಮದಾಗುವ ಸರಕುಗಳ ಮೇಲೆ ಅಮೆರಿಕವು ಶೇಕಡ 50ರಷ್ಟು ಸುಂಕ ವಿಧಿಸಿದ್ದರೂ, ಜಾಗತಿಕ ಮಟ್ಟದಲ್ಲಿ ವ್ಯಾಪಾರ ಸಮರವು ತೀವ್ರಗೊಳ್ಳುತ್ತಿದ್ದರೂ ಭಾರತದ ಬೆಳವಣಿಗೆಯು ಉತ್ತಮವಾಗಿ ಇರಲಿದೆ ಎಂಬ ಚಿತ್ರಣವನ್ನು ಕೇಂದ್ರ ಸರ್ಕಾರ ನೀಡಿದೆ.

ಕೇಂದ್ರ ಸರ್ಕಾರವು ಜಿಎಸ್‌ಟಿ ದರವನ್ನು ಪರಿಷ್ಕರಿಸಿದೆ. ಇದರಿಂದಾಗಿ ನೂರಾರು ಉತ್ಪನ್ನಗಳ ಮೇಲಿನ ತೆರಿಗೆ ಕಡಿಮೆ ಆಗಿದೆ. ಬಹುಕಾಲದಿಂದ ಬಾಕಿ ಇದ್ದ ಕಾರ್ಮಿಕ ಸುಧಾರಣೆಗಳನ್ನು ಜಾರಿಗೆ ತರುವುದಕ್ಕೆ ಮುಂದಡಿ ಇರಿಸಿದೆ. ಇವುಗಳ ಜೊತೆಯಲ್ಲಿ, ಆದಾಯ ತೆರಿಗೆ ಹೊರೆ ಇಳಿಕೆ, ಬಡ್ಡಿ ದರ ಇಳಿಕೆ, ಹಣದುಬ್ಬರ ಇಳಿಕೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಬೇಡಿಕೆ ಹೆಚ್ಚಳದ ಪರಿಣಾಮವಾಗಿ ಅರ್ಥ ವ್ಯವಸ್ಥೆಯಲ್ಲಿ ಚಟುವಟಿಕೆಗಳು ಉತ್ತಮ ಮಟ್ಟದಲ್ಲಿ ನಡೆಯಲಿದೆ ಎಂದು ತಜ್ಞರು ಅಂದಾಜು ಮಾಡಿದ್ದಾರೆ.

ಕೆಪೆಕ್: ₹16 ಕೋಟಿ ಸಹಾಯಧನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಉತ್ತೇಜನ ಯೋಜನೆ ಅಡಿ, ರಾಜ್ಯದ 414 ಫಲಾನುಭವಿಗಳಿಗೆ ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ನಿಗಮವು (ಕೆಪೆಕ್) ₹16.28 ಕೋಟಿಯಷ್ಟು ಸಹಾಯಧನ ಬಿಡುಗಡೆ ಮಾಡಿದೆ.

ಈ ಯೋಜನೆಯ 50ನೇ ಬ್ಯಾಚಿನಲ್ಲಿ ರಾಜ್ಯದ 414 ಫಲಾನುಭವಿಗಳನ್ನು ಕೇಂದ್ರ ಸರ್ಕಾರವು ಆಯ್ಕೆ ಮಾಡಿದೆ. ಯೋಜನೆಯ ಭಾಗವಾಗಿ ರಾಜ್ಯ ಸರ್ಕಾರದ ಸಹಾಯಧನದ ಪಾಲನ್ನು ಬಿಡುಗಡೆ ಮಾಡಲಾಗಿದೆ ಎಂದು ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ತಿಳಿಸಿದ್ದಾರೆ.

2025-26ನೇ ಸಾಲಿನಲ್ಲಿ ಒಟ್ಟು 5,000 ಘಟಕಗಳ ಸ್ಥಾಪನೆಗೆ ರಾಜ್ಯ ಸರ್ಕಾರವು ₹206 ಕೋಟಿ ಅನುದಾನವನ್ನು ತೆಗೆದಿರಿಸಿದೆ. ಈ ಸಾಲಿನಲ್ಲಿ ಇನ್ನೂ 1,000 ಫಲಾನುಭವಿಗಳಿಗೆ ಸಹಾಯಧನ ಒದಗಿಸಲು ಕೇಂದ್ರ ಸರ್ಕಾರದಿಂದ ₹79 ಕೋಟಿ ಹೆಚ್ಚುವರಿ ಅನುದಾನ ಒದಗಿಸಿ ಎಂದು ಕೃಷಿ ಸಚಿವಾಲಯಕ್ಕೆ ಇದೇ 5ರಂದು ಮನವಿ ಸಲ್ಲಿಸಲಾಗಿದೆ ಎಂದು ಹೇಳಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಮುಂಬೈ ಧಾರಣೆ (ಶೇಂಗಾ)

07-01-2026	
ಜಾವಾ 70/80(ಹೊಸ)	10800-10900
ಜಾವಾ 80/90(ಹೊಸ)	10100-10200
ದಪ್ಪ ಮಧ್ಯಪ್ರದೇಶ (ಹೊಸ)	7800-7900
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಪಾಮ್ ವಾರದ ಡೆಲಿವರಿ	1258 (1258)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1460)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,36,000 (1,36,200)
ಬೆಳ್ಳಿ ಕೆ.ಜಿಗೆ	2,43,500 (2,43,200)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹20000-20000
ಬೆಂಗಳೂರು	₹31000-43000
ಹೊಸದುರ್ಗ	₹20000-22000
ಪುತ್ತೂರು	₹6000-22500

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1400-2200
ಮಧ್ಯಮ	₹800-1400
ಸಣ್ಣ	₹400-800

ಸುದ್ದಿ 2 ನಿಮಿಷ

ಬೆಳ್ಳಿ ದರ ₹5 ಸಾವಿರ ಏರಿಕೆ

ನವದೆಹಲಿ / ಮುಂಬೈ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಬೆಳ್ಳಿ ಧಾರಣೆಯು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ, ಚಿನ್ನದ ದರವು ಇಳಿಕೆ ಆಗಿದೆ.

ಬೆಳ್ಳಿ ದರವು ಕೆ.ಜಿ.ಗೆ ₹5 ಸಾವಿರ ಹೆಚ್ಚಳವಾಗಿ, ₹2.56 ಲಕ್ಷದಂತೆ ಮಾರಾಟವಾಗಿದೆ. 10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹100 ಇಳಿಕೆಯಾಗಿ, ₹1,41,400 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕ ಮತ್ತು ವೆನೆಜುವೆಲಾ ನಡುವೆ ಉಂಟಾಗಿರುವ ಬಿಕ್ಕಟ್ಟಿನಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಬೆಳ್ಳಿಯಲ್ಲಿ ಹೂಡಿಕೆ ಮಾಡಲು ಮುಂದಾಗಿದ್ದಾರೆ. ಜೊತೆಗೆ ಕೈಗಾರಿಕೆಗಳಲ್ಲಿ ಬೆಳ್ಳಿಗೆ ಹೆಚ್ಚಿದ ಬೇಡಿಕೆ ಮತ್ತು ಪೂರೈಕೆಯಲ್ಲಿನ ಕೊರತೆಯು ಬೆಳ್ಳಿ ಬೆಲೆ ಏರಿಕೆಗೆ ಕಾರಣ ಎಂದು ವರ್ತಕರು ತಿಳಿಸಿದ್ದಾರೆ.

ಸೆನ್ಸೆಕ್ಸ್, ನಿಫ್ಟಿ ಇಳಿಕೆ: ಐಟಿಸಿ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಕಂಪನಿಗಳ ಷೇರುಗಳು ಮಾರಾಟದ ಒತ್ತಡಕ್ಕೆ ಸಿಲುಕಿದ್ದರಿಂದ ದೇಶದ ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಹಿವಾಟಿನ ದಿನವೂ ಇಳಿಕೆ ಕಂಡಿದೆ.

ಜಾಗತಿಕ ಮಟ್ಟದಲ್ಲಿ ಉಂಟಾಗಿರುವ ರಾಜಕೀಯ ಬಿಕ್ಕಟ್ಟು ಮತ್ತು ಅಮೆರಿಕವು ಭಾರತದ ಸರಕುಗಳ ಮೇಲೆ ಸುಂಕ ಹೆಚ್ಚಿಸುವುದಾಗಿ ಹೇಳಿರುವುದು ಹೂಡಿಕೆದಾರರ ಮೇಲೆ ಪರಿಣಾಮ ಬೀರಿದೆ. ಇದು ಸೂಚ್ಯಂಕಗಳ ಇಳಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ. ವಿದೇಶಿ ಬಂಡವಾಳದ ಹೊರಹರಿವು, ವ್ಯಾಪಾರದ ಅನಿಶ್ಚಿತತೆಯು ಸಹ ಇಳಿಕೆಗೆ ಕಾರಣವಾಯಿತು ಎಂದು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 102 ಅಂಶ ಇಳಿಕೆಯಾಗಿ, 84,961ಕ್ಕೆ ವಹಿವಾಟು ಅಂತ್ಯಗೊಂಡಿದೆ. ವಹಿವಾಟಿನ ನಡುವಿನಲ್ಲಿ 445 ಅಂಶದವರೆಗೆ ಕುಸಿದಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 37 ಅಂಶ ಕಡಿಮೆಯಾಗಿ, 26,140ಕ್ಕೆ ಇಳಿದಿದೆ.



ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.81ರಷ್ಟು ಇಳಿಕೆಯಾಗಿದೆ. ಪ್ರತೀ ಬ್ಯಾರಲ್ ದರವು 60.21 ಡಾಲರ್ ಆಗಿದೆ.

ಬಾಂಗ್ಲಾ-ಪಾಕ್ ನೇರ ವಿಮಾನ ಸೇವೆ 29ಕ್ಕೆ ಪುನರಾರಂಭ

ಢಾಕಾ (ಪಿಟಿಐ): ಬಾಂಗ್ಲಾದೇಶ ಹಾಗೂ ಪಾಕಿಸ್ತಾನದ ನಡುವೆ ನೇರ ವಿಮಾನಯಾನ ಸೇವೆಯು ಜನವರಿ 29ರಿಂದ ಪುನರಾರಂಭಗೊಳ್ಳಲಿದೆ. ಸರ್ಕಾರಿ ಸ್ವಾಮ್ಯದ ಬಿಮನ್ ಬಾಂಗ್ಲಾದೇಶ ಸಂಸ್ಥೆಯು ಢಾಕಾದಿಂದ ಕರಾಚಿಗೆ ನೇರ ಹಾಗೂ ತಡೆರಹಿತ ವಿಮಾನಯಾನ ಸೇವೆ ಆರಂಭಿಸಲಿದೆ.

ಉಭಯ ರಾಷ್ಟ್ರಗಳ ನಡುವಿನ ನೇರ ವಿಮಾನಯಾನ ಸೇವೆ ಸ್ಥಗಿತಗೊಂಡು ಒಂದು ದಶಕಕ್ಕೂ ಅಧಿಕ ಸಮಯದ ಬಳಿಕ ಇದೀಗ ಮತ್ತೆ ಈ ಕಾರ್ಯಾಚರಣೆ ಪ್ರಾರಂಭವಾಗುತ್ತಿದೆ. ಮೊದಲ ಹಂತದ ಭಾಗವಾಗಿ ಗುರುವಾರ ಮತ್ತು ಶನಿವಾರ ವಿಮಾನಗಳ ಕಾರ್ಯಾಚರಣೆ ನಡೆಯಲಿದೆ ಎಂದು ಅಧಿಕಾರಿಗಳು ಬುಧವಾರ ಮಾಹಿತಿ ನೀಡಿದ್ದಾರೆ.

ಢಾಕಾದಿಂದ ರಾತ್ರಿ 8 ಗಂಟೆಗೆ ಹೊರಡಲಿರುವ ವಿಮಾನ ರಾತ್ರಿ 11ಕ್ಕೆ ಕರಾಚಿಗೆ ತಲುಪಲಿದೆ. ಹಿಂದಿರುಗುವ ವಿಮಾನವು ಕರಾಚಿಯಿಂದ ರಾತ್ರಿ 12ಕ್ಕೆ ಹೊರಡಲಿದ್ದು, ಬೆಳಿಗ್ಗೆ 4.20ಕ್ಕೆ ಢಾಕಾ ತಲುಪಲಿದೆ ಎಂದೂ ಅಧಿಕಾರಿಗಳು ತಿಳಿಸಿದ್ದಾರೆ.

ಢಾಕಾ ಮತ್ತು ಕರಾಚಿ ನಡುವಿನ ಸಮೀಪದ ಮಾರ್ಗವೆಂದರೆ ಅದು ಭಾರತದ ವಾಯುಪ್ರದೇಶದ ಮೂಲಕ ಸಾಗುವುದೇ ಆಗಿದೆ. ಇದಕ್ಕೆ ಸಂಬಂಧಿಸಿದ ಅಗತ್ಯ ಅನುಮತಿಯನ್ನು ಭಾರತದಿಂದ ಬಾಂಗ್ಲಾದೇಶ ಪಡೆದಿದೆಯೇ ಎಂಬುದು ಸದ್ಯಕ್ಕೆ ಸ್ಪಷ್ಟವಾಗಿಲ್ಲ.

ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಸರ್ಕಾರ ಪತನಗೊಂಡ ಬಳಿಕ ಪಾಕ್-ಬಾಂಗ್ಲಾ ನಡುವಿನ ಸಂಬಂಧ ವೃದ್ಧಿಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ. ಅದರ ಭಾಗವಾಗಿಯೇ ಈ ಬೆಳವಣಿಗೆ ನಡೆದಿದೆ. ಉಭಯ ರಾಷ್ಟ್ರಗಳ ನಡುವಿನ ನೇರ ವಿಮಾನ ಸಂಚಾರ ಇದ್ದದ್ದು 2012ರಲ್ಲಿ.

'ರಫ್ತು ಹೆಚ್ಚಳ ಅಗತ್ಯ'

ನವದೆಹಲಿ (ಪಿಟಿಐ): 'ಭಾರತವು ಜಗತ್ತಿನ ಮೂರನೇ ಅತಿದೊಡ್ಡ ಆರ್ಥಿಕತೆ ಆಗಬೇಕಾದರೆ ಆಮದನ್ನು ಕಡಿಮೆ ಮಾಡಿ, ರಫ್ತು ಪ್ರಮಾಣವನ್ನು ಹೆಚ್ಚಿಸಿಕೊಳ್ಳಬೇಕಾದ ಅಗತ್ಯವಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ರಸ್ತೆ ನಿರ್ಮಾಣದಲ್ಲಿ ಪೆಟ್ರೋಲಿಯಂ ಮುಕ್ತ ವಸ್ತುವಾದ ಜೈವಿಕ ಡಾಂಬರು (ಬಯೊ ಬಿಟುಮೆನ್) ಬಳಸುವುದರಿಂದ ವಿಕಸಿತ ಭಾರತ ಗುರಿ ಸಾಧನೆಗೆ ನೆರವಾಗಲಿದೆ ಎಂದು ಅವರು ಹೇಳಿದ್ದಾರೆ. ದೇಶದ ಕಚ್ಚಾ ತೈಲ ಆಮದು ಕಡಿಮೆ ಮಾಡುವಲ್ಲಿ ಕೃಷಿ ತ್ಯಾಜ್ಯ ಹೇಗೆ ನೆರವಾಗುತ್ತಿದೆ ಎಂದು ಇಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ವಿವರಿಸಿದ್ದಾರೆ. ಜಗತ್ತಿನಲ್ಲಿ ಮೊದಲ ಬಾರಿಗೆ ಜೈವಿಕ ಡಾಂಬರನ್ನು ವಾಣಿಜ್ಯ ಉದ್ದೇಶಕ್ಕೆ ತಯಾರಿಸಿದ್ದು ಭಾರತ. ಇದು ರೈತರನ್ನು ಸಬಲೀಕರಿಸುತ್ತಿದೆ, ಗ್ರಾಮೀಣ ಭಾಗದಲ್ಲಿ ಜೀವನೋಪಾಯವನ್ನು ಸೃಷ್ಟಿಸಿದೆ ಮತ್ತು ಗ್ರಾಮೀಣ ಆರ್ಥಿಕತೆಗೆ ಉತ್ತೇಜನ ನೀಡಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಚದರ ಅಡಿಗೆ ಬೆಲೆ ₹7,388

ಮನೆ ಬೆಲೆ ಶೇ 19ರಷ್ಟು ಹೆಚ್ಚಳ



ನವದೆಹಲಿ (ಪಿಟಿಐ): ದೇಶದ ಪ್ರಮುಖ ಎಂಟು ನಗರಗಳಲ್ಲಿ ಮನೆಗಳ ಸರಾಸರಿ ಬೆಲೆಯು 2025ರಲ್ಲಿ ಶೇಕಡ 19ರವರೆಗೆ ಏರಿಕೆ ಆಗಿದೆ, ಬೆಂಗಳೂರಿನಲ್ಲಿ ಶೇ 12ರಷ್ಟು ಹೆಚ್ಚಳವಾಗಿದೆ ಎಂದು ರಿಯಲ್ ಎಸ್ಟೇಟ್ ಸಲಹಾ ಸಂಸ್ಥೆ ನೈಟ್ ಫ್ರಾಂಕ್ ಸಿದ್ಧಪಡಿಸಿರುವ ವರದಿ ತಿಳಿಸಿದೆ.

ಇದೇ ಅವಧಿಯಲ್ಲಿ ಮನೆಗಳ ಮಾರಾಟ ಶೇ 1ರಷ್ಟು ಇಳಿಕೆ ಆಗಿದೆ. 2025ರಲ್ಲಿ 3,48,207 ಮನೆಗಳು ಮಾರಾಟವಾಗಿವೆ ಎಂದು ತಿಳಿಸಿದೆ.

ಗೃಹ ಸಾಲದ ಮೇಲಿನ ಬಡ್ಡಿ ದರ ಇಳಿಕೆ, ಸದೃಢ ಆರ್ಥಿಕ ಬೆಳವಣಿಗೆ ಮತ್ತು ಹಣದುಬ್ಬರ ಇಳಿಕೆಯಂತಹ ಅಂಶಗಳು ಮನೆಗಳಿಗೆ ಬೇಡಿಕೆ ಉಳಿಸಿಕೊಳ್ಳಲು ನೆರವಾಗಿವೆ ಎಂದು ವರದಿ ಹೇಳಿದೆ.

'ಮನೆಗಳ ಬೆಲೆ ಹೆಚ್ಚಳದ ನಡುವೆಯೂ ಮಾರಾಟವು ಮುಂದುವರಿದಿದೆ' ಎಂದು ನೈಟ್ ಫ್ರಾಂಕ್ ಇಂಡಿಯಾದ ಸಿಎಂಡಿ ಶಿಶಿರ್ ಬೈಜಲ್ ಹೇಳಿದ್ದಾರೆ.

ಮನೆಗಳ ಮಾರಾಟದಲ್ಲಿ ಅನಿವಾಸಿ ಭಾರತೀಯರ (ಎನ್‌ಆರ್‌ಐ) ಕೊಡುಗೆ ಶೇ 15ಕ್ಕೆ ಏರಿಕೆಯಾಗಿದೆ. ದಶಕದ ಹಿಂದೆ ಈ ಪ್ರಮಾಣ ಒಂದಂಕಿಯಲ್ಲಿ ಇತ್ತು. 2026ರಲ್ಲಿ ಮನೆಗಳ ಮಾರಾಟವು ಆಶಾದಾಯಕ ಆಗಿರಲಿದೆ ಎಂದು ಹೇಳಿದ್ದಾರೆ.

ಮುಂಬೈನಲ್ಲಿ ಮನೆಗಳ ಮಾರಾಟವು ಶೇ 1ರಷ್ಟು ಏರಿಕೆ ಆಗಿದ್ದು, 97,188 ಮನೆಗಳು ಮಾರಾಟವಾಗಿವೆ.

ಬೆಂಗಳೂರಿನಲ್ಲಿ 55,373 ಮನೆಗಳ ಮಾರಾಟವಾಗಿದ್ದು, ಮನೆಗಳ ಸರಾಸರಿ ಬೆಲೆಯಲ್ಲಿ ಶೇ 12ರಷ್ಟು ಹೆಚ್ಚಳವಾಗಿದೆ. ಪ್ರತಿ ಚದರ ಅಡಿ ಬೆಲೆ ₹7,388 ಇದೆ.

ಪುಣೆ (ಶೇ 3), ದೆಹಲಿ-ಎನ್‌ಸಿಆರ್ (ಶೇ 9), ಕೋಲ್ಕತ್ತದಲ್ಲಿ (ಶೇ 3) ಮನೆಗಳ ಮಾರಾಟದಲ್ಲಿ ಇಳಿಕೆ ಆಗಿದೆ. ಹೈದರಾಬಾದ್ (ಶೇ 4), ಅಹಮದಾಬಾದ್ (ಶೇ 2) ಮತ್ತು ಚೆನ್ನೈನಲ್ಲಿ ಮನೆಗಳ ಮಾರಾಟದಲ್ಲಿ ಶೇ 12ರಷ್ಟು ಹೆಚ್ಚಳವಾಗಿದೆ.

ಮಾರಾಟವಾಗದೆ ಉಳಿದ 5.77 ಲಕ್ಷ ಮನೆ: 2025ರಲ್ಲಿ ದೇಶದ ಏಳು ಪ್ರಮುಖ ನಗರಗಳಲ್ಲಿ ಮಾರಾಟವಾಗದೆ ಉಳಿದ ಮನೆಗಳ ಸಂಖ್ಯೆ 5.77 ಲಕ್ಷ ಆಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ವರದಿ ಇತ್ತೀಚೆಗೆ ತಿಳಿಸಿತ್ತು.

ಇಸ್ರೇಲ್ ಪ್ರಧಾನಿ – ಮೋದಿ ಮಾತುಕತೆ



ಬೆಂಜಮಿನ್ ನೆತನ್ಯಾಹು

ನವದೆಹಲಿ (ಪಿಟಿಐ): ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಬುಧವಾರ ದೂರವಾಣಿಯಲ್ಲಿ ಮಾತುಕತೆ ನಡೆಸಿದ್ದು, ಗಾಜಾ ಪಟ್ಟಿಯಲ್ಲಿ ಶಾಂತಿ ಮರುಸ್ಥಾಪನೆಗೆ ನಡೆಯುತ್ತಿರುವ ಪ್ರಯತ್ನಗಳನ್ನು ವಿವರಿಸಿದ್ದಾರೆ. ಇದೇ ವೇಳೆ, ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಇಸ್ರೇಲ್‌ನ ದೃಢ ಸಂಕಲ್ಪವನ್ನು ಅವರು ಪುನರುಚ್ಚರಿಸಿದ್ದಾರೆ.

'ಉಭಯ ದೇಶಗಳ ನಾಯಕರು ಪರಸ್ಪರ ಹೊಸ ವರ್ಷದ ಶುಭಾಶಯ ಕೋರಿ, ಎರಡೂ ದೇಶಗಳ ಜನತೆಗೆ ಶಾಂತಿ, ಸಮೃದ್ಧಿಯನ್ನು ಹಾರೈಸಿದರು' ಎಂದು ಪ್ರಧಾನಿ ನರೇಂದ್ರ ಮೋದಿ ಅವರ ಕಚೇರಿಯ ಪ್ರಕಟಣೆ ತಿಳಿಸಿದೆ.

'ಗಾಜಾ ಪಟ್ಟಿಯಲ್ಲಿ ಇಸ್ರೇಲ್ ಜಾರಿಗೆ ತರಲು ಉದ್ದೇಶಿರುವ ಶಾಂತಿ ಯೋಜನೆ ಕುರಿತು ನೆತನ್ಯಾಹು, ಮೋದಿ ಅವರಿಗೆ ವಿವರಿಸಿದರು. ಉಭಯ ದೇಶಗಳ ನಡುವಿನ ದ್ವಿಪಕ್ಷೀಯ ಸಹಕಾರ ವೃದ್ಧಿಯ ಬಗ್ಗೆಯೂ ಮಾತುಕತೆ ನಡೆಯಿತು' ಎಂದು ಪ್ರಕಟಣೆ ವಿವರಿಸಿದೆ.

'ಮಾತುಕತೆ ವೇಳೆ, ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಇಸ್ರೇಲ್‌ನ ಶೂನ್ಯ ಸಹನೆ ನೀತಿಯನ್ನು ಅಲ್ಲಿನ ಪ್ರಧಾನಿ ಮತ್ತೆ ಒತ್ತಿ ಹೇಳಿದ್ದಾರೆ. ನನ್ನ ಸ್ನೇಹಿತನೊಂದಿಗೆ ಮಾತನಾಡಿ ಸಂತೋಷವಾಯಿತು' ಎಂದು ಪ್ರಧಾನಿ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ನೇಪಾಳ: ಜೆನ್ ಝಿ ಅಸಮಾಧಾನ

ಕಠ್ಮಂಡು (ಎಪಿ): ಸೆಪ್ಟೆಂಬರ್ ಕ್ರಾಂತಿಯ ಮೂಲಕ ಹೊಸ ಸರ್ಕಾರವನ್ನು ಅಸ್ತಿತ್ವಕ್ಕೆ ತಂದಿದ್ದ ಜೆನ್ ಝಿ ಬಂಡಾಯಗಾರರು ಹಾಲಿ ಸರ್ಕಾರದ ವಿರುದ್ಧವೂ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ನಮ್ಮ ಹೋರಾಟದ ಆಶಯ ಈಡೇರಿಲ್ಲ. ಭ್ರಷ್ಟಾಚಾರವೂ ತಗ್ಗಿಲ್ಲ' ಎಂದು ಭದ್ರತಾ ಪಡೆಗಳೊಂದಿಗಿನ ಸಂಘರ್ಷದಲ್ಲಿ ಕಾಲು ಕಳೆದುಕೊಂಡಿರುವ ಮುಕೇಶ್ ಅವಸ್ಥಿ ಬೇಸರದ ಮಾತುಗಳನ್ನಾಡಿದ್ದಾರೆ.

ಕ್ರಾಂತಿಯ ನಂತರ ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಆಗಿದ್ದ ಸುಶೀಲಾ ಕಾರ್ಕಿ ಅವರು ನೇಪಾಳದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಿದ್ದರು. ಸ್ವಲ್ಪ ದಿನಗಳ ಬಳಿಕ ಮಾರ್ಚ್‌ನಲ್ಲಿ ಚುನಾವಣೆ ನಡೆಸುವುದಾಗಿ ಘೋಷಿಸಿದ್ದರು. ಇದು ಸಹ ಜೆನ್ ಝಿಗಳ ಟೀಕೆಗೆ ಕಾರಣವಾಗಿದೆ.

'ಆಸ್ಟ್ರೇಲಿಯಾಗೆ ಓದಲಿಕ್ಕೆ ಹೋಗುವ ಬದಲು ಪ್ರತಿಭಟನೆಯಲ್ಲಿ ಭಾಗವಹಿಸಿದ ನನ್ನ ನಿರ್ಧಾರದ ಬಗ್ಗೆ ಬೇಸರವಾಗುತ್ತಿದೆ. ಏಕೆಂದರೆ, ಹೊಸ ಸರ್ಕಾರದ ಸಾಧನೆ ಶೂನ್ಯ' ಎಂದು ಅವಸ್ಥಿ ಹೇಳಿದ್ದಾರೆ.

'ಹೊಸ ಸರ್ಕಾರವು ಭ್ರಷ್ಟಾಚಾರಕ್ಕೆ ಅಂತ್ಯ ಹಾಡಲಿದೆ ಎಂಬ ನಮ್ಮ ನಿರೀಕ್ಷೆ ಹುಸಿಯಾಗಿದೆ. ಪ್ರತಿಭಟನಕಾರರ ಮೇಲೆ ಗುಂಡು ಹಾರಿಸಿದವರನ್ನು ಇದುವರೆಗೂ ಬಂಧಿಸಿಲ್ಲ. ಆಗ ಅಧಿಕಾರದಲ್ಲಿದ್ದ ಯಾವೊಬ್ಬ ರಾಜಕಾರಣಿ ವಿರುದ್ಧವೂ ಪ್ರಕರಣ ದಾಖಲಾಗಿಲ್ಲ. ಭ್ರಷ್ಟಾಚಾರದ ಆರೋಪ ಹೊತ್ತವರು ಚುನಾವಣೆಗೆ ಸ್ಪರ್ಧಿಸಲು ಮತ್ತೆ ತಯಾರಿ ನಡೆಸಿರುವುದು ಮನಸ್ಸಿಗೆ ನೋವನ್ನುಂಟು ಮಾಡಿದೆ' ಎಂದಿದ್ದಾರೆ.

'ಮುಕೇಶ್ ಅವರಂತೆಯೇ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಹಲವರು ನೂತನ ಸರ್ಕಾರದ ವಿರುದ್ಧ ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ. ಕೆಲವು ವಾರಗಳಿಂದಲೂ ಪ್ರಧಾನಿ ಕಚೇರಿ ಹೊರಭಾಗದಲ್ಲೂ ಪ್ರತಿಭಟನೆಗಳು ನಡೆದಿವೆ. ನಮ್ಮ ಆಶಯ ಈಡೇರದಿದ್ದಕ್ಕೆ ಮತ್ತೆ ಬೀದಿಗಿಳಿದು ಪ್ರತಿಭಟಿಸುತ್ತಿದ್ದೇವೆ' ಎಂದು ಸುಮನ್ ಬೋಹರ ಹೇಳಿದ್ದಾರೆ.

ಗೂಢಚರ್ಯೆ: ವ್ಯಕ್ತಿಗೆ ಗಲ್ಲು ಶಿಕ್ಷೆ

ಟೆಹರಾನ್ (ಎಪಿ): ಇಸ್ರೇಲ್‌ನ ಮೊಸಾದ್‌ಗಾಗಿ ಗೂಢಚಾರ ನಡೆಸಿದ ಆರೋಪದ ಮೇಲೆ ಶಿಕ್ಷೆಗೊಳಗಾದ ವ್ಯಕ್ತಿಗೆ ಇರಾನ್ ಶಿರಚ್ಛೇದ ಮಾಡಿದೆ ಎಂದು ಇರಾನ್‌ನ ಸರ್ಕಾರಿ ಮಾಧ್ಯಮ ಬುಧವಾರ ವರದಿ ಮಾಡಿದೆ.

ಅಲಿ ಅರ್ಡೆಸ್ತಾನಿ ಶಿರಚ್ಛೇದಕ್ಕೆ ಒಳಗಾದ ವ್ಯಕ್ತಿ. ಆತ ದೇಶದ ಸೂಕ್ಷ್ಮ ಮಾಹಿತಿಯನ್ನು ಮೊಸಾದ್ ಅಧಿಕಾರಿಗಳಿಗೆ ರವಾನಿಸಿದ್ದಾನೆ ಎಂದು ವರದಿ ತಿಳಿಸಿದೆ.

ಬೇಹುಗಾರಿಕೆ ಆರೋಪವನ್ನು ಅಲಿ ಒಪ್ಪಿಕೊಂಡಿದ್ದು, ಆತನಿಗೆ ಕ್ರಿಪ್ಟೋಕರೆನ್ಸಿಗಳ ರೂಪದಲ್ಲಿ ಒಂದು ಮಿಲಿಯನ್ ಡಾಲರ್ ಬಹುಮಾನ ಮತ್ತು ಬ್ರಿಟಿಷ್ ವೀಸಾ ಸಿಗುವ ನಿರೀಕ್ಷೆಯಿತ್ತು ಎಂದು ವರದಿ ಹೇಳಿದೆ.

ಢಾಕಾ: ನಾಲೆಗೆ ಹಾರಿ ಹಿಂದೂ ವ್ಯಕ್ತಿ ಸಾವು

ಢಾಕಾ(ಪಿಟಿಐ): ತನ್ನನ್ನು ಬೆನ್ನಟ್ಟಿದ್ದ ಗುಂಪಿನಿಂದ ಪಾರಾಗಲು ನಾಲೆಗೆ ಹಾರಿದ್ದ ಹಿಂದೂ ಯುವಕನೊಬ್ಬ, ನೀರಿನಲ್ಲಿ ಮುಳುಗಿ ಮೃತಪಟ್ಟ ಘಟನೆ ಬಾಂಗ್ಲಾದೇಶದ ನಾವ್‌ಗಾಂವ್ ಜಿಲ್ಲೆಯಲ್ಲಿ ಮಂಗಳವಾರ ನಡೆದಿದೆ.

'ಮೃತ ಯುವಕನನ್ನು ಮಿಥುನ್ ಸರ್ಕಾರ್(25) ಎಂಬುದಾಗಿ ಗುರುತಿಸಲಾಗಿದೆ' ಎಂದು ಬಾಂಗ್ಲಾದೇಶ ಹಿಂದೂ, ಬುದ್ಧಿಸ್ಟ್, ಕ್ರಿಶ್ಚಿಯನ್ ಯುನಿಟಿ ಕೌನ್ಸಿಲ್(ಬಿಎಚ್‌ಬಿಸಿಯುಸಿ) ವಕ್ತಾರ ಕಾಜೋಲ್ ದೇವನಾಥ್ ತಿಳಿಸಿದ್ದಾರೆ.

'ಸರ್ಕಾರ್ ವಿರುದ್ಧ ಕಳ್ಳತನ ಆರೋಪ ಮಾಡಿದ್ದ ಗುಂಪೊಂದು, ಆತನನ್ನು ಬೆನ್ನಟ್ಟಿದೆ. ಗುಂಪಿನಿಂದ ತಪ್ಪಿಸಿಕೊಳ್ಳುವುದಕ್ಕಾಗಿ ಆತ ನಾಲೆಗೆ ಹಾರಿ, ಮೃತಪಟ್ಟಿದ್ದಾನೆ' ಎಂದೂ ದೇವನಾಥ್ ಹೇಳಿದ್ದಾರೆ.

'ದೇಶದಲ್ಲಿ ಅಲ್ಪಸಂಖ್ಯಾತರನ್ನು ಗುರಿಯಾಗಿಸಿ ಕಿರುಕುಳ ನೀಡುತ್ತಿರುವ ಘಟನೆಗಳು ಹೆಚ್ಚುತ್ತಿದ್ದು, ಆತಂಕ ಮೂಡಿದೆ. ಇಂತಹ ಘಟನೆಗಳ ಕುರಿತು ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಅವರು ಆಗ್ರಹಿಸಿದ್ದಾರೆ.

ಬೇರೆ ದೇಶದಲ್ಲಿ ನೋಂದಾಯಿಸಲ್ಪಟ್ಟ ತೈಲ ಟ್ಯಾಂಕರ್‌ನ ಹಡಗನ್ನು ವಶಪಡಿಸಿಕೊಳ್ಳುವಂತಿಲ್ಲ: ರಷ್ಯಾ

ರಷ್ಯಾ ಧ್ವಜವಿದ್ದ ಟ್ಯಾಂಕರ್ ಅಮೆರಿಕ ವಶಕ್ಕೆ

ವಾಷಿಂಗ್ಟನ್ (ಎಎಫ್‌ಪಿ): ರಷ್ಯಾ ಧ್ವಜ ಹೊಂದಿದ್ದ ತೈಲ ಟ್ಯಾಂಕರನ್ನು ಅಮೆರಿಕವು ಉತ್ತರ ಅಟ್ಲಾಂಟಿಕಾದಲ್ಲಿ ಬುಧವಾರ ವಶಪಡಿಸಿಕೊಂಡಿದೆ.

ಅಮೆರಿಕದ ನಿರ್ಬಂಧವನ್ನು ಉಲ್ಲಂಘಿಸಿ ವೆನೆಜುವೆಲಾ, ಇರಾನ್ ಮತ್ತು ರಷ್ಯಾಗಳಿಗೆ ತೈಲ ಸಾಗಿಸುತ್ತಿದ್ದ ಕಾರಣಕ್ಕೆ ಟ್ಯಾಂಕರ್ ಅನ್ನು ಜಪ್ತಿ ಮಾಡಲಾಗಿದೆ ಎಂದು ಅಮೆರಿಕ ಹೇಳಿದೆ.

ಅಮೆರಿಕವು ಕಳೆದ ತಿಂಗಳು ಇದೇ ಹಡಗನ್ನು ವೆನೆಜುವೆಲಾದ ಬಳಿ ವಶಪಡಿಸಿಕೊಳ್ಳಲು ಯತ್ನಿಸಿತ್ತು. ಬುಧವಾರ ವೆನೆಜುವೆಲಾ ಕರಾವಳಿಯಿಂದ ಅದನ್ನು ಬೆನ್ನಟ್ಟಿ ವಶಪಡಿಸಿಕೊಂಡಿತು. ರಷ್ಯಾದ ಬೆಂಗಾವಲು ನೌಕೆಗಳಿದ್ದರೂ ತೈಲ ಟ್ಯಾಂಕರ್ ಅನ್ನು ವಶಕ್ಕೆ ಪಡೆಯುವಲ್ಲಿ ಅಮೆರಿಕ ಯಶಸ್ವಿಯಾಗಿದೆ.

'ಅಮೆರಿಕ ಫೆಡರಲ್ ನ್ಯಾಯಾಲಯ ಹೊರಡಿಸಿದ ಆದೇಶದ ಅನ್ವಯ ಹಡಗನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಯುರೋಪಿಯನ್ ಕಮಾಂಡ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಕಾರ್ಯಾಚರಣೆ ಬಳಿಕ ಪ್ರತಿಕ್ರಿಯಿಸಿದ ಪೆಂಟಗಾನ್ ಮುಖ್ಯಸ್ಥರು, 'ವೆನೆಜುವೆಲಾ ತೈಲದ ಮೇಲಿನ ಅಮೆರಿಕ ನಿರ್ಬಂಧವು ಜಗತ್ತಿನ ಇತರ ಭಾಗಗಳಿಗೂ ಪರಿಣಾಮ ಬೀರುತ್ತದೆ' ಎಂದು ಹೇಳಿದ್ದಾರೆ.

ವೆನೆಜುವೆಲಾಕ್ಕೆ ಸಂಬಂಧಿಸಿದ ಮತ್ತೊಂದು ನಿಷೇಧಿತ ತೈಲ ಟ್ಯಾಂಕರ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಮೆರಿಕ ಆಂತರಿಕ ಭದ್ರತಾ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಅಮೆರಿಕ ವಶಕ್ಕೆ ಪಡೆದ ತೈಲ ಟ್ಯಾಂಕರ್ —ಎಎಫ್‌ಪಿ ಚಿತ್ರ

ರಷ್ಯಾ ಖಂಡನೆ: ಅಮೆರಿಕದ ನಡೆಯನ್ನು ಖಂಡಿಸಿದ ರಷ್ಯಾದ ಸಾರಿಗೆ ಸಚಿವಾಲಯ, 'ಸಮುದ್ರದಲ್ಲಿ ಸಂಚರಿಸುವ ಸ್ವಾತಂತ್ರ್ಯ ಎಲ್ಲರಿಗಿದೆ. ಬೇರೆ ದೇಶದಲ್ಲಿ ನೋಂದಾಯಿಸಲ್ಪಟ್ಟ ಹಡಗನ್ನು ವಶ ಪಡಿಸಿಕೊಳ್ಳುವ ಹಕ್ಕು ಯಾರಿಗೂ ಇಲ್ಲ' ಎಂದು ಹೇಳಿದೆ.

ಲೆಬನಾನ್‌ನ ಬಂಡುಕೋರ ಸಂಘಟನೆ ಹಿಜ್ಬುಲ್ಲಾಗೆ ಸಂಬಂಧಿಸಿದ ಕಂಪನಿಯೊಂದಕ್ಕೆ ಸರಕು ಸಾಗಿಸಿದ ಆರೋಪದಡಿ ಈ ಹಡಗನ್ನು ಅಮೆರಿಕ 2024ರಲ್ಲಿ ನಿಷೇಧಿಸಿತ್ತು.

ಬ್ರಿಟನ್ ಬೆಂಬಲ: ತೈಲ ಟ್ಯಾಂಕರ್ ವಶಪಡಿಸಿಕೊಳ್ಳುವ ಕಾರ್ಯಾಚರಣೆಯಲ್ಲಿ ಅಮೆರಿಕಕ್ಕೆ ಬೆಂಬಲ ನೀಡಿರುವುದಾಗಿ ಬ್ರಿಟನ್ ತಿಳಿಸಿದೆ.

3-5 ಕೋಟಿ ಬ್ಯಾರೆಲ್ ತೈಲ ಖರೀದಿ: ಟ್ರಂಪ್

ಕರಾಕಸ್ (ಎಪಿ): ವೆನೆಜುವೆಲಾದ 'ಮಧ್ಯಂತರ ಆಡಳಿತ'ವು ಉತ್ತಮ ಗುಣಮಟ್ಟದ 3 ಕೋಟಿಯಿಂದ 5 ಕೋಟಿ ಬ್ಯಾರೆಲ್ ಕಚ್ಚಾ ತೈಲವನ್ನು ಮಾರುಕಟ್ಟೆ ದರಕ್ಕೆ ಅಮೆರಿಕಕ್ಕೆ ಪೂರೈಕೆ ಮಾಡಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ.

ಅಮೆರಿಕದ ಸೇನಾ ಕಾರ್ಯಾಚರಣೆಯಲ್ಲಿ ಕನಿಷ್ಠ 24 ಮಂದಿ ಭದ್ರತಾ ಅಧಿಕಾರಿಗಳು ಹತ್ಯೆಗೀಡಾಗಿದ್ದಾರೆ ಎಂದು ವೆನೆಜುವೆಲಾ ತಿಳಿಸಿದ ಬೆನ್ನಲ್ಲೇ ಟ್ರಂಪ್ ಈ ಘೋಷಣೆ ಮಾಡಿದ್ದಾರೆ.

ಈ ಕುರಿತು ಸಾಮಾಜಿಕ ಮಾಧ್ಯಮ 'ಟ್ರುತ್'ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, 'ನೇರವಾಗಿ ಸ್ಟೋರೇಜ್ ಹಡಗುಗಳ ಮೂಲಕ ತೈಲವು ಅಮೆರಿಕದ ಬಂದರನ್ನು ತಲುಪಲಿದೆ. ಇದರಿಂದ ಬರುವ ಹಣವನ್ನು ವೆನೆಜುವೆಲಾ ಮತ್ತು ಅಮೆರಿಕ ಜನರ ಅನುಕೂಲಕ್ಕಾಗಿ ಬಳಕೆ ಮಾಡಲಾಗುವುದು' ಎಂದು ತಿಳಿಸಿದ್ದಾರೆ.

24 ಭದ್ರತಾ ಅಧಿಕಾರಿಗಳ ಹತ್ಯೆ: ವೆನೆಜುವೆಲಾ

ಅಮೆರಿಕ ನಡೆಸಿದ ಸೇನಾ ಕಾರ್ಯಾಚರಣೆಯಲ್ಲಿ ವೆನೆಜುವೆಲಾದ ಕನಿಷ್ಠ 24 ಮಂದಿ ಭದ್ರತಾ ಅಧಿಕಾರಿಗಳು ಹತ್ಯೆಗೀಡಾಗಿದ್ದಾರೆ ಎಂದು ವೆನೆಜುವೆಲಾ ಸೇನೆ ತಿಳಿಸಿದೆ. ಇದರೊಂದಿಗೆ ಕಾರ್ಯಾಚರಣೆಯಲ್ಲಿ ಮೃತಪಟ್ಟವರ ಸಂಖ್ಯೆ ಕನಿಷ್ಠ 56ಕ್ಕೆ ಏರಿಕೆಯಾಗಿದೆ.

ವೆನೆಜುವೆಲಾ ಅಟಾರ್ನಿ ಜನರಲ್ ತಾರೆಕ್ ವಿಲಿಯಮ್ ಸಾಬ್ ಅವರು, 'ಹತ್ತಾರು ಅಧಿಕಾರಿಗಳು ಮತ್ತು ನಾಗರಿಕರು ಹತ್ಯೆಗೀಡಾಗಿದ್ದಾರೆ. ಇದೊಂದು 'ಯುದ್ಧಾಪರಾಧ'ವಾಗಿದ್ದು, ಈ ಬಗ್ಗೆ ಪ್ರಾಸಿಕ್ಯೂಟರ್ ತನಿಖೆ ನಡೆಸಲಿದ್ದಾರೆ' ಎಂದು ಹೇಳಿದರು.

ರುಬಿಯೊ ಜತೆ ಮಾತುಕತೆ ಇಂಗಿತ

ಕೋಪನ್‌ಹೇಗನ್ (ಎಪಿ): ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರನ್ನು ಭೇಟಿಯಾಗಿ ಮಾತುಕತೆ ನಡೆಸುವ ಇಂಗಿತವನ್ನು ಡೆನ್ಮಾರ್ಕ್ ಮತ್ತು ಗ್ರೀನ್‌ಲ್ಯಾಂಡ್ ದೇಶಗಳು ವ್ಯಕ್ತಪಡಿಸಿವೆ.

ಖನಿಜ ಸಂಪದ್ಭರಿತ ಆರ್ಕ್‌ಟಿಕ್ ದ್ವೀಪವಾದ 'ಗ್ರೀನ್‌ಲ್ಯಾಂಡ್' ಅನ್ನು ವಶಕ್ಕೆ ಪಡೆಯುವ ಕುರಿತಂತೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ನೀಡಿದ ಬೆನ್ನಲ್ಲೇ ಮಾತುಕತೆಗೆ ಮುಂದಾಗಿವೆ.

ಪದಕ ಜಯಿಸಿದ ರಿಷಿತಾ–ದೇಚಮ್ಮ

ಎರಡನೇ ಆವೃತ್ತಿಯ ಖೇಲೊ ಇಂಡಿಯಾ ಬೀಚ್ ಗೇಮ್ಸ್: ಕರ್ನಾಟಕಕ್ಕೆ ಕಂಚು

• ಪ್ರದೀಶ್ ಎಚ್. ಮರೋಡಿ

ದಿಯು: ಕರ್ನಾಟಕದ ರಿಷಿತಾ ಜಿ. ಮತ್ತು ದೇಚಮ್ಮ ಸುದಯ ಅವರು ಇಲ್ಲಿನ ಘೋಘ್ಲಾ ಕಡಲ ತೀರದಲ್ಲಿ ನಡೆಯುತ್ತಿರುವ ಎರಡನೇ ಆವೃತ್ತಿಯ ಖೇಲೊ ಇಂಡಿಯಾ ಬೀಚ್ ಗೇಮ್ಸ್‌ನಲ್ಲಿ ಕರ್ನಾಟಕಕ್ಕೆ ಮೊದಲ ಪದಕ ತಂದುಕೊಟ್ಟರು.

ಸ್ಪರ್ಧೆಯ ಎರಡನೇ ದಿನವಾದ ಬುಧವಾರ ನಡೆದ ಪೆಂಕಾಕ್ ಸಿಲಾಟ್‌ನ (ಇದು ಇಂಡೊನೇಷ್ಯಾ ಮತ್ತು ಮಲೇಷ್ಯಾದಲ್ಲಿ ಹುಟ್ಟಿಕೊಂಡ ಒಂದು ಸಾಂಪ್ರದಾಯಿಕ ಕರಾಟೆ ಕಲೆ) ಗಾಂಡಾ ತಂಡ ವಿಭಾಗದಲ್ಲಿ ರಿಷಿತಾ ಮತ್ತು ದೇಚಮ್ಮ ಅವರು ಸತತ ಎರಡನೇ ಬಾರಿ ಕಂಚಿನ ಪದಕಕ್ಕೆ ಕೊರಳೊಡ್ಡಿದರು. ರಾಜ್ಯದ ಪುರುಷರ ತಂಡವು ಪೆಂಕಾಕ್ ಸಿಲಾಟ್‌ನ ರೆಗು ಸ್ಪರ್ಧೆಯಲ್ಲಿ ಸೆಮಿಫೈನಲ್ ಪ್ರವೇಶಿಸುವ ಮೂಲಕ ಕನಿಷ್ಠ ಕಂಚಿನ ಪದಕ ಖಚಿತಪಡಿಸಿಕೊಂಡಿತು.

ಕರ್ನಾಟಕ ಆಟಗಾರ್ತಿಯರು ಕ್ವಾರ್ಟರ್ ಫೈನಲ್‌ನಲ್ಲಿ 512–486 ಅಂಕಗಳಿಂದ ಮಣಿಪುರ ತಂಡವನ್ನು ಮಣಿಸಿದರು. ಸೆಮಿಫೈನಲ್ ಹಣಾಹಣಿಯಲ್ಲಿ ರಿಷಿತಾ– ದೇಚಮ್ಮ ಉತ್ತಮ ಪ್ರದರ್ಶನ ನೀಡಿದರೂ 540–527ರಿಂದ ಆತಿಥೇಯ ದಿಯು ಮತ್ತು ದಮನ್ ತಂಡಕ್ಕೆ ಮಣಿದರು. ಕರ್ನಾಟಕದ ಆಟಗಾರ್ತಿಯರು ಕಳೆದ ಆವೃತ್ತಿಯಲ್ಲೂ ಇದೇ ಸಾಧನೆ ಮೆರೆದಿದ್ದರು. ಈ ಸ್ಪರ್ಧೆಯಲ್ಲಿ ಚಂಡೀಗಢ ಜೋಡಿ ಚಿನ್ನ ಗೆದ್ದರೆ, ದಿಯು ಮತ್ತು ದಾಮನ್ ಜೋಡಿ ಬೆಳ್ಳಿ ಜಯಿಸಿತು.

‘ಕರ್ನಾಟಕವನ್ನು ಪ್ರತಿನಿಧಿಸಿ ಸತತ ಎರಡನೇ ಬಾರಿ ಪದಕ ಗೆದ್ದಿರುವುದು ಖುಷಿ ತಂದಿದೆ. ಈ ಬಾರಿ ಚಿನ್ನದ ಪದಕದ ಗುರಿಯೊಂದಿಗೆ ನಾವು ಬಂದಿದ್ದೆವು. ಆದರೆ, ಅಲ್ಪ ಅಂತರದಲ್ಲಿ ಸೆಮಿಫೈನಲ್‌ನಲ್ಲಿ ಸೋತೆವು. ರಾಜ್ಯ ಸರ್ಕಾರದಿಂದ ನಮಗೆ ಪ್ರೋತ್ಸಾಹ ದೊರೆತರೆ ಮುಂದಿನ ಬಾರಿ ಇನ್ನಷ್ಟು ತರಬೇತಿಯೊಂದಿಗೆ ಸ್ವರ್ಣ ಗೆಲ್ಲುವ ಗುರಿಯಿದೆ’ ಎಂದು ಕೊಡಗಿನ ದೇಚಮ್ಮ ಮತ್ತು ಬಳ್ಳಾರಿಯ ರಿಷಿತಾ ಅವರು ಪ್ರಜಾವಾಣಿಗೆ ಪ್ರತಿಕ್ರಿಯಿಸಿದರು.



ಪದಕದೊಂದಿಗೆ ರಿಷಿತಾ ಮತ್ತು ದೇಚಮ್ಮ ಪ್ರಜಾವಾಣಿ ಚಿತ್ರ

25 ವರ್ಷದ ದೇಚಮ್ಮ ಅವರು ಸದ್ಯ ಬೆಂಗಳೂರಿನಲ್ಲಿ ಸ್ಟಾಫ್ಟ್‌ವೇರ್ ಉದ್ಯೋಗಿಯಾಗಿದ್ದಾರೆ. 37ನೇ ರಾಷ್ಟ್ರೀಯ ಕ್ರೀಡಾ ಕೂಟದಲ್ಲಿ ಬೆಳ್ಳಿ ಮತ್ತು ಕಂಚು ಗೆದ್ದಿರುವ ಇವರು 2022ರಲ್ಲಿ ಮಲೇಷ್ಯಾದಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು.

23 ವರ್ಷದ ರಿಷಿತಾ ಅವರು ಬೆಂಗಳೂರಿನ ಆಚಾರ್ಯ ಇನ್‌ಸ್ಟಿಟ್ಯೂಟ್‌ನಲ್ಲಿ ದ್ವಿತೀಯ ವರ್ಷದ ಎಂಬಿಎ ವ್ಯಾಸಂಗ ಮಾಡುತ್ತಿದ್ದಾರೆ. ನಾಲ್ಕು ವರ್ಷಗಳಿಂದ ಈ ಕ್ರೀಡೆಯಲ್ಲಿ ತೊಡಗಿಸಿಕೊಂಡಿರುವ ಇವರು ಅಖಿಲ ಭಾರತ ಯೂನಿವರ್ಸಿಟಿ ಗೇಮ್ಸ್‌ನಲ್ಲಿ ಒಂದು ಚಿನ್ನ ಸೇರಿ ನಾಲ್ಕು ಪದಕ, 37ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ.

ಆಕಾಶ್ ದೊಡ್ಡವಾಳ, ಮನೋಜ್ ಕುಮಾರ್ ಎ.ಪಿ. ಮತ್ತು ಹರ್ಷಿತ್ ಎ. ಅವರನ್ನು ಒಳಗೊಂಡ ರಾಜ್ಯ ತಂಡವು ರೆಗು ಸ್ಪರ್ಧೆಯ ಕ್ವಾರ್ಟರ್ ಫೈನಲ್‌ನಲ್ಲಿ ದಿಯು ದಮನ್ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿತು. ಗುರುವಾರ ನಡೆಯುವ ಮುಂದಿನ ಸುತ್ತಿನಲ್ಲಿ ಮಹಾರಾಷ್ಟ್ರ ತಂಡವನ್ನು ಎದುರಿಸಲಿದೆ.

ಕೂಟದಲ್ಲಿ ನಾಲ್ಕು (1 ಚಿನ್ನ, 2 ಬೆಳ್ಳಿ, 1 ಕಂಚು) ಪದಕಗಳನ್ನು ಗೆದ್ದಿರುವ ಆತಿಥೇಯ ದಿಯು– ದಮನ್ ಕೇಂದ್ರಾಡಳಿತ ಪ್ರದೇಶವು ಪದಕ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಚಂಡೀಗಢ (1ಚಿನ್ನ, 1 ಕಂಚು) ಮತ್ತು ಪಶ್ಚಿಮ ಬಂಗಾಳ (1 ಚಿನ್ನ) ಕ್ರಮವಾಗಿ ನಂತರದ ಸ್ಥಾನದಲ್ಲಿವೆ. ಕರ್ನಾಟಕ 8ನೇ ಸ್ಥಾನದಲ್ಲಿದೆ.

ಬೀಚ್ ಸಾಕರ್ ಕರ್ನಾಟಕಕ್ಕೆ ಜಯ

ರಾಜ್ಯದ ಪುರುಷರ ತಂಡವು ಬೀಚ್ ಸಾಕರ್ ಗುಂಪು ಹಂತದ ಪಂದ್ಯದಲ್ಲಿ 7–3ರಿಂದ ಹಿಮಾಚಲ ಪ್ರದೇಶ ತಂಡವನ್ನು ಮಣಿಸಿತು. ತನ್ನ ಮೊದಲ ಪಂದ್ಯದಲ್ಲಿ ಕೇರಳ ತಂಡಕ್ಕೆ ಮಣಿದಿದ್ದ ಕರ್ನಾಟಕ ತಂಡ, ಗುರುವಾರ ಆತಿಥೇಯ ದಿಯು ಮತ್ತು ದಮನ್ ತಂಡವನ್ನು ಎದುರಿಸಲಿದೆ.

ಭಾರತದಲ್ಲಿ ಆಡಿ ಇಲ್ಲವೇ ಅಂಕ ಬಿಡಿ ಎಂದಿಲ್ಲ: ಬಿಸಿಬಿ
‘ಆಟಗಾರರಿಗೆ ಐಸಿಸಿ ಭದ್ರತೆ ಭರವಸೆ’

ಢಾಕಾ (ಪಿಟಿಐ): ಭಾರತದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಬಾಂಗ್ಲಾದೇಶ ತಂಡದ ಸುರಕ್ಷತೆಗೆ ಸಂಬಂಧಿಸಿದಂತೆ ತಮ್ಮ ಮನವಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ)ಯು ಸ್ಪಂದಿಸುವುದಾಗಿ ‘ಭರವಸೆ’ ನೀಡಿದೆ ಎಂದು ಬಾಂಗ್ಲಾ ಕ್ರಿಕೆಟ್ ಮಂಡಳಿ (ಬಿಸಿಬಿ) ಹೇಳಿದೆ.

ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿದ್ದ ಬಾಂಗ್ಲಾದ ಆಟಗಾರ ಮುಸ್ತಫಿಝುರ್ ರೆಹಮಾನ್ ಅವರನ್ನು ತೆಗೆದುಹಾಕಲಾಗಿತ್ತು. ಈ ಹಿನ್ನೆಲೆಯಲ್ಲಿ ಪ್ರತಿಭಟನೆ ವ್ಯಕ್ತಪಡಿಸಿದ್ದ ಬಾಂಗ್ಲಾ ಕ್ರಿಕೆಟ್ ಮಂಡಳಿಯು ಮುಂದಿನ ತಿಂಗಳು ಭಾರತದಲ್ಲಿ ನಡೆಯುವ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯಗಳಲ್ಲಿ ಆಡುವುದಿಲ್ಲ ಎಂದು ಹೇಳಿತ್ತು. ತಾನು ಆಡುವ ಪಂದ್ಯಗಳನ್ನು ಶ್ರೀಲಂಕೆಗೆ ಸ್ಥಳಾಂತರಿಸಬೇಕು ಎಂದು ಐಸಿಸಿಗೆ ಮನವಿ ಸಲ್ಲಿಸಿತ್ತು.

ಬುಧವಾರ ಈ ಕುರಿತು ಬಿಸಿಬಿ ಅಧ್ಯಕ್ಷ ಅಮಿನುಲ್ ಇಸ್ಲಾಂ ಮತ್ತು ಬಾಂಗ್ಲಾ ಸರ್ಕಾರದ ಪ್ರತಿನಿಧಿ ಆಸಿಫ್ ನಜ್ರುಲ್ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಭಾರತದಲ್ಲಿ ಆಡಿ ಇಲ್ಲವಾದರೆ ಪಾಯಿಂಟ್‌ಗಳನ್ನು ಕಳೆದುಕೊಳ್ಳಲು ಸಿದ್ಧರಾಗಿ’ ಎಂದು ಐಸಿಸಿ ಹೇಳಿದೆ ಎಂಬ ವರದಿಗಳನ್ನು ಬಿಸಿಬಿ ಅಲ್ಲಗಳೆದಿದೆ.

‘ಶ್ರೀಲಂಕೆಯಲ್ಲಿ ಬಾಂಗ್ಲಾದ ಪಂದ್ಯಗಳನ್ನು ನಡೆಸುವುದು ಸಾಧ್ಯವಿಲ್ಲ ಎಂಬ ವರದಿಗಳು ಸುಳ್ಳು. ನಾನು ಇದನ್ನು ಅಪಪ್ರಚಾರ ತಂತ್ರ, ಸುಳ್ಳು ಸುದ್ದಿ ಎಂದೇ ಕರೆಯುತ್ತೇನೆ. ಐಸಿಸಿಯೊಂದಿಗೆ ನಾವು ಈಗಲೂ ಸಂಪರ್ಕದಲ್ಲಿದ್ದು ಮಾತುಕತೆಗಳು ನಡೆಯುತ್ತಿವೆ. ಪರಿಸ್ಥಿತಿಯ ಕುರಿತು ನಾವು ಪೂರ್ಣಪ್ರಮಾಣದಲ್ಲಿ ವಿವರಿಸಿದ್ದೇವೆ’ ಎಂದು ಅಮಿನುಲ್ ಇಸ್ಲಾಂ ಹೇಳಿದರು.

‘ಭಾರತದಲ್ಲಿ ಬಾಂಗ್ಲಾದೇಶ ತಂಡವು ನಿರಾತಂಕವಾಗಿ ಆಡಲು ಭದ್ರತೆ ವ್ಯವಸ್ಥೆಯ ಕುರಿತು ಕಾಳಜಿ ವಹಿಸುವುದಾಗಿ ಐಸಿಸಿ ಭರವಸೆ ನೀಡಿದೆ. ಈ ವಿಷಯದಲ್ಲಿ ಬಿಸಿಬಿಯೊಂದಿಗೆ ನಿಕಟ ಸಂಪರ್ಕದಲ್ಲಿದ್ದು ಕಾರ್ಯನಿರ್ವಹಿಸುವುದಾಗಿಯೂ ಐಸಿಸಿ ತಿಳಿಸಿದೆ’ ಎಂದರು.

‘ಹೈಬ್ರಿಡ್ ಮಾದರಿಯಲ್ಲಿ ಆಡಲು ಸಾಧ್ಯವಿದೆ. ಪಾಕಿಸ್ತಾನ ಮತ್ತು ಭಾರತ ತಂಡಗಳು ತಟಸ್ಥ ತಾಣಗಳಲ್ಲಿ ಆಡಿದ ಉದಾಹರಣೆಗಳಿವೆ. ಅದು ಕೂಡ ಭದ್ರತೆಗೆ ಸಂಬಂಧಪಟ್ಟ ವಿಷಯವೇ ಆಗಿತ್ತು. ಈಗಲೂ ಹೈಬ್ರಿಡ್ ಮಾದರಿಯಲ್ಲಿಯೇ ಆ ತಂಡಗಳು ಆಡಲಿವೆ. ಬಾಂಗ್ಲಾದೇಶ ತಂಡದ ಭದ್ರತೆಗೂ ಹೈಬ್ರಿಡ್ ಮಾದರಿ ಸೂಕ್ತ’ ಎಂದು ಅಮಿನುಲ್ ಹೇಳಿದರು.

ಟಿ20 ವಿಶ್ವಕಪ್ ಫೆಬ್ರುವರಿ 7ರಿಂದ ಮಾರ್ಚ್ 8ರವರೆಗೆ ನಡೆಯಲಿದೆ. ಬಾಂಗ್ಲಾದೇಶ ತನ್ನ ನಾಲ್ಕು ಪಂದ್ಯಗಳನ್ನು ಕೋಲ್ಕತ್ತಾ ಮತ್ತು ಮುಂಬೈನಲ್ಲಿ ಆಡಲಿದೆ.

‘ಸಾಕಷ್ಟು ಬಲವಾದ ವಾದಗಳೊಂದಿಗೆ, ಬಾಂಗ್ಲಾದೇಶ ತಂಡದ ಭದ್ರತೆ ಹಾಗೂ ಘನತೆಯ ವಿಷಯಗಳಲ್ಲಿ ಯಾವತ್ತೂ ರಾಜಿ ಮಾಡಿಕೊಳ್ಳುವುದಿಲ್ಲ. ಭಾರತದಲ್ಲಿ ಪಂದ್ಯಗಳನ್ನು ಆಡುವಾಗ ಬಾಂಗ್ಲಾ ಎದುರಿಸಬಹುದಾದ ಆತಂಕಗಳ ಕುರಿತು ಐಸಿಸಿಗೆ ಮನವರಿಕೆ ಮಾಡುತ್ತೇವೆ. ನಮ್ಮ ಮನವಿಗೆ ಸಕಾರಾತ್ಮಕ ಸ್ಪಂದನೆ ಸಿಗುವ ವಿಶ್ವಾಸವಿದೆ. ನಾವು ವಿಶ್ವಕಪ್ ಟೂರ್ನಿಯಲ್ಲಿ ಆಡಲು ಬದ್ಧರಾಗಿದ್ದೇವೆ’ ಎಂದು ನಜ್ರುಲ್ ಸ್ಪಷ್ಟಪಡಿಸಿದರು.

ಪಿಎಸ್‌ಎಲ್‌ಗೆ ಮುಸ್ತಫಿಝುರ್: ಬಾಂಗ್ಲಾದ ವೇಗಿ ಮುಸ್ತಫಿಝುರ್ ರೆಹಮಾನ್ ಅವರು ಪಾಕಿಸ್ತಾನ ಪ್ರೀಮಿಯರ್ ಲೀಗ್ (ಪಿಎಸ್‌ಎಲ್) ಟೂರ್ನಿಯಲ್ಲಿ ಆಡಲು ಸಿದ್ಧರಾಗಿದ್ದಾರೆ. ಅವರು ಪಿಎಸ್‌ಎಲ್ ಡ್ರಾಫ್ಟ್‌ನಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಪಿಎಸ್‌ಎಲ್ ಆಟಗಾರರ ಹರಾಜು ಪ್ರಕ್ರಿಯೆ ಶೀಘ್ರದಲ್ಲಿ ನಡೆಯಲಿದೆ.

ಐಸಿಸಿ ಪುರುಷರ ಟಿ20 ವಿಶ್ವಕಪ್ 2026

‘ವಿಶ್ವ’ ವಿಜೇತರ ಸಮಾಗಮ

ಪಿಟಿಐ ಚಿತ್ರ



ಮಹಿಳೆಯರ ಏಕದಿನ ವಿಶ್ವಕಪ್ ವಿಜೇತ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಅಂಧ ಮಹಿಳೆಯರ ಟಿ20 ವಿಶ್ವಕಪ್ ಜಯಿಸಿದ ಭಾರತ ತಂಡದ ನಾಯಕಿ ದೀಪಿಕಾ ಟಿ.ಸಿ ಹಾಗೂ 2024ರ ಐಸಿಸಿ ಪುರುಷರ ಟಿ20 ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಅವರು ರಿಲಾಯನ್ಸ್ ಫೌಂಡೇಶನ್ ಮುಂಬೈನಲ್ಲಿ ಮಂಗಳವಾರ ಆಯೋಜಿಸಿದ್ದ ‘ಯುನೈಟೆಡ್ ಇನ್ ಟ್ರಯಂಫ್’ ಕಾರ್ಯಕ್ರಮದಲ್ಲಿ ಭಾಗಿಯಾದರು. ರಿಲಾಯನ್ಸ್ ಫೌಂಡೇಶನ್ ಮುಖ್ಯಸ್ಥೆ ನೀತಾ ಅಂಬಾನಿ ಭಾಗವಹಿಸಿದ್ದರು

ಝ್ಯುಬ್ ಹ್ಯಾಟ್ರಿಕ್; ಅಲ್ ಫತೇ ಎಫ್‌ಸಿಗೆ ಜಯ

ಬೆಂಗಳೂರು: ಝ್ಯುಬ್ ಶೆರೀಫ್ (33ನೇ, 45ನೇ ಹಾಗೂ 56ನೇ ನಿ.) ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಅಲ್ ಫತೇ ಎಫ್‌ಸಿ ತಂಡವು ಬಿಡಿಎಫ್‌ಎ ‘ಬಿ’ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬುಧವಾರ 5–2ರಿಂದ ಎಂಡಿ ಸ್ಪೋರ್ಟಿಂಗ್ ಎಫ್‌ಸಿ ತಂಡದ ವಿರುದ್ಧ ಗೆಲುವು ಸಾಧಿಸಿತು.

ದಿನದ ಇನ್ನೊಂದು ಪಂದ್ಯದಲ್ಲಿ ಇನ್‌ಫೈನೈಟ್ ಬೆಳಗಾವಿ ಎಫ್‌ಸಿ ಹಾಗೂ ಜುನೊ ಎಫ್‌ಸಿ ತಂಡಗಳು 2–2 ಡ್ರಾ ಸಾಧಿಸಿದವು.

ಮತ್ತೊಂದು ಪಂದ್ಯದಲ್ಲಿ, ವೆಹಿಕಲ್ಸ್ ಎಫ್ ತಂಡವು 1–0ಯಿಂದ ಎಡಿಇ ಎಫ್‌ಸಿ ತಂಡವನ್ನು ಮಣಿಸಿತು.

ಕೆಎಸ್‌ಎಫ್‌ಎ ವಾರ್ಷಿಕ ಪ್ರಶಸ್ತಿ ಪ್ರದಾನ

ಅರುಮೈನಾಯಗಂ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ತಂಡದ ಮಾಜಿ ಆಟಗಾರ ಅರುಮೈನಾಯಗಂ ಅವರು ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) 2024–25ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿಗೆ ಭಾಜನರಾದರು.

ಅರುಮೈನಾಯಗಂ ಅವರು 1961 ರಿಂದ 68ರ ವರೆಗೆ ಮೋಹನ್ ಬಾಗನ್ ಕ್ಲಬ್ ಪರ ಆಡಿದ್ದರು. 1977ರ ಅವಧಿಯಲ್ಲಿ ಅವರು ಚೆನ್ನೈನಲ್ಲಿ ಸದರ್ನ್ ರೈಲ್ವೇಸ್ ಪರ ಆಡಿದ್ದರು. ಅವರು ಏಷ್ಯನ್ ಚಿನ್ನದ ಪದಕವನ್ನು ಜಯಿಸಿದ್ದರು.

ನಗರದ ಆಸ್ಟಿನ್‌ಟೌನ್‌ನಲ್ಲಿರುವ ನಂದನ್ ಫುಟ್‌ಬಾಲ್ ಮೈದಾನದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಫ್‌ಸಿ ಅಗ್ನಿಪುತ್ರ ತಂಡದ ಕಾರ್ತಿಕ್ ಗೋವಿಂದಸ್ವಾಮಿ ಹಾಗೂ ಬೆಂಗಳೂರು ಎಫ್‌ಸಿ ತಂಡದ ತನ್ವಿ ನಾಯರ್ ಅವರು ಕ್ರಮವಾಗಿ ವರ್ಷದ ಆಟಗಾರ ಹಾಗೂ ಆಟಗಾರ್ತಿ ಪ್ರಶಸ್ತಿಗೆ ಭಾಜನರಾದರು. ಮೃತ್ಯುಂಜಯ್ ಎಲ್.ಎ. ಅವರಿಗೆ ವರ್ಷದ ರೆಫ್ರಿ ಪ್ರಶಸ್ತಿ ಪಧಾನ ಮಾಡಲಾಯಿತು.

ಕರ್ನಾಟಕ ಫುಟ್‌ಬಾಲ್‌ಗೆ ನೀಡಿರುವ ಕೊಡುಗೆಗಾಗಿ ಚಿಕ್ಕಚೆನ್ನಯ್ಯ ಹಾಗೂ ಬಿ.ವೆಂಕಟ ಅವರನ್ನು ಗೌರವಿಸಲಾಯಿತು.



ಅರುಮೈನಾಯಗಂ ಅವರಿಗೆ ಕೆಎಸ್‌ಎಫ್‌ಎ 2024–25ನೇ ಸಾಲಿನ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. (ಎಡದಿಂದ) ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ ಅಧ್ಯಕ್ಷ ಕಲ್ಯಾಣ್ ಚೌಬೆ, ಉಪಾಧ್ಯಕ್ಷ ಎನ್.ಎ.ಹ್ಯಾರಿಸ್, ಉಪಪ್ರಧಾನ ಕಾರ್ಯದರ್ಶಿ ಸತ್ಯನಾರಾಯಣ್ ಎಂ., ಕರ್ನಾಟಕ ಒಲಿಂಪಿಕ್ಸ್ ಸಂಸ್ಥೆಯ ಅಧ್ಯಕ್ಷ ಕೆ. ಗೋವಿಂದರಾಜ್ ಹಾಗೂ ಫುಟ್‌ಬಾಲ್ ದಿಗ್ಗಜ ಸುನಿಲ್ ಚೆಟ್ರಿ ಭಾಗವಹಿಸಿದ್ದರು

ಸಿಂಧು, ಸಾತ್ವಿಕ್–ಚಿರಾಗ್ ಶುಭಾರಂಭ

ಕೌಲಾಲಂಪುರ (ಪಿಟಿಐ): ದೀರ್ಘ ಸಮಯದ ನಂತರ ಅಂಕಣಕ್ಕೆ ಮರಳಿರುವ ಒಲಿಂಪಿಯನ್ ಪಿ.ವಿ. ಸಿಂಧು ಹಾಗೂ ಚಿರಾಗ್ ಶೆಟ್ಟಿ–ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕ್ರಮವಾಗಿ ಮಹಿಳೆಯರ ಸಿಂಗಲ್ಸ್ ಮತ್ತು ಪುರುಷರ ಡಬಲ್ಸ್‌ನಲ್ಲಿ ಶುಭಾರಂಭ ಮಾಡಿದರು.

ಹೋದ ವರ್ಷದ ಅಕ್ಟೋಬರ್‌ನಲ್ಲಿ ಕಾಲಿನ ಗಾಯದ ಚಿಕಿತ್ಸೆ ಮತ್ತು ವಿಶ್ರಾಂತಿಗಾಗಿ ಸಿಂಧು ಅವರು ಬಿಡಬ್ಲ್ಯುಎಫ್ ವಿಶ್ವ ಟೂರ್ ಟೂರ್ನಿಗಳಿಂದ ದೂರವುಳಿದಿದ್ದರು. ಈ ಟೂರ್ನಿಯ ಮೊದಲ ಸುತ್ತಿನಲ್ಲಿ ಅವರು 21–14, 22–20ರಿಂದ ಚೈನಿಸ್ ತೈಪೆಯ ಸಂಗ್ ಶಾವೊ ಯುನ್ ವಿರುದ್ಧ ಗೆಲುವು ಸಾಧಿಸಿದರು.

ಪುರುಷರ ಡಬಲ್ಸ್‌ನಲ್ಲಿ ವಿಶ್ವದ ಅಗ್ರಮಾನ್ಯ ಜೋಡಿ ಸಾತ್ವಿಕ್ ಮತ್ತು ಚಿರಾಗ್ 21-13, 21-15 ರಿಂದ ಚೈನಿಸ್ ತೈಪೆಯ ಯಾಂಗ್ ಪೊ ಸುವಾನ್ ಹಾಗೂ ಲೀ ಝೇ ಹೂ ವಿರುದ್ಧ ಗೆದ್ದರು. 35 ನಿಮಿಷಗಳ ಹೋರಾಟದಲ್ಲಿ ಮೇಲುಗೈ ಸಾಧಿಸಿದ ಭಾರತದ ಜೋಡಿಯು ಪ್ರಿಕ್ವಾರ್ಟರ್‌ಫೈನಲ್ ಪ್ರವೇಶಿಸಿತು.

ಆ್ಯಷಸ್ ಟೆಸ್ಟ್: ಬೆಥೆಲ್ ಚೊಚ್ಚಲ ಶತಕ

ಸಿಡ್ನಿ (ಎಪಿ): ಜೇಕಬ್ ಬೆಥೆಲ್ ಟೆಸ್ಟ್ ಕ್ರಿಕೆಟ್‌ನಲ್ಲಿ ಬುಧವಾರ ತಮ್ಮ ಮೊದಲ ಶತಕ ಬಾರಿಸಿದರು. ಆ ಮೂಲಕ ಆ್ಯಷಸ್ ಟೆಸ್ಟ್ ಸರಣಿಯ ಐದನೇ ಹಾಗೂ ಅಂತಿಮ ಪಂದ್ಯದಲ್ಲಿ ಇಂಗ್ಲೆಂಡ್ ಹೋರಾಟಕ್ಕೆ ಹೆಗಲು ನೀಡಿದರು. ಆದರೆ ಆಸ್ಟ್ರೇಲಿಯಾ ತಂಡ 4–1 ರಿಂದ ಸರಣಿ ಗೆಲ್ಲುವುದನ್ನು ತಡೆಯಲು ಇಂಗ್ಲೆಂಡ್ ಮುಂದೆ ಕಠಿಣ ಹಾದಿಯಿದೆ.

ಬೆಥೆಲ್ ಅಜೇಯ 142 ರನ್ ಹೊಡೆದಿದ್ದು, ಇಂಗ್ಲೆಂಡ್ 8 ವಿಕೆಟ್‌ಗೆ 302 ರನ್ ಗಳಿಸಿ ನಾಲ್ಕನೇ ದಿನದಾಟವನ್ನು ಪೂರೈಸಿತು. ಇದಕ್ಕೆ ಮೊದಲು ಆಸ್ಟ್ರೇಲಿಯಾ ತಂಡ ಮೊದಲ ಇನಿಂಗ್ಸ್‌ನಲ್ಲಿ 567 ರನ್ ಗಳಿಸಿತ್ತು. ಆ ಮೂಲಕ 183 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಗಳಿಸಿತ್ತು.



ಚೊಚ್ಚಲ ಶತಕದ ಸಂಭ್ರಮದಲ್ಲಿ ಜೇಕಬ್ ಬೆಥೆಲ್ ಎಎಫ್‌ಪಿ ಚಿತ್ರ

ಕೊನೆಯ ದಿನದ ಆಟ ಬಾಕಿವುಳಿದಿರುವಂತೆ ಇಂಗ್ಲೆಂಡ್ 119 ರನ್‌ಗಳ ಮುನ್ನಡೆಯನ್ನಷ್ಟೇ ಹೊಂದಿದೆ. ತೊಡೆಯ ನೋವಿನಿಂದ ಬೆನ್ ಸ್ಟೋಕ್ಸ್ ಕೊನೆಯ ದಿನ ಬೌಲಿಂಗ್ ಮಾಡುವ ಸಾಧ್ಯತೆ ಕಡಿಮೆಯಿದ್ದು, ಇಂಗ್ಲೆಂಡ್ ಪಂದ್ಯ ಉಳಿಸಲು ಹರಸಾಹಸಪಡಬೇಕಾಗಿದೆ.

ಓಲಿ ಪೋಪ್ ಬದಲು ನಾಲ್ಕನೇ ಟೆಸ್ಟ್‌ನಿಂದ ಆಡುವ ಅವಕಾಶ ಪಡೆದ ಬೆಥೆಲ್ ಇಂಗ್ಲೆಂಡ್ ತಂಡದ ಇನಿಂಗ್ಸ್‌ಗೆ ಲಂಗರು ಹಾಕಿಸಿದರು. ಬಾರ್ಬಾಡೋಸ್ ಸಂಜಾತ, 22 ವರ್ಷ ವಯಸ್ಸಿನ ಈ ಆಟಗಾರ ತಮ್ಮ ಮೇಲಿನ ಭರವಸೆ ಉಳಿಸಿಕೊಂಡರು.

ಮಂಗಳವಾರ 7 ವಿಕೆಟ್‌ಗೆ 518 ರನ್ ಗಳಿಸಿದ್ದ ಆಸ್ಟ್ರೇಲಿಯಾ, ನಾಲ್ಕನೇ ದಿನ ಸ್ಟೀವ್ ಸ್ಮಿತ್ (138) ಅವರನ್ನು ಬೇಗನೇ ಕಳೆದುಕೊಂಡಿತು. ಸ್ಮಿತ್ ಮೂರನೇ ದಿನದ ಕೊನೆಗೆ ಅಜೇಯ 129 ರನ್ ಗಳಿಸಿದ್ದರು. ಆಲ್‌ರೌಂಡರ್ ಬ್ಯೂ ವೆಬ್‌ಸ್ಟರ್ ಔಟಾಗದೇ 71 ರನ್ ಬಾರಿಸಿದರು. ಟಂಗ್ ಮಿಚೆಲ್ ಸ್ಟಾರ್ಕ್ ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 384; ಆಸ್ಟ್ರೇಲಿಯಾ: 133.5 ಓವರುಗಳಲ್ಲಿ 567 (ಸ್ಟೀವ್ ಸ್ಮಿತ್ 138, ಕ್ಯಾಮೆರಾನ್ ಗ್ರೀನ್ 37, ಬ್ಯೂ ವೆಬ್‌ಸ್ಟರ್ ಔಟಾಗದೇ 71; ಜೋಶ್ ಟಂಗ್ 97ಕ್ಕೆ3, ಬೆನ್ ಸ್ಟೋಕ್ಸ್ 95ಕ್ಕೆ2); ಎರಡನೇ ಇನಿಂಗ್ಸ್: ಇಂಗ್ಲೆಂಡ್: 75 ಓವರುಗಳಲ್ಲಿ 8 ವಿಕೆಟ್‌ಗೆ 302 (ಬೆನ್ ಡಕೆಟ್ 42, ಜೇಕಬ್ ಬೆಥೆಲ್ ಔಟಾಗದೇ 142, ಹ್ಯಾರಿ ಬ್ರೂಕ್ 42, ಜೇಮಿ ಸ್ಮಿತ್ 26; ಬೋಲ್ಯಾಂಡ್ 34ಕ್ಕೆ2, ವೆಬ್‌ಸ್ಟರ್ 51ಕ್ಕೆ3).

ನಿಧನ ವಾರ್ತೆ

ಸಾದತ್‌ಉಲ್ಲಾ ಖಾನ್



ಬೆಂಗಳೂರು: ಭಾರತ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಸಾದತ್‌ಉಲ್ಲಾ ಖಾನ್ (75) ಅವರು ಆರ್.ಟಿ.ನಗರದ ನಿವಾಸದಲ್ಲಿ ಮಂಗಳವಾರ ನಿಧನರಾದರು.

ಸಾದತ್ ಅವರಿಗೆ ಪತ್ನಿ, ಪುತ್ರ ಹಾಗೂ ಪುತ್ರಿ ಇದ್ದಾರೆ.

ಸಾದತ್ ಅವರು ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ಹಾಗೂ ಪಶ್ಚಿಮ ಬಂಗಾಳ ತಂಡಗಳ ಪರ ಆಡಿದ್ದರು. ಮಲೇಷ್ಯಾದ ಕ್ವಾಲಾಲಂಪುರದಲ್ಲಿ 1968ರಲ್ಲಿ ನಡೆದ ಮರ್ಡೆಕಾ ಟೂರ್ನಿಯಲ್ಲಿ ಭಾರತ ತಂಡದ ಪರ ಆಡಿದ್ದರು.

ಕಳಪೆ ಕಾಮಗಾರಿ: 6 ಎಂಜಿನಿಯರ್ ಹೊಣೆ

ಒಂದನೇ ಪುಟದಿಂದ...

ಈ ಪೈಕಿ, ಜಯರಾಂ ಮತ್ತು ಮನಮೋಹನ್ ಮೊದಲೇ ನಿವೃತ್ತರಾಗಿದ್ದರು. ನಿವೃತ್ತಿಯಾದ ನಾಲ್ಕು ವರ್ಷಗಳ ನಂತರ ದೋಷಾರೋಪ ಪಟ್ಟಿ ಜಾರಿ ಮಾಡಲು ಅವಕಾಶ ಇಲ್ಲದಿರುವುದರಿಂದ ಅವರ ಮೇಲಿನ ವಿಚಾರಣೆ ಕೈಬಿಡಲಾಗಿತ್ತು. ಉಳಿದ 11 ಎಂಜಿನಿಯರ್‌ಗಳ ಪೈಕಿ ಶಿವಕುಮಾರ್, ಸತೀಶ, ನರಸೇಗೌಡ, ವಿರೂಪಾಕ್ಷಪ್ಪ, ಗೌಡಯ್ಯ ಮತ್ತು ಪವಿತ್ರ ವಿರುದ್ಧದ ಆರೋಪಗಳು ಸಾಬೀತಾಗಿದ್ದು, ದಂಡ ವಿಧಿಸಲು ಲೋಕಾಯುಕ್ತ ಶಿಫಾರಸು ಮಾಡಿತ್ತು.

ತಮ್ಮ ಮೇಲಿನ ಆರೋಪವನ್ನು ಪ್ರಶ್ನಿಸಿ ಗೌಡಯ್ಯ ಮತ್ತು ಪವಿತ್ರ ಹೈಕೋರ್ಟ್ ಮೆಟ್ಟಿಲೇರಿದ್ದರು. ಅವರ ಲಿಖಿತ ಹೇಳಿಕೆಗಳನ್ನು ಪರಿಗಣಿಸಿ ಕ್ರಮ ತೆಗೆದುಕೊಳ್ಳುವಂತೆ ಹೈಕೋರ್ಟ್ ಆದೇಶಿಸಿತ್ತು. ಆದರೆ, ಅವರ ಹೇಳಿಕೆಗಳನ್ನು ನಿರಾಕರಿಸಿದ್ದ ಸರ್ಕಾರ, ‘ಕಾಮಗಾರಿಯು ಟೆಂಡರ್ ನಿಯಮಗಳ ಪ್ರಕಾರ ನಡೆದಿಲ್ಲ. ಕಾಮಗಾರಿಗೆ ಸಂಬಂಧಿಸಿದ ಮಾಪನ ಪುಸ್ತಕದಲ್ಲಿ ತಪ್ಪು ದಾಖಲೆಗಳನ್ನು ನಮೂದಿಸಿ, ಗುತ್ತಿಗೆದಾರರಿಗೆ ಹಣ ಪಾವತಿಸಿ ನಷ್ಟಕ್ಕೆ ಕಾರಣರಾಗಿದ್ದಾರೆ’ ಎಂದು ನಮೂದಿಸಿ ಲೋಕಾಯುಕ್ತರು ಶಿಫಾರಸು ಮಾಡಿದ್ದ ದಂಡವನ್ನು ಮಾರ್ಪಡಿಸಿ ಡಿಪಿಎಆರ್ ಆದೇಶಿಸಿದೆ.

ಕ್ವಾರ್ಟರ್‌ಫೈನಲ್‌ಗೆ ದಕ್ಷಿಣೇಶ್ವರ್

ಬೆಂಗಳೂರು ಓಪನ್ ಟೆನಿಸ್ ಟೂರ್ನಿ: ಎಂಟರ ಘಟ್ಟಕ್ಕೆ ಮಾನಸ್ ಧಾಮ್ನೆ

ಪ್ರಮುಖ ಅಂಶಗಳು
- ಅಗ್ರ ಶ್ರೇಯಾಂಕದ ಪೆಡ್ರೊ ಮಾರ್ಟಿನೆಝ್ ಮುನ್ನಡೆ
- ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಾಗಲ್ ಸವಾಲು ಅಂತ್ಯ

ಪ್ರಜಾವಾಣಿ ವಾರ್ತೆ



ಬೆಂಗಳೂರು ಓಪನ್ ಟೆನಿಸ್ ಟೂರ್ನಿಯಲ್ಲಿ ಬುಧವಾರ ಕ್ವಾರ್ಟರ್‌ಫೈನಲ್ ತಲುಪಿದ ಭಾರತದ ದಕ್ಷಿಣೇಶ್ವರ್ ಸುರೇಶ್ ಚಿತ್ರ: ಪ್ರಶಾಂತ್ ಎಚ್‌.ಜಿ.

ಬೆಂಗಳೂರು: ಪ್ರೇಕ್ಷಕರ ಬೆಂಬಲದ ನಡುವೆ ಛಲದಿಂದ ಆಡಿದ ದಕ್ಷಿಣೇಶ್ವರ ಸುರೇಶ್ ಅವರು ಸೋಲಿನ ಸುಳಿಯಿಂದ ಹೊರಬಂದು ಫ್ರಾನ್ಸ್‌ನ ಫೆಲಿಕ್ಸ್ ಬಾಲ್ಶಾ ಅವರ ವಿರುದ್ಧ ಸ್ಮರಣೀಯ ಗೆಲುವನ್ನು ಸಾಧಿಸಿದರು. ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಎರಡನೇ ಸುತ್ತಿನ ಪಂದ್ಯವನ್ನು ಬುಧವಾರ 6–3, 1–6, 7–6 (7–4) ರಿಂದ ಗೆದ್ದುಕೊಂಡ ಅವರು ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

ಕಬ್ಬನ್ ಪಾರ್ಕ್‌ನ ಎಸ್‌.ಎಂ.ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಈ ಟೂರ್ನಿಯಲ್ಲಿ, ಭಾರತದ ಇನ್ನೊಬ್ಬ ಆಟಗಾರ ಮಾನಸ್ ಧಾಮ್ನೆ ಸಹ ಎಂಟರ ಘಟ್ಟ ತಲುಪಿದರು. ಆದರೆ ಭಾರತದ ಅಗ್ರ ಸಿಂಗಲ್ಸ್ ಆಟಗಾರ ಸುಮಿತ್ ನಾಗಲ್ ಸವಾಲು ಅಂತ್ಯಗೊಂಡಿತು.

ಅರ್ಹತಾ ಸುತ್ತಿನಿಂದ ಪ್ರವೇಶ ಪಡೆದಿದ್ದ ಫೆಲಿಕ್ಸ್ ಉತ್ತಮ ಲಯದಲ್ಲಿದ್ದು, ನಿರ್ಣಾಯಕ ಮೂರನೇ ಸೆಟ್‌ನಲ್ಲಿ 6–5 ಮುನ್ನಡೆಯಲ್ಲಿದ್ದರು. 12ನೇ ಗೇಮ್‌ನಲ್ಲಿ 30–0 ಮುಂದಿದ್ದು ಗೆಲುವಿನ ಸನಿಹದಲ್ಲಿದ್ದರು. ಈ ಹಂತದಲ್ಲಿ ದಕ್ಷಿಣೇಶ್ವರ್ ಅಮೋಘವಾಗಿ ಚೇತರಿಸಿದರು. ಸರ್ವ್ ಬ್ರೇಕ್ ಮಾಡಿ ಪಂದ್ಯವನ್ನು ಟೈಬ್ರೇಕರ್‌ಗೆ ವಿಸ್ತರಿಸಿದರು. ಇಲ್ಲೂ ಆರಂಭದಲ್ಲಿ ಹಿನ್ನಡೆ ಕಂಡರೂ ಛಲಬಿಡದೇ ಆಡಿ ಗೆಲುವಿನ ನಗೆಬೀರಿದರು.

ಭಾರತದ 25 ವರ್ಷ ವಯಸ್ಸಿನ ಆಟಗಾರ ಮೊದಲ ಸೆಟ್‌ಅನ್ನು ಎಂದಿನ ಶೈಲಿಯ ಭರ್ಜರಿ ಸರ್ವ್ ಮತ್ತು ಪ್ರಬಲ ಬೇಸ್‌ಲೈನ್ ಆಟದ ಮೂಲಕ ಗೆದ್ದುಕೊಂಡರು. ಬಾಲ್ಶಾ ಎರಡನೇ ಸೆಟ್‌ನಲ್ಲಿ ಪರಿಣಾಮಕಾರಿ ಬ್ಯಾಕ್‌ಹ್ಯಾಂಡ್ ಹೊಡೆತಗಳ ಮೂಲಕ ಮೇಲುಗೈ ಸಾಧಿಸಿದರು. ಅವರ ಸರ್ವ್‌ಗಳೂ ಬಿರುಸು ಪಡೆದವು. ಭಾರತದ ಆಟಗಾರ ಒಂದಿಷ್ಟು ಬಳಲಿದಂತೆಯೂ ಕಂಡಿದ್ದರು.

ಮೂರನೇ ಸೆಟ್‌ನಲ್ಲಿ ದಕ್ಷಿಣೇಶ್ವರ್ ಆಟದಲ್ಲಿ ಲವಲವಿಕೆ ಮರಳಿತು. ಒತ್ತಡ ನಿಭಾಯಿಸಿದ ಅವರು ಉತ್ತಮ ರಿಟರ್ನ್ ಹೊಡೆತಗಳ ಮೂಲಕ ಬಾಲ್ಶಾ ಅವರಿಗೆ ಹೋರಾಟ ನೀಡಿದರು.

ಸೆಂಟರ್ ಕೋರ್ಟ್‌ನಲ್ಲಿ ನಡೆದ ಎರಡನೇ ಸುತ್ತಿನ ಇನ್ನೊಂದು ಪಂದ್ಯದಲ್ಲಿ ಮಾನಸ್ ಧಾಮ್ನೆ ಯಶಸ್ಸಿನ ಓಟ ಮುಂದುವರಿಸಿ 6–2, 3–6, 6–2 ರಿಂದ ಕಜಾಕಸ್ತಾನದ ಬೀಬಿಟ್ ಝುಕಾಯೇವ್ ಅವರನ್ನು ಸೋಲಿಸಿದರು.

ನಾಗಲ್‌ಗೆ ಸೋಲು: ಎರಡನೇ ಶ್ರೇಯಾಂಕದ ಹೆರಾಲ್ಡ್ ಮಯೋಟ್ ಅವರು ದಿನದ ಕೊನೆಯ ಪಂದ್ಯದಲ್ಲಿ ಭಾರತದ ಅಗ್ರ ಆಟಗಾರ ಸುಮಿತ್ ನಾಗಲ್ ಅವರನ್ನು ಮಣಿಸಿದರು. ಫ್ರಾನ್ಸ್‌ನ ಆಟಗಾರ 7–6 (7–2), 6–1, 7–6 (13–11) ರಲ್ಲಿ ಗೆಲ್ಲುವ ಮೊದಲು ಏಳು ಸಲ 'ಮ್ಯಾಚ್ ಪಾಯಿಂಟ್ಸ್' ಉಳಿಸಿದರು.

ಮೊದಲ ಸೆಟ್‌ನಲ್ಲಿ ಇಬ್ಬರೂ ತಲಾ ಒಂದು ಬಾರಿ ಎದುರಾಳಿಗಳ ಸರ್ವ್ ಬ್ರೇಕ್ ಮಾಡಿದರು. ಎರಡನೇ ಸೆಟ್‌ನಲ್ಲಿ ತಂತ್ರಗಾರಿಕೆ ಬದಲಾಯಿಸಿದ ನಗಾಲ್ ಆಗಾಗ ನೆಟ್ ಬಳಿ ಮುನ್ನುಗ್ಗಿ ಎದುರಾಳಿಯ ಲಯ ತಪ್ಪಿಸಿದರು. ಈ ಸೆಟ್‌ಅನ್ನು ಸುಲಭವಾಗಿ 6–1ರಲ್ಲಿ ಪಡೆದರು. ಈ ಸೆಟ್‌ನಲ್ಲಿ ಮಯೋಟ್ ಅವರ ಬ್ಯಾಕ್‌ಹ್ಯಾಂಡ್ ಹೊಡೆತಗಳು ಕೈಕೊಟ್ಟವು.

ಅಗ್ರ ಶ್ರೇಯಾಂಕದ ಆಟಗಾರ, ಸ್ಪೇನ್‌ನ ಪೆಡ್ರೊ ಮಾರ್ಟಿನೆಝ್ ಮತ್ತೊಂದು ಪಂದ್ಯದಲ್ಲಿ ಬೆಲ್ಜಿಯಮ್‌ನ ಮೈಕೆಲ್ ಗೀರ್ಟ್ಸ್ ಅವರನ್ನು 7–6 (7–3), 6–3 ರಿಂದ ಸೋಲಿಸಿದರು. ಇತರ ಪಂದ್ಯಗಳಲ್ಲಿ ಆರನೇ ಶ್ರೇಯಾಂಕದ ಟಿಮೊಫಿ ಸ್ಕೆಟೋವ್ (ಕಜಾಕಸ್ತಾನ) 6–3, 7–5 ರಿಂದ ಮಿಟ್ಸುಕಿ ವೀ ಕಾಂಗ್ ಲಿಯಾಂಗ್ (ಮಲೇಷ್ಯಾ) ಅವರನ್ನು ಸೋಲಿಸಿದರೆ, ಮ್ಯಾಟೆಯೊ ಮಾರ್ಟಿನು 6–2, 6–2 ರಿಂದ ಉಕ್ರೇನ್‌ನ ಎರಿಕ್ ವಾನ್ ಶೆಲ್ಬಾಮ್ ಅವರನ್ನು, ಜರ್ಮನಿಯ ಸೆಡ್ರಿಕ್ ಮಾರ್ಸೆಲ್ ಸ್ಟೀಬ್ 7–5, 7–6 (11–9) ರಿಂದ ಕ್ರೊವೇಷ್ಯಾದ ಬಾರ್ನಾ ಗೊಜೊ ಅವರನ್ನು ಹಿಮ್ಮೆಟ್ಟಿಸಿದರು.

ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಮಧ್ಯಪ್ರದೇಶಕ್ಕೆ ಮಹತ್ವದ ಪಂದ್ಯ ಇಂದು

ಅಜೇಯ ಓಟದತ್ತ ಕರ್ನಾಟಕ ಚಿತ್ತ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಹಾಲಿ ಚಾಂಪಿಯನ್ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಏಕದಿನ ಕ್ರಿಕೆಟ್ ಸರಣಿಯಲ್ಲಿ ಈಗಾಗಲೇ ಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ. ಇದೀಗ ಎ ಗುಂಪಿನಲ್ಲಿ ಕೊನೆಯ ಪಂದ್ಯವನ್ನು ಆಡಲು ಸಿದ್ಧವಾಗಿದೆ.

ಟೂರ್ನಿಯುದ್ದಕ್ಕೂ ಸೋಲಿಲ್ಲದೇ ಮುನ್ನುಗ್ಗಿರುವ ಮಯಂಕ್ ಅಗರವಾಲ್ ನಾಯಕತ್ವದ ತಂಡವು ಅಂತಿಮ ಪಂದ್ಯದಲ್ಲಿ ಮಧ್ಯಪ್ರದೇಶವನ್ನು ಗುರುವಾರ ಎದುರಿಸಲಿದೆ. ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ ನಾಯಕತ್ವದ ಮಧ್ಯಪ್ರದೇಶ ತಂಡಕ್ಕೆ ಇದು ಮಹತ್ವದ ಪಂದ್ಯವಾಗಿದೆ. ಗುಂಪಿನ ಮೊದಲ ನಾಲ್ಕು ಪಂದ್ಯಗಳಲ್ಲಿ ಸತತ ಗೆಲುವು ಸಾಧಿಸಿದ್ದ ತಂಡವು ಅಗ್ರಸ್ಥಾನದಲ್ಲಿಯೇ ಇತ್ತು. ಆದರೆ ಕಳೆದೆರಡು ಪಂದ್ಯಗಳಲ್ಲಿ ಪುದುಚೇರಿ ಮತ್ತು ಜಾರ್ಖಂಡ್ ತಂಡಗಳ ಎದುರು ಸೋತಿತ್ತು. ಅದರಿಂದಾಗಿ ನಾಲ್ಕನೇ ಸ್ಥಾನಕ್ಕೆ ಕುಸಿದಿತ್ತು.

ಇದರಿಂದಾಗಿ ಎರಡನೇ ಸ್ಥಾನದಲ್ಲಿರುವ ಕೇರಳ, ಮೂರನೆಯ ಸ್ಥಾನದಲ್ಲಿರುವ ಜಾರ್ಖಂಡ್ ಹಾಗೂ ಮಧ್ಯಪ್ರದೇಶ ತಂಡಗಳು ತಲಾ 16 ಅಂಕ ಗಳಿಸಿವೆ. ಜಾರ್ಖಂಡ್ ತಂಡವು ತ್ರಿಪುರಾ ಮತ್ತು ಕೇರಳ ತಂಡವು ತಮಿಳುನಾಡು ವಿರುದ್ಧ ಕೊನೆಯ ಪಂದ್ಯ ಆಡಲಿವೆ.

ಒಂದೊಮ್ಮೆ ಮೂರು ತಂಡಗಳೂ ತಮ್ಮ ಪಾಲಿನ ಪಂದ್ಯಗಳಲ್ಲಿ ಗೆದ್ದುಬಿಟ್ಟರೆ ಪಾಯಿಂಟ್ ಸಮಬಲ ಸಾಧಿಸುತ್ತವೆ. ಆಗ ನೆಟ್ ರನ್‌ರೇಟ್ ಆಧಾರದಲ್ಲಿ ಎರಡನೇ ಸ್ಥಾನ ಪಡೆದು ಕ್ವಾರ್ಟರ್‌ಫೈನಲ್ ಪ್ರವೇಶಿಸುವ ತಂಡವನ್ನು ನಿರ್ಧರಿಸಲಾಗುತ್ತದೆ.



ಕರುಣ್ ನಾಯರ್ ಮತ್ತು ದೇವದತ್ತ ಪಡಿಕ್ಕಲ್

ನಾಕೌಟ್‌ಗೆ ಮಯಂಕ್ ಬಳಗ

ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಇದೇ 12ರಿಂದ ನಡೆಯಲಿರುವ ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ನಾಕೌಟ್ ಹಂತದ ಪಂದ್ಯಗಳಿಗೆ ಕರ್ನಾಟಕ ತಂಡವನ್ನು ಆಯ್ಕೆ ಮಾಡಿದೆ. ಕಳೆದೆರಡು ಪಂದ್ಯಗಳಲ್ಲಿ ಆಡಿದ್ದ ಕೆ.ಎಲ್. ರಾಹುಲ್ ಮತ್ತು ಪ್ರಸಿದ್ಧ ಕೃಷ್ಣ ಅವರು ನ್ಯೂಜಿಲೆಂಡ್ ಎದುರಿನ ಏಕದಿನ ಸರಣಿಯಲ್ಲಿ ಆಡಲು ಭಾರತ ತಂಡವನ್ನು ಸೇರಿಕೊಂಡಿದ್ದಾರೆ. **ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಬುಧವಾರ ಪ್ರಕಟಿಸಿರುವ 15 ಆಟಗಾರರ ತಂಡ ಇಂತಿದೆ:** ಮಯಂಕ್ ಅಗರವಾಲ್ (ನಾಯಕ), ಕರುಣ್ ನಾಯರ್ (ಉಪನಾಯಕ), ದೇವದತ್ತ ಪಡಿಕ್ಕಲ್, ಆರ್. ಸ್ಮರಣ್, ಕೆ.ಎಲ್. ಶ್ರೀಜಿತ್, ಅಭಿನವ್ ಮನೋಹರ್, ಶ್ರೇಯಸ್ ಗೋಪಾಲ್, ವಿ. ವೈಶಾಖ, ಎಲ್. ಮನ್ವಂತ್ ಕುಮಾರ್, ಶ್ರೀಷಾ ಆಚಾರ್, ಅಭಿಲಾಷ್ ಶೆಟ್ಟಿ, ಬಿ.ಆರ್. ಶರತ್, ಹರ್ಷಿಲ್ ಧರ್ಮಾನಿ, ಧ್ರುವ ಪ್ರಭಾಕರ್, ವಿದ್ಯಾಧರ್ ಪಾಟೀಲ.

ಇದರಿಂದಾಗಿ ಕೊನೆಯ ಸುತ್ತಿನ ಪಂದ್ಯಗಳು ಕುತೂಹಲ ಕೆರಳಿಸಿವೆ. ಆದರೆ 24 ಅಂಕ ಗಳಿಸಿರುವ ಕರ್ನಾಟಕದ ಅಗ್ರ ಸ್ಥಾನಕ್ಕೆ ಮಾತ್ರ ಯಾವುದೇ ಕಂಟಕವಿಲ್ಲ. ಅಜೇಯ ಓಟವನ್ನು ಮುಂದುವರಿಸುವ ಛಲದಲ್ಲಿ ಮಯಂಕ್ ಬಳಗವಿದೆ.

ನಾಲ್ಕು ಶತಕ ಗಳಿಸಿರುವ ದೇವದತ್ತ ಪಡಿಕ್ಕಲ್, ತಲಾ ಎರಡು ಶತಕ ಸಾಧಿಸಿರುವ ಮಯಂಕ್ ಅಗರವಾಲ್ ಮತ್ತು ಕರುಣ್ ನಾಯರ್, ಉತ್ತಮ ಲಯದಲ್ಲಿರುವ ಅಭಿನವ್ ಮನೋಹರ್, ಸ್ಮರಣ್ ಆರ್., ಕೆ.ಎಲ್. ಶ್ರೀಜಿತ್, ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರು ತಂಡದ ಶಕ್ತಿಯಾಗಿದ್ದಾರೆ. ಬೌಲಿಂಗ್ ವಿಭಾಗದ ಹೊಣೆ ವೈಶಾಖ ವಿಜಯಕುಮಾರ್, ಅಭಿಲಾಷ್ ಶೆಟ್ಟಿ ಅವರ ಮೇಲೆ ಬೀಳಲಿದೆ. ಹೊಸ ಪ್ರತಿಭೆ ಧ್ರುವ ಪ್ರಭಾಕರ್ ಕೂಡ ಅವಕಾಶ ಪಡೆಯಬಹುದು.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕ ರಜತ್ ಪಾಟೀದಾರ್, ವೆಂಕಟೇಶ್ ಅಯ್ಯರ್ ಅವರು ಮಧ್ಯಪ್ರದೇಶ ತಂಡದ ಬ್ಯಾಟಿಂಗ್ ವಿಭಾಗದ ಪ್ರಮುಖರಾಗಿದ್ದಾರೆ.

ಬೌಲರ್‌ಗಳಾದ ಕುಮಾರ ಕಾರ್ತಿಕೇಯ, ಮಂಗೇಶ್ ಯಾದವ್, ಸಾರಾಂಶ್ ಜೈನ್, ಶುಭಂ ಶರ್ಮಾ ಹಾಗೂ ಶಿವಾಂಗ್ ಕುಮಾರ್ ಅವರ ಮುಂದೆ ಕರ್ನಾಟಕದ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ಸವಾಲಿದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಡಬ್ಲ್ಯುಪಿಎಲ್ ಕಣಕ್ಕೆ ಮರಳಲಿರುವ ಶ್ರೇಯಾಂಕಾ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆಲ್‌ರೌಂಡರ್ ಶ್ರೇಯಾಂಕಾ ಪಾಟೀಲ ಅವರು ಗಾಯದ ಸಮಸ್ಯೆಯಿಂದಾಗಿ ಸುಮಾರು ಒಂದು ವರ್ಷದಿಂದ ಕ್ರಿಕೆಟ್‌ನಿಂದ ದೂರವೇ ಇದ್ದರು.

ಮಹಿಳಾ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯ ಮಾಜಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ್ತಿಯು ಗಾಯದ ಸಮಸ್ಯೆಯಿಂದಾಗಿ ಮಹತ್ವದ ಟೂರ್ನಿಗಳಿಂದ ಹೊರಗುಳಿಯಬೇಕಾಯಿತು. ಅದರಲ್ಲಿ ಹೋದ ವರ್ಷದ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯು ಪ್ರಮುಖವಾಗಿತ್ತು. ಆ ಟೂರ್ನಿಯಲ್ಲಿ ಭಾರತ ಚಾಂಪಿಯನ್ ಆಗಿತ್ತು. ಆದರೆ ಹೆಬ್ಬೆರಳು ಮುರಿದ ಕಾರಣದಿಂದ ಶ್ರೇಯಾಂಕಾ ಆಡಲು ಸಾಧ್ಯವಾಗಿರಲಿಲ್ಲ. ಆದರೂ ಶ್ರೇಯಾಂಕಾ ವಿಶ್ವಾಸ ಕಳೆದುಕೊಳ್ಳದೇ ತಾಳ್ಮೆಯಿಂದ ಇದ್ದರು.

ಇದೀಗ ಇದೇ ತಿಂಗಳು ನಡೆಯುವ ಡಬ್ಲ್ಯುಪಿಎಲ್‌ನಲ್ಲಿ ಕಣಕ್ಕಿಳಿಯುವ ಸಿದ್ಧತೆಯಲ್ಲಿದ್ದಾರೆ.

'ಗಾಯದ ಆರೈಕೆಗಾಗಿ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ ಇದ್ದಾಗ ಕೆಲವು ಆಟಗಾರರೊಂದಿಗೆ ಮಾತನಾಡಿದೆ. ಮಾನಸಿಕವಾಗಿ ಸ್ಥಿರತೆ ಕಾಪಾಡಿಕೊಳ್ಳಲು ಇಂತಹ ಚರ್ಚೆಗಳು ನೆರವಾದವು. ಅದರಲ್ಲೂ ಬೂಮ್ರಾ (ಜಸ್‌ಪ್ರೀತ್), ಸ್ಕೈ (ಸೂರ್ಯಕುಮಾರ್ ಯಾದವ್), ರಿಯಾನ್ (ಪರಾಗ್) ಅವರ ಮಾರ್ಗದರ್ಶನ ಬಹಳಷ್ಟು ನೆರವಾಯಿತು. ಗಾಯದ ಸಮಸ್ಯೆಯಿಂದ ಹೊರಬರುವ ದಾರಿ ಕಂಡುಕೊಳ್ಳುವ ವಿಶ್ವಾಸ ಮೂಡಿತು' ಎಂದು ಬುಧವಾರ ಸುದ್ದಿಗಾರರಿಗೆ ಅವರು ಹೇಳಿದರು.

'ಭಾರತ ಏಕದಿನ ವಿಶ್ವಕಪ್ ಜಯಿಸಿದ್ದು ಬಹಳ ಖುಷಿಯ ಸಂಗತಿ. ಜೊತೆಗೆ ನಾನು ಆ ತಂಡದಲ್ಲಿ ಆಡಲು ಸಾಧ್ಯವಾಗಲಿಲ್ಲ ಎಂಬ ಹತಾಶೆಯೂ ಕಾಡಿತು' ಎಂದು ಶ್ರೇಯಾಂಕಾ ಹೇಳಿದರು. ಮೆಗಾ ಹರಾಜಿಗಿಂತ ಮೊದಲು ಆರ್‌ಸಿಬಿಯು ಶ್ರೇಯಾಂಕಾ ಅವರನ್ನು ಉಳಿಸಿಕೊಂಡಿತ್ತು.

ಯುವ ಏಕದಿನ ಸರಣಿ ಕ್ಲೀನ್‌ಸ್ವೀಪ್ ಸಾಧಿಸಿದ ಭಾರತ

ಸೂರ್ಯವಂಶಿ, ಜಾರ್ಜ್ ಶತಕ

ಬೆನೋನಿ (ದಕ್ಷಿಣ ಆಫ್ರಿಕಾ), (ಪಿಟಿಐ): ಆರಂಭ ಆಟಗಾರರಾದ ವೈಭವ್ ಸೂರ್ಯವಂಶಿ ಮತ್ತು ಆ್ಯರನ್ ಜಾರ್ಜ್ ಅವರ ಬಿರುಸಿನ ಶತಕಗಳ ನೆರವಿನಿಂದ ಭಾರತ 19 ವರ್ಷದೊಳಗಿನವರ ತಂಡ ಮೂರನೇ ಯುವ ಏಕದಿನ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಬುಧವಾರ 233 ರನ್‌ಗಳಿಂದ ಸೋಲಿಸಿತು. ಸರಣಿಯನ್ನು 3–0ಯಿಂದ ಕ್ಲೀನ್ ಸ್ವೀಪ್ ಮಾಡಿತು.



ವೈಭವ್ ಸೂರ್ಯವಂಶಿ ಶತಕ ಸಂಭ್ರಮ 'ಎಕ್ಸ್' ಚಿತ್ರ

ಉತ್ತಮ ಲಯದಲ್ಲಿರುವ ನಾಯಕ ಸೂರ್ಯವಂಶಿ ಮತ್ತೊಮ್ಮೆ ಅಬ್ಬರದ ಆಟವಾಡಿ 74 ಎಸೆತಗಳಲ್ಲಿ 127 ರನ್ ಸಿಡಿಸಿದರು. ಬಿಹಾರದ ಆಟಗಾರನ ಇನಿಂಗ್ಸ್‌ನಲ್ಲಿ 10 ಸಿಕ್ಸರ್, 9 ಬೌಂಡರಿಗಳಿದ್ದವು. ಆ್ಯರನ್ ಜಾರ್ಜ್ 106 ಎಸೆತಗಳ ಇನಿಂಗ್ಸ್‌ನಲ್ಲಿ 16 ಬೌಂಡರಿಗಳಿದ್ದ 118 ರನ್ ಹೊಡೆದರು. ಇವರಿಬ್ಬರ ನಡುವಣ 227 ರನ್‌ಗಳ ಮೊದಲ ವಿಕೆಟ್ ಜೊತೆಯಾಟದ ನೆರವಿನಿಂದ ಭಾರತ 7 ವಿಕೆಟ್‌ಗೆ 393 ರನ್‌ಗಳ ಭರ್ಜರಿ ಮೊತ್ತ ದಾಖಲಿಸಿತು.

ದಕ್ಷಿಣ ಆಫ್ರಿಕಾ 35 ಓವರುಗಳಲ್ಲಿ 160 ರನ್‌ಗಳಿಗೆ ಆಲೌಟ್ ಆಯಿತು. ಮಧ್ಯಮ ವೇಗದ ಬೌಲರ್ ಕಿಶನ್ ಸಿಂಗ್ 4 ಓವರುಗಳಲ್ಲಿ 15 ರನ್ನಿತ್ತು 3 ವಿಕೆಟ್ ಪಡೆದರೆ, ಲೆಗ್‌ಬ್ರೇಕ್ ಬೌಲರ್ ಮೊಹಮ್ಮದ್ ಇನಾನ್ 36 ರನ್ನಿಗೆ 2 ವಿಕೆಟ್ ಪಡೆದರು.

14 ವರ್ಷ ವಯಸ್ಸಿನ ಸೂರ್ಯವಂಶಿ ಎರಡನೇ ಪಂದ್ಯದಲ್ಲೂ ಆಕ್ರಮಣಕಾರಿ ಆಟವಾಡಿದ್ದರು. 24 ಎಸೆತಗಳಲ್ಲಿ 68 ರನ್ ಬಾರಿಸಿ ಭಾರತದ ಗೆಲುವಿಗೆ ಪ್ರಮುಖ ಕಾಣಿಕೆ ನೀಡಿದ್ದರು. ಅವರು ಕೊನೆಯ ಪಂದ್ಯದಲ್ಲಿ 'ಪಂದ್ಯ ಶ್ರೇಷ್ಠ' ಪ್ರಶಸ್ತಿಯ ಜೊತೆಗೆ ಸರಣಿ ಶ್ರೇಷ್ಠ ಗೌರವವನ್ನೂ ತಮ್ಮದಾಗಿಸಿಕೊಂಡರು.

ಸಂಕ್ಷಿಪ್ತ ಸ್ಕೋರು: ಭಾರತ 19 ವರ್ಷದೊಳಗಿನವರ ತಂಡ: 50 ಓವರುಗಳಲ್ಲಿ 7 ವಿಕೆಟ್‌ಗೆ 393 (ಆ್ಯರನ್ ಜಾರ್ಜ್ 118, ವೈಭವ್ ಸೂರ್ಯವಂಶಿ 127, ವೇದಾಂತ್ ತ್ರಿವೇದಿ 34; ಎನ್‌ತಾಂಡೊ ಸೋನಿ 61ಕ್ಕೆ3, ಜೇಸನ್ ರೌಲ್ಸ್ 59ಕ್ಕೆ2); ದಕ್ಷಿಣ ಆಫ್ರಿಕಾ 19 ವರ್ಷದೊಳಗಿನವರ ತಂಡ: 35 ಓವರುಗಳಲ್ಲಿ 160 (ಡೇನಿಯಲ್ ಬಾಸ್ಮನ್ 40, ಪೌಲ್ ಜೇಮ್ಸ್ 41, ಕೋರ್ನ್ ಬೋಥಾ ಔಟಾಗದೇ 36; ಕಿಶನ್ ಸಿಂಗ್ 15ಕ್ಕೆ34, ಮೊಹಮ್ಮದ್ ಇನಾನ್ 36ಕ್ಕೆ2).